# ಕಾಡಿನ ಹುಡುಗ ಕೃಷ್ಣ

## ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ



ಸಂಪಾದಕರು :

ಡಿ.ಎಸ.ನಾಗಭೂಷಣ

ರಾಘವೇಂದ್ರ ಪಾಟೀಲ

ಸ.ಉಷಾ

ಶ್ರೀಕೃಷ್ಣ ಆಲನಹಳ್ಳಿ

ಬದುಕು :

| | |
|---|---|
| ಹುಟ್ಟಿದ ದಿನಾಂಕ: | 3–4–1947 |
| ಹುಟ್ಟಿದ ಊರು : | ಆಲನಹಳ್ಳಿ (ಹೆಗ್ಗಡದೇವನಕೋಟೆ ತಾ॥) |
| ತಂದೆ | : ಬೆಟ್ಟೇಗೌಡ |
| ತಾಯಿ | : ಸಣ್ಣಮ್ಮ |
| ಪತ್ನಿ | : ಆರ್. ವಿನುತ |
| ಮಗ | : ಪ್ರದ್ಯುಮ್ನ ಆಲನಹಳ್ಳಿ |
| ಮಗಳು | : ಕೃತಿಕಾ ಆಲನಹಳ್ಳಿ |
| ನಿಧನ | : 4–1–1989 |

# ಕಾಡಿನ ಹುಡುಗ ಕೃಷ್ಣ

(ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)

ಸಂಪಾದಕರು:

ಡಿ. ಎಸ್. ನಾಗಭೂಷಣ

ರಾಘವೇಂದ್ರ ಪಾಟೀಲ

ಸ. ಉಷಾ

**ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ಅಂಚೆ–577 531, ಚಿತ್ರದುರ್ಗ ಜಿಲ್ಲೆ**

KADINA HUDUGA KRISHNA — a commemorative volume on late Srikrishna Alanahally, Edited by s/s D. S. Nagabhushana, Raghavendra Patila and Smt. S. Usha, Published in Mar. 1991 by Samvada Prakashana, Malladihally - 577 531 Chitradurga Dist.

Cover designed by Sri S. Badigera and Sri Makali.

Printed at National Press, Nehru Road, Hassan - 573 201



Pages : viii + 130 Price: Rs. 35/- (Odinary) Rs. 50/- (Deluxe)



ಮುಖಪುಟ ವಿನ್ಯಾಸ:
ಮಕಾಳಿ ಹಾಗೂ ಎಸ್. ಬಡಿಗೇರ

ಬೆಲೆ:
ಮುವ್ವತ್ತೈದು ರೂಪಾಯಿಗಳು (ಸಾದಾ)
ಐವತ್ತು ರೂಪಾಯಿಗಳು (ಉತ್ತಮ)

ಪುಟಗಳು:
viii + 130

ಮುದ್ರಣ:
ನ್ಯಾಷನಲ್ ಪ್ರೆಸ್, ನೆಹರೂ ರಸ್ತೆ, ಹಾಸನ.

ಪ್ರಕಟಣೆಯ ವರ್ಷ:
ಮಾರ್ಚ್ 1990

# ಸಂಪಾದಕರ ಮಾತು

ಕೃಷ್ಣ ಅಕಾಲ ಮರಣಕ್ಕೆ ತುತ್ತಾದ ಸಂದರ್ಭದಲ್ಲೇ ಸಂವಾದ ಪತ್ರಿಕೆ ಆತನ ನೆನಪಿಗಾಗಿ ವಿಶೇಷ ಸಂಚಿಕೆಯೊಂದನ್ನು ತರುವ ಹೊಳಹು ಹಾಕಿಕೊಂಡಿತು. ಹಲವಾರು ಲೇಖಕರಿಗೆ ಈ ಬಗ್ಗೆ ಪತ್ರ ಬರೆದು ಲೇಖನ ಬರೆದುಕೊಡಲು ಕೇಳಿ ಕೊಂಡೆವು. ಯಾರಿಂದಲೂ ಉತ್ತರ ಬರಲಿಲ್ಲ. ಸಂವಾದ ಪತ್ರಿಕೆ ಕೂಡಾ ಆಗ ಅನೇಕ ಕಾರಣಗಳಿಂದಾಗಿ ಅನಿಯಮಿತವಾಗಿದ್ದು, ಇದರಿಂದಾಗಿ ಲೇಖಕರಿಗೆ ಉತ್ಸಾಹ ವಿಲ್ಲವೇನೋ ಎಂದು ನಾವೂ ಸುಮ್ಮನಾದೆವು. ಆದರೆ ಹೆಮ್ಮರವಾಗಿ ಬೆಳೆಯಬಹು ದಾಗಿದ್ದ ಕೃಷ್ಣ ಹಠಾತ್ತಾಗಿ ನೆಲವನ್ನಪ್ಪಿದ ಆಘಾತ ಬಹುಕಾಲ ನಮ್ಮನ್ನು ಸುಮ್ಮನಿರ ಗೊಡಿಸಲಿಲ್ಲ, ಸಾಹಿತ್ಯ ಪತ್ರಿಕೆಯನ್ನು ನಡೆಸುವ ನಾವು ಈ ಪ್ರತಿಭಾವಂತ ಲೇಖಕನ ನೆನಪಿಗಾಗಿ ವಿಶೇಷ ಸಂಪುಟವೊಂದನ್ನು ಅರ್ಪಿಸಬೇಕೆಂಬ ತುಡಿತ, ಸಂವಾದ ಆರ್ಥಿಕ ವಾಗಿ ಸ್ವಲ್ಪ ಚೇತರಿಸಿಕೊಂಡ ನಂತರ ತೀವ್ರವಾಗತೊಡಗಿತು. ಆ ಹೊತ್ತಿಗೆ ನಾವು ಪುಸ್ತಕ ಪ್ರಕಾಶನವನ್ನೂ ಆರಂಭಿಸಿದ್ದುದರಿಂದ ಈ ವಿಶೇಷ ಸಂಪುಟವನ್ನು ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟವಾಗಿ ಪುಸ್ತಕ ರೂಪದಲ್ಲೂ ಹೊರತರುವ ಯೋಜನೆ ಮೂಡಿತು. ಈ ಯೋಜನೆ ಸಾಕಾರವಾಗಿ ಈಗ ನಿಮ್ಮ ಕೈಯಲ್ಲಿದೆ. ಇದು ನಿಮಗೆ ಮೆಚ್ಚುಗೆಯಾಗುವುದು ಎಂಬ ಆಶಯ ನಮ್ಮದು.

ನಮ್ಮ ಯೋಜನೆಯಂತೆಯೇ ಎಲ್ಲವೂ ನಡೆಯಲಿಲ್ಲ. ಕೃಷ್ಣನ ಸಾಹಿತ್ಯದ ಬಗ್ಗೆ ಯಾವ ಕಾರಣಕ್ಕೋ ಏನೋ ಸಾಕಷ್ಟು ಹಾಗೂ ಗಮನಾರ್ಹವಾದ ವಿಮರ್ಶೆ ಬಂದಿಲ್ಲ ವೆಂಬುದನ್ನು ಗಮನದಲ್ಲಿಟ್ಟುಕೊಂಡು, ಆರು ತಿಂಗಳ ಮುಂಚೆಯೇ, ವಿಷಯಗಳನ್ನು ನಿರ್ಧರಿಸಿ, ಕನ್ನಡದ ಬಹುಪಾಲು ಎಲ್ಲ ಹೆಸರಾಂತ ವಿಮರ್ಶಕರಿಗೂ ಪತ್ರ ಬರೆದು ಲೇಖನ ಕೋರಿದೆವು. ಅರ್ಧದಷ್ಟು ಜನ ಉತ್ಸಾಹ ತೋರಿದರು. ಮೂರನೇ ಒಂದು ಭಾಗದಷ್ಟು ಜನ ಸಕಾಲದಲ್ಲಿ, ತಡವಾಗಿ, ತುಂಬಾ ತಡವಾಗಿ–ಅಂತೂ ಹೇಗೋ ಲೇಖನಗಳನ್ನು ಕಳುಹಿಸಿ ಸಹಕರಿಸಿದರು. ನಂತರ ಸಂಪುಟ ಕೃಷ್ಣನ ವ್ಯಕ್ತಿತ್ವದ ಮೇಲೂ ಬೆಳಕು ಚೆಲ್ಲುವಂತಿರಲಿ ಎಂದು ನಮಗೆ ಗೊತ್ತಿದ್ದ ಆತನ ಎಲ್ಲ ಸಾಹಿತಿ ಮಿತ್ರರಿಗೂ ಪತ್ರ ಬರೆದು ನೆನಪುಗಳನ್ನು ಬರೆದು ಕಳುಹಿಸಲು ಕೋರಿದೆವು. ಆದರೆ ಇದಕ್ಕೆ ಬಂದ ಪ್ರತಿಕ್ರಿಯೆ ಮಾತ್ರ ಆಘಾತಕಾರಿಯಾಗಿತ್ತು. ಒಂದಿಬ್ಬರು ಮೂವ್ವರ ಹೊರತಾಗಿ ಮಿಕ್ಕೆಲ್ಲರೂ ನಾವು ಮಾಡುತ್ತಿರುವ ಈ ಕೆಲಸ ಅರ್ಥಹೀನವೆಂಬಂತೆ ದಿವ್ಯ

ನಿರ್ಲಕ್ಷ್ಯ ತೋರಿದರು. ಆದರೆ ನಾವು ಮಾಡುತ್ತಿರುವ ಕೆಲಸ ಪ್ರೀತಿ ವಿಶ್ವಾಸಗಳ ಕೆಲಸವಾದುದರಿಂದ ಮನಸ್ಸು ಕಹಿ ಮಾಡಿಕೊಳ್ಳದೆ, ನಮ್ಮೆಲ್ಲಾ ಸಂಕಲ್ಪ ಶಕ್ತಿಯನ್ನು ಸಂಘಟಿಸಿ ಈ ಸಂಪುಟವನ್ನು ಸಮಗ್ರಗೊಳಿಸಲು ಯತ್ನಿಸಿದ್ದೇವೆ. ಇದಕ್ಕೆ ಪೂರಕವಾಗಿ, ಕೃಷ್ಣನ ವಾರಿಗೆಯವರ ಧೋರಣೆಗೆ ವ್ಯತಿರಿಕ್ತವಾಗಿ ಹಿರಿಯ ತಲೆಮಾರಿನ ಲೇಖಕರನೇಕರು ನಮ್ಮ ಕೋರಿಕೆಯನ್ನು ಮನ್ನಿಸಿ ಸ್ಮರಣ-ಸಂದೇಶಗಳನ್ನು ಕಳುಹಿಸಿ ಸಂಪುಟವನ್ನು ಸಂಪನ್ನಗೊಳಿಸಿದ್ದಾರೆ. ಬರೆಹಗಳನ್ನು ಕಳುಹಿಸಿದ ಎಲ್ಲ ಲೇಖಕರಿಗೂ ನಮ್ಮ ಹೃದಯಪೂರ್ವಕ ಧನ್ಯವಾದಗಳು.

ಇಂತಹ ಸಾಹಸದ ಕೆಲಸಕ್ಕೆ ಬೇಕಾದ ಆರ್ಥಿಕ ಬೆಂಬಲವನ್ನು ಒದಗಿಸಲು ಪ್ರೀತಿಪೂರ್ವಕವಾಗಿ ಮುಂದೆ ಬಂದವರು ಕೃಷ್ಣನ ಆಪ್ತ ಮಿತ್ರರಲ್ಲೊಬ್ಬರಾದ ಎಸ್. ಮಹೇಶ್ ಅವರು. ಸಂವಾದ ಪತ್ರಿಕೆಗೆ ಮುಂಗಡ ಜಾಹೀರಾತುಗಳನ್ನು ನೀಡುವ ಮೂಲಕ ಅವರು ಈ ಸಂಪುಟದ ಆರ್ಥಿಕಭಾರ ನಮ್ಮ ಬೆನ್ನು ಮುರಿಯದಂತೆ ನೋಡಿಕೊಂಡಿದ್ದಾರೆ. ಈ ಸಂಬಂಧ ನಮ್ಮ ನೆರವಿಗೆ ಬಂದ ಕೃಷ್ಣನ ಇನ್ನೋರ್ವ ಮಿತ್ರ ದೇವನೂರ ಮಹಾದೇವ ಅವರಿಗೂ ಎಸ್. ಮಹೇಶ್ ಅವರಿಗೂ ಸಂವಾದ ಪ್ರಕಾಶನ ಋಣಿಯಾಗಿದೆ. ಹಾಗೇ ಈ ಪ್ರಕಟಣೆಗೆ ಕೃಷ್ಣನ ಫೋಟೋಗಳು ಹಾಗೂ ಪತ್ರಗಳನ್ನು ನೀಡಿ ಆದರಿಸಿದ ಶ್ರೀಮತಿ ವಿನುತಾ ಶ್ರೀಕೃಷ್ಣ ಆಲನಹಳ್ಳಿ ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಹಾಸನದ ನ್ಯಾಷನಲ್ ಪ್ರೆಸ್‌ನ ಶ್ರೀ ಎಂ. ವಿ. ರಂಗರಾಜ್ ಹಾಗೂ ಅವರ ಸಿಬ್ಬಂದಿ ಈ ಪ್ರಕಟಣೆಯ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಪುಸ್ತಕ ಆದಷ್ಟೂ ಸುಂದರವಾಗಿ ಹೊರಬರಲು ಶ್ರಮಿಸಿದ್ದಾರೆ. 'ಸುದ್ದಿ ಸಂಗಾತಿ' ಪತ್ರಿಕೆಯ ಸಂಪಾದಕರ ಕೃಪೆಯಿಂದ ಮಕಾಳಿಯವರು ರಚಿಸಿದ್ದ ಕೃಷ್ಣನ ಚಿತ್ರ ದೊರೆತು, ಅದಕ್ಕೆ ಸ್ಥಳೀಯ ಕಲಾವಿದ ಎಸ್. ಬಡಿಗೇರ ಅವರು ಹಿನ್ನೆಲೆ ಒದಗಿಸಿ, ಮುಖಪುಟ ವಿನ್ಯಾಸ ಮಾಡಿಕೊಟ್ಟಿದ್ದಾರೆ. ಇವರೆಲ್ಲರನ್ನೂ ಸಂವಾದ ಪ್ರಕಾಶನ ಕೃತಜ್ಞತೆಯಿಂದ ನೆನೆಯುತ್ತದೆ.

**—ಸಂಪಾದಕರು**

## ಜೋಗಿ ಹೇಳಿದ್ದು

ಅಷ್ಟೊ ಭೂಮಿಯಿದ್ದು
ಮತ್ತೂ ಕೊಳ್ಳುವ
ಅಷ್ಟೊ ಮರಗಳಿದ್ದು
ಮತ್ತೂ ಬೆಳೆಸುವ

ನನ್ನಾಸೆ ಹೊಟ್ಟೆ ಕೋಳಿಯು
ಕತ್ತ ಮುರಿದಂತೆ
ಗಡ್ಡದ ಜೋಗಿ ಹೀಗೆಂದ:

"ಎಷ್ಟೇ ಕೊಂಡರೂ
ಎಷ್ಟೇ ಬೆಳಸಿದರೂ
ಕಡೆಗೆ ಬೇಕಾಗುವುದು–

ನಾಲ್ಕು ಮೊಳಭೂಮಿ ಇಲ್ಲ
ಒಂದೇ ಗಾಡಿ ಸೌದೆ ಅಷ್ಟೆ"

—ಶ್ರೀಕೃಷ್ಣ ಆಲನಹಳ್ಳಿ

# ಒಳಗೆ....


## ಸ್ಮರಣೆ

ಕುವೆಂಪು/ಪು.ತಿ.ನ./ಕೆ.ಎಸ್.ನ./ಚದುರಂಗ/ದೇಜಗೌ/
ಜಿ.ಎಸ್. ಶಿವರುದ್ರಪ್ಪ/೩

## ಸಾಹಿತ್ಯಾವಲೋಕನ

**ಕಾಲಾಂತರದಲ್ಲಿ ಕೃಷ್ಣ**/ಡಾ॥ ಕೆ. ವಿ. ತಿರುಮಲೇಶ್/೧೧
**ಕನ್ನಡ ಕಾದಂಬರಿ ಪರಂಪರೆ ಮತ್ತು ಶ್ರೀಕೃಷ್ಣ ಆಲನಹಳ್ಳಿ**/ಟಿ. ಪಿ. ಅಶೋಕ/೧೭
**'ಕಾಡ ಮೂಲಕವೆ ಪಥ ಆಗಸಕ್ಕೆ....'**/ಲಕ್ಷ್ಮೀಶ ತೋಳ್ಪಾಡಿ/೪೮
**ಭುಜಂಗಯ್ಯನ ದಶಾವತಾರಗಳು: ಒಂದು ಅನುಭವ**/ಕೆ. ಸತ್ಯನಾರಾಯಣ/೫೨
**ಭುಜಂಗಯ್ಯನ ಪಾತ್ರಸೃಷ್ಟಿ: ಕೆಲವು ಆಲೋಚನೆಗಳು**/ಎಚ್. ಎಸ್. ರಾಘವೇಂದ್ರರಾವ್/೬೪
**ಶ್ರೀಕೃಷ್ಣರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು**/ನೇಮಿಚಂದ್ರ/೭೬
**ಪರಿವರ್ತನೆಯ ಕಿರು ಅಲೆಗಳ 'ಪರಸಂಗ....'**/ಜಿ.ಪಿ. ಬಸವರಾಜು/೮೬
**ಕಥೆಗಾರ ಕೃಷ್ಣ: ಒಂದು ವೈಯುಕ್ತಿಕ ಪ್ರತಿಕ್ರಿಯೆ**/ರಾಘವೇಂದ್ರ ಪಾಟೀಲ/೯೨
**ಮಣ್ಣಿನ ಹಾಡು: ಒಂದು ಪತ್ರ**/ಓ. ಎಲ್. ನಾಗಭೂಷಣಸ್ವಾಮಿ/೯೯

## ಸ್ನೇಹ

**ವಿದ್ಯಾರ್ಥಿ ಮಿತ್ರ**/ಸುಜನಾ/೧೦೭
**ಮನಮೋಹಕ ಕೃಷ್ಣ**/ರಮೇಶ್ ಬಂದಗದ್ದೆ/೧೧೪
**ಬೈಕು ಮತ್ತು ಅಂಗನೆಯರು**/ಚಂದ್ರಶೇಖರ ತಾಳ್ಯ/೧೧೭
**ನಗುವ ಬಾಲಕ**/ಎಸ್. ಮಂಜುನಾಥ್/೧೧೯
**ನೆನಪುಗಳ ಕಾಡಿನಲ್ಲಿ**/ಡಾ॥ ಬೆಸಗರಹಳ್ಳಿ ರಾಮಣ್ಣ/೧೨೦
**ಚಿತ್ರಗಳು**/೧೨೪

## ಕಾವ್ಯಾಂಜಲಿ

**ಶ್ರೀಕೃಷ್ಣ ಸ್ಮರಣೆ**/ಪ್ರತಿಭಾ ನಂದಕುಮಾರ್/೧೨೭
**ಕೃಷ್ಣಾ-ಮೃಗತೃಷ್ಣಾ**/ಕೆ. ನ. ಶಿವತೀರ್ಥನ್/೧೨೮
**ಕೃಷ್ಣ ನ ಪ್ರತಿಮೆ**/ಕ. ವೆಂ. ರಾಜಗೋಪಾಲ/೧೨೯

**ಲೇಖಕರ ವಿಳಾಸ**/೧೩೦

ಸ್ಮರಣೆ

## ಉಜ್ವಲ ಪ್ರತಿಭೆ

ಶ್ರೀಕೃಷ್ಣ ಆಲನಹಳ್ಳಿ ಅಷ್ಟು ಬೇಗ ತೀರಿಕೊಳ್ಳುತ್ತಾರೆಂದು ಯಾರೂ ಊಹಿಸಿರಲಿಲ್ಲ. ಅವರ ಅದಮ್ಯ ಜೀವನೋತ್ಸಾಹ, ಉಜ್ವಲವಾದ ಪ್ರತಿಭೆ ಹಾಗೂ ಸೃಜನಶೀಲ ಸಾಮರ್ಥ್ಯಗಳು ಯಾರನ್ನಾದರೂ ಬೆರಗುಗೊಳಿಸುವಂಥವು. ಅವರು ಕವಿಯಾಗಿ, ಕತೆಗಾರರಾಗಿ, ಕಾದಂಬರಿಕಾರರಾಗಿ ಸಾರಸ್ವತ ಲೋಕದಲ್ಲಿ ಅಳಿಸಲಾಗದ ಹೆಜ್ಜೆಗುರುತುಗಳನ್ನು ಬಿಟ್ಟುಹೋಗಿದ್ದಾರೆಂಬುದು ಸಮಾಧಾನದ ಸಂಗತಿಯಾದರೂ, ಅವರ ಅಕಾಲಮರಣದಿಂದಾಗಿ ಕನ್ನಡಕ್ಕೆ ತುಂಬಲಾರದ ನಷ್ಟವಾಯಿತೆಂಬುದು ದುಃಖದ ವಿಷಯವಾಗಿದೆ.

ಅವರ ದುರಂತ ಜೀವನಕ್ಕೆ ಅವರ ಕೃತಿಗಳೇ ಶಾಶ್ವತ ಸ್ಮಾರಕಗಳೆಂದು ತಿಳಿದು ತೃಪ್ತಿ ಪಡೆಯಬೇಕಾಗಿದೆ.

**ಕುವೆಂಪು**

## ರಸಿಕ ಸಾಹಿತಿ

ಶ್ರೀಕೃಷ್ಣ ಆಲನಹಳ್ಳಿ ಅವರ ಅಕಾಲ ಮರಣದ ಸುದ್ದಿ ಕೇಳಿದಾಗ ನನಗೆ ತಲ್ಲಣ ವಾಯಿತು. ಬಹು ಚುರುಕು ಬುದ್ಧಿಯ, ಸದಾ ಪುಟಿಸುತ್ತಿದ್ದ ನಗೆಯ, ಅದಮ್ಯ ಉತ್ಸಾಹದ ರಸಿಕ ಸಾಹಿತಿ ಹಾಗೂ ಸಹೃದಯಿ ಕಣ್ಮರೆಯಾದರು.

ಮೈಸೂರಿನಲ್ಲಿದ್ದಾಗ ನಾನೂ ಆತನೂ ಮಾನಸ ಗಂಗೋತ್ರಿಯ ಪರಿಸರದಲ್ಲೂ, ನನ್ನ ಮನೆಯಲ್ಲೂ ಆಗಾಗ ಸಂಧಿಸುತ್ತಿದ್ದೆವು. ನನ್ನ ಮಗಳು ಅಲಮೇಲು ಆತನ ಸಹಪಾಠಿ ಕನ್ನಡ ಎಂ.ಎ., ತರಗತಿಯಲ್ಲಿ. ಬಹು ಪಟುವಾದ ಮಾತುಗಾರಿಕೆ, ಬೀಸು ನೋಟ, ಹಳೆಗಾಲದ ಕೆಲಸಕ್ಕೆ ಬಾರದ ಸರಕುಗಳಲ್ಲಿ ತಾತ್ಸಾರ, ಹೊಸ ಕಾಲದ ಚೇತನೋದ್ದೀಪಕ ನಿಟ್ಟುಗಳಲ್ಲಿ ಚುರುಕು ನಡೆ–ಬರವಣಿಗೆಯಲ್ಲಿ ಹೊಚ್ಚ ಹೊಸತನ, ಸಾರವತ್ತಾದುದನ್ನು ಗುರುತಿಸುವ ನೇರದೃಷ್ಟಿ, ತೆಗಳಿಕೆಯಲ್ಲೂ ಹೊಗಳಿಕೆಯಲ್ಲೂ

ಧಾರಾಳತನ, ಬಹು ಆಕರ್ಷಕ ವ್ಯಕ್ತಿ ಶ್ರೀ ಆಲನಹಳ್ಳಿ. ತಮ್ಮ ಸಂಭಾಷಣೆಗಳಲ್ಲಿ ನನ್ನನ್ನು ಬಹು ಗೆಲುವುಗೊಳಿಸುತ್ತಿದ್ದರು. ಆತನ "ಕಾಡ"ನ್ನು ನಾನು ತುಂಬ ಮೆಚ್ಚಿ ಕೊಂಡಿದ್ದೆ. ಆ ಕಾಲದ ಸಿನಿಮಾ–ಚಿತ್ರಗಳಲ್ಲಿ ಅದು ಬಹು ಶ್ರೇಷ್ಠವಾದದ್ದೆಂದು ನನಗೆನಿಸಿತ್ತು. ನನ್ನಲ್ಲಿ ವಿಶೇಷ ಮಮತೆಯನ್ನು ತೋರುತ್ತಿದ್ದರು. ಅವರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಕನ್ನಡ ಆಧುನಿಕ ಸಾಹಿತ್ಯದ ಮೇಲೆ ಅಚ್ಚಳಿಯದ ಛಾಪನ್ನು ಒತ್ತಿ ಹೋಗಿದ್ದಾರೆ. ಅವರಿಂದ ಒಂದು ಹೊಸಕಳೆ ಕನ್ನಡಕ್ಕೆ ದೊರೆತಿದೆ. ಈ ದಿಟ್ಟ ಸಾಹಸಿಯನ್ನು "ಸಂವಾದ"ದ ಮಿತ್ರರು ಮಮತೆಯಿಂದ ನೆನೆದು ಈ ಸಂಚಿಕೆಯನ್ನು ಪ್ರಕಟಿಸಿದ್ದಾರೆ. ಇವರು ಅಭಿನಂದನೀಯರು. ಇವರೊಡನೆ ಬೆರೆತಿದೆ ನನ್ನೀ ಆರ್ದ್ರ ಹೃದಯದ ನೆನಪಿನ ಮಾತುಗಳು.

**ಪು. ತಿ. ನ.**

# ನಿರ್ಮಲ ನಗೆ

ಶ್ರೀಕೃಷ್ಣ ಆಲನಹಳ್ಳಿ ಅವರ ಸಲುವಾಗಿ ಒಂದು ನೆನಪಿನ ಸಂಪುಟವನ್ನು ತರುವುದು ತುಂಬ ಸ್ತುತ್ಯವಾದ ಕೆಲಸ. ಅದರ ಬಗ್ಗೆ ಕೆಲಸದಲ್ಲಿ ತೊಡಗಿರುವ ತಮಗೆ ಮತ್ತು ತಮ್ಮ ಮಿತ್ರರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಹಾಗೆಯೇ ಯೋಚಿಸುತ್ತ ಹೋದರೆ ನನ್ನ ಜೀವನದಲ್ಲಿ ನಾನು ಶ್ರೀಕೃಷ್ಣ ಅವರನ್ನು ಕಂಡದ್ದು ಮೂರೇ ಸಲ. ಮೊದಲ ಬಾರಿಗೆ ಮೈಸೂರಿನ ರಾಮಸ್ವಾಮಿ ಸರ್ಕಲಿನಲ್ಲಿ ಅವರೇ ನನ್ನನ್ನು ಕಂಡು ಮಾತಾಡಿಸಿದರು; ಕೆಲವು ಕಾಶ್ಮೀರಿ ಕವನ ಗಳನ್ನು ಕನ್ನಡಕ್ಕೆ ಅನುವಾದ ಮಾಡಲಿರುವ ತಮ್ಮ ಯೋಜನೆಯನ್ನು ನನಗೆ ವಿವರಿಸಿದರು. ಬಳಿಕ ಮತ್ತೆ ಸಿಕ್ಕಿದ್ದೂ ಮೈಸೂರಿನಲ್ಲೇ. ಯಾವುದೋ ಸಾಹಿತ್ಯಕ ಕಾರ್ಯಕ್ರಮವನ್ನು ಮುಗಿಸಿಕೊಂಡು ನಾನು ಮತ್ತು ನನ್ನ ಹೆಂಡತಿ ಬೆಂಗಳೂರಿಗೆ ವಾಪಸಾಗಲು ಬಸ್–ಸ್ಟ್ಯಾಂಡಿನಲ್ಲಿ ಟ್ಯಾಕ್ಸಿಯನ್ನು ಹುಡುಕುತ್ತಿದ್ದಾಗ ಅವರು ನನಗೆ ಟ್ಯಾಕ್ಸಿಯೊಂದನ್ನು ಹುಡುಕಿಕೊಟ್ಟದ್ದಲ್ಲದೆ, ಹೊರಡುವ ಮುನ್ನ ನಕ್ಕ ನಿರ್ಮಲ ನಗೆಯಿಂದ ನನ್ನನ್ನು ಬೆರಗುಗೊಳಿಸಿದಾಗ.

ಮೂರನೆಯ ಸಲ ಅವರು ನನ್ನನ್ನು ಕಂಡದ್ದು ಬೆಂಗಳೂರಿನಲ್ಲಿ ಯಾವುದೋ ಒಂದು ಸೆಮಿನಾರಿಗೆ ಬಂದಿದ್ದಾಗ. 'ನಿಮಗೆ ನನ್ನ ಕವನಗಳನ್ನು ಓದಬಯಸುತ್ತೇನೆ; ಅದಕ್ಕಾಗಿ ಮನೆಗೆ ಬರುತ್ತೇನೆ' ಎಂದರು. 'ಬನ್ನಿ' ಎಂದೆ.

ಅವರು ಬರಲೇ ಇಲ್ಲ! ವರುಷದ ಬಳಿಕ ಅವರು ಇನ್ನಿಲ್ಲ ಎಂದು ಸುದ್ದಿ ಬಂತು. ತುಂಬಾ ಗಡಿಬಿಡಿಯ ಮನುಷ್ಯ ಗಡಿಬಿಡಿಯಲ್ಲೇ ಹೊರಟು ಹೋದರು.

**ಕೆ. ಎಸ್. ನ.**

# ಕಣ್ಣು ಕಿವಿಯಂತಿದ್ದ ಆತ್ಮೀಯ

1960ರಲ್ಲಿ ನಾನು ನಮ್ಮ ಹಳ್ಳಿಯಿಂದ ಮೈಸೂರಿಗೆ ಬಂದು ನೆಲೆಸಿದ್ದರೂ ಸಹ 1970ರ ವರೆಗೂ ಶ್ರೀಕೃಷ್ಣ ಆಲನಹಳ್ಳಿಯವರ ಪರಿಚಯ ಮಾತ್ರ ಆಗಿರಲಿಲ್ಲ. ಅವರ ಕೆಲವು ಕೃತಿಗಳನ್ನು ಓದಿ ಸಂತೋಷಪಟ್ಟಿದ್ದೆ, ಅಷ್ಟೆ. ಒಂದು ಸಮಾರಂಭದಲ್ಲಿ ಯಾರೋ ಅವರನ್ನು ನನಗೆ ಪರಿಚಯ ಮಾಡಿಕೊಟ್ಟರು. ಒಡನೆಯೇ ಅವರು "ನಿಮ್ಮ ಕಲ್ಲಹಳ್ಳಿಗೂ ನನಗೂ ರಕ್ತಸಂಬಂಧ ಇದೆ, ಸಾರ್. ನಿಮ್ಮ ಹಳ್ಳಿಯ ಬಿಳಿಗಿರಯ್ಯನ ರಾಮಣ್ಣ ನನಗೆ ನೆಂಟನಾಗಬೇಕು" ಎಂದು ಪ್ರೀತಿಯಿಂದ ನುಡಿದು ನನಗೆ ಹತ್ತಿರದವರಾದರು. ನನ್ನ ಹಳ್ಳಿಯವರ ಸಂಬಂಧ, ಆದ್ದರಿಂದ ನನ್ನವರೇ– ಎಂಬ ಭಾವನೆಯನ್ನು ನನ್ನೊಳಗೆ ಬಿತ್ತಿದರು.

ಅಲ್ಲಿಂದ ಮುಂದೆ ನನ್ನ ಅವರ ಸಂಬಂಧ ಕೇವಲ ಪರಿಚಯವಾಗಿ ಉಳಿಯದೆ ನಿಕಟವಾಗಿ, ಆತ್ಮೀಯವಾಗಿ ಬೆಳೆಯುತ್ತ ಹೋಯಿತು. ನಾನು ತುಂಬಾ ಸಮಯ ಬರೆಯದೇ ಇದ್ದದ್ದು ಅವರಿಗೆ ವ್ಯಥೆಯನ್ನುಂಟುಮಾಡಿತ್ತು–"ಏನು ಸಾರ್, ಎಂತೆಂತ ವರೋ ಬರೀತಾರೆ. ಎಷ್ಟೊಂದು ಅನುಭವ ಇದೆ ನಿಮಗೆ, ಏನಾದರೂ ಬರೀರಿ ಸಾರ್" ಎಂದು ಪ್ರೋತ್ಸಾಹಿಸುತ್ತಿದ್ದರು. ನಾನು ಏನಾದರೂ ಬರೆದರೆ, ಅದನ್ನು ತಾವೇ ಬರೆದಷ್ಟು ಸಂತೋಷಪಡುತ್ತಿದ್ದರು. ಆ ದಿನಗಳಲ್ಲಿ ನಾನೊಂದು ಸಣ್ಣ ಕವನ ಬರೆದೆ. ಅದನ್ನು ಹೊಗಳಿದ್ದೇ ಅಲ್ಲದೆ, ಸಾಹಿತಿ ಲಂಕೇಶರು ಆ ಕಾಲದಲ್ಲಿ ಹೊರತಂದ ವಿಶೇಷ ಸಂಚಿಕೆ "ಪಾಂಚಾಲಿ"ಯಲ್ಲಿ ಬೆಳಕು ಕಾಣುವಂತೆ ಮಾಡಿದರು.

ಇನ್ನೊಮ್ಮೆ ನಾನು 'ವೈಶಾಖ' ಕಾದಂಬರಿ ಬರೆಯಲು ಆರಂಭ ಮಾಡಿ ಒಂದು ಪುಟದಷ್ಟು ಬರೆದಿದ್ದೆ. ಕೇವಲ ಗ್ರಾಮ್ಯ ಭಾಷೆಯಲ್ಲೇ ಬರವಣಿಗೆ ಮೂಡಿತ್ತು. ಆ ಸಮಯದಲ್ಲಿ ಕೃಷ್ಣ ನಮ್ಮ ಮನೆಯೊಳಗೆ ಬರುತ್ತಿದ್ದುದನ್ನು ಕಂಡೆ. ಅವರಿಗೆ ತೋರಿಸಬಾರದೆಂದು ಅವಸರವಸರವಾಗಿ ಮುಚ್ಚಿ ಹಾಕಲು ಪ್ರಯತ್ನಿಸಿದೆ. ಆದರೆ ಕೃಷ್ಣನಿಂದ ಕಣ್ಣು ತಪ್ಪಿಸುವುದು ಸಾಧ್ಯವಾಗಲಿಲ್ಲ. "ಕೇವಲ ಹಳ್ಳಿಯ ಭಾಷೆಯಲ್ಲೇ ಇಡಿಯಾಗಿ ಬಂದಿದೆ. ಇದನ್ನು ಯಾರು ಓದ್ತಾರೆ ಕೃಷ್ಣ" ಎಂದು ಆತಂಕ ವ್ಯಕ್ತ ಪಡಿಸಿದೆ. ನನ್ನ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ ಕೃಷ್ಣ ತಮ್ಮಷ್ಟಿಗೆ ತಾವು ನಿಧಾನವಾಗಿ ಓದಿಕೊಂಡರು. ಓದು ಮುಗಿದ ಮೇಲೆ, "ಯಾಕೆ ಸಾರ್ ಹೀಗೆ ಸಂಕೋಚಪಡ್ತೀರಿ. ನಿಮ್ಮ ಹಳ್ಳಿಯ ಸುತ್ತಲಿನ ಭಾಷೆ ಸತ್ವಶಾಲಿಯಾಗಿ ಮೂಡಿ ಬರ್‍ತಾ ಇದೆ. ಯಾರು ಓದ್ತಾರೆ ಅಂತ ನಿಲ್ಲಿಸಬೇಡಿ. ಸುಮ್ಮನೆ ಬರೆಯುತ್ತಾ ಹೋಗಿ. ಇದು ಏನೋ ಒಂದು ಹೊಸ ಜಾಡಿನಲ್ಲಿ ನಡೀತಾ ಇದೆ. ವಿಶಿಷ್ಟ ಕೃತಿಯೇ ಆಗ ಬಹುದು ಎಂದು ಹುರಿದುಂಬಿಸಿದರು. ಕೃಷ್ಣ ಆಗಾಗ ತಾವು ಏನಾದರೂ ಬರೆದರೆ, ಅದನ್ನು ತಂದು ನನ್ನ ಮುಂದೆ ಓದಿ, ನನ್ನ ಅಭಿಪ್ರಾಯ ಕೇಳುತ್ತಿದ್ದರು. 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯ ಹಸ್ತಪ್ರತಿಯ ಮೊದಲ ಓದುಗ ಬಹುಶಃ ನಾನೇ ಎಂದು ತೋರುತ್ತದೆ.

ಇವಲ್ಲದೆ ಹತ್ತು ರೀತಿಯಲ್ಲಿ ಅವರು ನನ್ನನ್ನು ತನ್ನವರನ್ನಾಗಿಸಿಕೊಂಡಿದ್ದರು—ತಮ್ಮ ಮನೆಯಲ್ಲಿ ವಿಶೇಷ ತಿಂಡಿಯೋ ಅಡಿಗೆಯೋ ಆಗುವುದಿದ್ದರೆ, ನನ್ನನ್ನು ಕರೆದು ಕೊಂಡು ಹೋಗಿ ಸತ್ಕರಿಸಬೇಕು. ಯಾರಾದರೂ ಸಾಹಿತಿಗಳೋ, ಪತ್ರಕರ್ತರೋ, ಮಂತ್ರಿಗಳೋ ತಮ್ಮ ಮನೆಗೆ ಬರುವುದಿದ್ದರೆ ಆವಶ್ಯವಾಗಿ ನನ್ನನ್ನು ಕರೆದೊಯ್ದು ಭೆಟ್ಟಿಮಾಡಿಸಬೇಕು. ಯಾವುದಾದರೂ ಹೊಸ ಪುಸ್ತಕ ಬಂದರೆ, ಅದನ್ನು ತಂದು ನನ್ನಿಂದ ಓದಿಸಬೇಕು. ಒಟ್ಟಿನಲ್ಲಿ ಸಾಹಿತ್ಯದ, ಸಾಹಿತಿಗಳ ಸಂಪರ್ಕ ಕಳೆದುಕೊಂಡಿದ್ದ ನನ್ನನ್ನು ಮತ್ತೆ ಆ ಸಂಪರ್ಕವು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಏರ್ಪಡುವಂತೆ ಮಾಡಲು ಶ್ರೀಕೃಷ್ಣ ಆಲನಹಳ್ಳಿ ನೆರವಾದದ್ದನ್ನು ಮರೆಯಲಾರೆ.

ನಾನು ಯಾವ ಕಾರಣಕ್ಕೂ ಹಿಂದೆ ಉಳಿಯಬಾರದು, ಬೆಳಕಿಗೆ ಬರಬೇಕು—ಇದು ಆ ನನ್ನ ಮಿತ್ರನ ಆಕಾಂಕ್ಷೆಯಾಗಿತ್ತು—ಎಷ್ಟೋ ವಿಚಾರಗಳಲ್ಲಿ ಕಣ್ಣು, ಕಿವಿ ಯಂತೆಯೇ ಇದ್ದರು. ಅಂಥ ಆತ್ಮೀಯ ಈಗ ಇಲ್ಲದಿರುವುದು ವೈಯಕ್ತಿಕವಾಗಿ ನನಗೆ ತುಂಬ ನಷ್ಟವಾಗಿದೆ. ಆದರೆ ನನಗಿಂತಲೂ ಹೆಚ್ಚಿನ ನಷ್ಟ ಕನ್ನಡ ಸಾಹಿತ್ಯಕ್ಕೆ.

**ಚದುರಂಗ**

# ಚಿಂತೆ ಕಾಡುತ್ತಿದೆ....

ಶ್ರೀಕೃಷ್ಣ ಆಲನಹಳ್ಳಿ ಎಂ.ಎ., ತರಗತಿಯಲ್ಲಿ ನನ್ನ ವಿದ್ಯಾರ್ಥಿ. ಆ ಹೊತ್ತಿಗಾಗಲೇ ಉಜ್ವಲ ಭವಿಷ್ಯವುಳ್ಳ ಸಾಹಿತಿಯೆಂದು ಎಲ್ಲ ಕಡೆಯೂ ಜನಪ್ರಿಯತೆಯನ್ನು ಗಳಿಸಿದ್ದ. ಅಂಥವನು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನಾಗುವುದಾದರೆ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಅವನಿಗೂ ಲಾಭವಾಗುತ್ತದೆಂದು ನಾನು ಯೋಚಿಸಿದ್ದೆ. ರನ್ನನಂತೆ ಆತ್ಮವಿಶ್ವಾಸ ಹೊಂದಿದ್ದ ಅವನ ಬಗ್ಗೆ ಕೆಲವರಿಗೆ ಅನುಮಾನ, ಅವನು ನಮಗೆ ಗೌರವ ಕೊಡುವುದುಂಟೆ ಎಂದು. ನಾನೇ ಅಧ್ಯಕ್ಷನಾಗಿದ್ದ ನೇಮಕ ಸಮಿತಿಯ ಮುಂದೆ ಅವನು ಹಾಜರಾದ. ವಿಧಿ ಯಾವ ಯಾವ ಕೈಗಳ ಮೂಲಕ ಏನೇನು ಕೆಲಸ ಮಾಡಿತ್ತೋ ಅವನಿಗೆ ಅಧ್ಯಾಪಕ ಪದವಿ ದಕ್ಕಲಿಲ್ಲ. ನನ್ನ ಪ್ರಯತ್ನಕ್ಕೆ ಫಲ ದೊರೆಯಲಿಲ್ಲ.

ತನಗೆ ಹುದ್ದೆ ದೊರೆಯಲಿಲ್ಲವೆಂದು ತಿಳಿದ ಕೂಡಲೇ ಅವನು ನನ್ನ ಮನೆಗೆ ಬಂದ. 'ಸಾರ್, ನೇಮಕ ಸಮಿತಿಯಲ್ಲಿ ಏನಾಯ್ತು ?' 'ಏನೇ ಆಗಿರಲಿ ನಾನು ಗುಟ್ಟು ಬಿಟ್ಟುಕೊಡುವಂತಿಲ್ಲ'. 'ನನಗೆ ಗೊತ್ತಾಗಿದೆ, ಸಾರ್, ವಿದ್ವಾಂಸರೆನಿಸಿಕೊಂಡಿರುವ ನನ್ನ ಗುರುಗಳೇ ನನ್ನ ವಿರುದ್ಧವಾಗಿ ಕ್ಯಾನ್ವಾಸ್ ಮಾಡಿದರೆಂದು ಕೇಳಿದೆ. ನೀವಿದ್ದೂ ಅದು ತಪ್ಪಿ ಹೋಯಿತಲ್ಲ, ಇದು ನಿಮಗೊಪ್ಪಿಗೆಯೆ ?' 'ಕೃಷ್ಣ ನನಗೊಪ್ಪಿಗೆಯಿಲ್ಲ, ನಿಜ. ಆದರೆ ನಾನು ಒಂಟಿ, ಅಸಹಾಯಕ'. 'ನನಗೆಲ್ಲ ತಿಳಿದಿದೆ, ಸಾರ್. ನಾನು ಕಟ್ಟಿಕೊಂಡಿದ್ದ ಕನಸೆಲ್ಲ ಪುಡಿಪುಡಿಯಾಯಿತು' ಎಂದವನು ಗಳಗಳನೆ ಅಳಲಾರಂಭಿಸಿದ.

ಅದಮ್ಯ ಜೀವನೋತ್ಸಾಹವುಳ್ಳ, ಅಪಾರ ಸೃಜನ ಸಾಮರ್ಥ್ಯವುಳ್ಳ, ಯಾರಿಗೂ ಮಣಿಯದ, ಜಗ್ಗದ ಆ ವ್ಯಕ್ತಿ ಅಂದು ಅತ್ತದ್ದನ್ನು ನೋಡಿ ಅಚ್ಚರಿಯಾಯಿತು. ಅವನು ಭಾವಜೀವಿಯಲ್ಲವೆ ?

ನನಗೆ ನಿವೃತ್ತಿ ಆಗಿತ್ತು. ಮದ್ರಾಸಿನ ಗೆಳೆಯರೊಬ್ಬರಿಗೆ ನಗರದ ಸುಪ್ರಸಿದ್ಧ ಮಾಂಸಾಹಾರದ ಹೋಟಲಿನಲ್ಲಿ ಊಟದ ವ್ಯವಸ್ಥೆ ಮಾಡಿದ್ದೆ. ಅವರ ಜತೆಗೆ ಒಬ್ಬಿಬ್ಬರು ಗೆಳೆಯರನ್ನು ಕರೆದಿದ್ದೆ. ಅವರಲ್ಲಿ ಶ್ರೀಕೃಷ್ಣನೂ ಒಬ್ಬ. ನಾನು ಬೀರಿದ್ದ ಲೋಟ ಹಿಡಿದು ಕುಳಿತೆ. 'ಕೃಷ್ಣ, ನಿನಗೆ ತೃಪ್ತಿಯಾಗುವ ತನಕ ಕುಡಿಸಲೆಂದೇ ನಾನು ನಿನ್ನನ್ನು ಕರೆದಿದ್ದೇನೆ. ಸಂಕೋಚ ಬೇಡ, ಕುಡಿ' ಎಂದೆ. ನಾನು ಎಷ್ಟು ಒತ್ತಾಯ ಮಾಡಿದರೂ ಒಂದು ಹನಿಯನ್ನೂ ಸೇವಿಸಲಿಲ್ಲ. 'ಯಾರ ಮುಂದಾದರೂ ಸರಿಯೆ ಕುಡಿದೇನು, ಗುರುಗಳ ಮುಂದೆ ಸಾಧ್ಯವಿಲ್ಲ' ಎಂದು ನಾನು ಆಚೆ ಹೋಗಿದ್ದಾಗ ಇತರ ಗೆಳೆಯರ ಮುಂದವನು ಹೇಳಿದನಂತೆ. 'ಅವನಿಂದ ಗುರು ಎಂದು ಕರೆಸಿಕೊಳ್ಳಲು ಅವನಿಗೆ ನಾನೇನು ಮಾಡಿದ್ದೇನೆ?' ಎಂಬ ಚಿಂತೆ ಇಂದಿಗೂ ನನ್ನನ್ನು ಕಾಡುತ್ತಿದೆ.

ಆಗಾಗ್ಗೆ ಶ್ರೀಕೃಷ್ಣನ ನೆನಪಾಗುತ್ತದೆ. ಅವನು ಸಾಯುವ ತನಕವೂ ನನ್ನಲ್ಲಿ ಇಟ್ಟಿದ್ದ ಪ್ರೀತಿಗೌರವನ್ನು ನೆನೆದಾಗ ನಾನು ಭಾವಾವಿಷ್ಟನಾಗುತ್ತೇನೆ. ಇನ್ನೂ ನಾಲ್ಕೈದು ದೊಡ್ಡ ಕಾದಂಬರಿಗಳನ್ನು ಬರೆಯುವುದಾಗಿ ಅವನು ಹೇಳುತ್ತಿದ್ದ. ನಾಟಕಗಳನ್ನು ರಚಿಸಬೇಕೆಂದು ಯೋಚಿಸುತ್ತಿದ್ದ. ಅವನೀಗ ಬಿಟ್ಟು ಹೋಗಿರುವ ಕೃತಿಗಳೇ ಸಾಕು, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವನಿಗೆ ಸುಭದ್ರ ಸ್ಥಾನ ಮೀಸಲೆನ್ನಲು.

**ದೇಜಗೌ.**

## ಪುಟಿಯುವ ಚಿಲುಮೆ

1965ನೆಯ ಇಸವಿ ಸೆಪ್ಟೆಂಬರ್ ತಿಂಗಳು. ಅದೇ ತಾನೇ ನಾನು ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಒಪ್ಪಂದದ ಮೇರೆಗೆ ಎರಡು ವರ್ಷಗಳ ಅಧ್ಯಾಪಕತನವನ್ನು ಮುಗಿಸಿ ಮಹಾರಾಜಾ ಕಾಲೇಜಿಗೆ, ಕನ್ನಡ ವಿಭಾಗದ ಮುಖ್ಯಸ್ಥನಾಗಿ ಹಿಂದಿರುಗಿದ್ದೆ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಶ್ರೀ ಕುವೆಂಪು. ತೀ.ನಂ.ಶ್ರೀ. ಅವರು ಕೂತು ಪಾಠ ಹೇಳಿದ, ವಿಭಾಗದ ಮುಖ್ಯಸ್ಥರ ಕೊಠಡಿ–ರೂಂ ನಂಬರ್ ನಾಲ್ಕರಲ್ಲಿ ನಾನೂ ಆನರ್ಸ್ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದೆ. ಕಾಲೇಜಿಗೆ ಡ್ಯೂಟಿ ರಿಪೋರ್ಟ್ ಮಾಡಿಕೊಂಡ ಮರುದಿನವೋ ಏನೊ, ನನ್ನೆದುರಿಗೆ ಆ ಕೊಠಡಿಯಲ್ಲಿದ್ದ ಹತ್ತು ಹದಿನೈದು ವಿದ್ಯಾರ್ಥಿಗಳಿದ್ದ ಅಂದಿನ ತರಗತಿಯಲ್ಲಿ ಪಾಠಕ್ಕೆ ಮೊದಲು ಅಟೆಂಡೆನ್ಸ್ ತೆಗೆದುಕೊಳ್ಳುವಾಗ ಶ್ರೀಕೃಷ್ಣ ಆಲನಹಳ್ಳಿ ಎಂಬ ಹೆಸರು ಕಣ್ಣಿಗೆ ಬಿತ್ತು. ನಾನು ಹೈದರಾಬಾದ್‌ನಲ್ಲಿದ್ದಾಗಲೇ ಪ್ರಜಾವಾಣಿ, ಸಂಕ್ರಮಣ ಪತ್ರಿಕೆಗಳಲ್ಲಿ ಶ್ರೀಕೃಷ್ಣನ ಕತೆ, ಕವಿತೆಗಳನ್ನು ಓದಿದ್ದೆ. ಹೀಗಾಗಿ ಈ ಪರಿಚಿತವಾದ ಹೆಸರನ್ನು ಕೂಗಿ ತಲೆ

ಎತ್ತಿದೆ. ಕೃಷ್ಣ ಇರಲಿಲ್ಲ. ನನ್ನ ಪ್ರಶ್ನಾರ್ಥಕ ದೃಷ್ಟಿಯನ್ನು ನೋಡಿ ವಿದ್ಯಾರ್ಥಿಗಳಲ್ಲೊಬ್ಬರು, 'ಅಯ್ಯೋ ಅವನೆಲ್ಲಿ ಬರ್‍ತಾನೆ ಸಾರ್ ಕ್ಲಾಸಿಗೆ' ಎಂದರು.

ಅವತ್ತು ಮಧ್ಯಾಹ್ನ ಎಂದು ಕಾಣುತ್ತದೆ. ಕಾಲೇಜಿನ ಪಕ್ಕದ ಕ್ಯಾಂಟೀನಿನ ಹತ್ತಿರ ಬರುತ್ತಿದ್ದೆ. ನನ್ನ ಜತೆ, ಆ ದಿನ ನಾನು ಕ್ಲಾಸು ತೆಗೆದುಕೊಂಡ ಕೆಲವರಿದ್ದರು. ಒಬ್ಬ ಹುಡುಗ ಅದೆಲ್ಲಿಂದಲೋ ಬಂದ. ಚೆನ್ನಾಗಿ ಡ್ರೆಸ್ ಮಾಡಿಕೊಂಡಿದ್ದ. ತಲೆ ತುಂಬ ಹೊರವಾದ ಕೂದಲು; ದುಂಡು ಮುಖ; ಉಬ್ಬಿದ ಕೆನ್ನೆ; ಕೊಂಚವೆ ದಪ್ಪದ ತುಟಿಗಳು; ತುಂಟ ಕಳೆ. ನನ್ನೆದುರಿಗೆ, ಪಕ್ಕದಲ್ಲಿದ್ದ ದಪ್ಪ ಕಲ್ಲನ್ನು–ಅವನ ದಾರಿಗೆ ಅಡ್ಡಲಾಗಿದ್ದ ಕಲ್ಲೊಂದನ್ನು, ತನ್ನ ಬೂಟು ಕಾಲಿನಿಂದ ಒದ್ದ. ಅದು ಒಂದಷ್ಟು ದೂರ ಹೋಯಿತು. 'ಲೋ ಲೋ, ಜಿಎಸ್ಸೆಸ್ ಇದಾರೆ ಕಣೋ' ಎಂದರು ಒಂದಿಬ್ಬರು. ಅದು ಅವನಿಗೆ ಕೇಳಿಸಲಿಲ್ಲವೆಂದು ತೋರಿತು. ಕಾಲೇಜು ಬಾಗಿಲ ಮೆಟ್ಟಿಲು ಹತ್ತಿ ಒಳಕ್ಕೆ ಹೋದ. 'ಯಾರ್‍ರೀ ಅದು ?' ಎಂದೆ ನಾನು. 'ಅವನೇ ಸಾರ್ ಆಲನಹಳ್ಳಿ ಕೃಷ್ಣ' ಎಂದರು ಜತೆಗಿದ್ದವರು.

ಆಗ ಮೈಸೂರಿನಲ್ಲಿ ನಾನಿದ್ದ ಕೆಲವೇ ತಿಂಗಳ ಅವಧಿಯಲ್ಲಿ, ಒಂದು ದಿನ ಕೃಷ್ಣ ಮನೆಗೆ ಬಂದ. 'ಸಾರ್ ಒಂದು ಪತ್ರಿಕೆ ಹೊರಡಿಸೋಣ ಅಂತಿದ್ದೀನಿ. ಒಂದು ಲೇಖನ ಕೊಡಿ' ಅಂದ. ಕೆಲವು ಕಾಲ 'ಸಮೀಕ್ಷಕ' ಎಂಬ ಹೆಸರಿನ ಆ ಪತ್ರಿಕೆ ಚೆನ್ನಾಗಿಯೇ ನಡೆಯಿತು. ಮುಂದೆ ಆತ 'ಪುಸ್ತಕ ಪ್ರಪಂಚ'ಕ್ಕೆ ಕೊಟ್ಟ ಹೊಸ ರೂಪ ಮತ್ತು ದೃಷ್ಟಿಗಳು ಇಂದಿಗೂ ನನಗೆ ಬೆರಗು ಹುಟ್ಟಿಸುತ್ತದೆ.

ನಾನು ಕೆಲವೇ ತಿಂಗಳಲ್ಲಿ ಮಹಾರಾಜಾ ಕಾಲೇಜು ಬಿಟ್ಟು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಂದೆ. ನನ್ನ ಹಾಗೂ ಕೃಷ್ಣನ ಸಂಪರ್ಕ–ಅಲ್ಪಾವಧಿಯ ಸಂಪರ್ಕ–ದೂರವಾಯಿತು. ಆದರೆ ಆತನ ಕತೆ, ಕವಿತೆ, ಕಾದಂಬರಿಗಳು ನನ್ನನ್ನು ಹಿಡಿದುಕೊಂಡವು. ಅವನ ಬರೆಹದ ಗ್ರಾಮೀಣ ಅನುಭವ ಸಮೃದ್ಧಿ, ಅದರೊಳಗಿನ ಸೊಗಡು ನನಗೆ ತುಂಬ ಇಷ್ಟವಾದವು. ಕಾಮ ಆತನ ಬದುಕಿನ ಹಾಗೂ ಸಾಹಿತ್ಯದ ಮುಖ್ಯ ಸತ್ವ. ನಾಗರಿಕತೆ ಹಾಗೂ ಸಂಸ್ಕೃತಿಗಳ ಮುಖಾಮುಖಿಯನ್ನು ಕೃಷ್ಣನಂತೆ ಚಿತ್ರಿಸಿದವರು ತೀರಾ ವಿರಳ. ಪರಸಂಗದ ಗೆಂಡೆತಿಮ್ಮನಾಗಲೀ, ಭುಜಂಗಯ್ಯನಾಗಲೀ, ಗ್ರಾಮ ಪರಿಸರದಿಂದ ಕನ್ನಡಕ್ಕೆ ಪರಿಚಿತರಾದ 'ಹೀರೋ'ಗಳು. ಹಿಡಿದದ್ದನ್ನು ಸಾಧಿಸುವ ಛಲವುಳ್ಳ ಮನುಷ್ಯನೊಬ್ಬನ ಹೊಸಹುಟ್ಟುಗಳನ್ನು ಮತ್ತು ಆ ಮೂಲಕ ಮನುಷ್ಯ ವಾಗುವ ಕ್ರಮವನ್ನು ಪ್ರತಿನಿಧಿಸುವ ಭುಜಂಗಯ್ಯ ಶ್ರೀಕೃಷ್ಣ ಆಲನಹಳ್ಳಿಯ ವ್ಯಕ್ತಿತ್ವಕ್ಕೆ ತಕ್ಕ 'ವಸ್ತು ಪ್ರತಿರೂಪ' ಎಂದು ನನಗೆ ತೋರುತ್ತದೆ.

ಕೃಷ್ಣ ಅಪ್ಪಟ ಹಳ್ಳಿಯ ಹುಡುಗ. ತನ್ನ ಗ್ರಾಮೀಣತೆಯ ಒರಟುತನ, ಜೀವಂತಿಕೆ, ಇತ್ಯಾದಿಗಳ ಮೂಲಕ ಪುಟಿಯುವ ಚಿಲುಮೆಯಂಥ ಈ ಹುಡುಗ ನೋಡ ನೋಡುತ್ತಲೆ ಎಂಥ ಗಟ್ಟಿ ಬರೆಹವನ್ನು ಕೊಟ್ಟು ಹೊರಟೇಹೋದ.

**ಜಿ. ಎಸ್. ಶಿವರುದ್ರಪ್ಪ**

# ಸಾಹಿತ್ಯಾವಲೋಕನ

ಶ್ರೀಕೃಷ್ಣ ಆಲನಹಳ್ಳಿ—ಈ ಹೆಸರು ಇತ್ತೀಚೆಗೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕೇಳಿಬರುತ್ತಿರುವ ಹೆಸರು, ಹೊಸತು, ಸ್ವಾಗತಕ್ಕೆ ಯೋಗ್ಯವಾದುದು. ಕನ್ನಡ ಜೀವನದಲ್ಲಿ ಕಾವ್ಯದ ಇಂಥ ನಿಜವಾದ ಒಸರು ಹೆಗ್ಗಡದೇವನಕೋಟೆಯಂಥ ಕ್ಷೇತ್ರಗಳಲ್ಲೂ ಪುಟಿಯುತ್ತಿರುವುದು ತುಂಬ ಭರವಸೆ ಹುಟ್ಟಿಸುವಂಥ ಸಂಗತಿ. ಕನ್ನಡದ ನೆಲಕ್ಕೆ ಅತ್ಯಂತ ಸಮೀಪವಾದ ಒಕ್ಕಲು ಬದುಕಿನ ಅಲಾಬಿ ರಂಗುಗಳ ಮೂಲಕವೇ ಮೈತಳೆಯುವ ಸೂಕ್ಷ್ಮವೂ, ಸುಸಂಸ್ಕೃತವೂ, ಪ್ರಾಮಾಣಿಕವೂ ಆದ ಅನುಭವ, ಮೌಲ್ಯ ತಾರತಮ್ಯ ಜ್ಞಾನದ ಮೂಸೆಯಲ್ಲಿ ಸುಟ್ಟು ಬರುವ ಭಾವ, ಗಟ್ಟಿಯಾದ ಕಲ್ಲುನೆಲವನ್ನೊಡೆದು ಹೊರ ಬೀಳುವ ಮೊಳಕೆಯ ಈ ಹಸುರು ಕೋಲಾಹಲ, ಕನ್ನಡ ಕಾವ್ಯ ಪ್ರಪಂಚದಲ್ಲಿ ಒಂದು ಹೊಸ ಶಕೆಯ ಆರಂಭವನ್ನು ಸೂಚಿಸುತ್ತದೆ. ಮನಸ್ಸಿನ ಕಲ್ಪನೆಯ ಮಟ್ಟದಲ್ಲೇ ಸಾರ್ಥಕ್ಯ ಪಡೆಯುತ್ತ ವಾಸ್ತವವನ್ನು ಕಡೆಗಣಿಸುತ್ತ ಬಂದಿರುವ ನಮ್ಮ ಕಾವ್ಯ ಹೀಗೆ ಮಣ್ಣಿನ ಹಾಡಾಗ ಬಯಸುತ್ತಿರುವುದು ನಮ್ಮ ದೇಶದಲ್ಲಿ ಕನವರಿಕೆಯ ಯುಗ ಮುಗಿದು ನಿಜವಾದ ಕಸಬುಗಾರಿಕೆಯ ಯುಗ ಆರಂಭವಾಗುತ್ತಿರುವುದರ ಸೂಚನೆಯೂ ಹೌದು ಎನ್ನಬಹುದು.

**—ಎಂ. ಗೋಪಾಲಕೃಷ್ಣ ಅಡಿಗ**

(ಶ್ರೀಕೃಷ್ಣ ಆಲನಹಳ್ಳಿಯವರ ಮೊದಲ ಕೃತಿ **ಮಣ್ಣಿನ ಹಾಡು,** ಕವನ ಸಂಕಲನಕ್ಕೆ ಬರೆದಿರುವ ಮುನ್ನುಡಿಯಿಂದ)

# ಕಾಲಾಂತರದಲ್ಲಿ ಕೃಷ್ಣ

ಕೆ. ವಿ. ತಿರುಮಲೇಶ್

ನವ್ಯ ಸಾಹಿತ್ಯ ಚಳುವಳಿಯ ಪ್ರಾದುರ್ಭಾವ ಕಾಲದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ಕೃಷ್ಣ ಸುಮಾರು ಎರಡೂವರೆ ದಶಕಗಳ ಕಾಲ ತನ್ನ ಹೆಸರನ್ನು ವಿರಾಜಮಾನವಾಗಿ ಬೆಳಗಿಸಿದವನು. ನನ್ನ ಆತ್ಮೀಯ ಗೆಳೆಯನಾಗಿದ್ದರಿಂದ ಅವನನ್ನು ಏಕವಚನದಲ್ಲಿ ಕರೆಯುತ್ತಿದ್ದೇನೆ. ಹಾಗೂ ಈ ನನ್ನ ಬರೆಪ ಅದೇ ಧಾಟಿಯಲ್ಲಿದ್ದರೆ ಅದಕ್ಕೂ ಓದುಗರ ಕ್ಷಮೆ ಬೇಡುತ್ತೇನೆ. ಈ ಎರಡೂವರೆ ದಶಕಗಳಲ್ಲಿ ನವ್ಯ ಸಾಹಿತ್ಯವನ್ನು ಹಿಮ್ಮೆಟ್ಟಿಸಿ ದಲಿತ–ಬಂಡಾಯ ಪಂಥಗಳು ಬಂದುವು. ಕೃಷ್ಣ ಒಂದರ್ಥದಲ್ಲಿ ಈ ಎಲ್ಲಾ ಚಳುವಳಿಗಳಲ್ಲಿ ಭಾಗವಹಿಸಿದವನು–ಇನ್ನೊಂದು ಅರ್ಥದಲ್ಲಿ ಇವೆಲ್ಲವುಗಳಿಂದಲೂ ತಪ್ಪಿಸಿಕೊಂಡವನು. ಕೃಷ್ಣನ ಕೊಡುಗೆಯ ಬಗ್ಗೆ ಬರೆಯುವ ಯಾವನೇ ವ್ಯಕ್ತಿಯೂ ಕೇವಲ ಕೃತಿಗಳಲ್ಲಿ ಅದನ್ನು ಅಳೆಯಲಾರ. ಈ ಮಾತು ಒಟ್ಟಾರೆ ಎಲ್ಲಾ ಸಾಹಿತಿಗಳಿಗೆ ಅನ್ವಯಿಸುವುದಾಗಿದ್ದರೂ, ಕೃಷ್ಣನ ಮಟ್ಟಿಗೆ ಅನಿವಾರ್ಯವೆಂದು ಅನಿಸುವುದು. ಸಾಹಿತ್ಯ ಕೃತಿಗಳನ್ನು ನಿರ್ಮಿಸುವಷ್ಟಕ್ಕೆ ಅವನ ಆಸಕ್ತಿ ಸೀಮಿತವಾಗಿರಲಿಲ್ಲ; ಸಾಹಿತ್ಯದ ಪರಿಸರ ನಿರ್ಮಾಣದಲ್ಲೂ ಅವನು ಅಷ್ಟೇ ಆಸಕ್ತನಾಗಿದ್ದ. ಬದುಕಿನಲ್ಲಿ ಯಾವುದನ್ನೂ ನಿರಾಕರಿಸದ ಕೃಷ್ಣ ಸಮಕಾಲೀನ ಸಾಹಿತ್ಯ ಚಳುವಳಿಗಳಿಗೆ ಸ್ಪಂದಿಸಿದ ರೀತಿಯೂ ಹೀಗೇನೇ. ಐಡಿಯಾಲಜಿಗಳನ್ನು ಬಹುಶಃ ಒಂದು ತರದ ಗುಮಾನಿಯಿಂದಲೇ ನೋಡುತ್ತಿದ್ದ ಈತ ಎಲ್ಲ ಐಡಿಯಾಲಜಿ

ಸ್ಪರ ನಡುವೆ ಓಡಾಡಿಕೊಂಡಿದ್ದವನು. ಐಡಿಯಾಲಜಿಗಳ ಬೌದ್ಧಿಕ ಘರ್ಷಣೆ ಅವನನ್ನು ಎಂದೂ ಆಕರ್ಷಿಸಿದ ಹಾಗೆ ಅನಿಸುವುದಿಲ್ಲ. ಕತೆಯನ್ನು ಕತೆಯಾಗಿ, ಕವಿತೆಯನ್ನು ಕವಿತೆಯಾಗಿ. ಬರಹಗಾರರನ್ನು ಬರಹಗಾರರಾಗಿ ಸ್ವೀಕರಿಸಿದವನು ಕೃಷ್ಣ. ಇದರರ್ಥ ಸಾಮಾಜಿಕ, ರಾಜಕೀಯ ಚಳುವಳಿಗಳಿಂದ ಅವನು ದೂರ ಇದ್ದನೆಂದಾಗಲಿ, ಅಥವ ಇಂಥ ವಿದ್ಯಮಾನಗಳು ಹಾಗೂ ಸಾಹಿತ್ಯದ ಸಂಬಂಧವನ್ನು ನಿರಾಕರಿಸಿದನೆಂದಾಗಲಿ ಖಂಡಿತ ಅಲ್ಲ. ಸಕಲ ಚಳುವಳಿಗಳೂ ಅವನಿಗೆ ಆತ್ಮೀಯವಾದ ಸಂಗತಿಗಳೇ–ಆದರೆ ಅವುಗಳ ಕುರಿತಾದ ವೈಚಾರಿಕ ಜಿಜ್ಞಾಸೆ ಅವನಿಗೆ ಬೋರು ಹೊಡೆಸುತ್ತಿತ್ತೆಂದು ತೋರುತ್ತದೆ. ಈ ಅವನ ಧೋರಣೆಗೂ ಅವನ ಸಾಹಿತ್ಯ ಕೃತಿಗಳಿಗೂ ಇರಬಹುದಾದ ಸಂಬಂಧದ ಕುರಿತು ನಂತರ ಹೇಳುತ್ತೇನೆ. ಅದಕ್ಕೆ ಮೊದಲು ನವ್ಯ ಸಾಹಿತ್ಯ ಸಂದರ್ಭದಲ್ಲಿ ಕೃಷ್ಣನ ಪಾತ್ರ ಏನಿತ್ತು ಎನ್ನುವುದರ ಬಗ್ಗೆ ನೋಡೋಣ.

ನವ್ಯ ಸಾಹಿತ್ಯ ಸಂದರ್ಭಕ್ಕೆ ಕೃಷ್ಣನ ಪ್ರತಿಕ್ರಿಯೆ ಬಹುಶಃ ಬೆರಗಿನದಾಗಿತ್ತು. ಕನ್ನಡದ ಪರಂಪರಾಗತ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ಕೃಷ್ಣ ಪರಂಪರೆಗೆ ಹೊರತಾದ, ಪರಂಪರೆಯನ್ನೇ ಪ್ರಶ್ನಿಸುವ ಈ ಹೊಸ ವಿಚಾರ ಕ್ರಾಂತಿಯನ್ನು ಮುಕ್ತ ಮನಸ್ಸಿನಿಂದಲೇ ಸ್ವೀಕರಿಸಿದ-ಆದರೆ ವೈಚಾರಿಕವಾಗಿಯಲ್ಲ. ಭಾವನಾತ್ಮಕವಾಗಿ. ಆದ್ದರಿಂದಲೆ ಅವನ ಕಾವ್ಯ ಕೃತಿಗಳಾಗಲಿ, ಕತೆ ಕಾದಂಬರಿಗಳಾಗಲಿ ನವ್ಯವೆಂದು ಅನಿಸದೆ ಇರುವುದು. **ಕಾಡು** ಕಿರು ಕಾದಂಬರಿ ಅದು ಬಂದಾಗ ಬಹಳ ದೊಡ್ಡ ಹೆಸರು ಮಾಡಿತು. ಇಂದಿಗೂ ಕೂಡ ಕೃಷ್ಣನ ಕೃತಿಗಳಲ್ಲಿ ಏಕಮಾತ್ರವಾಗಿ ಹೆಸರಿಸಬಹುದಾದರೆ ಇದನ್ನೇ ಹೆಸರಿಸಬೇಕಾಗುತ್ತದೆ. ಆದರೂ **ಕಾಡು** ಕೃತಿಯ ಶ್ರೇಷ್ಠತೆಯಿರುವುದು ನವ್ಯ ಕಾದಂಬರಿಯಾಗಿಯಲ್ಲ. ಒಂದು ಸಮೂಹದ ಕ್ರೌರ್ಯವನ್ನು ಚಿಕ್ಕ ಬಾಲಕನೊಬ್ಬನ ಮುಗ್ಧ ದೃಷ್ಟಿಕೋನದಿಂದ ತೋರಿಸುವ ಸೃಜನಶೀಲ ಕೌಶಲ ಈ ಕೃತಿಯನ್ನು ಬಹುಶಃ ಅನನ್ಯವಾಗಿ ಮಾಡಿತೆಂದು ಕಾಣುತ್ತದೆ. ಹಾಗೆ ನೋಡಿದರೆ ನವ್ಯ ದೃಷ್ಟಿಕೋನಕ್ಕೆ ಇದು ತೀರ ವಿರುದ್ಧವಾದದ್ದೆಂದೇ ಹೇಳಬೇಕು. ಕಾರಣ ಕಾಡು ಕೃತಿಯ ನಿರೂಪಣಾ ದೃಷ್ಟಿ ಚಿಕ್ಕ ಹುಡುಗನದ್ದು ಎಂದಲ್ಲ. ನವ್ಯ ದೃಷ್ಟಿಕೋನದಲ್ಲಿ ಸಾರ್ವತ್ರಿಕವಾದ್ದೆಂದರೆ ಐರನಿ. ಆದ್ದರಿಂದಲೆ ಇಂಥ ಪ್ರಣಾಲಿಕೆ ಸಂಪ್ರದಾಯ ವಿರೋಧಿಯಾಗುವುದು. ಯಾಕೆಂದರೆ ಸಂಪ್ರದಾಯವೆನ್ನುವುದು ಕೆಲವೊಂದು ಮೌಲ್ಯಗಳ ನಂಬಿಕೆಗಳ ಆಚರಣೆಯಿಂದ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಬಳುವಳಿಯಾಗಿ ಬರುವಂಥದ್ದು. ಐರನಿಯೆನ್ನುವುದು ಇಂಥ ಏಕಮುಖೀ ಪ್ರಜ್ಞೆಯ ಸ್ಥಾನದಲ್ಲಿ ಬಹುಮುಖೀ ಪ್ರಜ್ಞೆಯನ್ನು ಇರಿಸುವ ವಿಧಾನ. ನವ್ಯ ಸಾಹಿತ್ಯ ಅನುಸರಿಸಿದ ವಿಧಾನ ಐರನಿ. ಆದ್ದರಿಂದಲೆ ಇದು ಸಂಪ್ರದಾಯವನ್ನು ಪ್ರಶ್ನಿಸುವುದರಲ್ಲಿ, ಗೇಲಿ ಮಾಡುವುದರಲ್ಲಿ ತೋರಿಸಿದಂಥ ಆಸಕ್ತಿಯನ್ನು ಹೊಸತೊಂದು ಸಮಾಜವನ್ನು ರೂಪಿಸುವುದರಲ್ಲಿ ತೋರಿಸಲಿಲ್ಲ. ಬಹುಮುಖೀ ಪ್ರಜ್ಞೆಯ ನಿರ್ಮಾಣಕ್ಕಿಂತ

ಮುಂದಿನದು ಸಾಹಿತ್ಯದ ಪರಿಧಿಗೆ ಸೇರಿದುದಲ್ಲ ಎನ್ನುವುದು ನವ್ಯ ಸಾಹಿತ್ಯದ ಧೋರಣೆಯೆಂದು ಹೇಳಬಹುದೇನೋ.

ಭಾವನಾತ್ಮಕವಾಗಿ ಕೃಷ್ಣ ನವ್ಯ ಸಾಹಿತ್ಯ ಪರಿಸರಕ್ಕೆ ಸ್ಪಂದಿಸಿದರೂ, ಆತನದು ಬಹುಮುಖೀ ಪ್ರಜ್ಞೆಯಾಗಿರಲಿಲ್ಲ. ಐರನಿಯೆನ್ನುವುದು ಅವನ ಜಾಯಮಾನಕ್ಕೆ ಸೇರಿದುದಲ್ಲ. ಆದ್ದರಿಂದಲೆ ಕೃಷ್ಣನ ಕೆಲವೊಂದು ಕವಿತೆಗಳನ್ನು ಬಿಟ್ಟರೆ ಬೇರೆಲ್ಲಿಯೂ ನವ್ಯದ ಛಾಯೆಯನ್ನು ಕೂಡ ಕಾಣಲಾರೆವು. ಭಾಷಾ ಶೈಲಿ, ನಿರೂಪಣಾ ವಿಧಾನ, ಒಟ್ಟಾರೆ ತಾಂತ್ರಿಕತೆ – ಯಾವುದರಲ್ಲೂ ಕೃಷ್ಣ ಕ್ರಾಂತಿಕಾರಿಯಾಗಿದ್ದನೆಂದು ಹೇಳು ವಂತಿಲ್ಲ. ಎಂದರೆ, ಕೃಷ್ಣ ಸಾಹಿತಿಗಳ ಸಾಹಿತಿಯಾಗದೆ ಕೇವಲ ಓದುಗರ ಸಾಹಿತಿ ಯಾಗುವುದನ್ನೆ ಇಷ್ಟಪಟ್ಟ ಹಾಗೆ ಕಾಣುತ್ತದೆ. ಈ ಅರ್ಥದಲ್ಲಿ ಅವನು ನವೋ ದಯದ ಕವಿಗಳಿಗೂ, ಅ.ನ.ಕೃ., ತ.ರಾ.ಸು., ಮುಂತಾದ ಪ್ರಗತಿಶೀಲ ಸಾಹಿತಿ ಗಳಿಗೂ ಹತ್ತಿರವಾದವನು. ಯಾಕೆಂದರೆ ಇವರೆಲ್ಲರೂ ಓದುಗರನ್ನು ನೇರವಾಗಿ ತಲುಪಲು ಬಯಸಿದವರು–ಸಾಹಿತ್ಯದ ಅಕ್ಷರ ರೂಪವನ್ನು ಒಂದು ಅನಿವಾರ್ಯ ಅಡ್ಡಿಯೆನ್ನುವ ರೀತಿಯಲ್ಲಿ ಸಹಿಸಿದವರು. ಅಂಥ ಸಾಹಿತ್ಯ ಎಂದೂ ಅಂತರ್ಮುಖಿ ಯಾಗುವುದು ಸಾಧ್ಯವಿಲ್ಲದ ಮಾತು. ಹೀಗಿದ್ದೂ ಕೃಷ್ಣನದು ಜನಪ್ರಿಯ, ಎಂದರೆ ಪಾಪ್ಯುಲರ್ ರೀತಿಯ ಸಾಹಿತ್ಯವೆಂದೂ ಹೇಳಲಾಗದು. ಅ.ನ.ಕೃ., ತ.ರಾ.ಸು.. ಹೆಸರೆತ್ತಿದುದರಿಂದ ಈ ಮಾತನ್ನು ಇಲ್ಲಿ ಹೇಳುವುದು ಅಗತ್ಯ. ಜನಪ್ರಿಯ ಸಾಹಿತ್ಯದ ಪರಿಕರಗಳು ಇದ್ದೂ ಕೃಷ್ಣನದು ಯಾತಕ್ಕೆ ಭಿನ್ನ ರೀತಿಯ ಸಾಹಿತ್ಯವೆಂದರೆ, ಭಾವ ನಾತ್ಮಕವಾಗಿ ಅವನು ಗಂಭೀರ ಸಾಹಿತ್ಯಕ್ಕೆ ಕಮಿಟೆಡ್ ಆಗಿದ್ದುದೇ ಕಾರಣ. ಸಾಹಿತ್ಯ ರಚನೆಯನ್ನು ವಿಜೃಂಭಿಸಿಕೊಂಡಿದ್ದರೂ ಅವನಿಗದು ಗಂಭೀರವಾದ ಕಾಳಜಿಯಾಗಿದ್ದು ದರಿಂದ ತನ್ನ ಮೂಲಭೂತವಾದ ಆನೆಸ್ಟಿಯನ್ನು ರಾಜಿಮಾಡಿಕೊಳ್ಳುವ ಪ್ರಶ್ನೆನೇ ಇರಲಿಲ್ಲ. ಕೃಷ್ಣ ಜನಪ್ರಿಯತೆಯನ್ನು ಬಯಸಿದರೂ, ಜನಪ್ರಿಯತೆಗೆಂದೇ ಸಾಹಿತ್ಯ ರಚನೆ ಮಾಡಲಿಲ್ಲ. ಅಪಾರ ಓದುಗ ಬಳಗವನ್ನು ಬಯಸಿದರೂ, ಅವರು ಹೇಗೆ ರಿಯಾಕ್ಟ್ ಮಾಡುತ್ತಾರೆ, ಏನು ಬಯಸುತ್ತಾರೆ ಎನ್ನುವುದನ್ನು ಮನಸ್ಸಿನಲ್ಲಿಟ್ಟು ಕೊಂಡು ಕಥಾ ವಸ್ತುವನ್ನಾಗಲಿ, ಶೈಲಿಯನ್ನಾಗಲಿ ಆರಿಸಿಕೊಳ್ಳಲಿಲ್ಲ. ನವ್ಯ ಚಳುವಳಿ ಕುರಿತಾದ ಅವನ ಧೋರಣೆಗೂ ಇದೇ ಮಾತು ಹೊಂದುತ್ತದೆ–ನವ್ಯದ ತಂತ್ರವನ್ನು ಅನಾಮತ್ತಾಗಿ ಎತ್ತಿಕೊಳ್ಳುವುದು ಆ ಕಾಲದಲ್ಲಿ ಸಹಜವಾದ ಮಾರ್ಗವಾಗಿದ್ದರೂ ಕೃಷ್ಣ ಅದರಿಂದ ತನ್ನ ದೂರವನ್ನು ಕಾಯ್ದುಕೊಂಡನೆನ್ನುವುದು ಗಮನಾರ್ಹವಾದ ಸಂಗತಿ. ತನಗೆ ತಾನೇ ಸಹಜವಾಗುವುದು, ತನ್ನ ವಿಧಾನವನ್ನು ತಾನಾಗಿ ರೂಪಿಸಿ ಕೊಳ್ಳುವುದು ಅವನಿಗೆ ಮುಖ್ಯವಾಗಿತ್ತು. ಇದರಲ್ಲವನು ಕ್ರಾಂತಿಕಾರಕವಾದ್ದೇನನ್ನೂ ಕೊಡದೆ ಹೋದನೆನ್ನುವುದು ಬೇರೆ ಮಾತು.

ಈ ಎರಡೂವರೆ ದಶಕಗಳ ಒಟ್ಟಾರೆ ಸಾಹಿತ್ಯ ಸಂದರ್ಭವನ್ನು ಗಮನಿಸಿದರೆ ಕೃಷ್ಣ ಒಂದು ರೀತಿಯ ಪ್ರತ್ಯೇಕತೆಯನ್ನು ಬೆಳೆಸಿಕೊಂಡಿದ್ದಂತೆ ಕಾಣುತ್ತದೆ. ಆತ ಹೇಗೆ ನವ್ಯನಾಗಲಿಲ್ಲವೋ ಹಾಗೇನೆ ಬಂಡಾಯ ಸಾಹಿತಿಯೂ ಆಗಲಿಲ್ಲ. ಬಂಡಾಯ ಸಾಹಿತ್ಯ ಚಳುವಳಿಯನ್ನು ಅವನು ಬಹಳ ಆಪ್ತವಾಗಿ ಕಂಡವನು. ಅದರಲ್ಲೂ ಭಾವನಾತ್ಮಕವಾಗಿ ಪಾಲ್ಗೊಂಡವನು. ಆದರೂ ಬಂಡಾಯದ ಮೇನ್‌ಸ್ಟ್ರೀಮಿಗೆ ಅವನು ಬರಲಿಲ್ಲ. ಅದರ ಸಬ್‌ಸ್ಟ್ರೀಮುಗಳೊಂದಿಗೂ ಅವನನ್ನು ಗುರುತಿಸುವುದು ಕಷ್ಟವಾಗುತ್ತದೆ. ಅದೇ ರೀತಿ. ಇದಕ್ಕೆ ಮೊದಲು ಕೆಲವು ಕಾಲ ಕಾಣಿಸಿಕೊಂಡ ಸಮನ್ವಯ ಪಂಥವನ್ನು ಕೃಷ್ಣ ಸುಲಭವಾಗಿ ಸ್ವೀಕರಿಸಿಬಿಡಬಹುದಿತ್ತು. ಯಾಕೆಂದರೆ. ಪರದೇಸೀ ಪ್ರಭಾವಕ್ಕೆ ಒಳಗಾಗಿದ್ದೂ ದೇಸೀ ದ್ರವ್ಯಕ್ಕೆ ಬದ್ಧರಾಗಿದ್ದು ಈ ಬದ್ಧತೆಯನ್ನು ಒಂದು ಪ್ರಣಾಳಿಕೆಯಾಗಿ ಮಾಡಿಕೊಂಡ ಕೆಲವು ಸಾಹಿತಿಗಳು ತಮ್ಮನ್ನು ತಾವೇ ಗುರುತಿಸಿಕೊಂಡಿದ್ದ ಪಂಥ ಇದು—ಅದೊಂದು ಪ್ರಭಾವಶಾಲೀ ಪಂಥವಾಗಿ ಮುಂದುವರಿಯುವ ಕಾರಣ ಇವತ್ತು ಯಾರೂ ಅದರ ಬಗ್ಗೆ ಮಾತಾಡುತ್ತಿಲ್ಲ; ಮಾತ್ರವಲ್ಲ. ಆ ಕಾಲದಲ್ಲಿ ಹಾಗೆ ಗುರುತಿಸಿಕೊಂಡವರು ಕೂಡ ನಂತರ ಹಾಗೆ ಗುರುತಿಸಿಕೊಳ್ಳಲು ಇಷ್ಟಪಡದಿರುವುದು ಕಂಡುಬರುತ್ತದೆ. ನಿಜ. ಕೃಷ್ಣ ಸುಲಭದಲ್ಲಿ ಸಮನ್ವಯವಾದೀ ಸಾಹಿತಿಯಾಗಿ ಬಿಡಬಹುದಿತ್ತು—ಆದರೂ ಅವನು ಅಂಥ ಕಾಂಪ್ರಮೈಸನ್ನು ಇಷ್ಟಪಡಲಿಲ್ಲ. ತನ್ನ ದೇಸೀಯತೆಯನ್ನು ಮರೆಸುವ, ಅದನ್ನೇ ಒಂದು ಧ್ವಜವನ್ನಾಗಿ ಮಾಡಿಕೊಳ್ಳುವ ಅಗತ್ಯ ಬಹುಶಃ ಅವನಿಗೆ ಕಾಣಿಸದೆ ಇದ್ದುದೇ ಇದಕ್ಕೆ ಕಾರಣವಿರಬಹುದು. ಕನ್ನಡದ ಸಾಹಿತಿಗಳ ದೇಸೀಯತೆಗೆ ಅಪಾಯವಿದೆಯೆಂದು ಗ್ರಹಿಸದ. ಹಾಗೆ ಆ ರೀತಿ ಗ್ರಹಿಸುವುದರ ಹಿಂದೆ ವ್ಯಕ್ತಿಗತ ಉದ್ದೇಶಗಳಿರಬಹುದೆಂದು ಅನುಮಾನಿಸಿದ ಸಾಹಿತಿಗಳ ಜೊತೆಗೆ ಅವನೂ ಇದ್ದ. ಭಾರತೀಯತೆಯನ್ನಾಗಲಿ, ಕನ್ನಡತನವನ್ನಾಗಲಿ. ಪ್ರಾದೇಶಿಕತೆಯನ್ನಾಗಲಿ ಯಾರೂ ಮನೆಮಾಡಿನಿಂದ ಕೂಗಿ ಹೇಳುವ ಅಗತ್ಯವಿಲ್ಲ. ಬಾಯಿ ತೆರೆದರೇ ಜಗಜ್ಜಾಹೀರಾಗುವ ಸಂಗತಿಗಳಿವು. ಕೂಳಿಗೆ ಗತಿಯಿರದವರ ನೆರೆಯಲ್ಲಿ ಸಾಂಕೇತಿಕವಾಗಿ ಉಪವಾಸ ಮುಷ್ಕರ ಹೂಡುವುದು ಹೇಗೆ ಆಭಾಸವಾಗುತ್ತದೆಯೋ ಹಾಗೆಯೆ ಬೇರೆ ದೇಶಗಳ ಸಾಹಿತ್ಯ ಕೃತಿಗಳೇ ಸಿಗದ ಜನರಿಗೆ ನೀವು ಆ ರೀತಿ ಬರೆಯಬೇಡಿ ಎಂದು ಉಪದೇಶಿಸುವುದು ಕೂಡ ! ಕೃಷ್ಣ ಹಾಗೂ ಅವನ ಹಾಗೇ ಇರುವ ಅನೇಕ ಮಂದಿಯ ಓದಿನ ಹಸಿವನ್ನು ಗಮನದಲ್ಲಿರಿಸಿಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಇವರೆಲ್ಲರೂ ತೀರ ಹಳ್ಳಿಯ ಪರಿಸರದಿಂದ ಬಂದವರು— ಬಯಲುಗಳಲ್ಲಿ ಕಕ್ಕಸಿಗೆ ಕೂತವರು. ಹೊಟ್ಟೆ ಹಸಿವಿನ ಹಾಗೆಯೆ ಜ್ಞಾನದ ಹಸಿವಿನಿಂದಲೂ ಬಾಧಿತರಾದವರು. ಇವರೆದುರಿಗೆ ದೇಸೀಯತೆಯ ಭಾಷಣ ಬಿಗಿಯುವ ಹಕ್ಕು ಯಾರಿಗೂ ಇಲ್ಲ—ಯಾಕೆಂದರೆ ದೇಸೀಯತೆಯೇ ಇವರು ! ಎಲ್ಲವನ್ನೂ ತಿಳಿಯುವ ಸಂಭ್ರಮದಿಂದ ತೊಳಲುವ ಇವರಿಗೆ ನಿರಾಕರಣೆಯ ಉಪದೇಶ

ವನ್ನು ಕೊಡುವ ಪ್ರವಾದಿಗಳು ಆಕರ್ಷಕರಾಗಿ ತೋರುವುದು ಸಾಧ್ಯವೇ ಇರದ ಮಾತು. ಇದು ಕೃಷ್ಣನ ಕಾಲಕ್ಕೆ ಹೇಗೆ ನಿಜವೋ ನಂತರದ ಕಾಲಕ್ಕೂ ಅಷ್ಟೇ ನಿಜ.

**ಕಾಡು** ಕಾದಂಬರಿಯ ಕಿಟ್ಟಿಗೆ ಕೃಷ್ಣನನ್ನು ಹೋಲಿಸುವುದು ಈಗಾಗಲೆ ಒಂದು ಕ್ಲೀಷೆಯಾಗಿದೆ. ಕಿಟ್ಟಿ, ಗೆಂಡೆತಿಮ್ಮ, ಭುಜಂಗಯ್ಯ–ಈ ಎಲ್ಲ ಪಾತ್ರಗಳೂ ಕೃಷ್ಣ ತನ್ನನ್ನು ತಾನೇ ಪ್ರೊಜೆಕ್ಟ್ ಮಾಡಿಕೊಂಡಿದ್ದ ಬಗೆಯಾಗಿದ್ದಿರಬಹುದು. ಈ ಯಾವ ಕಥಾ ಪಾತ್ರಗಳೂ ಇಂಟಲೆಕ್ಚುವಲಾಗಿ ಓದುಗರನ್ನು ತಟ್ಟುವುದಿಲ್ಲ, ಇಮೋಶನಲಾಗಿ ತಟ್ಟುತ್ತವೆ. ಕೃಷ್ಣನ ಕಥಾ ಪ್ರಪಂಚದಲ್ಲಿ ಬೌದ್ಧಿಕ ತಿಕ್ಕಾಟಗಳಾಗಲಿ, ಚರ್ಚೆಗಳಾಗಲಿ, ಜಿಜ್ಞಾಸೆಯಾಗಲಿ ಕಾಣಿಸದು. ಅದಕ್ಕೆ ಬದಲಾಗಿ ನಾವು ಕಾಣುವುದು ಬದಲಾಗುತ್ತಿರುವ ಗ್ರಾಮೀಣ ಪರಿಸರದ ಆಂತರಿಕ ಘರ್ಷಣೆಗಳನ್ನು. ಚಾರಿತ್ರಿಕವಾಗಿ ಕೃಷ್ಣನ ಕೃತಿಗಳು ಮುಖ್ಯವಾಗುವುದು ಇಲ್ಲಿಯೇ. ಅವನಲ್ಲಿ ಅಪೂರ್ವವಾದ ಹಿಸ್ಟಾರಿಕಲ್ ಸೆನ್ಸ್ ಇತ್ತು–ಆದರೆ ಇದೂ ಕೂಡ ಓದಿನಿಂದಾಗಲಿ, ಜಿಜ್ಞಾಸೆಯಿಂದಾಗಲಿ ಬಂದುದಲ್ಲ. ಬದುಕಿನ ಹಸಿ ಹಸೀ ಅನುಭವಗಳ ಮೂಲಕ ಬಂದುದು. ಹಳೆಯ ಕಾಲಘಟ್ಟದ ಕುರಿತಾಗಿ ನೋಸ್ಟಾಲ್ಜಿಯಾ ಇದ್ದರೂ ಅದರ ಬಗ್ಗೆ ಹುಸಿ ಭ್ರಮೆಗಳನ್ನೇನೂ ಅವನು ಇರಿಸಿಕೊಂಡಿರಲಿಲ್ಲ. ಬದಲಾವಣೆಯ ಅನಿವಾರ್ಯತೆಯನ್ನು ಒಪ್ಪಿಕೊಂಡೇ ಅದರಿಂದ ಬುಡಮೇಲಾಗುವ ಜನಾಂಗ ಸಂಸ್ಕೃತಿಯನ್ನು ಚಿತ್ರಿಸುವುದೂ ಬಹಳ ಮುಖ್ಯವಾಗಿತ್ತು. ಹಾಗೂ ಇಂಥ ಚಿತ್ರಣವೇ ಅದರ ರಕ್ಷಣೆ ಎಂದು ಕೂಡ ಅವನಿಗೆ ಅನಿಸಿರಬಹುದು. ಆದ್ದರಿಂದಲೆ ಅವನ ಬರಹದಲ್ಲಿ ಒಬ್ಬ ಕ್ರಾನಿಕ್ಲರನ ಆಸಕ್ತಿ, ಸೂಕ್ಷ್ಮತೆಗಳು ಕಂಡುಬರುತ್ತವೆ. ಒಂದು ರೀತಿಯಲ್ಲಿ ಇದು ಕೃಷ್ಣ ನವ್ಯದ ವೈಚಾರಿಕತೆಗೆ ನೀಡಿದ ಪ್ರತಿಕ್ರಿಯೆಯೆಂತಲೂ ಹೇಳಬಹುದು. ಬದುಕಿನ ಕುರಿತು ಅನುಮಾನದಿಂದ ನೋಡುತ್ತಿದ್ದವರಿಗೆ ಈತ ಬದುಕಿನ ವಿಜೃಂಭಣೆಯ ಉತ್ತರವನ್ನು ಕೊಟ್ಟ ಹಾಗಿದೆ. ಇಲ್ಲಿ ಅವನ ಕೃತಿಗಳು ಕುವೆಂಪು, ಕಾರಂತರ ಕೃತಿಗಳಿಗೆ ಹತ್ತಿರವಾಗುತ್ತವೆಯೇ ವಿನಾ ಅನಂತಮೂರ್ತಿ, ಲಂಕೇಶರ ಕೃತಿಗಳಿಗಲ್ಲ.

ಕೃಷ್ಣ ನವ್ಯದಿಂದ ಹೇಗೆ ಹೊರಗುಳಿದನೋ ಅದೇ ರೀತಿ ಬಂಡಾಯ ಸಾಹಿತ್ಯ ಮಾರ್ಗದಲ್ಲೂ ನಡೆಯಲಿಲ್ಲ. ನವ್ಯದ ಐರನಿಯಿಂದ ತಪ್ಪಿಸಿಕೊಂಡಂತೆ ಬಂಡಾಯದ ಆಕ್ರೋಶದಿಂದಲೂ ಅವನು ದೂರವುಳಿದ. ಸಮಾಜದ ಕ್ರಾಂತಿಕಾರಿ ಬದಲಾವಣೆಯ ಕರೆಯ ಹಿಂದಿರುವ ಐಡಿಯಾಲಜಿಗಳ ಕುರಿತಾದ ಅವನ ಅನುಮಾನವೇ ಇದಕ್ಕೆ ಕಾರಣವಿರಬಹುದು. ಅಥವ, ಈ ಹಿಂದೆಯೇ ಹೇಳಿದಂತೆ, ಕೃಷ್ಣನ ರಿಯಾಕ್ಷನುಗಳು ಗ್ರಾಮೀಣ ಪರಿಸರದ ರಕ್ಷಣೆಗೆ ಕಮಿಟೆಡ್ ಆದುದರಿಂದ ಇರಬಹುದು. ಯಾವ ಬದಲಾವಣೆಯೂ ಈ ಬದುಕಿನ ಮೂಲದ್ರವ್ಯಗಳನ್ನು ಧ್ವಂಸ ಮಾಡುವ ಹಾಗಿರಬಾರದು. ಪ್ರೀತಿ, ಪ್ರೇಮ, ಪ್ರಣಯವೇ ಮುಂತಾದ ಮೌಲ್ಯಗಳು ಕೃಷ್ಣನ

ಸಾಹಿತ್ಯ ಜಗತ್ತಿನ ಸತ್ವಗಳು. ಅವೇ **ಭುಜಂಗಯ್ಯನ ದಶಾವತಾರಗಳು** ಕೃತಿಯಲ್ಲಿ ತ್ಯಾಗದ ಅನುಭೂತಿಯ ಕಡೆಗೂ ತುಯ್ಯುತ್ತವೆ. ಇದಾವುದನ್ನೂ ಕೃಷ್ಣ ಒಂದು ಪ್ರಣಾಳಿಕೆಯಂತೆ ಬಳಸಿಕೊಳ್ಳಲಿಲ್ಲ–ಕತೆಯಾಗಿ ಬಳಸಿಕೊಂಡ. ಕಾದಂಬರಿಯೆನ್ನುವುದೂ ಒಂದು 'ಪರಸಂಗ' ವಿಧಾನವೇ– ಅದಕ್ಕೆ ಅಷ್ಟಾದಶ ವರ್ಣನೆಗಳೂ ಆಹಾರವೇ.

ಆದರೆ ಕೃಷ್ಣನ ಕಾಲಕ್ಕೇ ಬಹಳಷ್ಟು ಬದಲಾದ ಕನ್ನಡದ ಓದುಗ ಲೋಕ ಅವನ ಕೃತಿಗಳನ್ನು ತೆಗೆದುಕೊಂಡ ಬಗೆ ಹೇಗೆ ? ಈ ಎಲ್ಲಾ ಕೃತಿಗಳೂ ಜನಪ್ರಿಯವಾದವು. ಕೆಲವು ರಜತ ಪರದೆಯ ಮೇಲೆ ಮೆರೆದುವು, ಭಾರತದ ಇತರ ಭಾಷೆಗಳಿಗೆ ಅನುವಾದ ಗೊಂಡವು. **ಗೆಂಡೆದಿಮ್ಮನ್ನ್** ಮಲೆಯಾಳಿಗಳ ನಾಲಿಗೆ ಮೇಲೂ ಕುಣಿದಾಡಿದ. ಇಷ್ಟಕ್ಕೆ ಅವನು ನೇರವಾಗಿ ಜನರನ್ನು ಮುಟ್ಟಲು ಬಯಸಿದ್ದು ಸಾರ್ಥಕವಾಯಿತೆಂದು ಹೇಳ ಬಹುದು. ಆದರೆ ಸಾಹಿತ್ಯ ಇಷ್ಟಕ್ಕೇ ಬಿಡುವುದಿಲ್ಲ–ತನಗೇನು ಸಂದಿದೆ ಎಂದು ನೋಡು ತ್ತದೆ. ಸ್ಪಷ್ಟವಾಗಿ ಹೇಳುವುದಿದ್ದರೆ, ಕೃಷ್ಣನ ಕೃತಿಗಳು ಸಾಹಿತ್ಯ ಲೋಕಕ್ಕೆ ಕೊಟ್ಟಿರ ಬಹುದಾದ ಕೊಡುಗೆ ಯಾವ ರೀತಿಯದು ? ಈ ಕುರಿತು ಗಂಭೀರವಾದ ಅಧ್ಯಯನ ಇನ್ನೂ ಬಂದಿಲ್ಲ. ಆತನ ಅಕಾಲಿಕ ಮರಣ ಸಕಲರಿಗೂ ಆಘಾತವನ್ನುಂಟುಮಾಡಿರುತ್ತ ಯಾರೂ ಅವನ ಕೃತಿಗಳನ್ನು ವಸ್ತುನಿಷ್ಠವಾಗಿ ವಿಮರ್ಶೆ ಮಾಡುವ ಸ್ಥಿತಿಯಲ್ಲಿ ಇಲ್ಲ. ನನಗನಿಸುವ ಮಟ್ಟಿಗೆ, ಕೃಷ್ಣನ ಕೃತಿಗಳನ್ನು ಅವನ ಸಾಹಿತ್ಯ ವ್ಯಕ್ತಿತ್ವದಿಂದ ಬೇರ್ಪ ಡಿಸಿ ಕೇವಲ ಪಠ್ಯ ವಿಮರ್ಶೆಗೆ ಒಳಗಾಗಿಸುವುದರಿಂದ ನಾವು ಕಳಕೊಳ್ಳುವುದೇ ಜಾಸ್ತಿ. ನವ್ಯ, ಸಮನ್ವಯ, ದಲಿತ–ಬಂಡಾಯ ಚಳುವಳಿಗಳ ಕಾಲಾಂತರದಲ್ಲಿ ನೋಡು ವುದರಿಂದ ಕೃಷ್ಣ ಹೆಚ್ಚು ಅರ್ಥಪೂರ್ಣ ಸಾಹಿತಿಯಾಗಿ ತೋರುವುದು ಸಾಧ್ಯ. ●

ಪ್ರಿಯ ಕೃಷ್ಣ,

ನಿನ್ನ ದಟ್ಟವೂ ಪ್ರಬುದ್ಧವೂ ಆದ "ಕಾಡು" ಕಾದಂಬರಿ ಓದಿ ಖುಷಿಗೊಂಡಿದ್ದೇನೆ. ನಿನ್ನ ಸಾಮರ್ಥ್ಯದ ಬಗ್ಗೆ ನನ್ನಲ್ಲಿ ಹೆಮ್ಮೆ, ಅಸೂಯೆ ಹುಟ್ಟುತ್ತಿವೆ. ಗ್ರಾಮಜೀವನ ಕುರಿತ ನಿನ್ನ ಎಲ್ಲ ಕತೆಗಳಿಗಿಂತ ಹೆಚ್ಚಾಗಿ ಇಲ್ಲಿ ಅನುಭವ ಚಿತ್ರವತ್ತಾಗಿ ಆಶೆ, ಸಣ್ಣತನ, ದಿಗ್ಭ್ರಮೆಗಳೊಂದಿಗೆ ವ್ಯಕ್ತವಾಗಿದೆ. ಕಿಟ್ಟಿ ಎಂಬ ಚಿಕ್ಕ ಹುಡುಗನ ಮೂಲಕ ಎಲ್ಲವನ್ನೂ ನೋಡಿರುವುದರಿಂದ ಕತೆಗೆ ಐಕ್ಯ ದೊರೆತು ಘಟನೆಗಳು ನಿಗೂಢತೆ ಕಾಪಾಡಿಕೊಳ್ಳುವುದು ಸಾಧ್ಯವಾಗಿದೆ. ಇದು ಈ ಕೃತಿಯ ಮಿತಿ ಕೂಡಾ ಎಂಬುದನ್ನು ನಿನಗೆ ಹೇಳಬೇಕಿಲ್ಲ. ಎಲ್ಲ ಅಗ್ಗದ ಆಕರ್ಷಣೆ ತೊರೆದ ಪ್ರಾಮಾಣಿಕತೆ ಮತ್ತು ಸಂಯಮವುಳ್ಳ ಶೈಲಿಯಿಂದಾಗಿ ಈ ಕಾದಂಬರಿಯ ಮೂಲಕ ನೀನು ನಮ್ಮ ದೊಡ್ಡ ಸಾಹಿತಿಯಾಗುವ ಭರವಸೆ ಹುಟ್ಟಿಸಿರುವೆ.

– **ಪಿ. ಲಂಕೇಶ್** (ಕೃಷ್ಣನಿಗೆ ಬರೆದ ಪತ್ರವೊಂದರಲ್ಲಿ)

# ಕನ್ನಡ ಕಾದಂಬರಿ ಪರಂಪರೆ ಮತ್ತು ಶ್ರೀಕೃಷ್ಣ ಆಲನಹಳ್ಳಿ*

**ಟಿ. ಪಿ. ಅಶೋಕ**

ಕೃಷ್ಣ ಕೆಲವು ಸಾರ್ಥಕ ಕಥೆ–ಕವನಗಳನ್ನೂ ಬರೆದಿರುವರಾದರೂ ಅವರ ಪ್ರತಿಭೆ ತನ್ನ ಪೂರ್ಣ ಅಭಿವ್ಯಕ್ತಿಯನ್ನು ಪಡೆದಿರುವುದು ಅವರ ಮೂರು ಕಾದಂಬರಿಗಳಲ್ಲಿಯೇ. ಕನ್ನಡದ ಇತರ ಮುಖ್ಯ ವಾಸ್ತವವಾದೀ ಕಾದಂಬರಿಗಳಂತೆ ಕೃಷ್ಣರ ಕಾದಂಬರಿಗಳ ಭೌಗೋಳಿಕ ಹರಹು ತೀರ ಚಿಕ್ಕದಾದದ್ದು. "ಕಾಡು" ಕಾದಂಬರಿಯ ಎಲ್ಲ ಘಟನೆಗಳು ನಡೆಯುವುದು ಕೊಪ್ಪಲು ಮತ್ತು ಹೊಸೂರು ಎಂಬ ಎರಡು ಗ್ರಾಮಗಳಲ್ಲಿ. ಹೆಗ್ಗಡದೇವನಕೋಟೆಯ ಪ್ರಸ್ತಾಪ ಮಾತ್ರ ಆಗಾಗ ಆಗುತ್ತದೆ. "ಪರಸಂಗದ ಗೆಂಡೆತಿಮ್ಮ" ಮೂರು ಹಳ್ಳಿಗಳಿಗೆ ಚಾಚಿಕೊಳ್ಳುತ್ತದೆ: ಸಾಲುಂಡಿ, ಗೌವ್ವಳ್ಳಿ ಮತ್ತು ಉಳಿಮಾವು. ನಂಜನಗೂಡು, ಮೈಸೂರು ಹತ್ತಿರದಲ್ಲೇ ಇವೆ. ಮೈಸೂರಿನಲ್ಲೂ ಈ ಕಾದಂಬರಿಯ ಮುಖ್ಯ ಪಾತ್ರಗಳು ಓಡಾಡುತ್ತವೆ. "ಭುಜಂಗಯ್ಯನ ದಶಾವತಾರಗಳು" ಕಾದಂಬರಿಯ ಹರಹು ಮೊದಲೆರಡು ಕಾದಂಬರಿಗಳಿಗೆ

---

* ಈ ಲೇಖನಕ್ಕೆ ಲೇಖಕರು ಬರೆದಿದ್ದ ದೀರ್ಘ ಮುನ್ನುಡಿಯನ್ನು ಸ್ಥಳಾಭಾವದ ಕಾರಣ ಕೈ ಬಿಡಲಾಗಿದ್ದು, ಇದರಿಂದಾಗಿ ಈ ಲೇಖನದ ಸ್ವಯಂಪೂರ್ಣತೆಗೇನೂ ಧಕ್ಕೆಯಾಗಿಲ್ಲ. –ಸಂ.

ಹೋಲಿಸಿದರೆ ಸ್ವಲ್ಪ ವಿಸ್ತಾರವಾದದ್ದು. ಮಾದಳ್ಳಿ ಸ್ವಲ್ಪ ದೊಡ್ಡಹಳ್ಳಿ. ಹೆಗ್ಗಡ ದೇವನಕೋಟೆಯಿಂದ ಮೈಸೂರಿಗೆ ಹೋಗುವ ಬಸ್ಸು ಈ ಊರಿನ ಮೂಲಕ ಹಾದು ಹೋಗುತ್ತದೆ. ಹಾಗಾಗಿ ಮೈಸೂರು ಈ ಕಾದಂಬರಿಯ ಕ್ರಿಯೆಯ ಒಂದು ಅಂಗವೇ ಆಗುತ್ತದೆ. ಆದರೆ ಗಮನಿಸಬೇಕಾದ ಸಂಗತಿ ಎಂದರೆ ಮೈಸೂರಿನಿಂದ ಆಚೆಗೆ ಈ ಕಾದಂಬರಿಗಳಲ್ಲಿ ಏನೂ ಇಲ್ಲ. "ಕಾಡು"ನಲ್ಲಿ ಬೊಂಬಾಯಿ, ಕಲ್ಕತ್ತಾಗಳ ಹೆಸರು ಒಂದೆರಡು ಬಾರಿ ಬಂದು ಹೋಗುತ್ತದೆ. "ಗೆಂಡೆತಿಮ್ಮ"ದಲ್ಲಿ ಗೌವ್ವಳ್ಳಿಯ ಆರ್ಥಿಕ ವ್ಯವಸ್ಥೆ ಹೇಗಿತ್ತೆಂದರೆ "ಗೆಂಡೆತಿಮ್ಮನಿಂದ ಖರೀದಿಸಿದ ವಸ್ತುಗಳಿಗೆ ದುಡ್ಡಿಗೆ ಬದಲು ರಾಗಿ, ಜೋಳ, ಹುರುಳಿ ಕೊಡುವುದು ವಾಡಿಕೆಯಾಗಿತ್ತೆ ಹೊರತು ದುಡ್ಡುಕಾಸಿನ ವ್ಯವಹಾರವಾಗಿರಲಿಲ್ಲ". ಸುಮಾರು ಹತ್ತಿಪ್ಪತ್ತು ಮೈಲಿಗಳ ಆಚೆಗೆ ಈ ಕಾದಂಬರಿಗಳ ಜಗತ್ತು ಬೆಳೆಯುವುದಿಲ್ಲ. "ಕಾಡು" ಕಾದಂಬರಿಯಲ್ಲಿ ಊರವರು ಆಡುವ ನಾಟಕಕ್ಕೆ ಮಂಡ್ಯದಿಂದ ಡ್ರೆಸ್ಸು, ಸೀನರಿಗಳು ಬರುತ್ತವೆ. ಕೋಟೆ ಪೋಲೀಸರ ಪ್ರಸ್ತಾಪ ಬರುತ್ತದೆ. "ಪರಸಂಗದ ಗೆಂಡೆತಿಮ್ಮ"ದಲ್ಲಿ ಗೌವ್ವಳ್ಳಿಯ ಹೆಣ್ಣುಮಗಳೊಬ್ಬಳು ಮೈಸೂರಿನ ಪಡುವಾರಹಳ್ಳಿಯ ಪ್ಯಾಟೆಯ ಒಬ್ಬ ಹುಡುಗನನ್ನು ಮದುವೆಯಾಗುತ್ತಾಳೆ. ಹೊರಜಗತ್ತಿಗೆ ಗೆಂಡೆತಿಮ್ಮ ಮಾತ್ರ ಮೊದಲು ಮುಖ್ಯ ಕೊಂಡಿಯಾಗಿದ್ದನಷ್ಟೆ. ರತ್ನಿಯ ಮದುವೆಯಿಂದಾಗಿ ಮೈಸೂರು ಪ್ಯಾಟೆ ಗೌವ್ವಳ್ಳಿಯನ್ನು ನೇರವಾಗಿ ಪ್ರವೇಶಿಸಿಬಿಡುತ್ತದೆ. ಹಳ್ಳಿ ಪ್ಯಾಟೆಗಳು ನೇರವಾಗಿ ಸಂಧಿಸುವ ಒಂದು ವರ್ಣನೆ ನೋಡಿ: "ಕಂಬ ನೆಡುವ ಶಾಸ್ತ್ರದ ಮೂಲಕ ಮದುವೆ ಸಡಗರ ಆರಂಭವಾಯಿತು. ಜೊತೆ ಜೊತೆಗೆ ಸಾಲು ಸಾಲಾಗಿ ಬಂಧು ಬಾಂಧವರ ಗಾಡಿಗಳು ಗೌವ್ವಳ್ಳಿಯ ಕಲ್ಲು ಬೀದಿಯಲ್ಲಿ ದಡದಡನೆ ಸದ್ದು ಮಾಡುತ್ತ ಬರತೊಡಗಿದವು. ಇಳಿಹೊತ್ತಿಗೆ ಸರಿಯಾಗಿ ಗಂಡಿನ ಕಡೆಯವರ ಸಾಲುಗಾಡಿಗಳನ್ನು ಗೌವ್ವಳ್ಳಿಗೆ ವಿಶಿಷ್ಟವಾಗಿದ್ದ ಕೊಂಬು. ಕಹಳೆ, ತಮ್ಮಟೆ, ತಾರಸಿ, ದಿಮ್ಮಿ, ಕೊಣಮಿಣಿ ಇತ್ಯಾದಿ ಕಿವಿ ಕಿವುಡಾಗಿಸುವಂಥ ವಾದ್ಯಗಳು ಸಂಭ್ರಮದಿಂದ ಸ್ವಾಗತಿಸಿದವು. ಊರ ಅಂಕದಲ್ಲೇ ಪ್ಯಾಟೆಯವರೆಲ್ಲ ಗಾಡಿಯಿಂದಿಳಿದು ಊರ ಬೀದಿಯುದ್ದಕ್ಕೂ ನಡೆದುಕೊಂಡೇ ಬಂದರು. ಗೌವ್ವಳ್ಳಿಯ ಬೀದಿ ಎಂದೂ ಕಂಡಿರದಿದ್ದ ವೇಷ ಭೂಷಣಗಳಿಂದ ಪುಳಕಗೊಂಡಿತು. ಜನರೆಲ್ಲ ದಿಗ್ಭ್ರಮೆಯಿಂದ ಮಿಕಿ ಮಿಕಿ ನೋಡಿದರು. ಪ್ರಾಯದ ಹುಡುಗಿಯರಿರಲಿ, ನಡು ವಯಸ್ಸಿನ ಹೆಂಗಸರೂ ಕೂಡ ಗೌವ್ವಳ್ಳಿಯ ಪಾಲಿಗೆ ಅನಿಷ್ಟವೆನಿಸಿ, ಗೆಂಡೆತಿಮ್ಮನ ಪಾಲಿಗೆ ಆಸಿಷ್ಟವೆನಿಸಿ, ಗೆಂಡೆತಿಮ್ಮನ ಗಡೀಪಾರಿಗೆ ಕಾರಣವಾಗಿದ್ದ ಸಮಸ್ತ ವಸ್ತುಗಳನ್ನು ತೊಟ್ಟಿದ್ದರು. ತಕ್ಷಣ ಗೌವ್ವಳ್ಳಿಯ ಹಣ್ಣುಮಕ್ಕಳು ನಾಳೆ ರತ್ನಿಯ ಧಾರೆಗೆ ತಾವೂ ಕದ್ದಿಟ್ಟುಕೊಂಡಿದ್ದ ಷೋಕಿಯ ಅಮೂಲ್ಯ ಸಾಧನಗಳನ್ನು ನಿರ್ಭಯವಾಗಿ ಧರಿಸಿ ಮದುವೆ ಮನೆಯಲ್ಲಿ ಓಡಾಡಲು ನಿರ್ಧರಿಸಿಕೊಂಡರು. ಪ್ಯಾಟೆಯವರ ಆಗಮನ ಗೌವ್ವಳ್ಳಿಯ ಗುಪ್ತ ಬಯಕೆಗಳು ಅರಳಲು ಕುಮ್ಮಕ್ಕು ಕೊಟ್ಟಿತು".

ಈ "ಪ್ಯಾಟೆಯುವರು" ಕೂಡಾ ಗಾಡಿಗಳಲ್ಲಿ ಬರುವುದು ಗಮನಿಸಬೇಕಾದ ಅಂಶ. ಅಂದರೆ ಲಾರಿ, ಬಸ್ಸುಗಳು ಈ ಜಗತ್ತಿಗೆ ಇನ್ನೂ ನಿಕಟವಾಗಿಲ್ಲ. ಮರಂಕಿ ತರುವ ಗ್ರಾಮಾಫೋನ್, ಭುಜಂಗಯ್ಯ ತರಿಸುವ 'ತಾಯಿನಾಡು' ಪೇಪರ್‌ಗಳ ಮೂಲಕ ಹೊರ ಜಗತ್ತಿಗೆ ಆಗಾಗ ಇಣುಕುವ ಸಾಧ್ಯತೆ. "ಪರಸಂಗದ ಗೆಂಡೆತಿಮ್ಮ"ದಲ್ಲಿ ಗೆಂಡೆತಿಮ್ಮನ ಕಾಲ್ನಡಿಗೆಯೇ ಹಳ್ಳಿಗೂ ಪ್ಯಾಟೆಗೂ ಸಂಪರ್ಕ ಕಲ್ಪಿಸಿದರೆ "ಭುಜಂಗಯ್ಯನ ದಶಾವತಾರಗಳು" ಕೃತಿಯಲ್ಲಿ ಲಿಂಗಜಾಂಬ ಮೋಟಾರ್ ಕೋಟೆ–ಮೈಸೂರುಗಳ ಏಕಮಾತ್ರ ಸಂಪರ್ಕ ಸಾಧನ. ಈ ಮೂಲಕ ಭುಜಂಗಯ್ಯ, ಡ್ರೈವರ್ ಏಕ್ಬರ್, ಕಂಡಕ್ಟರ್ ಸುಬ್ಬಣ್ಣ, ಬಳೆಶೆಟ್ಟರು, ಅವರ ಮಗಳು ಸುಶೀಲ–ಹೀಗೆ ಆಧುನಿಕತೆಯ ಹರಿಕಾರರು ಹಲವು ಮಂದಿ. ಗೆಂಡೆತಿಮ್ಮನ ವೈಯಕ್ತಿಕ ಜವಾಬ್ದಾರಿಯನ್ನು ಇಷ್ಟೆಲ್ಲ ಜನ ಬಸ್ಸಿನ ಮೂಲಕ ಹೆಚ್ಚು ವ್ಯಾಪಕವಾಗಿ, ಸರಾಗವಾಗಿ ಹೇಗೆ ನಿರ್ವಹಿಸುತ್ತಾರೆ ನೋಡಿ. ಇನ್ನು ಅಕ್ಷರಸ್ಥರ ಸಂಖ್ಯೆ ತೀರಾ ಕಡಿಮೆ. "ಕಾಡು"ನಲ್ಲಿ ಕಿಟ್ಟಿ. ನಾಗಿ ಸ್ಕೂಲಿಗೆ ಹೋಗುತ್ತಾರೆ. "ಭುಜಂಗಯ್ಯ ..."ದಲ್ಲಿ ರಾಜ ಪ್ರೌಢ ವ್ಯಾಸಂಗಕ್ಕೆ ಮೈಸೂರಿಗೆ ಹೋಗುತ್ತಾನೆ. ಅಂದರೆ ಕೃಷ್ಣರ ಕಾದಂಬರಿ ಜಗತ್ತು ಟಿಪಿಕಲ್ ಭಾರತೀಯ ಗ್ರಾಮೀಣ ಜಗತ್ತು. ಜಮೀನ್ದಾರೀ ವ್ಯವಸ್ಥೆ ಇನ್ನೂ ಗಟ್ಟಿಯಾಗಿ ಉಳಿದುಕೊಂಡಿರುವ, ಇದೀಗ ಆಧುನಿಕ ವಸ್ತು, ಮೌಲ್ಯಗಳಿಗೆ ಕಣ್ಣು ಬಿಡುತ್ತಿರುವ ಜಗತ್ತು. ಊರಲ್ಲಿ ಜಗಳವಾದರೆ ಪೋಲೀಸು, ಕೋರ್ಟಿಗೆ ಹೋಗುವುದೇ ಸ್ಥಳೀಯ ಮೌಲ್ಯಗಳಿಗೆ ಅಪಚಾರ ಮಾಡಿದಂತೆ ಎಂದು ನಂಬಿಕೊಂಡಿರುವ ಜಗತ್ತು. ಈ ಜಗತ್ತನ್ನು ಕೃಷ್ಣ ಓದುಗರ ಮುಂದೆ ಮಂಡಿಸುವ ಕ್ರಮ ವಾಸ್ತವವಾದೀ ಕಾದಂಬರಿಗಾರನ ಕ್ರಮವೇ. ಆದರೆ ಕೃಷ್ಣರ ಮೊದಲ ಕಾದಂಬರಿ "ಕಾಡು" (1971) ಪ್ರಕಟವಾಗುವ ಹೊತ್ತಿಗೆ ಕನ್ನಡ ವಾಸ್ತವವಾದೀ ಕಾದಂಬರಿ ಕುವೆಂಪು, ಕಾರಂತ, ರಾವ್ ಬಹದೂರ್‌ರಲ್ಲಿ ತನ್ನ ಉತ್ತುಂಗ ಮಟ್ಟವನ್ನು ಆದಾಗಲೇ ಕಂಡಿತ್ತು. ಪ್ರಗತಿಶೀಲ ಚಳುವಳಿ ತನ್ನ ರಭಸವನ್ನು ಆದಾಗಲೇ ಕಳೆದುಕೊಂಡಿತ್ತು. ಅದು ನವ್ಯ ಚಳುವಳಿಯ ಉಚ್ಛ್ರಾಯ ಕಾಲ. ಅನಂತಮೂರ್ತಿ ಅವರ "ಪ್ರಶ್ನೆ" ಕಥಾಸಂಕಲನ ಮತ್ತು "ಸಂಸ್ಕಾರ" ಕಾದಂಬರಿ ಕೃಷ್ಣರ ಪೀಳಿಗೆಯ ಯುವ ಲೇಖಕರ ಮೇಲೆ ಅಪಾರ ಪ್ರಭಾವ ಬೀರಿತ್ತು. ಗೋಪಾಲಕೃಷ್ಣ ಅಡಿಗ ಮತ್ತು ಯು. ಆರ್. ಅನಂತಮೂರ್ತಿಯವರು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಸಂವೇದನೆಯನ್ನೇ ತಂದಿದ್ದರು. ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತರು ನವೋದಯದ ಸಂದರ್ಭದಲ್ಲಿ ಹುಟ್ಟಿಸಿದಷ್ಟೇ ಉತ್ಸಾಹವನ್ನು ಅಡಿಗ, ಅನಂತಮೂರ್ತಿ, ಲಂಕೇಶ್, ದೇಸಾಯಿ, ಚಿತ್ತಾಲ, ಕಾರ್ನಾಡ್ ಮುಂತಾದವರು ಹುಟ್ಟಿಸಿದ್ದರು. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ಮೇಲೆ ಈ ಲೇಖಕರು ಬೀರಿದ ಪ್ರಭಾವ ಅಷ್ಟಿಷ್ಟಲ್ಲ. ಮೊದಲ ನಾಲ್ವರು ತಮ್ಮ ಅಧ್ಯಾಪನ, ಗದ್ಯ ಬರವಣಿಗೆ, ಸಾಹಿತ್ಯ ವಿಮರ್ಶೆಗಳಿಂದಲೂ ಯುವಲೇಖಕರ ಮೇಲೆ ಗಾಢವಾಗಿ ಪರಿಣಾಮ ಮಾಡಿದ್ದರು. ಅಡಿಗರ ಕಾವ್ಯವಂತೂ ಆ ಕಾಲದ ಬದುಕು–

ಬರಹಗಳ ಮೇಲೆ ತನ್ನ ಮುದ್ರೆಯನ್ನು ಒತ್ತಿಬಿಟ್ಟಿತ್ತು. ಇದರ ಪ್ರಭಾವಕ್ಕೆ ಕೇವಲ ಒಳಗಾದವರು ಸ್ವತಃ ಅತ್ಯುತ್ತಮ ಸಾಹಿತ್ಯ ರಚಿಸಲಿಲ್ಲ. ಕೆಲವೇ ಕೆಲವರು ಮಾತ್ರ ತಮ್ಮ ಅಂತಃಸ್ಸತ್ವವನ್ನು ಗಟ್ಟಿಯಾಗಿ ಉಳಿಸಿಕೊಂಡು ತಮ್ಮ ಪರಂಪರೆಯಿಂದ ಕಲಿಯಬೇಕಾದದ್ದನ್ನು ಕಲಿತರು. ಶ್ರೀಕೃಷ್ಣ ಆಲನಹಳ್ಳಿ ಇಂಥ ವಿರಳರಲ್ಲಿ ಒಬ್ಬರು.

ಈ ಸಂದರ್ಭವನ್ನು ಸಾಂಸ್ಕೃತಿಕವಾಗಿಯೂ ನೋಡಬೇಕು. ಸ್ವಾತಂತ್ರಪೂರ್ವದಲ್ಲಿ ಕುವೆಂಪುರವರೊಬ್ಬರೇ ಕನ್ನಡದ ಬಹುದೊಡ್ಡ ಶೂದ್ರ ಲೇಖಕರು. ಸ್ವಾತಂತ್ರ್ಯಾನಂತರ ವಿದ್ಯಾಭ್ಯಾಸದ ಅವಕಾಶಗಳೂ, ಸಂಪರ್ಕದ ಸಾಧ್ಯತೆಗಳೂ ಹೆಚ್ಚಾದವು. ಎಲ್ಲ ವರ್ಗದ ಜನರಲ್ಲಿ ಬದುಕಿನ ಬಗ್ಗೆ ಹೊಸ ಭರವಸೆ, ಆತ್ಮವಿಶ್ವಾಸ ಮೊಳೆಯಲಾರಂಭಿಸಿತು. ಈ ನವ ವಿದ್ಯಾವಂತ ವರ್ಗ ಹೊರ ಜಗತ್ತಿನ ಸಂಪರ್ಕದಿಂದ ಹೆಚ್ಚು ಸೂಕ್ಷ್ಮವಾಗುತ್ತಿದ್ದಂತೆ ತನ್ನ ಸ್ಥಳೀಯ ಬದುಕಿನ ಜೊತೆಗೆ ಇದುವರೆಗೆ ಇಟ್ಟುಕೊಂಡಿದ್ದ ಸಂಬಂಧದ ಸ್ವರೂಪವೂ ಬೇರೆಯಾಯಿತು. "ಹೆಗ್ಗಡಿತಿ"ಯ ಹೂವಯ್ಯ ಈಗ ಎಲ್ಲ ಹಳ್ಳಿಗಳಲ್ಲೂ ಕಾಣಿಸಿಕೊಳ್ಳತೊಡಗಿದ. ಹೂವಯ್ಯ ತನ್ನ ಕಾಲ, ದೇಶಗಳಿಂದ ತುಂಬಾ ಮುಂದಿದ್ದು ಪರಕೀಯ ಪ್ರಜ್ಞೆಯನ್ನು ಅನುಭವಿಸಿದವನಷ್ಟೆ. ಈ ಪರಕೀಯ ಪ್ರಜ್ಞೆ ಅರವತ್ತು–ಎಪ್ಪತ್ತರ ದಶಕದಲ್ಲಿ ಒಂದು ಜನಾಂಗದ ಅನುಭವವೇ ಆಯಿತು. ಕೃಷ್ಣ ಆಲನಹಳ್ಳಿ, ಕಾಳೇಗೌಡ ನಾಗವಾರ, ದೇವನೂರ ಮಹಾದೇವ ಮುಂತಾದ ಲೇಖಕರ ಮೊದಲ ಕಥೆಗಳನ್ನು ಗಮನಿಸಿದರೆ ಈ ಬಿರುಕಿನ ಸ್ವರೂಪ ಸ್ಪಷ್ಟವಾಗುತ್ತದೆ. ಹಾಗಾಗಿ ಈ ಯುವ ಶೂದ್ರ–ದಲಿತ ಲೇಖಕರು ನವ್ಯ ಚಳುವಳಿಯಿಂದ ಪ್ರಭಾವಿತರಾಗಿದ್ದರೆ, ತಮ್ಮ ಬರವಣಿಗೆಯ ಮೊದಲ ಹಂತದಲ್ಲಿ ನವ್ಯ ಮಾರ್ಗದಲ್ಲೇ ಕೃತಿರಚನೆ ಮಾಡಿದ್ದರೆ ಆಶ್ಚರ್ಯವೇನಿಲ್ಲ. ಆದರೆ ಇವರ ಅನುಭವ ಲೋಕ ಬೇರೆಯಾಗಿತ್ತು ಮತ್ತು ಅದು ಕುವೆಂಪು ಜಗತ್ತಿಗೆ ಹತ್ತಿರವಾಗಿತ್ತು. ಆದರೆ ಕುವೆಂಪು ರೀತಿಯಲ್ಲೇ ಬರೆಯಲು ಅವರಿಗೆ ಸಾಧ್ಯವಿರಲಿಲ್ಲ. ಕುವೆಂಪು ಆ ರೀತಿಯ ಬರವಣಿಗೆಯನ್ನು exhaust ಮಾಡಿದ್ದು ಒಂದು ಕಾರಣವಾದರೆ ಅವರ ಕಾಲಕ್ಕೂ ಈ ಕಾಲಕ್ಕೂ ತುಂಬ ವ್ಯತ್ಯಾಸಗಳೂ ಇದ್ದವು. ಕುವೆಂಪು ಕಾದಂಬರಿಗಳ ಮಲೆನಾಡಿಗೂ ತೇಜಸ್ವಿ ಕಾದಂಬರಿಗಳ ನವ ಮಲೆನಾಡಿಗೂ ಇರುವ ವ್ಯತ್ಯಾಸ ಆಯಾ ಕಾದಂಬರಿಗಳ ವ್ಯತ್ಯಾಸಕ್ಕೂ ಕಾರಣವಾಗಿದೆ ಎಂಬುದನ್ನು ನಾವು ಗಮನಿಸದೇ ಇರಲು ಸಾಧ್ಯವಿಲ್ಲ. ಅಲ್ಲದೆ ಕುವೆಂಪುರವರನ್ನು ಕೇವಲ ಹಿಂಬಾಲಿಸಿದವರು ಯಾವ ರೀತಿಯ ಕಾದಂಬರಿಗಳನ್ನು ಬರೆದರು ಎಂಬುದಕ್ಕೆ ಹೆಚ್. ಎಲ್. ನಾಗೇಗೌಡರ ಕಾದಂಬರಿಗಳು ಮತ್ತು ಕಳೆದ ವರ್ಷ ಹೊರಬಂದ ಬಿ. ರಾಮದಾಸ್ ಅವರ ಕಾದಂಬರಿಯೇ ಸಾಕ್ಷಿ. "ಕಾನೂರು ಹೆಗ್ಗಡಿತಿ"ಯ ಪುನರ್‌ಸೃಷ್ಟಿ ನಾವು ಕಾಣುವುದು "ಭಾರತೀಪುರ"ದಲ್ಲೇ. ಇನ್ನೊಂದು ಸಂಸ್ಕೃತಿಯ ವಿವರಗಳನ್ನೂ, ಸಮಕಾಲೀನ ಬೌದ್ಧಿಕ ಚಿಂತನೆಗಳನ್ನೂ ಅನಂತಮೂರ್ತಿ "ಹೆಗ್ಗಡಿತಿ"ಗೆ ಮತ್ತು ಹೂವಯ್ಯನಿಗೆ ಸಂವಾದಿಯಾಗಿ ತರಲು

ಸಾಧ್ಯವಾದುದರಿಂದ ಮಾತ್ರ ಇದು ಸಾಧ್ಯವಾಯಿತು. ಈ ಎರಡು ಕಾದಂಬರಿಗಳನ್ನು ನಾನು ಗುಣಾತ್ಮಕವಾಗಿ ಹೋಲಿಸುತ್ತಿಲ್ಲ. ಒಬ್ಬ ಲೇಖಕ ತನ್ನ ಪರಂಪರೆಯಿಂದ ಏನನ್ನು ಸ್ವೀಕರಿಸಬಹುದು; ಸ್ವೀಕರಿಸಿದ್ದನ್ನು ಜೀರ್ಣಿಸಿಕೊಂಡು ಪರಂಪರೆಗೆ ತನ್ನ ಪಾಲನ್ನು ಹೇಗೆ ಸಲ್ಲಿಸಬಹುದು ಎಂಬುದಷ್ಟನ್ನೇ ಇಲ್ಲಿ ಪರಿಶೀಲಿಸಿಕೊಳ್ಳುತ್ತಿದ್ದೇನೆ ಅಷ್ಟೆ.

ಕುವೆಂಪು ಜಗತ್ತಿಗೆ ಹತ್ತಿರವಾದ, ಆದರೆ ಅನಂತಮೂರ್ತಿ ಪ್ರಜ್ಞೆಯಿಂದ ಪ್ರಭಾವಿತರಾಗಿದ್ದ ಕೃಷ್ಣ ಆಲನಹಳ್ಳಿ ತಮ್ಮದೇ ಆದ ಮಾರ್ಗವನ್ನು ಕಂಡುಕೊಳ್ಳುವುದು ಸಹಜವಾಗಿಯೇ ಅನಿವಾರ್ಯವಾಗಿತ್ತು. ತಮ್ಮ ಸಣ್ಣಕಥೆಗಳಲ್ಲಿ ಅವರು ನವ್ಯರಿಗೇ ಹೆಚ್ಚು ಸಮೀಪವಾಗಿದ್ದರು. ಕೃಷ್ಣರ "ಆಗಂತುಕ" ಕಥೆ ಚಿತ್ತಾಲರ ಉತ್ತಮ ಕಥೆಗಳನ್ನು ನೆನಪಿಗೆ ತರುತ್ತದೆ ಎಂದು "ತಪ್ತ" ಸಂಕಲನದ ಮುನ್ನುಡಿಯಲ್ಲಿ ಅನಂತಮೂರ್ತಿ ಹೇಳಿದ್ದು ಆಕಸ್ಮಿಕವೇನಲ್ಲ; "ಒಬ್ಬ ಮುಗ್ಧ ಬಾಲಕನ ಸಾಕ್ಷಿ ಪ್ರಜ್ಞೆಯಲ್ಲಿ ಇಡೀ ಕಥೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಮೊದಲನೆಯ ವಾಕ್ಯದಿಂದಲೇ ನಾವು ಕಿಟ್ಟಿಯ ಮುಗ್ಧ ಮನಸ್ಸಿನ ಲೋಕವನ್ನು ಪ್ರವೇಶಿಸುತ್ತೇವೆ. ಕಿಟ್ಟಿಯ ಮನಸ್ಸಿನಲ್ಲಿ ಹುಟ್ಟುವ ಸಾವಿನ ಮುನ್ನಳಕು ಗಾಢವಾಗಿ ಬೆಳೆದು ಮುಂದೆ ಮೃತ್ಯು ಪ್ರಜ್ಞೆಯಾಗಿ ಕಾಡಬಹುದಾದ ಸೂಚನೆಯೊಂದಿಗೆ ಕಥೆ ಮುಕ್ತಾಯವಾಗುತ್ತದೆ. ಕಥೆಯ ಕ್ಷುಬ್ಧ ವಾತಾವರಣದ ದಿಟ್ಟತೆಗೆ ನಿಸರ್ಗ ಎಷ್ಟು ಕಾರಣವೊ ಅಷ್ಟೇ ಮನುಷ್ಯ ಲೋಕದ ವ್ಯಗ್ರತೆಗಳೂ ಕಾರಣವಾಗಿವೆ". ಈ ಮಾತುಗಳನ್ನು "ಕಾಡು" ಕಾದಂಬರಿಗೂ ಅನ್ವಯಿಸಬಹುದಲ್ಲವೆ ? "ತಪ್ತ"ಕ್ಕೆ ಬರೆದ ಮುನ್ನುಡಿಯಲ್ಲಿ ಅನಂತ ಮೂರ್ತಿ ಇನ್ನೂ ಕೆಲವು ಮುಖ್ಯ ಅಂಶಗಳನ್ನು ಪ್ರಸ್ತಾಪಿಸುತ್ತಾರೆ: "ಆಗಂತುಕ" ಕಥೆಯ ಮುಗ್ಧ ದೃಷ್ಟಿಕೋನ 'ತಪ್ತ' ಮತ್ತು ನೆಲಗುಮ್ಮಗಳ ಪ್ರಬುದ್ಧ ದೃಷ್ಟಿ ಕೋನಕ್ಕಿಂತ ಯಾಕೆ ಹೆಚ್ಚು ಯಶಸ್ವಿಯಾಗುತ್ತದೆ ಎಂಬುದು ಚಿಂತಿಸಬೇಕಾದ ವಿಷಯ. ಪ್ರಬುದ್ಧ ಪ್ರಜ್ಞೆಯನ್ನು ದೃಷ್ಟಿಕೋನವಾಗಿ ಆರಿಸಿಕೊಂಡ ಕೂಡಲೇ ಅನುಭವದ ಜೊತೆ ಅದನ್ನು ಬೆಲೆಕಟ್ಟುವ ವೈಚಾರಿಕತೆಯ ಜವಾಬ್ದಾರಿಯನ್ನು ಒಪ್ಪಿಕೊಳ್ಳ ಬೇಕಾಗುತ್ತದೆ. ಶ್ರೀಕೃಷ್ಣರ ವೈಚಾರಿಕತೆ ಅವರ ಅನುಭವದ ಸಂಕೀರ್ಣತೆಯನ್ನು ಒಳಗಿನಿಂದ ನೋಡುವಷ್ಟು ಇನ್ನೂ ಹರಿತವಾಗಿಲ್ಲ ಎಂದು ಹೇಳಬಹುದೆ ? ಇದು ಈ ಕತೆಗಳನ್ನು ಓದುತ್ತಿದ್ದಂತೆ ನಮ್ಮನ್ನು ಕಾಡುವ ಪ್ರಶ್ನೆ. ಇಂತಹ ಮಹತ್ವದ ಪ್ರಶ್ನೆ ಯನ್ನು ಎತ್ತಬಲ್ಲ ಶ್ರೀಕೃಷ್ಣ ಆಲನಹಳ್ಳಿಯವರ ಪ್ರತಿಭೆಗೆ ನಾವು ಕೃತಜ್ಞರು. ನೆಲದ ದಟ್ಟ ವಾಸನೆಯಿರುವ ತನ್ನ ಬಾಲ್ಯದ ಸಂವೇದನೆಯನ್ನೂ ತನ್ನ ಬಾಳನ್ನು ವಿವಿಧ ದಿಕ್ಕುಗಳಲ್ಲಿ ಹೊರಳಿಸುತ್ತಿರುವ ಪ್ರಬುದ್ಧ ಜೀವನದ ವೈಚಾರಿಕತೆಯನ್ನೂ ಒಟ್ಟಿಗೇ ಏಕಕಾಲದಲ್ಲಿ ದುಡಿಸಿಕೊಂಡು ತನ್ನ ನೈಜವಾದ ವ್ಯಕ್ತಿತ್ವಕ್ಕೆ ಅರ್ಥಪೂರ್ಣ ವಾದ ರೂಪವನ್ನು ಕೊಡುವುದು ಶ್ರೀಕೃಷ್ಣರ ಕಲೆಗಾರಿಕೆಯ ಮುಖ್ಯ ಹೋರಾಟ ವಾಗಿದೆ ಎನ್ನುವುದು ಈ ಕಥೆಗಳಿಂದ ಸ್ಪಷ್ಟವಾಗುತ್ತದೆ".

"ಕಾಡು" ಹಲವು ಕಾರಣಗಳಿಂದ ಒಂದು ವಿಶಿಷ್ಟ ಕೃತಿ. ಇದನ್ನು ಹಲವು ರೀತಿಗಳಲ್ಲಿ ಅರ್ಥೈಸಲು ಸಾಧ್ಯ. ಜಿ. ಎಸ್. ಅಮೂರರ "ವಿಶ್ಲೇಷಣೆ"ಯನ್ನು ನೋಡಿ: "ನಾಗರಿಕತೆಯ ಶೋಧದಲ್ಲಿ ಮಾನವ ಬಹುದೂರ ಬಂದಿದ್ದರೂ ಅವನ ಮೂಲ ಪ್ರವೃತ್ತಿಗಳಾದ ಕಾಮ. ದ್ವೇಷ. ಕ್ರೌರ್ಯಗಳು ಇನ್ನೂ ಆದಿಮ ಸ್ಥಿತಿಯಲ್ಲಿಯೇ ಇರುವುದು ಅವನ ಜೀವನದ ಒಂದು ದುರಂತ. ಕೊನೆಯಿಲ್ಲದ ಈ ಅವಸ್ಥೆಯನ್ನೇ ಕೊಪ್ಪಲು. ಹೊಸೂರು ಇಂಥ ಕಾಡಿನ ಮಧ್ಯದ ಗ್ರಾಮಗಳ ಪರಿಸರದಲ್ಲಿ ನಡೆಯುವ ಕ್ರಿಯೆಯಮೂಲಕ ಆಲನಹಳ್ಳಿ ಅಭಿನಯಿಸಿ ತೋರಿಸಿದ್ದಾರೆ. ಇಂಥ ವಸ್ತುವನ್ನು ಹೊಂದಿದ ಅವರ ಕಾದಂಬರಿಗೆ ಸಾರ್ವತ್ರಿಕತೆಯನ್ನು ಹುಡುಕಿಕೊಂಡು ಹೋಗುವ ಪ್ರಸಂಗವೇ ಬರುವುದಿಲ್ಲ". ಕಾದಂಬರಿಯ ತಂತ್ರಸ್ವರೂಪದ ಬಗ್ಗೆಯೂ ಅಮೂರ್ ತುಂಬ ಬೆಲೆಯುಳ್ಳ ಮಾತುಗಳನ್ನು ಬರೆದಿದ್ದಾರೆ: "ಇಲ್ಲಿ ಕಾದಂಬರಿಕಾರ ನೇರವಾಗಿ ಕತೆ ಹೇಳುವುದಿಲ್ಲ. ಒಬ್ಬ ಮುಗ್ಧ, ಆದರೆ ತುಂಬ ಸಂವೇದನಾಶೀಲನಾದ ಎಳೆವಯಸ್ಸಿನ ಬಾಲಕನ ಪ್ರಜ್ಞೆಯ ಮುಖಾಂತರ ಅದನ್ನು ನಮಗೆ ತಲುಪಿಸುತ್ತಾರೆ. ಕಿಟ್ಟಿಯ ಮುಗ್ಧತೆ ಮತ್ತು ಅವನ ಮೇಲೆ ಅಪ್ಪಳಿಸುವ ರಾಕ್ಷಸ ಲೋಕದ ಅನುಭವಗಳು ಇವುಗಳ ನಡುವಿನ ವಿರೋಧದಿಂದಾಗಿ ಕಾದಂಬರಿಯಲ್ಲಿ ಸಂಕೀರ್ಣತೆ ಹುಟ್ಟಿಕೊಳ್ಳುತ್ತದೆ. ಕಿಟ್ಟಿಯ ಮಾನಸಿಕ ಬೆಳವಣಿಗೆ ಕೂಡ ಕತೆಯ ವಸ್ತುವಿನ ಮುಖ್ಯ ಭಾಗವಾಗಿದೆ. ಕಾದಂಬರಿಯ ಕೊನೆಯಲ್ಲಿ ಕಿಟ್ಟಿಗೆ ಎಳೆ ವಯಸ್ಸಿನಲ್ಲಿಯೇ ಪರಕೀಯತೆಯ ದಟ್ಟವಾದ ಅನುಭವವಾಗುತ್ತದೆ". ಈ ಕಾದಂಬರಿಯು ಸಂಕೇತಗಳನ್ನು ಬಳಸಿಕೊಳ್ಳುವ ನವ್ಯವಿಧಾನಗಳೂ ತುಂಬಾ ಯಶಸ್ವಿಯಾಗಿವೆ ಎಂದು ಅಭಿಪ್ರಾಯಪಡುವ ಅಮೂರ್ ಒಂದೆರಡು ಉದಾಹರಣೆಗಳನ್ನೂ ಕೊಟ್ಟಿದ್ದಾರೆ. ಅಮೂರ್ ಅವರ ವಿಶ್ಲೇಷಣೆಯನ್ನು ಒಂದು ಮಟ್ಟದಲ್ಲಿ ಒಪ್ಪಿಕೊಂಡ ಮೇಲೂ ಕೆಲವು ಪ್ರಶ್ನೆಗಳನ್ನು ಕೇಳಬೇಕೆನಿಸುತ್ತದೆ. ಒಂದು ಪ್ರಿಮಿಟಿವ್ ಸಮಾಜದ ಕಥೆಯನ್ನು ಕಾಲಾತೀತ ನೆಲೆಯಲ್ಲಿ ಕೃಷ್ಣ ನಿರೂಪಿಸುತ್ತಿದ್ದಾರೆಯೆ ? ಆಧುನಿಕತೆ ಈ ಕಾದಂಬರಿಯ ಕೇವಲ ತಂತ್ರದಲ್ಲಿದೆಯೆ ? ಹಾಗಾದರೆ ಕಾದಂಬರಿಯಲ್ಲಿ ಬರುವ ಆಧುನಿಕ ಪ್ರಪಂಚದ ವಿವರಗಳ ಪ್ರಸ್ತುತತೆ ಎಷ್ಟು ? ಗ್ರಾಮೀಣ ರಾಕ್ಷಸಲೋಕ ಅಥವಾ ವಯಸ್ಕ ಪ್ರಪಂಚವೆನ್ನುವ ರಾಕ್ಷಸಲೋಕ ಕಿಟ್ಟಿಯನ್ನು ಬಾಧಿಸಿದಾಗಲೆಲ್ಲ ಸ್ಥಳೀಯ ಮೂಲದ ಭಯದ ವಿವರಗಳಂತೆ (ಹುಳ, ಹುಪ್ಪಟೆ, ಹಾವು, ದೆವ್ವ, ಕಾಡು. ಆಳುಕೂಗಿನ ಹಕ್ಕಿ ಇತ್ಯಾದಿ) ಆಧುನಿಕ ಪ್ರಪಂಚದ ವಿವರಗಳೂ ಕಿಟ್ಟಿಯ ಪ್ರಜ್ಞೆಯಲ್ಲಿ ಮೂಡುವುದೇಕೆ ? ಉದಾಹರಣೆಗೆ ಈ ವರ್ಣನೆಯನ್ನು ಗಮನಿಸಿ:

"ಕಿಟ್ಟಿ ನಾಗಿಗೆ 'ನಾಗಿ ಬೊಂಬಾಯಿ ಕಲ್ಕತ್ತ ನೋಡ್ದೆ ಅಲ್ವ, ಅಲ್ಲಿ ಯಮಧರ್ಮರಾಯನ ಪಟ್ಟಣ ಯೆಂಗದೆ ನೋಡು' ಎಂದ. ನಾಗಿ 'ನೋಡಲ್ಲಿ ಯೆಂಗೆ ಶಿಕ್ಷೆ ಮಾಡ್ತಾರೆ' ಎಂದಳು. 'ಇಲ್ಲ ಮತ್ತೆ ಪಾಪ ಮಾಡ್ದರೆ ಸುಮ್ನೆ

ಬುಡ್ತಾರ. ಅದ್ಕೆ ಏನೂ ಪಾಪಾನೆ ಮಾಡಬ್ಯಾಡ್ದು ಗೊತ್ತ" ಎಂದ ಕಿಟ್ಟಿಯು ಕಿಟ್ಟಿಯು 'ಪಾಪ' ನಾಗಿಗೆ ತಿಳಿಯಲಿಲ್ಲ. 'ಪಾಪ ಅಂದ್ರೇನೊ ಕಿಟ್ಟಿ' ಎಂದಳು ನಾಗಿ. 'ಥೂ ನಿನ್ನ ಗೊತ್ತಿಲ್ವೇನೆ' ಎಂದು ತಾನೂ ಯೋಚಿಸಿದ. ಏನಂತ ಹೇಳಬೇಕೆಂದು ಹೊಳೆಯದೆ 'ಅವ್ವ್ಯಾಕೆ ಯೇಳ್ತೀನಿ ಕಣೆ' ಎಂದ. ರಾತ್ರಿ ಮಲಗುವಾಗ ಕಿಟ್ಟಿಗೆ ಅವತ್ತು ಬೆಳಿಗ್ಗೆ ಕಂಡಿದ್ದ ಸತ್ತ ಗೌರಿ ನೆನಪಿಗೆ ಬಂತು. ಎಷ್ಟು ಮರೆಯಬೇಕೆಂದುಕೊಂಡರೂ ಅವೇ ಅರ್ಧಭಾಗ ಕಳಚಿ ಮಾಂಸದ ಮುದ್ದೆಯಾಗಿ ಜೋತು ಬಿದ್ದ ಬಾಯಿ, ಕಣ್ಣಿಂದ ನೀರು ತೊಟ್ಟಿಕ್ಕುತ್ತಿದ್ದುದು. ನೀರು ಕುಡಿಯಲಾಗದೆ ಪರದಾಡಿದ್ದು. ಕಡೆಗೆ ಕೊಯ್ಯಲು ಹೊತ್ತುಕೊಂಡು ಹೋಗಿದ್ದು. ಭಯಂಕರ ರಣಹದ್ದು ಕಾಗೆಗಳ ಹಾರಾಟ. ಸಂತೆಯಲ್ಲಿ ಬೊಂಬಾಯಿ ಕಲ್ಕತ ದವನು ತೋರಿಸಿದ ಯಮಧರ್ಮರಾಯನ ಪಟ್ಟಣ. ಸಾವಿತ್ರಮ್ಮನವರ ಸೀರಿಗೆ ಉಚ್ಚೆ ಮಾಡಿಬಿಟ್ಟದ್ದು. ಕೆಂಪು ಹಳದಿ. ಕ್ರಿಷ್ ತುಂಬಿದ ಶೀಷೆಗಳು—ಕಣ್ಣು ಮುಚ್ಚಿದರೆ ಸಾಕು ಒತ್ತ ತೊಡಗಿದವು".

ವಯಸ್ಕ ಲೋಕಕ್ಕೆ ಎದುರಾಗಿ ಕಿಟ್ಟಿಯು ಕಥೆಯನ್ನು ಹೇಳುವಂತೆ, ಆಧುನಿಕ ಪ್ರಪಂಚಕ್ಕೆ ಎದುರಾಗಿ ಪರಂಪರಾಗತ ಸಮಾಜವೊಂದರ ಕಥೆಯನ್ನೂ ಕಾದಂಬರಿಕಾರರು ಹೇಳುತ್ತಿದ್ದಾರೆಯೋ ಎಂಬ ಪ್ರಶ್ನೆಯನ್ನು ನಾವು ಕೇಳಬೇಕು. ಕಿಟ್ಟಿಗೆ ವಯಸ್ಕರ ಲೋಕ ಅಸ್ಪಷ್ಟವಾಗಿ. ನಿಗೂಢವಾಗಿ ಭಯಾನಕವಾಗಿ ಕಾಣುವಂತೆ ಪರಂಪರಾಗತ ಫ್ಯೂಡಲ್ ವ್ಯವಸ್ಥೆಗೆ ಆಧುನಿಕ ಪ್ರಪಂಚವೂ ಹೀಗೆಯೇ ಕಾಣುತ್ತಿದೆಯೆ ? ತನ್ನ ಅಸ್ತಿತ್ವವನ್ನು ಪ್ರಶ್ನಿಸುವ ಹೊಸ ಪ್ರವೃತ್ತಿಗಳ ಬಗ್ಗೆ ಹೊಸ ಮೌಲ್ಯ ವ್ಯವಸ್ಥೆಗಳ ಬಗ್ಗೆ ಮತ್ತು ಹೊಸ ಸಾಮಾಜಿಕ ಸಂಸ್ಥೆಗಳ ಬಗ್ಗೆ ಈ ಪರಪರಾಗತ ಗ್ರಾಮೀಣ ಆರ್ಥಿಕ ರಾಜಕೀಯ ವ್ಯವಸ್ಥೆಗೆ ಭಯವೇ ? ಅಸಹನೆಯೆ ? ಕಾದಂಬರಿಯ ನಾಲ್ಕನೇ ಅಧ್ಯಾಯವನ್ನು ಕೊಂಚ ಪರಿಶೀಲಿಸೋಣ. ಚಂದ್ರೇಗೌಡರು, ಗುಡಿ ಅಯ್ನೋರು, ಸೀತಾರಾಮಯ್ಯನವರು, ದೊಡ್ಡಗೌಡರು ಇವರೆಲ್ಲರೂ ಈ ಹಳೆಯ ವ್ಯವಸ್ಥೆಯನ್ನು ಪ್ರತಿನಿಧಿಸುವವರು, ಶಿವಗಂಗ, ಹೊಸೂರು ಚಿನ್ನೂರ ಇವರೆಲ್ಲ "ಹುಡುಗ ಮುಂಡೇವು"; ಒಂದು ರೀತಿಯಲ್ಲಿ ಈ ವ್ಯವಸ್ಥೆಯನ್ನು ಎದುರಿಸುವ ಧೈರ್ಯ ಮಾಡುವವರು. ಇದಕ್ಕಾಗಿ ಆಧುನಿಕ ವ್ಯವಸ್ಥೆಯೊಂದನ್ನು ಸಮರ್ಥಿಸ ಹೊರಡುವವರು. ಇದೇನೂ ನೈತಿಕ ಸಂಘರ್ಷವಲ್ಲ. ಶಿವಗಂಗ ಚಂದ್ರೇಗೌಡನಷ್ಟೇ ಕೆಟ್ಟವನಿರಬಹುದು. ಅದರೆ ಹಳತು—ಹೊಸತುಗಳ ಸಂಘರ್ಷವೂ ಕಾದಂಬರಿಯಲ್ಲಿ ಸೂಚಿತವಾಗುವುದಿಲ್ಲವೆ ? ಚಂದ್ರೇಗೌಡ—ಶಿವಗಂಗ ಜಗಳವನ್ನು ಕೇವಲ ವೈಯಕ್ತಿಕ, ಮಾನವೀಯ ಪಾತಳಿಯಲ್ಲಿ ನೋಡಬೇಕೆ ? ವಿಚಾರಣೆಯ ಒಂದು ಘಟ್ಟದಲ್ಲಿ:

"ದೊಡ್ಡ ಗೌಡರ ಪಕ್ಕದಲ್ಲಿ ಕೂತಿದ್ದ ಗುಡಿ ಅಯ್ನೋರು ಜೋರಾಗಿ 'ಅಲ್ಲ ಕಣೊ ಕೆಂಚ ಮಾಡೋದು ನೋಡಿದ್ರೆ ಅಂಥ ಕೆಲಸ, ಮತ್ತೆ ಮರ್ಯಾದೆಮೀರಿ

> ಮಾತಾಡೋದೇನೋ' ಎಂದರು. ಕಿಟ್ಟಿಗೆ ಅಯ್ನೋರ ಮಾತು ಕೇಳಿ ಮೊದಲ ಹಾಗೆ ನಗು ಬರುವ ಬದಲು ತುಂಬಾ ಕೋಪ ಬಂತು. ಅಯ್ನೋರು ಕಾಳಿ ಜೊತೆ ಮಲಗಿದ್ದು ಹೇಳಿದಕ್ಕೆ ಮಾವ ತನ್ನನ್ನು ಹೊಡೆದು ಬಿಟ್ಟರು. ಇವತ್ತು ಕೆಂಚ–ದೇವಿ ಕಳ್ಳಿ, ಜೇಲೀಲಿ ಮಲಗಿದ್ರು ಅಂತ ಅವರಿಗೆ ಹೊಡೀತಾರಲ್ಲ· ಅಯ್ನೋರು ಅಂಗೆ ಮಲಗಿದ್ರಲ್ಲ. ಅವರಿಗೂ ಯಾಕೆ ಹೊಡೀದೆ ಅವರ ? ಯೋಚಿಸಿದ. ಅಯ್ನೋರ ಮುಖ ಮಾವನ ಮುಖ ನೋಡುತ್ತ ಮನಸ್ಸಿನಲ್ಲೆ ಬೈಯತೊಡಗಿದ."

ಇದಕ್ಕೆ ಸಮಾನಾಂತರವಾಗಿ ಶಿವಗಂಗ ಈ ವಿಚಾರಣೆಗೆ ಪ್ರತಿಕ್ರಿಯಿಸುವುದನ್ನೂ ಗಮನಿಸಬೇಕು. ಚಂದ್ರೇಗೌಡನೂ ಹೊಸೂರ ಬಸಕ್ಕನೊಂದಿಗೆ ಸಂಬಂಧವಿಟ್ಟು ಕೊಂಡಿದ್ದವನಷ್ಟೆ. ಶಿವಗಂಗ ಹೇಳುತ್ತಾನೆ: "ಇಂಥ ನ್ಯಾಯಬಾರಿ ನೋಡಿಲ್ಲ ಬುಡಯ್ಯ, ನ್ಯಾಯ ಮಾಡೋರು ಮೊದಲು ನ್ಯಾಯವಾಗಿದ್ರೆ ಅಲ್ವ." ಚಿನ್ನ ಅವನ ಪಟ್ಟೆ ಆಳಾಗಿದ್ದುದರಿಂದ "ಅದ್ಕೆ ಅಕ್ಕದೆ ಕಣಯ್ಯ ಕೇಳಾಕೆ" ಎಂದು ಸವಾಲು ಹಾಕುತ್ತಾನೆ. ಈ ಜಗಳ ತನ್ನ ಪರಾಕಾಷ್ಠೆಯನ್ನು ಮುಟ್ಟುವುದು ಶಿವಗಂಗ ಈ ವ್ಯವಸ್ಥೆಯನ್ನೇ ಧಿಕ್ಕರಿಸಿ ಹೊಸ ವ್ಯವಸ್ಥೆಯ ಮಾತಾಡಿದಾಗ: "ನಡೀಲ ಕೆಂಚ ಬೇಕಾದವರು ಕೋರ್ಟಿಗೆ ವೋಗ್ಲಿ' ಎಂದ ಶಿವಗಂಗನ ಮಾತಿಗೆ ಕೆಂಚ ಹೊರಟು ನಿಂತ. ಚಂದ್ರೇಗೌಡರು ರಾಕ್ಷಸರಾಗಿಬಿಟ್ಟರು." "ಏನೋ ಬುಡು ಅಂದ್ರೆ ಇಷ್ಟಕ್ಕೆ ಬಂದ್ಯ, ಎಂದು ಅಬ್ಬರಿಸುವ ಗೌಡರಿಗೆ ತಮ್ಮ ಅಸ್ತಿತ್ವವೇ ಸಡಿಲವಾಗುವ ಭಯ. ಮುಂದೆ ಚಂದ್ರೇಗೌಡ ಶಿವಗಂಗರ ಜಗಳ ಹೊಸೂರು 'ಒಕಳಿಗೂ ವಿಸ್ತರಿಸಿ ಹೊಡೆದಾಟವಾದಾಗ, ಹೊಡೆದಾಟ ಗೌಡರನ್ನು ಅಷ್ಟಾಗಿ ವಿಚಲಿತಗೊಳಿಸುವುದಿಲ್ಲ. ವಿಚಲಿತಗೊಳಿಸುವುದು ಶಿವಗಂಗ "ಚೆನ್ನೋರನನ್ನು ಕರೆದುಕೊಂಡು ಕೋಟೆಗೆ ಹೋಗಿದ್ದು, ಊರ ದೊಡ್ಡವರು ಎಷ್ಟು ಹೇಳಿದರೂ ಕೇಳದೆ ಪೋಲೀಸಿಗೆ ಕೊಡ್ತಿವಿ ಅಂತ ಹಠ ಹಿಡಿದಿದ್ದು" ಕೇಳಿ. ಅವರ ಪ್ರತಿಕ್ರಿಯೆ ? "ಮಾವ ಏನೂ ಮಾತಾಡದೆ ದೀಪ ಇಳಿಸಲು ಹೇಳಿದವರೆ ಕಂಬಳಿ ಹೊದ್ದು ಮಲಗಿಬಿಟ್ಟರು."

ತೃತೀಯ ಜಗತ್ತಿನ ಆಧುನಿಕ ಸಾಹಿತ್ಯದಲ್ಲಿ ಸೈಕಲ್ಲು. ರೈಲು. ಪೋಲೀಸು, ಕೋರ್ಟು ಇವೆಲ್ಲ ಆಧುನಿಕ ನಾಗರೀಕತೆಯ ಸಂಕೇತಗಳಾಗಿಯೇ ಕಾಣಿಸುವ ಅಂಶವನ್ನು ವಿಶೇಷವಾಗಿ ವಿಸ್ತರಿಸಬೇಕಾಗಿಲ್ಲ. ಚಿನುಅ ಅಚೆಬೆ ಕಾದಂಬರಿಗಳಲ್ಲಿ, ಕುವೆಂಪು ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಬೈಸಿಕಲ್, ಆಧುನಿಕ ಕನ್ನಡದ ಮೊದಲ ನಾಟಕಗಳಾದ "ಇಗ್ಗಪ್ಪಹೆಗಡೇ ವಿವಾಹ ಪ್ರಹಸನ", "ಸಂಗ್ಯಾಬಾಳ್ಯಾ" ಗಳಲ್ಲಿ ಕಾಣಿಸಿಕೊಳ್ಳುವ ಕೋರ್ಟು "ಕುಸುಮಬಾಲೆ" ಕಾದಂಬರಿಯಲ್ಲಿ ಬರುವ ಊರ ನ್ಯಾಯ–ಪೋಲೀಸು ನ್ಯಾಯಗಳ ಪ್ರಸ್ತಾಪ ಕೇವಲ ಕಾಕತಾಳೀಯವೂ ಅಲ್ಲ, ಬರೇ ಒಂದು ವಿವರವೂ ಅಲ್ಲ. ಈ ದೃಷ್ಟಿಯಿಂದ ನೋಡಿದಾಗ ಕೊಪ್ಪಲು–ಹೊಸೂರು ಗ್ರಾಮಗಳ ಹಳೆಯ ತಲೆ

ಮಾರಿನವರಿಗೆ ಪೋಲೀಸು–ಕೋರ್ಟುಗಳ ಬಗ್ಗೆ ಇರುವ ದಿಗಿಲಿಗೆ ಸಾಂಸ್ಕೃತಿಕ ಅರ್ಥವೇ ಇದೆ. ಅಂದರೆ ಆಲನಹಳ್ಳಿ ಕೃಷ್ಣ "ಕಾಡು"ವಿನಲ್ಲಿ ಕೇವಲ ಆದಿಮ ಸ್ಥಿತಿಯ ಕ್ರೌರ್ಯವನ್ನು ಮಾತ್ರ ಅಭಿನಯಿಸುತ್ತಿಲ್ಲ: ಈ ನಡವಳಿಕೆಯನ್ನೂ ಇದರ ಪರಿಣಾಮಗಳನ್ನೂ ಅನಿವಾರ್ಯವೆಂಬಂತೆ ತಲೆ ಎತ್ತುತ್ತಿರುವ ಹೊಸ ವ್ಯವಸ್ಥೆಯ ಸಂದರ್ಭದಲ್ಲಿಯೇ ಹಿಡಿಯಲು ಪ್ರಯತ್ನಿಸುತ್ತಿದ್ದಾರೆ ಎಂದು ಸ್ಪಷ್ಟವಾಗುತ್ತದೆ. ಅಂದರೆ ಊರಿನವರಿಗೆ ಸ್ಪಷ್ಟವಾಗಿ ತಿಳಿಯುತ್ತಿಲ್ಲವಾದರೂ ಆಧುನೀಕರಣದ ಪ್ರಕ್ರಿಯೆ ಅದಾಗಲೇ ಪ್ರಾರಂಭವಾಗಿ ಬಿಟ್ಟಿದೆ. ಅದಕ್ಕೆ ಈ ಹಳ್ಳಿಗಳು ಪ್ರತಿಕ್ರಿಯಿಸಲೂ ಪ್ರಾರಂಭಿಸಿವೆ. ಕೃಷ್ಣ ಇಲ್ಲಿ ಯಾವ ಪಕ್ಷವನ್ನೂ ಎತ್ತಿ ಹಿಡಿಯುತ್ತಿಲ್ಲ. ಒಂದು ಸಂಕೀರ್ಣ ಐತಿಹಾಸಿಕ ಸಂದರ್ಭವನ್ನು ಕೇವಲ ದಟ್ಟವಾಗಿ ನಮ್ಮ ಮುಂದೆ ಮಂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಕಾದಂಬರಿಯ ಕೊನೆಯಲ್ಲಿ ಕಿಟ್ಟಿ ಊರಿಗೆ ವಾಪಸು ಹೋಗಲು ಬಯಸಿದ್ದನ್ನು ಅಮೂರ್ ಬಾಲ್ಯಕ್ಕೆ ಮರಳುವ ಕ್ರಿಯೆ ಎಂದು ಸಾಂಕೇತಿಕವಾಗಿ ವಿಶ್ಲೇಷಿಸುತ್ತಾರೆ. ಕಥೆಯ ಮಟ್ಟದಲ್ಲಿ ಇದು ನಿಜ. ಏಕೆಂದರೆ ಕಿಟ್ಟಿಗೆ ತನ್ನ ಅವ್ವ, ಅಜ್ಜಿ ಎಲ್ಲ ನೆನಪಾಗುತ್ತಾರೆ. ಆದರೆ ಕಿಟ್ಟಿ ಕಾಡನ್ನು ಬಿಟ್ಟು ನಗರಾಭಿಮುಖ ಚಲಿಸುತ್ತಾನೆ ಎಂಬುದು ವಾಚ್ಯವಾಗಿಯೂ, ಸೂಚ್ಯವಾಗಿಯೂ ಮುಖ್ಯವಾಗುವುದಿಲ್ಲವೆ? "ಕಾಡು"ವನ್ನು ಕೃಷ್ಣರ ಒಟ್ಟೂ ಕಾದಂಬರಿಗಳ ಸಂದರ್ಭದಲ್ಲಿಟ್ಟು ನೋಡಿದರೆ ಈ ಅಂಶ ಇನ್ನಷ್ಟು ಮಹತ್ತ್ವದ್ದಾಗಿ ಕಾಣುತ್ತದೆ. ಹಳ್ಳಿಯ ಪ್ರಿಮಿಟಿವ್ ಜಗತ್ತು ಆಧುನೀಕರಣದ ಪ್ರಕ್ರಿಯೆಯಿಂದಾಗಿ ಬೆಳೆಯುವ, ಬದಲಾಗುವ ಸ್ವರೂಪ "ಕಾಡು"ವಿನಲ್ಲಿ ಅಸ್ಪಷ್ಟವಾಗಿ ಗೋಚರವಾದರೆ "ಪರಸಂಗದ ಗೆಂಡೆತಿಮ್ಮ". "ಭುಜಂಗಯ್ಯನ ದಶಾವತಾರಗಳು" ಕೃತಿಗಳಲ್ಲಿ ಹೆಚ್ಚು ಖಚಿತವಾಗಿ ಕಾಣಿಸಿಕೊಳ್ಳುತ್ತದೆ. ಕೃಷ್ಣರಿಗೂ ಈ ಅರಿವು ದಟ್ಟವಾಗುತ್ತಿದ್ದಂತೆ ಮುಗ್ಧ ದೃಷ್ಟಿಕೋನವನ್ನು ಬಿಟ್ಟು ಪ್ರಬುದ್ಧ ದೃಷ್ಟಿಕೋನವನ್ನು ಮುಂದಿನ ಕಾದಂಬರಿಗಳಲ್ಲಿ ಆರಿಸಿಕೊಳ್ಳುತ್ತಾರೆ. "ಕಾಡು"ನ ಮುಗ್ಧ ದೃಷ್ಟಿಕೋನ, "ಆಗಂತುಕ"ದ ಮುಗ್ಧ ದೃಷ್ಟಿಕೋನ ಕೃಷ್ಣರಿಗೆ ನವ್ಯರಿಂದ ಸಿಕ್ಕಿರಬೇಕು. ಹೆಚ್ಚು ಖಚಿತವಾಗಿ ಸೂಚಿಸಬಹುದಾದರೆ ಅನಂತಮೂರ್ತಿಯವರ "ಘಟಶ್ರಾದ್ಧ" ಕೃಷ್ಣರ ಮೇಲೆ ತುಂಬಾ ಪ್ರಭಾವ ಬೀರಿರಬಹುದು. ಈ ದೃಷ್ಟಿಕೋನಕ್ಕೆ ಒಂದು ಸಣ್ಣ ಪರಂಪರೆಯೇ ಇದೆ ನವ್ಯ ಸಾಹಿತ್ಯದಲ್ಲಿ. "ಘಟಶ್ರಾದ್ಧ". "ರಾಮನ ಸವಾರಿ ಸಂತೆಗೆ ಹೋದದ್ದು", "ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ" ಇನ್ನೂ ಮುಂತಾದ ಕಥೆಗಳಲ್ಲಿ. ಹಾಗಾಗಿ ಕೃಷ್ಣ ನವ್ಯ ಸಾಹಿತ್ಯದ ಉತ್ತುಂಗ ಕಾಲದಲ್ಲಿ "ಕಾಡು" ಬರೆದಾಗ ಈ ತಂತ್ರವನ್ನು ಅವರು ಬಳಸಿಕೊಂಡದ್ದು ಆಕಸ್ಮಿಕವಾಗಿರಲಾರದು. ಆದರೆ ಕೃಷ್ಣ ಇದನ್ನೇ ತಮ್ಮ ತಂತ್ರವನ್ನಾಗಿ ಮುಂದುವರಿಸಲಿಲ್ಲ ಎಂಬುದೂ ಮುಖ್ಯ. ಒಂದು ರೀತಿಯಲ್ಲಿ ಅವರು ಆಮೇಲೆ ನವ್ಯ ಮಾರ್ಗವನ್ನೇ ತೊರೆದು ವಾಸ್ತವವಾದೀ ರಾಜಮಾರ್ಗಕ್ಕೆ ಬಂದರು. ಆಧುನೀಕರಣದ ಪ್ರಕ್ರಿಯೆ ತುಂಬ

ಅಸ್ಪಷ್ಟವೂ, ನಿಗೂಢವೂ ಆಗಿದ್ದ ಸಂದರ್ಭವೊಂದನ್ನು ಕಾದಂಬರಿಯ ವಸ್ತು ಮಾಡಿಕೊಂಡಾಗ ಕೃಷ್ಣನಿಗೆ ಈ ಮುಗ್ಧ ದೃಷ್ಟಿಕೋನದ ತಂತ್ರವೇ ಹೆಚ್ಚು ಪರಿಣಾಮ ಕಾರಿಯಾಗಿ ಕಂಡಿರಬೇಕು. ಅಂದರೆ ಕೃಷ್ಣರೇ ಈ ಆಧುನೀಕರಣದ ಪ್ರಕ್ರಿಯೆಗೆ ಪ್ರತಿ ಕ್ರಿಯಿಸಿರಬಹುದಾದ ರೀತಿಯನ್ನೇ ಈ ತಂತ್ರ ಪರ್ಯಾಯವಾಗಿ ಸೂಚಿಸುತ್ತಿರಬಹುದು. ಕೃಷ್ಣರ ಅರಿವು ಹಿಗ್ಗುತ್ತಿದ್ದಂತೆ, ವಸ್ತು ಖಚಿತವಾಗುತ್ತಿದ್ದಂತೆ, ದೃಷ್ಟಿಕೋನದ ಸ್ವರೂಪವೂ ಬದಲಾಗಿರಬೇಕು. ಅಂದರೆ ಕೃಷ್ಣರ ಕಾದಂಬರಿಗಳನ್ನು ಕಿಟ್ಟಿಯ. ಗೆಂಡೆತಿಮ್ಮನ ಅಥವಾ ಭುಜಂಗಯ್ಯರ ಕಥೆಗಳಾಗಿ ಮಾತ್ರ ನೋಡಬಾರದು. ಈ ಕಥೆಗಳು ಕೃಷ್ಣರ ಅನುಭವ. ಅವಲೋಕನಗಳ ಅಭಿವ್ಯಕ್ತಿ ಮಾಧ್ಯಮಗಳು. ಕೃಷ್ಣರ ಕಥೆ – ಕಾದಂಬರಿಗಳು ಅಮೂರ್ತ ಚರ್ಚೆ. ವೈಚಾರಿಕ ಜಿಜ್ಞಾಸೆ ನಡೆಸುವುದಿಲ್ಲ. Novel is a tale of human beings ಎಂದು ಒಬ್ಬ ಕಾದಂಬರಿ ಮೀಮಾಂಸಕ ಹೇಳುತ್ತಾನೆ. ಈ ಮಾತು ಕೃಷ್ಣರ ಕಾದಂಬರಿಗಳಿಗೆ ಬಹು ಚೆನ್ನಾಗಿ ಅನ್ವಯಿಸುತ್ತದೆ. "ಪರಸಂಗದ ಗೆಂಡೆತಿಮ್ಮ"ದ ಮುನ್ನುಡಿಯಲ್ಲಿ ಕೃಷ್ಣ ಹೇಳುತ್ತಾರೆ:

> "ನನ್ನ ಬಾಲ್ಯದಲ್ಲಿ ನನ್ನನ್ನು ಗಾಢವಾಗಿ ಕಾಡಿ ನನ್ನೊಳಗೆ ಅತ್ಯಂತ ಆಪ್ತವಾಗಿ ಉಳಿದು ಸದಾ ಉರಿಯುತ್ತಿರುವ ಹತ್ತಾರು ಮೂರ್ತಿಗಳಲ್ಲಿ ಇವನೂ ಒಬ್ಬ. ಊರಿನ ಪಾಲಿಗೆ ಅತಿಸಾಮಾನ್ಯನೆನಿಸಿದ್ದ ವ್ಯಕ್ತಿ ಅಂದು ನನ್ನ ಮುಗ್ಧ ಮನಸ್ಸಿಗೆ ಅಸಾಮಾನ್ಯ ಹಾಗೂ ಅದ್ಭುತವೆನೆಸಿದ್ದಂತೆ ಇವತ್ತೂ ಜ್ವಲಂತವಾಗಿ ಅನ್ನಿಸಿದ್ದೇ ಈ ಕೃತಿ ಸೃಷ್ಟಿಗೆ ಮುಖ್ಯ ಕಾರಣ."
>
> "ಹಿಂದುಳಿದ ಹಳ್ಳಿಯೊಂದರ ಪ್ರಾಚೀನ ಬದುಕಿಗೆ ಗೆಂಡೆತಿಮ್ಮ – ಮರಂಕಿ ಯರು ಪರಿಚಯಿಸಿದ ನಾಗರೀಕ ವಸ್ತುಗಳು ಮತ್ತು ಅವರ ಮುಗ್ಧ ಕ್ರಿಯೆ ಗಳು ದುರಂತವೆನಿಸಿದರೂ ಅನಿವಾರ್ಯ ವಿಕಾಸಕ್ಕೆ ಕಾರಣವಾದಂತೆ ಅವರಿಬ್ಬರ ವೈಯಕ್ತಿಕ ಜೀವನವನ್ನು ಬಲಿತೆಗೆದುಕೊಂಡುಬಿಟ್ಟವು."

ಕಾನೂರು ಚಂದ್ರಯ್ಯಗೌಡರ ಮನೆಯನ್ನು ವರ್ಣಿಸುತ್ತಾ "ಹೆಗ್ಗಡಿತಿ"ಯಲ್ಲಿ ಕುವೆಂಪು "ಆ ಮನೆಯಲ್ಲಿ ಪ್ರಾಚೀನ ನವೀನಗಳ ಸ್ನೇಹವೋ ಸಮರವೋ ನಡೆಯತೊಡಗಿದ್ದಂತೆ ತೋರುತ್ತಿತ್ತು" ಎನ್ನುತ್ತಾರೆ. ಪ್ರಾಚೀನ ನವೀನಗಳ ಸ್ನೇಹ – ಸಮರಗಳ ದ್ವಂದ್ವ ವಿನ್ಯಾಸವೇ ತೃತೀಯ ಜಗತ್ತಿನ ಪ್ರಧಾನಧಾರೆಯ ಕಥೆ ಕಾದಂಬರಿಗಳ ಮುಖ್ಯ ವಸ್ತು. ಈ ದ್ವಂದ್ವವಿನ್ಯಾಸವನ್ನು ಕೃಷ್ಣರ ಕಾದಂಬರಿಗಳಲ್ಲಿ ಮೂರ್ತ ವಿವರಗಳಲ್ಲಿ ಕಾಣುತ್ತೇವೆ. ಈ ಆಧುನೀಕರಣ ಪ್ರಕ್ರಿಯೆ ವ್ಯಕ್ತಿ ವ್ಯಕ್ತಿಗಳ ವೈಯಕ್ತಿಕ ಬದುಕನ್ನೂ ವ್ಯಾಪಿಸಿ ಜೀವನ ಪಲ್ಲಟವಾಗುವ ಸೂಕ್ಷ್ಮಗಳನ್ನು ಕೃಷ್ಣ ಮಾರ್ಮಿಕವಾಗಿ ಚಿತ್ರಿಸು ತ್ತಾರೆ. ಗೌವಳ್ಳಿ ಮೊದಲು ಹೇಗಿತ್ತು ? : "ಉಜ್ವಲವಾದ ನಾಗರಿಕತೆಯಿಂದ ಜಗ ಜಗಿಸುವ ಮೈಸೂರು ನಗರಕ್ಕೆ ಇಷ್ಟು ಸಮೀಪದಲ್ಲಿದ್ದರೂ ಗೌವ್ವಳ್ಳಿ ತನ್ನ ಸಹಸ್ರಾರು ವರ್ಷಗಳ ಜೀವನ ಪದ್ಧತಿಯಿಂದ ಕಿಂಚಿತ್ತೂ ಬದಲಾಗಿರಲಿಲ್ಲ. ಯಾವುದೇ ನಾಗರಿಕ

ಬಯಕೆಯೂ ಆ ಊರಿನ ಪಾಲಿಗೆ ಅನಿಷ್ಟ. ತಮ್ಮ ಜಗತ್ತು ಬೇರೆ ಆ ಪ್ಯಾಟೆಯವರ ಜಗತ್ತು ಬೇರೆ. ತಮ್ಮ ಅವರ ರೀತಿನೀತಿಗಳೂ ಬೇರೆ ಬೇರೆ. ಇಂಥ ಸ್ಥಿತಿಯಲ್ಲಿದ್ದ ಗೌವ್ವಳ್ಳಿಯ ಜೀವನಕ್ಕೊಂದು ಹೊಸ ಬಣ್ಣ ಬಂದಿತ್ತು ಮರಂಕಿಯ ಮೂಲಕ. ಅವಳ ಬಯಕೆಗಳು ಗೌವ್ವಳ್ಳಿಯ ಹೆಣ್ಣುಮಕ್ಕಳ ಬಯಕೆಗಳಾಗಿ ರೂಪಾಂತರ ಗೊಂಡಿದ್ದವು. ಗೌವ್ವಳ್ಳಿಯ ಹೆಣ್ಣುಮಕ್ಕಳ ಉಡುಗೆ ತೊಡುಗೆಗಳಲ್ಲಿ ಆದ ಪರಿವರ್ತನೆ ಸಹಜವಾಗಿ ಮನೆಯ ವಾತಾವರಣವನ್ನೇ ಬದಲಿಸುವಷ್ಟು ಸೂಕ್ಷ್ಮವಾಗ ತೊಡಗಿತ್ತು. ತಾವು ಸಾಬೂನಿನಿಂದ ಸ್ವಚ್ಛಗೊಳಿಸಿದ ತಮ್ಮ ಸೀರೆ ರವಿಕೆಗಳಾಗಲೀ, ಗಂಡಂದಿರ ಅಂಗಿ ಚಡ್ಡಿಗಳಾಗಲೀ ಈಗ ಮೊದಲ ಹಾಗೆ ಕೊಳೆಯಿಂದ ಜಿಡ್ಡುಗಟ್ಟುವಂತಿರಲಿಲ್ಲ. ಎಲ್ಲೆಂದರಲ್ಲಿ ಏನಿದ್ದರೂ ಸರಿ ಅದರ ಮೇಲೆಯೇ ಕೂತುಬಿಡುತ್ತಿದ್ದವರು ಈಗ ಕೂರುವ ಮುಂಚೆ ನೋಡಿ ಕೂರುತ್ತಿದ್ದರು. ದಿನಕ್ಕೆ ನಾಕು ಸಲವಾದರೂ ಮನೆಗುಡಿಸುತ್ತಿದ್ದರು. ಹೆಣ್ಣುಮಕ್ಕಳು ವಾರಕ್ಕೆರಡು ಸ್ನಾನ ಮಾಡುವ, ದಿನವೂ ತಲೆ ಬಾಚುವ, ಲಂಗ ಕಾಣುವಂತೆ ಸೀರೆ ತೊಡುವ ಪದ್ಧತಿಗಳು ಗೌವ್ವಳ್ಳಿಯಲ್ಲಿ ಜಾರಿಗೆ ಬರುತ್ತಿದ್ದಂತೆ ಹಿರಿಯರು ತುಂಬಾ ತಳಮಳಿಸಿದರು. ಇಂಥ ಬದಲಾವಣೆ ಅನಿವಾರ್ಯ ಹಾಗೂ ತಮಗೆ ಅತ್ಯಂತ ಪ್ರಿಯವಾಗಿದೆ ಎಂಬ ಧಾಟಿ ಧೋರಣೆಯ ಪಡ್ಡೆ ಹುಡುಗರ ಉದ್ಧಟತನಕ್ಕೆ ದಿಗ್ಭ್ರಾಂತರಾಗಿ ಇವರು ತಮ್ಮ ಮನೆತನಗಳ ಮಾನ ಮರ್ಯಾದೆಗಳನ್ನು ಉಳಿಸಲು ಸಾಧ್ಯವೇ ಅಂತ ಅನುಮಾನದಿಂದ ಭಯಗ್ರಸ್ತರಾಗತೊಡಗಿದರು."

"ಇಷ್ಟೂ ಕಾಲ ಋತುಮಾನಗಳಲ್ಲದೆ ಬೇರಾವ ಶಕ್ತಿಯೂ ಗೌವ್ವಳ್ಳಿಯ ಬದುಕನ್ನು ಯಾವ ಬಗೆಯ ಏರಿಳಿತಕ್ಕೂ ಒಳಗೂ ಮಾಡಿರಲಿಲ್ಲ. ನೆಮ್ಮದಿಯಿಂದಿದ್ದ ಇಲ್ಲಿನ ಜೀವನಕ್ಕೆ ಇತ್ತೀಚೆಗೆ ಬಿಸಿಗಾಳಿ ಬೀಸತೊಡಗಿತ್ತು. ದುರ್ಗಂಧಮಯವಾದ ಊರ ಬೀದಿಗಳಲ್ಲಿ ಆಗೀಗ ಸುಗಂಧದ ತೆರೆಯೊಂದು ಹರಿದಂತೆ, ಹಠಾತ್ತನೆ ಕಾಮನಬಿಲ್ಲಿನ ಬಣ್ಣಗಳ ಹೆಣ್ಣುಗಳಾಗಿ ಓಡಾಡುತ್ತಿರುವಂತೆ ಗೌವ್ವಳ್ಳಿಯ ಪ್ರಾಯದ ಹುಡುಗರಿಗೆ ಚಿತ್ರ ವಿಚಿತ್ರವಾದ ಅನುಭವಗಳಾಗತೊಡಗಿದವು. ಊರಿನ ಒಂದಲ್ಲ ಒಂದು ಮನೆಯಲ್ಲಿ ಏನಾದರೊಂದು ಆಶ್ಚರ್ಯ ಸಂಭವಿಸಿ ಎಲ್ಲರೂ ತಲ್ಲಣಗೊಳ್ಳುವುದು ಸಾಮಾನ್ಯವಾಗಿಬಿಟ್ಟಿತು. ಹಾಗೆಯೇ ಎಷ್ಟೋ ಮನೆಗಳು ಯಾವ ಕೇಡು ಕಾದಿದೆಯೊ ಎಂದು ಈ ಅಪರಿಚಿತ ವಾಸನೆಗೆ, ಬಣ್ಣಗಳಿಗೆ ಭಯಪಟ್ಟು ತತ್ತರಿಸಿದವು."

ಮರಂಕಿಯ ಆಗಮನದಿಂದ ಗೆಂಡೆತಿಮ್ಮನ ವೈಯಕ್ತಿಕ ಬದುಕಿನಲ್ಲಿ ಆದ ಮಾರ್ಪಾಡುಗಳೂ ಅಷ್ಟಿಷ್ಟಲ್ಲ. ಅವನ ದಿನಚರಿ ಬದಲಾದಂತೆ ಅವನ ವೇಷಭೂಷಣಗಳೂ ಬದಲಾದವು. ಅತ್ತೆ–ಸೊಸೆ ಜಗಳಕ್ಕೆ ಒಂದು ಹೊಸ ಆಯಾಮವೇ

ಬಂದಿತು. ಮರಂಕಿ ತಂದ ಸುಧಾರಣೆಗಳನ್ನು ಗೆಂಡೆತಿಮ್ಮನ ಅವಿಭಕ್ತ ಕುಟುಂಬ ಅಸಹನೆಯಿಂದ. ಅನುಮಾನದಿಂದ ನೋಡಿತು. ಆಧುನಿಕತೆ ಬಾಹ್ಯರೂಪದಲ್ಲಿ ಮಾತ್ರ ಬರಲಿಲ್ಲ. ಅದು ಇವರೆಲ್ಲರಿಗೆ ಗೊತ್ತಾಗದಂತೆ ಒಂದು ಹೊಸ ಮೌಲ್ಯವ್ಯವಸ್ಥೆಯನ್ನೇ ತರುತ್ತಿತ್ತು; ಅನೇಕ ಮೂಲಭೂತ ಬದಲಾವಣೆಗಳಿಗೆ ದಾರಿಮಾಡಿಕೊಡುತ್ತಿತ್ತು. "ಗೆಂಡೆತಿಮ್ಮ ತನ್ನ ಅಣ್ಣನಿಂದ ಪಾಲಾದದ್ದು ಇಂಥ ಒಂದು ಮುಖ್ಯ ಬದಲಾವಣೆ: "ಗೆಂಡೆತಿಮ್ಮ ಪಾಲಾದ ಸುದ್ದಿ ಸಾಲುಂಡಿಯ ಪರಿವಾರದ ಕೇರಿಗೆ ನಂಬಲಾಗದ ಸುದ್ದಿಯೆನಿಸಿತು. 'ಅಣ್ಣತಮ್ಮಂದಿರು ಅಂದ್ರೆ ಅವರಂಗಿರ್ಬೇಕು, ಒಳ್ಳೆ ರಾಮ ಲಕ್ಷ್ಮಣ ಇದ್ದಂಗಿದ್ರೆ' ಅಂತ ಹೆಸರಾಗಿದ್ದವರು ಈಗ ಬೇರೆಯಾಗಿ ಆ ಮನೆಯಲ್ಲಿ ಎರಡು ಒಲೆಗಳು ಉರಿಯುತ್ತವೆ ಅನ್ನುವುದು ಖಚಿತವಾದಾಗ ಸುಮಾರು ಜನ 'ಛೆ ಹೀಗಾಗಬಾರದಿತ್ತು' ಅಂದುಕೊಂಡರು. ಕೆಲವರು 'ಅಂಥ ತಳುಕಿನ ಸೊಸೆ ಕಾಲಿಟ್ಟಾಗ್ಲೇ ಇನ್ನು ಈ ಮನೆ ಒಂದಾಗಿರಕ್ಕಾಗಲ್ಲ ಅಂತ ಅನ್ನಿಸ್ತು' ಅಂತ ರಾಗ ಎಳೆಯದೆಯೂ ಇರಲಿಲ್ಲ." ಈ ವಿಘಟನೆ ಗೆಂಡೆತಿಮ್ಮನ ಮೇಲೆ ಮಾಡಿದ ಪರಿಣಾಮವನ್ನು ನೋಡಿ: "ಗೆಂಡೆತಿಮ್ಮ ಪಾಲಾಗಿ ಪ್ರತ್ಯೇಕವಾಗಿ ಒಲೆ ಹೂಡಿದ ಮೇಲೆ ಅವನ ಜೀವನಕ್ಕೆ ಹೊಸ ಆಯಾಮ ಬಂದಂತಾಯಿತು. ಈಗ ಏನು ಮಾಡುವುದಾದರೂ ನಿರ್ಭಯದಿಂದ ಮಾಡಬಹುದು. ಯಾರ ಕಣ್ಣುಗಳೂ ತನ್ನನ್ನು ದುರಗುಟ್ಟಿ ನೋಡುತ್ತಿಲ್ಲ. ಅಲ್ಲದೆ ಯಾವ ಕೊಂಕಿನ ಮಾತುಗಳನ್ನೂ ಇನ್ನು ಕೇಳಬೇಕಿಲ್ಲ. ತಾನು ಮತ್ತು ತನ್ನ ಹೆಂಡತಿ ಇನ್ನುಮುಂದೆ ಅನ್ನಿಸಿದಂತೆ ಬದುಕಬಹುದು. ಖುಷಿ ಪಡಬಹುದು. ಇಷ್ಟ ಬಂದಾಗ ನಗಬಹುದು. ಈ ಹಳೆ ಮನೆಯಲ್ಲಿ ಹೆಂಡತಿಯ ಜೊತೆ ತಾನು ನಕ್ಕಿದ್ದೇ ಅಪರೂಪ. ಈಗ ತಮ್ಮಿಬ್ಬರ ನಡುವೆ ಯಾರೂ ಕಾಲು ಹಾಕುವಂತಿಲ್ಲ. ತಮ್ಮ ಸುಖಕ್ಕೆ ಯಾವ ಅಡ್ಡಿ ಆತಂಕವೂ ಇಲ್ಲ. ಬೇಕಿದ್ದರೆ ದಿನವೂ ಸ್ನಾನ ಮಾಡಬಹುದು. ಬೇಕೆನಿಸಿದ್ದನ್ನು ಬಳಸಬಹುದು. ಗೆಂಡೆತಿಮ್ಮನ ಪಾಲಿಗೆ ಸ್ವರ್ಗವೇ ಸಿಕ್ಕಿಬಿಟ್ಟಿತ್ತು."

ಕುವೆಂಪು ಅವರ "ಮಲೆಗಳಲ್ಲಿ ಮದುಮಗಳು" ಕುರಿತಂತೆ ಕೃಷ್ಣ ಒಂದು ವಿಮರ್ಶಾತ್ಮಕ ಲೇಖನ ಬರೆದಿದ್ದಾರೆ. ಚಿನ್ನಮ್ಮ – ಮುಕುಂದಯ್ಯ – ಪೀಂಚಲು – ಐತ. ತಿಮ್ಮಿ – ಗುತ್ತಿಯರ ಸಂಬಂಧಗಳನ್ನು ಅವರು ವಿಶ್ಲೇಷಿಸಿದ್ದಾರೆ. ಕೃಷ್ಣರ ವಾದ ಇದು: ಸಾಮಾಜಿಕ ಶ್ರೇಣಿಯಲ್ಲಿ ಮೇಲಕ್ಕೆ ಏರುತ್ತಾ ಪ್ರಕೃತಿಯಿಂದ ದೂರವಾದಂತೆ ಲೈಂಗಿಕ ಜೀವನದ ಸಹಜತೆ ಕೂಡಾ ಕಡಿಮೆಯಾಗುತ್ತಾ ಬರುತ್ತದೆ. ಪರ್ಯಾಯವಾಗಿ ಸಾಮಾಜಿಕ ಶ್ರೇಣಿಯಲ್ಲಿ ಕೆಳಗಿದ್ದು ಪ್ರಕೃತಿಗೆ ನಿಕಟವಾಗಿರುವ ವ್ಯಕ್ತಿಗಳಲ್ಲಿನ ಲೈಂಗಿಕ ಸಂಬಂಧಗಳು ಸಹಜವಾಗಿ ಮುಕ್ತವಾಗಿ ಇರುತ್ತವೆ. "ಮಲೆಗಳಲ್ಲಿ ಮದುಮಗಳು" ಯಾವ ರೀತಿಯ ಜೀವನ ಉತ್ತಮ ಎನ್ನುವ ಶೋಧನೆಯಲ್ಲಿದೆ. "ಮಲೆಗಳಲ್ಲಿ ಮದುಮಗಳು" ಕಾಲದಿಂದ "ಪರಸಂಗದ ಗೆಂಡೆತಿಮ್ಮ"ನ ಕಾಲದವರೆಗೆ

ತುಂಗೆ ಕಾವೇರಿಯಲ್ಲಿ ಸಾಕಷ್ಟು ನೀರು ಹರಿದಿದೆ. ಗೆಂಡೆತಿಮ್ಮ – ಮರಂಕಿಯರಿಗೆ ಸ್ವಾತಂತ್ರ್ಯ ಆಧುನಿಕತೆಯಿಂದ ಸಿಗಬೇಕಾಗಿದೆ. ಈ ದೃಷ್ಟಿಯಿಂದ ಅವರ ಬಯಕೆಗಳು ಅನಂತಮೂರ್ತಿಯವರ "ಭಾರತೀಪುರ"ದ ಗಣೇಶನ ಬಯಕೆಗಳಿಗೆ, "ಸಂಸ್ಕಾರ"ದ ಅನೇಕ ಪಾತ್ರಗಳ ಬಯಕೆಗಳಿಗೆ, "ಪ್ರಸ್ತ"ದ ಪುಂಡರೀಕ – ನೇತ್ರಾರ ಬಯಕೆಗಳಿಗೆ ಹತ್ತಿರವಾಗಿವೆ. ಪರಂಪರೆ ಸುಧಾರಣೆಗೆ ಬೆಚ್ಚುತ್ತದೆ; ಆಧುನಿಕತೆಯನ್ನು ನಿರೋಧಿಸಲು ಯಾವತ್ತೂ ಪ್ರಯತ್ನಿಸುತ್ತದೆ. ಏಕೆಂದರೆ ಆಧುನಿಕತೆ ಪರಂಪರೆಯ ಅಸ್ತಿತ್ವವನ್ನೇ ಪ್ರಶ್ನಿಸುತ್ತದೆ: ಅದನ್ನು ಸ್ಥಳ ಪಲ್ಲಟ ಮಾಡಲು ಹೊಂಚುತ್ತದೆ. ಮರಂಕಿಗೂ ಅವಳ ಅತ್ತೆಗೂ ಇರುವ ವಿರಸದ ಮೂಲ ಇದು. ಇದನ್ನು ಕೇವಲ ಮಾನವೀಯ ಪಾತಳಿಯಲ್ಲಿ ನೋಡಲಾಗದು. ಊರವರ ಅಸೂಯೆಗೂ ಇದೇ ಮೂಲ ಕಾರಣ. ಅವರಿಗೆ ತಮಗೂ ಗೆಂಡೆತಿಮ್ಮ–ಮರಂಕಿಯಂತೆ ಆಗುವುದು ಬೇಕು. ಆದರೆ ಅವಕಾಶಗಳು ಇನ್ನೂ ಸಾಧ್ಯವಾಗುತ್ತಿಲ್ಲ ಅಷ್ಟೆ. ಹಾಗಾಗಿ ಸಾಲುಂಡಿ ಗೆಂಡೆತಿಮ್ಮ ಮರಂಕಿಯರನ್ನು ಆಕರ್ಷಣೆ–ಅಸೂಯೆಗಳ ದ್ವಂದ್ವ ವಿನ್ಯಾಸವೊಂದರಲ್ಲಿ ನೋಡುತ್ತದೆ ಇತ್ತ ಗೌವ್ವಳ್ಳಿಯ ಹಿರಿಯರಿಗೂ ಗೆಂಡೆತಿಮ್ಮನ ಮೇಲೆ ಸಿಟ್ಟು ಬರಲು ಕಾರಣ ಅವನು ತಮ್ಮ ಅಧಿಕಾರದ ಮರ್ಮಸ್ಥಾನಕ್ಕೇ ಕೈಯಿಡುವಂತಹ ಬೆಳವಣಿಗೆಗಳಿಗೆ ಕಾರಣನಾಗಿದ್ದಾನೆ ಎಂಬುದು. ಗೆಂಡೆತಿಮ್ಮನ ವಿಚಾರಣೆಯ ಕೆಲವು ವಿವರಗಳನ್ನು ನೋಡೋಣ. ಕುಂಟ ದ್ಯಾವೇಗೌಡ ಹೇಳುತ್ತಾನೆ: "ನಾಕು ಜನ ಮಾನ ಮರ್ವಾದಿಗೆ ಬದಕವ್ರಲ್ಲ ವಸಿ ಕೇಳಿ .. ಈ ದೇಸ ಕೆಡ್ಸಿಬಂದಿರೊ ಸೂಳೆಮಗ ಕುಂತವ್ನೆ ನೋಡಿ . ಮಳ್ಳಿ ಕುಂತಂಗೆ ಇವ್ನು ನಾವ್ಯಾರು ಇಲ್ದ ಹೊತ್ನಲ್ಲಿ ಅರೀದ ಯೆಣ್ಣೈಕಳಿಗೆ ಪ್ಯಾಟೆಯವ್ರು ಆಕ್ತಾರೆ ನೋಡಿ ಅಂತ ಮನೆ ಆಳ್ಮಾಡೋ ಸಾಮಾನೆಲ್ಲ ತಂದ್ಕೊಟ್ಟವ್ನೆ. ಅದೆಷ್ಟು ದಿನಸಿ ಕದ್ದು ಸುರಿಸ್ಕಂಡು ವೋಗವ್ನೊ... ಇವ್ನು ತಂದುಕೊಟ್ಟ ಅನಿಸ್ಟದ ಸಾಮಾನಿಂದ್ಲೆ ದಿನಾ ನಮ್ಮನೇಲಿ ಅತ್ತಿದ ಜಗಳ ಆರೀ ದಂಗಾಗಿದೆ ... ಕಡೀಕೆ ನನ್ಮಗ ಪಾಲುಕೊಡು ಅಂತ ಅನ್ನಮುಟ್ಟಕ್ಕೆ ಬಂದು ಕುಂತವ್ನೆ.... ಇಂಗೆ ಮನೆ ಆಳ್ಮಾಡೋ ಕೆಲ್ಸ ಮಾಡವ್ನಲ್ಲ ಈ ಜಾತ್ಗೆಟ್ಟ ಬಡ್ಡೀಮಗ .. ಇವ್ನಿಂದ ನಾವು ಬದುಕಬೇಕೋ ಬ್ಯಾಡ್ವೊ." ಈ ವಿಚಾರಣೆಯ ಸಂದರ್ಭದಲ್ಲಿ ಮೂಡಿಬರುವ ವಿವಿಧ ಪ್ರತಿಕ್ರಿಯೆಗಳ ವಿನ್ಯಾಸದಲ್ಲಿ ಆಧುನೀಕರಣ ಪ್ರಕ್ರಿಯೆ ಸಂಕೀರ್ಣವಾಗುತ್ತದೆ: "ಊರಿಗೆ ತನ್ನಿಂದಾಗಿ ಹೊಸ ಬೆಳಕು ಬಣ್ಣ ಬಂದವೆಂದು ಒಳಗೇ ಹಿಗ್ಗಿದ್ದ ಗೆಂಡೆತಿಮ್ಮನ ಅನಿಸಿಕೆ ತಲೆಕೆಳಕಾಗಿತ್ತು.... ಗೆಂಡೆತಿಮ್ಮನಿಗೆ ತಾನೀಗ ತುಂಬಾ ತಬ್ಬಲಿ ಅನಿಸಿತು. ಕೆಂಗಣ್ಣ ಒದ್ದುದಕ್ಕಿಂತ ಅವನಿಗೆ ಸಹಿಸಲಾಗದಂಥ ಯಾತನೆಯನ್ನುಂಟು ಮಾಡಿದ್ದೆಂದರೆ ಅಲ್ಲಿ ಮಾತಾಡಿದವರೆಲ್ಲ ತನ್ನನ್ನು 'ಮನೆಹಾಳ' ಎಂದು ಬೈದದ್ದು. ಗೆಂಡೆತಿಮ್ಮ ಕನಸಿನಲ್ಲೂ ಇನ್ನೊಬ್ಬರಿಗೆ ಕೇಡು ಬಯಸಿದವನಲ್ಲ. ಗೌವ್ವಳ್ಳಿಗೆ ವ್ಯಾಪಾರಕ್ಕೆ ಬರತೊಡಗಿ ಎಷ್ಟೋ ವರ್ಷಗಳಾಗಿದ್ದವು. ಯಾವತ್ತೂ

ಯಾರು ತನ್ನ ಕಡೆ ಬೆರಳು ತೋರಿಸಿದ್ದಿಲ್ಲ. ಅಷ್ಟು ನಿಯತ್ತಿನಿಂದ ಬದುಕಿ ಇವತ್ತೇಕೆ ಇಂಥ ಅಪಮಾನಕ್ಕೆ. ಪಾಪಕ್ಕೆ ಒಳಗಾಗುವ ಕೆಲಸಕ್ಕೆ ಕೈ ಹಾಕಿದೆ ? ತಟ್ಟನೆ ಅವನ ಮನಸ್ಸಿಗೆ ಎಲ್ಲಾ ಮರಂಕಿಯಿಂದ ಅಂತ ಅನ್ನಿಸಿತು. 'ಆ ಅನಿಷ್ಟದ ಮುಂಡೆ ಯಾವ ಇಸಗಾಳೀಲಿ ಕಾಲಿಟ್ಟೊ ನನ್ನ ಗಾಚಾರ ಇಂಗಾಯ್ತು' ಎಂದು ಮನದಲ್ಲಿ ಹೆಂಡತಿಯನ್ನು ಶಪಿಸಿದ."

ಈ ವಿಚಾರಣೆ ಗೌವ್ವಳ್ಳಿಯ "ಪಡ್ಡೆ ಹುಡುಗರಿಗೆ" ತಮಾಷೆಯಾಗಿ ಕಾಣುತ್ತದೆ. ತಾವು ನ್ಯಾಯಕ್ಕೆ ಸೇರಿಸಿದ್ದು ಎಲ್ಲರೂ ಲೇವಡಿ ಮಾಡುವಂತಾಗುತ್ತದೆಂದು ಹೊಸ ಮನೆ ಕೆಂಪಗಣ್ಣಪ್ಪ ತಟ್ಟನೆ ಊಹಿಸುತ್ತಾರೆ. ಊರವರಿಗೆ ತಮ್ಮ ನ್ಯಾಯಾಂಗ ವ್ಯವಸ್ಥೆಯನ್ನು ನೇರವಾಗಿ ವಿರೋಧಿಸಲು ಹಿಂಜರಿಕೆಯಿದ್ದರೂ ಗೆಂಡೆತಿಮ್ಮನ ಅವಸ್ಥೆಗೆ ಮರುಗುತ್ತಾರೆ; ಮನಸ್ಸಿನೊಳಗೇ ಕನಿಕರ ತೋರುತ್ತಾರೆ. ಮಾಲೇಗೌಡರ ಪ್ರತಿಕ್ರಿಯೆ ಈ ಆಧುನೀಕರಣದ ಪ್ರಕ್ರಿಯೆಯನ್ನು ಇನ್ನೊಂದು ಕೋನದಿಂದಲೂ ಗ್ರಹಿಸುತ್ತದೆ: "ಮಾಲೇಗೌಡರಿಗೆ ನಿಜಕ್ಕೂ ಕೋಪ ಬಂದಿತ್ತು. 'ಬಡಪಾಯಿ ಸಿಕ್ಕಿದ ಅಂತ ಅವ್ನ ಕತ್ನೇ ಕುಯ್ದುಬುಡದ ಇವ್ರು' ಅಂತ ಮನಸ್ಸಿನಲ್ಲೇ ಅಂದುಕೊಂಡರು. ಇನ್ನೆರಡು ದಿನದಲ್ಲೇ ಆಗಬೇಕಿದ್ದ ಮದುವೆ ಕಾರ್ಯದಿಂದಾಗಿ ಬಾಯಿ ಮುಚ್ಚಿಕೊಂಡರೇ ಹೊರತು ಅದಿಲ್ಲದಿದ್ದರೆ ನ್ಯಾಯ ತಂದವರಿಗೆ 'ಮೊದ್ಲು ನಿನ್ನ ಸೊಸೆನೋ ಹೆಡ್ತಿನೋ ಬಿಗಿಯಾಗಿಟ್ಕೊಪೋಗೋ. ಇವನ್ಯಾಕೆ ತಪ್ತಿದ್ದ, ಅವ್ರು ಯೇಳ್ದೆ ಇದ್ರೆ ? ಮನೇವ್ರನ್ನ ಸರಿಯಾಗಿ ಇಟ್ಕಳೊ ಗಂಡಸ್ತನಾ ಇದ್ದಿದ್ರೆ....' ಇಲ್ಲಿ ತನ್ಕ ಬಂದಿದ್ದ ಮಾತನ್ನು ಹಾಗೆ ಕಚ್ಚಿಕೊಂಡು ಸುಮ್ಮನಾಗುತ್ತಿರಲಿಲ್ಲ. ಕಾದಂಬರಿಯ ಕೊನೆಯಲ್ಲಿ ನಿರೂಪಕನ ಉಪಸಂಹಾರವೂ ಈ ಗ್ರಹಿಕೆಯನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ: "ಈ ದುರಂತ ಕತೆ ಸಂಭವಿಸಿ ಇಪ್ಪತ್ತಮೂರು ವರ್ಷಗಳಾಗಿ ಹೋದವು. ಆದರೆ ಸಾಲುಂಡಿಯಲ್ಲಿ ಅದರಲ್ಲೂ ಗೌವ್ವಳ್ಳಿಯಲ್ಲಿ ಅವರ ಸಾವಿನ ಸುದ್ದಿ ಇನ್ನೂ ಹಸಿಹಸಿಯಾಗಿಯೇ ಇದೆ. ಗೌವ್ವಳ್ಳಿಯಂಥ ಕಗ್ಗಾಡು ಕೊಂಪೆಯ ಯಾವ ಕೇರಿಗೆ ಹೋದರೂ ಮರಂಕಿ ಬಿತ್ತಿದ ಬಯಕೆಗಳು ಬೆಳೆದು ಹೂ ಬಿಟ್ಟು ನಿಂತಿವೆ. ಇಷ್ಟರಲ್ಲಿ ಗೌವ್ವಳ್ಳಿಗೆ ಬಸ್ಸಿನ ದಾರಿಯೂ ಆಗಿ ಊರ ಹಿರಿಯರು ಎಷ್ಟು ಬಗೆಯಿಂದ ತಡೆದರೂ ಲೆಕ್ಕಿಸದೆ ಅವರ ಕಲ್ಪನೆಯ ಅನಿಷ್ಟಶಕ್ತಿಗಳು ನುಗ್ಗಿ ಆಕ್ರಮಿಸುವುದಿರಲಿ ಊರೇ ತಾನಾಗಿ ಆ ಶಕ್ತಿಗಳನ್ನೆಲ್ಲ ಆವಾಹನೆ ಮಾಡತೊಡಗಿದೆ. ಊರಿಗೊಬ್ಬಳೊ ಇಲ್ಲವೆ ಕೇರಿಗೊಬ್ಬಳೊ ಮರಂಕಿಯಿದ್ದ ಊರಿನಲ್ಲೀಗ ಪ್ರತಿ ಮನೆ ಮನೆಯಲ್ಲೂ ಅನೇಕ ಮರಂಕಿಯರು ಅವತರಿಸಿಬಿಟ್ಟಿದ್ದಾರೆ. ಇವತ್ತಿಗೂ ಗೌವ್ವಳ್ಳಿಯಲ್ಲಾಗಲೀ ಇಲ್ಲವೆ ಸಾಲುಂಡಿಯಲ್ಲಾಗಲೀ ಯಾರನ್ನಾದರೂ ಗೆಂಡೆತಿಮ್ಮ–ಮರಂಕಿಯರ ಬಗ್ಗೆ ಪ್ರಶ್ನಿಸಿದ ಕೂಡಲೆ ಅವರು ಕ್ಷಣ ಮೌನ ತಳೆದು ಮತ್ತೆ ಅವರಿಬ್ಬರ ಮರೆಯಲಾಗದ ದುರಂತವನ್ನು ನೆನೆದು ನಿಟ್ಟುಸಿರುಬಿಡುವುದನ್ನು ಕಾಣಬಹುದು. ಅಷ್ಟೇಕೆ ? ಗೆಂಡೆತಿಮ್ಮನಿಗೆ

ನ್ಯಾಯದವರು ಭಾರಿ ದಂಡ ವಿಧಿಸಿದ ಕೇವಲ ಎರಡು ದಿನಗಳ ನಂತರ ರತ್ನಿ ಮದುವೆಗೆ ಪ್ಯಾಟೆ ಜನ ಬಂದಾಗ: "ಪ್ಯಾಟೆಯ ಹುಡುಗಿಯರಿರಲಿ ನಡುವಯಸ್ಸಿನ ಹೆಂಗಸರೂ ಕೂಡ ಗೌಪ್ವಳ್ಳಿಯ ಪಾಲಿಗೆ ಅನಿಷ್ಟವೆನಿಸಿ. ಗೆಂಡೆತಿಮ್ಮನ ಗಡೀಪಾರಿಗೆ ಕಾರಣವಾಗಿದ್ದ ಸಮಸ್ತ ವಸ್ತುಗಳನ್ನು ತೊಟ್ಟಿದ್ದರು. ತಕ್ಷಣ ಗೌವ್ವಳ್ಳಿಯ ಹೆಣ್ಣು ಮಕ್ಕಳು ನಾಳೆ ರತ್ನಿಯ ಧಾರೆಗೆ ತಾವೂ ಕದ್ದಿಟ್ಟುಕೊಂಡಿದ್ದ ಷೋಕಿಯ ಅಮೂಲ್ಯ ಸಾಧನಗಳನ್ನು ನಿರ್ಭಯವಾಗಿ ಧರಿಸಿ ಮದುವೆ ಮನೆಯಲ್ಲಿ ಓಡಾಡಲು ನಿರ್ಧರಿಸಿಕೊಂಡರು". "ಪರಸಂಗದ ಗೆಂಡೆತಿಮ್ಮ" ಆಧುನಿಕತೆಗೆ ಪ್ರತಿಕ್ರಿಯಿಸುವ ರೀತಿ ಹಲವಾರು ಕನ್ನಡ ಕೃತಿಗಳನ್ನು ನೆನಪಿಗೆ ತರುತ್ತದೆ. ಕಾರಂತರ "ಕುಡಿಯರ ಕೂಸು", ಮಾಸ್ತಿಯವರ "ಕಾಕನಕೋಟೆ" ನಾಟಕ, ಕಂಬಾರರ ಹಲವಾರು ಕವನಗಳನ್ನು ಇಲ್ಲಿ ನೆನೆಯಬಹುದು. ಆಧುನಿಕತೆ ನಮ್ಮ ಸಮಾಜವನ್ನು ಮೊದಮೊದಲು ವಸ್ತುಗಳಾಗಿ ಪ್ರವೇಶಿಸಿ ಕ್ರಮೇಣ ಮೌಲ್ಯಗಳಾಗಿ ಪರಿವರ್ತಿತವಾಗುವ ಪ್ರಕ್ರಿಯೆಯನ್ನು ಆಧುನಿಕ ಕನ್ನಡ ಸಾಹಿತ್ಯ ಅದ್ಭುತವಾಗಿ ಸೆರೆ ಹಿಡಿದಿದೆ. ತೇಜಸ್ವಿ, ಲಂಕೇಶ್, ಮಹಾದೇವ ರಲ್ಲಿಯೂ ಇದು ಮುಂದುವರಿದಿದೆ. "ಹಿಂದ್ ಸ್ವರಾಜ್"ನಲ್ಲಿ ಗಾಂಧೀಜಿ ಒಂದು ಮುಖ್ಯ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಾರೆ: ಬ್ರಿಟಿಷರು ಇಂಡಿಯಾದಲ್ಲಿ ಯಾಕಿದ್ದಾರೆ? ಅವರೇ ಉತ್ತರಿಸುತ್ತಾರೆ: ಏಕೆಂದರೆ ನಾವು ಆಧುನಿಕ ನಾಗರಿಕತೆಯಿಂದ ಮೋಹಿತ ರಾಗಿದ್ದೇವೆ".

ಗೆಂಡೆತಿಮ್ಮ. ಅನಂತರ ಗೌವ್ವಳ್ಳಿ, ಸಾಲುಂಡಿ ಮರಂಕಿಯಿಂದ ಆಕ್ರಮಿತ ರಾದರೊ? ಆಕರ್ಷಿತರಾದರೊ? ಸ್ವತಃ ಮರಂಕಿ ಆಧುನಿಕತೆಯಿಂದ ಮರುಳಾದ ವಳೊ, ಅದನ್ನು ಪ್ರಜ್ಞಾಪೂರ್ವಕ ರೂಢಿಸಿಕೊಂಡಳೊ? ಆಲನಹಳ್ಳಿ ಕೃಷ್ಣ ಆಧುನಿಕತೆಯ ಪರವಾಗಿದ್ದಾರೋ, ವಿರೋಧವಾಗಿದ್ದಾರೋ?

ಮರಂಕಿ ಚೆಲುವೆ. 'ಪ್ಯಾಟೆ ರುಚಿ ಕಂಡವಳು'. ಗೆಂಡೆತಿಮ್ಮನ ತಾಯಿಗೆ ಅವಳು ಬಸವಣ್ಣನಂಥ ತನ್ನ ಮಗನನ್ನು ಕೋತಿಯಂತೆ ಕುಣಿಸುವ 'ಮಾಯಗಾತಿ'. ಮರಂಕಿಯ ಚೆಲುವು ಊರಿನವರಲ್ಲಿ ಅಸೂಯೆ ಹುಟ್ಟಿಸಿತ್ತು. "ಬಂಗಾರದಂಥ ಸೊಸೆ ಸಿಕ್ಕಿದಳೆಂದು ಬೀದಿಯಮ್ಮ ಬೀಗುತ್ತಿದ್ದಳಾದರೂ ಕ್ರಮೇಣ ಮರಂಕಿಯ ರೀತಿ ನೀತಿಗಳು ತಾವು ಇಷ್ಟುದಿನ ಬದುಕುತ್ತಿದ್ದ ಬದುಕಿಗೆ ತುಂಬಾ ವಿರುದ್ಧವಾದವೆಂಬುದು ಅರಿವಾಗುತ್ತ, ಅವಕ್ಕೆ ಹೊಂದಿಕೊಳ್ಳುವುದು ಸಾಧ್ಯವೇ ಆಗದ ಅನುಭವ ವಾಗುತ್ತಿದ್ದಂತೆ ಮನೆಯಲ್ಲಿ ಕಿರಿಕಿರಿ ಪ್ರಾರಂಭವಾಗತೊಡಗಿತ್ತು. ಮರಂಕಿಗೂ ಸಹ ತನ್ನ ಇಡೀ ಬದುಕೆಲ್ಲ ಹೆಣಗಾಡಿದರೂ ಈ ಮನೆಯ ರಿಪೇರಿ ಆಗುವುದೇ ಇಲ್ಲ ಅನ್ನಿಸಿತು. ಈ ನಡುವೆ ತುಂಬಾ ಸಂಕಟಕ್ಕೆ ಸಿಕ್ಕಿದವನೆಂದರೆ ಗೆಂಡೆತಿಮ್ಮನೆ." ಗೆಂಡೆತಿಮ್ಮನ "ಸಂಕಟ"ದ ಸ್ವರೂಪವೇ ಒಂದು ಅರ್ಥದಲ್ಲಿ ಕೃಷ್ಣರ ನಿಲುವುಗಳನ್ನೂ

ಸೂಚಿಸುತ್ತದೆ. "ಹೆಣ್ಣು ನೋಡಲು ಉಳಿವಾವಿಗೆ ಅವನು ಹೋಗುವ ಮುಂಚೆಯೇ ಅವಳನ್ನು ತನ್ನ ಮನೆಯಲ್ಲಿ ನೋಡಿದ್ದ. ದೂರದ ನೆಂಟು ಆಗ ಗೆಂಡೆತಿಮ್ಮನ ಅವ್ವ ಬೀದಿಯಮ್ಮ 'ನಮ್ಮ್ ಐದನಿಗೆ ಈ ಯೆಣ್ಣೆ ಪಸಂದಾಗಿದೆ' ಅಂತ ಆಡುತ್ತಲೇ ಗೆಂಡೆತಿಮ್ಮನಿಗೂ 'ಮಾಡ್ಕಂಡೀಯಾ ಮೊಗ' ಎಂದು ಕೇಳಿದಾಗ ಅವನು 'ಊಂ ಆ ಕೆಂಚಿ ಕಟ್ಕಂಡು ನಾನು ಕಾಲ ಅಕ್ದಂಗೆ' ಎಂದು ಬಾಯಿಮಾತಿಗೆ ಆಡಿದ್ದನಾದರೂ ಮದುವೆ ಆಗೋದಾದ್ರೆ ಒಳಗೊಳಗೆ "ಇವಳ್ನೆ ಯಾಕಾಗಬ್ಯಾಡ್ದು ಅಂತ ಕೂಡ ಅಂದುಕೊಂಡಿದ್ದ." ಪ್ರಸ್ತದ ರಾತ್ರಿ: "ಬೇರೆ ಹೆಂಗಸರಂತಲ್ಲದೆ ತನ್ನ ಹೆಂಡತಿ ರವಿಕೆ ಯೊಳಗೊಂದು ಬಾಡಿ ಮತ್ತು ತನ್ನೂರಲ್ಲಾಗಲಿ ಗೌವಳ್ಳಿಯಲ್ಲಾಗಲಿ ಯಾರೂ ಉಟ್ಟಿರದ ಸೀರೆಯೊಳಗೊಂದು ಬಿಳಿಯ ಲಂಗವನ್ನೂ ಉಟ್ಟುಕೊಂಡಿದ್ದುದು ಗೆಂಡೆತಿಮ್ಮನಿಗೆ ಸೋಜಿಗವೆನಿಸಿದಂತೆ ಖುಷಿಯನ್ನು ಉಂಟುಮಾಡಿತ್ತು. ಅಲ್ಲದೆ ಘಮಘಮಿಸುತ್ತಿದ್ದ ತನ್ನ ಹೆಂಡತಿಯ ಬಗ್ಗೆ ಯಾಕೊ ಒಂದು ಬಗೆಯ ಭಯವೂ ಉಂಟಾಗಿತ್ತು."

"ಅಬಚೂರಿನ ಪೋಸ್ಟಾಫೀಸು". "ಅವನತಿ". "ತುಕ್ಕೋಜಿ". "ಡಾಂಬರು ಬಂದುದು" ಮೊದಲಾದ ಎಪ್ಪತ್ತರ ದಶಕದ ಕಥೆಗಳೂ. "ಕರಿಮಾಯಿ". "ಮುಸ್ಸಂಜೆ...." ಮುಂತಾದ ಕಾದಂಬರಿಗಳೂ ಗ್ರಾಮೀಣ ಬದುಕಿಗೆ ಆಧುನಿಕತೆಯ ಪ್ರವೇಶದಿಂದುಂಟಾದ ಪರಿಣಾಮಗಳನ್ನು ಶೋಧಿಸುತ್ತವಷ್ಟೆ. ಆದರೆ ಕೇವಲ ಒಳವಸ್ತ್ರಗಳ ಪ್ರವೇಶದಿಂದಾಗಿ ಗ್ರಾಮೀಣ ಬದುಕಿನ ಹಲವು ಮೌಲ್ಯಗಳ ಪಲ್ಲಟ ವಾಗುವ ಪ್ರಕ್ರಿಯೆಯನ್ನು ಕೃಷ್ಣ ಚಿತ್ರಿಸಿರುವ ರೀತಿ ಅದ್ಭುತವಾದದ್ದು. ತಿಳಿ ಹಾಸ್ಯದಲ್ಲಿ ಆಕರ್ಷಕವಾಗಿ ಕಥೆ ಹೇಳುತ್ತಲೇ ಒಂದು ಜನಾಂಗದ ಚಲನಶೀಲ ಬದುಕನ್ನು ಅದರ ಗತಿವಿನ್ಯಾಸದಲ್ಲೆ ಕೃಷ್ಣ ಸೆರೆಹಿಡಿದು ಬಿಡುತ್ತಾರೆ. ಇದನ್ನು ಅವರು ಸ್ಥಳೀಯ ಆಚಾರ, ವಿಚಾರ, ಭಾಷೆ. ನುಡಿಕಟ್ಟುಗಳ ನೆಲೆಯಲ್ಲೇ ಸಾಧಿಸಿ ಬಿಡುತ್ತಾರೆ. ಕನ್ನಡದಲ್ಲಿ "ಪ್ರಾದೇಶಿಕ" ಕಾದಂಬರಿಗಳ ಒಂದು ಪರಂಪರೆಯೇ ಇದೆಯಷ್ಟೆ. ಕೃಷ್ಣರ ಮೂರು ಕಾದಂಬರಿಗಳನ್ನು ಈ ಪರಂಪರೆಗೂ ಸೇರಿಸ ಬಹುದಾಗಿದೆ. ಕೇವಲ ವಿವರಗಳ ಮಟ್ಟಿಗಲ್ಲ. ಆಶೋತ್ತರಗಳ ಮಟ್ಟದಲ್ಲೂ ಕೃಷ್ಣರ ಕೃತಿಗಳು ಕನ್ನಡದ ಅತ್ಯುತ್ತಮ "ಪ್ರಾದೇಶಿಕ" ಕಾದಂಬರಿಗಳ ಸಾಲಿಗೆ ಸೇರುತ್ತವೆ. ಹೀಗೆ ಕೃಷ್ಣ ವಾಸ್ತವತೆ ಮತ್ತು ನವ್ಯತೆ ಎರಡರಿಂದಲೂ ಪ್ರೇರಣೆ ಗಳನ್ನು ಪಡೆದು ಅವುಗಳಿಗೆ ತಮ್ಮ ಬಾಲ್ಯದ ಅನುಭವಗಳನ್ನು ಧಾರೆಯೆರೆಯುವ ಮೂಲಕ ಅನನ್ಯವೆನಿಸುವ ಕೃತಿಗಳನ್ನು ಬರೆದಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಹಲವು ಅವಿಸ್ಮರಣೀಯ ಪಾತ್ರಗಳ ಸಾಲಿಗೆ ಕಿಟ್ಟಿ, ಗೆಂಡೆತಿಮ್ಮ, ಮರಂಕಿ, ಭುಜಂಗಯ್ಯರೂ ಸೇರುತ್ತಾರೆ. ಅಂದರೆ ಕೃಷ್ಣ ಕನ್ನಡ ಕಾದಂಬರಿಯ ಪ್ರಧಾನ ಧಾರೆಯಲ್ಲೇ ಇದ್ದಾರೆ.

ಕನ್ನಡದ ಶ್ರೇಷ್ಠ ಕಾದಂಬರಿಕಾರರಂತೆ ಕೃಷ್ಣರೂ ಆಧುನಿಕತೆಯ ಪ್ರಶ್ನೆಯನ್ನು ambivalent ನೆಲೆಗಳಿಂದಲೇ ನೋಡಿದ್ದಾರೆ. ನಿಲುವುಗಳನ್ನು ತೆಗೆದುಕೊಳ್ಳಬಾರದು ಎಂಬ ಹಠದಿಂದಲ್ಲ. ತೆಗೆದುಕೊಳ್ಳಲಾಗುವುದಿಲ್ಲ ಎಂಬ ಅರಿವಿನಿಂದ. ಕೃಷ್ಣರೇ ಏಕೆ ? ಭಾರತೀಯ ಸಮಾಜವೇ ಈ ಬಗ್ಗೆ ದೊಡ್ಡ ಗೊಂದಲದಲ್ಲಿದೆ. ಆದ್ದರಿಂದಲೇ ಆಧುನಿಕತೆಯ ಲಾಭಗಳ ಬಗ್ಗೆ ಎಚ್ಚರವಿರುವಂತೆಯೇ ಅದರ ವಿಕೃತಿಗಳ ಬಗ್ಗೆ ಭಯವೂ ಇದೆ. ಗೆಂಡೆತಿಮ್ಮನಿಗೆ ತನ್ನ ಹೆಂಡತಿ ತಂದ ಶಿಷ್ಟತೆ. ನಯಗಾರಿಕೆ. ಶಿಸ್ತು, ಸೊಗಸುಗಳ ಬಗ್ಗೆ ಅಪಾರ ಮೆಚ್ಚುಗೆ, ಹೆಮ್ಮೆ ಇದ್ದವು. ಆದರೆ ಅವಳ ದುಂದುಗಾರಿಕೆ. ದಿನದಿಂದ ದಿನಕ್ಕೆ ಬೆಳೆಯುತ್ತಿದ್ದ ಹೊಸ ಹೊಸ ಬಯಕೆಗಳು ಅಸಹನೀಯವಾಗ ತೊಡಗಿದ್ದವು. ಶುಚಿತ್ವ. ವ್ಯವಸ್ಥೆ. ಸೌಂದರ್ಯಗಳ ಜೊತೆ ಮರಂಕಿ ವಿಲಾಸ–ವಿರಾಮಗಳ ಮೌಲ್ಯಗಳನ್ನೂ ತಂದಿದ್ದಳು. ಸುಧಾರಣೆಯ ಜೊತೆ ಹೊಸ ಒತ್ತಾಯಗಳನ್ನೂ ತಂದಿದ್ದಳು. "ಒಟ್ಟಾರೆ ಸಾಲುಂಡಿಯಲ್ಲಿ ಇಷ್ಟೊಂದುಕಾಲ ಇದ್ದುದರಲ್ಲೆ ತೃಪ್ತರಾಗಿ ನೆಮ್ಮದಿಯಿಂದ ಬದುಕುತ್ತ ಬಂದಿದ್ದ ಗೆಂಡೆತಿಮ್ಮನ ಮನೆಯಲ್ಲಿ ಈಗ ಪ್ರಕ್ಷುಬ್ಧ ವಾತಾವರಣ ಕವಿದು ಎಲ್ಲರೂ ಒಂದಲ್ಲ ಒಂದು ಬಗೆಯ ಮಾನಸಿಕ ಅಸ್ವಸ್ಥತೆಗೆ ಒಳಗಾಗಿದ್ದರು. ಸದಾ ಮುಚ್ಚಿರುತ್ತಿದ್ದ ಕಿಟಕಿ ಬಾಗಿಲುಗಳು ಮರಂಕಿ ಬಂದಾಗಿನಿಂದ ತೆರೆದುಕೊಂಡಿದ್ದೆ ಗಾಳಿ ಬೆಳಕಿನ ಜೊತೆಗೆ ಇಲ್ಲದ ಪೀಡೆ ಪಿಶಾಚಿಗಳೂ ಒಳಗೆ ಬಂದು ಹೀಗಾಯಿತು ಎಂಬುದು ಬೀದಿಯಮ್ಮನ ನಂಬಿಗೆಯಾಗಿತ್ತು." ಕೃಷ್ಣ ಯಾವತ್ತೂ ಸಂಕೇತಗಳನ್ನು ಪ್ರಜ್ಞಾಪೂರ್ವಕ ಆರೋಪಿಸಿ ಬರೆಯುವುದಿಲ್ಲ. ಆದರೆ ಅವರು ಎಷ್ಟು ದಟ್ಟವಾಗಿ ಮತ್ತು ಸಾಂದ್ರವಾಗಿ ಬರೆಯುತ್ತಾರೆಂದರೆ ಅವರ ವಾಕ್ಯಗಳು ಏಕಕಾಲದಲ್ಲಿ ದಾಖಲೆಗಳೂ, ವ್ಯಾಖ್ಯಾನಗಳೂ ಆಗಿರುತ್ತವೆ. ಕೃಷ್ಣ ತುಂಬ ಮನೋರಂಜಕವಾಗಿ ಕಥೆ ಹೇಳುತ್ತಾರೆ. ಯಾವುದೇ ಪ್ರಜ್ಞಾಪೂರ್ವಕ ತಾತ್ವಿಕ ಜಿಜ್ಞಾಸೆಯಲ್ಲಿ ತೊಡಗುವುದಿಲ್ಲ. ಕಥೆ ವೈಚಾರಿಕ ಭಾರವಿಲ್ಲದೆ ಸರಾಗವಾಗಿ ಓಡುತ್ತದೆ. ಆದರೆ ಕೃಷ್ಣ ವಾಕ್ಯಗಳನ್ನು ಹೆಣೆಯುವ ಕ್ರಮದಲ್ಲೇ ದೃಷ್ಟಿಕೋನ ತಾನಾಗಿ ಕಟ್ಟಿಕೊಳ್ಳುತ್ತದೆ. "ಗೆಂಡೆತಿಮ್ಮ"ದ ದ್ವಂದ್ವ ವಿನ್ಯಾಸ ಸರಳವಾದ ವಾಕ್ಯಗಳಲ್ಲಿ ತಾನಾಗಿ ಮೂಡುವ ಕ್ರಮ ನೋಡಿ: "ಬೆಳಿಗ್ಗೆ ಎದ್ದಕೂಡಲೆ ಮರಂಕಿ ಗಂಡನಿಗೆ ನಂಜನಗೂಡು ಹಲ್ಲುಪುಡಿಯಿಂದಲೆ ಹಲ್ಲುಜ್ಜುವ ರೂಢಿ ಮಾಡಿಸಿದ್ದಳು. ಮುಂಚೆ ಗೆಂಡೆತಿಮ್ಮ ಬೇವಿನಕಡ್ಡಿ ಇಲ್ಲ ಇಜ್ಜಲು ಚೂರಿನಲ್ಲಿ ಉಜ್ಜುತ್ತಿದ್ದ. ಮದುವೆಗೆ ಮುಂಚೆ ಅವನಿಗೆ ಹಲ್ಲುಜ್ಜುವ ರೂಢಿಯೇ ಇರಲಿಲ್ಲ. ಅವನ ಹಲ್ಲಿನ ಹಸಿರು ಹಳದಿ ಪಾಚಿ ಕಳಚಿದ್ದು ಮರಂಕಿಯ ಒತ್ತಾಯದಿಂದ. ವ್ಯಾಪಾರಕ್ಕೆ ಹೋಗಿಬಂದ ತಕ್ಷಣ ಸ್ನಾನಮಾಡಿ ಬಟ್ಟೆ ಬದಲಾಯಿಸುವುದು, ವಾರಕ್ಕೊಂದು ಸಲವಾದರೂ ಮುಖಕ್ಷೌರ ಮಾಡಿಸಿಕೊಳ್ಳುವುದು, ತಲೆಗೂದಲನ್ನು ಕೆದರಿಕೊಂಡ ಕೂಡಲೆ ಬಾಚಿಕೊಳ್ಳುವುದು ಇತ್ಯಾದಿ ಕೆಲವು ನಿಯಮಗಳು ಈಗ ಕಡ್ಡಾಯವಾಗಿಬಿಟ್ಟವು. ಈ ಎಲ್ಲಾ ಗೆಂಡೆತಿಮ್ಮನಿಗೆ

ಅಂಥ ಅಸಂದಕ್ಕೆ ಕಾರಣವಾಗಿರಲಿಲ್ಲ... "ಗೆಂಡೆತಿಮ್ಮನಿಗೆ ತನ್ನ ಹೆಂಡತಿಯು ಮಿತಿ ಮೀರಿದ ಬಡಿವಾರ ಒಳಗೊಳಗೆ ಅಸಹನೆಗೆ ಕಾರಣವಾಗಿ ಒಂದು ದಿನ ಕೋಪದಲ್ಲಿ ಹೊರಗೂ ಪ್ರಕಟಗೊಂಡಿತು.... 'ಏನಂದರೆ ? ನಾತ ಬಂದದ....ಬದ್ದೆ ಯೇನ್ಮಾಡದು ಯೇಳು. ರಣ ಬಿಸಿಲ್ನಲ್ಲಿ ಆಪಾಟಿ ದೂರ ನಡ್ಕಬಂದ್ರೆ. ನಾಯಕಸಾನಿಯಂಗೆ ಮೂರೊತ್ತೂ ಮೋಜ್ಮಾಡಕಂಡು ಕುಂತಿದ್ದಿ ನಿಂಗೆ ಅದೆಂಗೆ ಗೊತ್ತಾದದು ಯೇಳು" ಎಂದ. ಗೆಂಡೆತಿಮ್ಮನ ದ್ವಂದ್ವ ಅವನು ಗೌವ್ಳಹಳ್ಳಿಯಲ್ಲಿ ಆಧುನಿಕ ಒಳವಸ್ತ್ರಗಳನ್ನು ಗುಟ್ಟಾಗಿ ಮಾರುವಾಗಲೂ ವ್ಯಕ್ತವಾಗುತ್ತದೆ: "ಗೆಂಡೆತಿಮ್ಮ ಮಧ್ಯಾಹ್ನದ ತನಕ ಕಾಡುಪರಟೆಯಲ್ಲಿ ಕಾಲಕಳೆದು ಹೊತ್ತು ಇಳಿಯುತ್ತಿದ್ದಂತೆ ವ್ಯಾಪಾರಕ್ಕೆ ಹೊರಟ. ಈ ಸಲ ನಾಕು ಮನೆಯ ಹೆಣ್ಣುಮಕ್ಕಳಿಗೆ ಸ್ನೋ ಪೌಡರ್, ಗಮದೆಣ್ಣೆ, ಲಂಗ, ಬಾಡಿ, ಟೇಪು, ಮೈಸಾಬೂನು ಇತ್ಯಾದಿ ಹತ್ತಾರು ವಸ್ತುಗಳನ್ನು ತಂದಿದ್ದ. ಗೂಡೆಯನ್ನು ತಲೆಯ ಮೇಲೆ ಇಟ್ಟುಕೊಂಡ ಕೂಡಲೆ ಗೆಂಡೆತಿಮ್ಮನಿಗೆ ಹರ್ಷವೆನಿಸಿತು. ತನ್ನ ಗೂಡೆಯೊಳಗಿರುವ ವಸ್ತುಗಳಿಗಾಗಿ ತುದಿಗಾಲಿನಲ್ಲಿ ನಿಂತ ಹೆಣ್ಣುಮಕ್ಕಳು ನೆನಪಾದರು. ಜೊತೆಗೆ ಮರಂಕಿಯೂ ನೆನಪಿಗೆ ಬಂದಳು. ಗೆಂಡೆತಿಮ್ಮ ಬೀದಿಗಿಳಿದ. ಮುಂದೆ ಹೆಜ್ಜೆಯಿಟ್ಟಂತೆ ತಲೆಯಲ್ಲಿ ತಾನು ಮಾಡುತ್ತಿರುವುದು ಸರಿಯಲ್ಲ ಅನ್ನಿಸಿತು, ಇದು ಮರ್ಯಾದಸ್ತನ ರೀತಿಯಲ್ಲ, ಈ ಕಳ್ಳಬಾಳಿಗೆ ಯಾಕಾದರೂ ಒಳಗಾದೆ? ತನಗೆ ತಾನೇ ಪ್ರಶ್ನಿಸಿಕೊಂಡ. ತಟ್ಟನೆ ವಾಪ್ಸು ಹೋಗಿಬಿಡಬೇಕು, ಇನ್ನು ಮುಂದೆ ಸತ್ತರೂ ಇಂಥ ವ್ಯಾಪಾರ ಮಾಡುವುದು ಬೇಡ ಅಂತ ನಿರ್ಧರಿಸಿದವನೆ ಕಲ್ಲನ್ನು ಎಡವಿನಿಂತ. ಮತ್ತೆ ತನ್ನ ಬರುವಿಗಾಗಿ ಕಾದುನಿಂತ ಹೆಣ್ಣು ಮಕ್ಕಳ ನೆನಪಾಯಿತು. ಇದ್ದಕ್ಕಿದ್ದಂತೆ ಗೆಂಡೆತಿಮ್ಮನಿಗೆ ತನ್ನಿಂದ ಮನೆಯವರು ಕಾಣದ ಹಾಗೆ ಏನನ್ನಾದರೂ ತರಿಸಿಕೊಳ್ಳುವ ಹೆಣ್ಣುಮಕ್ಕಳೆಲ್ಲಾ ತನ್ನ ಹೆಂಡತಿ ಮರಂಕಿಯಾಗಿ ಅವರ ಅತ್ತೆಯರೆಲ್ಲಾ ತನ್ನ ಅವ್ವ ಬೀದಿಯಮ್ಮನಾಗಿ ಕಾಣಿಸಿಕೊಂಡರು. ತಕ್ಷಣ ತಾನು ಮಾಡುವುದು ತಪ್ಪಲ್ಲ ಅನ್ನಿತು. ಪಾಪ ಪ್ರಾಯದವರ ಆಸೆ ಮುದಿಗೊಡ್ಡುಗಳಿಗೇನು ಗೊತ್ತಾಗುತ್ತದೆ ಅಂತ ಅಂದುಕೊಂಡವನೆ ಯಾವ ತಳಮಳವೂ ಇಲ್ಲದೆ ತಂದಿದ್ದನ್ನೆಲ್ಲ ಮುಟ್ಟಿಸಿ ಜೊತೆಗೆ ಇನ್ನೂ ಐದು ಮನೆಯ ಸೊಸೆಯರ ಬೇಡಿಕೆಗಳನ್ನು ಪೂರೈಸುವ ಭರವಸೆಯನ್ನೂ ಕೊಟ್ಟು ಬಂದ. ಅವರೆಲ್ಲ ತನ್ನ ಹೆಂಡತಿಯಂತೆ ಸಿಂಗಾರ ಮಾಡಿಕೊಳ್ಳುವುದು, ಅವರ ಗಂಡಂದಿರು ತನ್ನ ಹಾಗೆ ವಿಸ್ಮಯದಿಂದ ಖುಷಿಪಡುವುದನ್ನೆಲ್ಲ ಕಲ್ಪಿಸಿಕೊಂಡ. ಕಡೆಗೆ ಕೆಟ್ಟ ವಿಚಾರವೊಂದು ಮನಸ್ಸಿಗೆ ನುಗ್ಗಿ ಒಳಗೇ ನಡುಗಿದ."

ಒಟ್ಟಿನಲ್ಲಿ ಗೆಂಡೆತಿಮ್ಮನ ಜಗತ್ತು ದೊಡ್ಡದಾಗುತ್ತಿತ್ತು: "ಗೆಂಡೆತಿಮ್ಮ ಮದುವೆಯಾದ ದಿನದಿಂದ ಇವತ್ತಿನ ತನಕ ದಿನವೂ ಒಂದಲ್ಲ ಒಂದು ಹೊಸ ಅನುಭವ, ಅನುಭವಗಳಿಗೆ ಒಳಗಾಗುತ್ತಲೇ ಇದ್ದ. ಅವನ ಜಗತ್ತು ದಿನಕಳೆದಂತೆ ದೊಡ್ಡದಾಗತೊಡಗಿತ್ತು. ಸಾಲುಂಡಿ, ಮೈಸೂರು ಗೌವ್ಳಹಳ್ಳಿಯ ಸರಹದ್ದಿನಲ್ಲಿ ತೃಪ್ತವಾಗಿದ್ದ

ಮನಸ್ಸಿಗೆ ಉಳಿಮಾವು ಹೊಸ ಹೊಸ ಸಾಧ್ಯತೆಗಳನ್ನು ತೆರದು ತೋರಿತ್ತು". ಗೆಂಡೆತಿಮ್ಮ ತನ್ನ ಸುತ್ತಲವರಿಗೀತ ಒಂದು ಹೆಜ್ಜೆ ಮುಂದಿಟ್ಟಿದ್ದ. ಅವನ ದುರಂತದ ಮೂಲ ಇರುವುದು ಇಲ್ಲಿ. ಬದಲಾವಣೆಯ ಕಷ್ಟಗಳನ್ನು ಸೂಕ್ಷ್ಮವಾಗಿ ದಾಖಲಿಸುವ ಕೃಷ್ಣ ಗೆಂಡೆತಿಮ್ಮನ ಸಾವನ್ನು ಆಧುನಿಕತೆಗೆ ಅನಿವಾರ್ಯ ಬಲಿ ಎಂಬಂತೆ ಚಿತ್ರಿಸಿದ್ದಾರೆ. ಆಧುನಿಕತೆಯ ಕುದುರೆಯ ಮೇಲೆ ಅವನು ಮೊದಲ ಸವಾರಿಗ. ಆದ್ದರಿಂದ ಅವನು ಮುಗ್ಗರಿಸಿದ. ಆದರೆ ಕುದುರೆ ಪಳಗಿತ್ತು. ಉಳಿದವರಿಗೆ ಅದನ್ನು ಏರುವುದು ಈಗ ಹೆಚ್ಚು ಸುಲಭವಾಗಿತ್ತು. ಸೇನೆಯ ಮುಂದಿನ ಸಾಲಿನ ಸೈನಿಕನಾಗಿದ್ದ ಗೆಂಡೆತಿಮ್ಮನ ಬಲಿ ಆಕಸ್ಮಿಕವೇನಲ್ಲ. ಮರಂಕಿಯ ದುರಂತವನ್ನೂ ಇದೇ ನೆಲೆಗಳಲ್ಲಿ ಅರ್ಥಮಾಡಿ ಕೊಳ್ಳಬೇಕು. ಕಾದಂಬರಿ ಮರಂಕಿಯನ್ನು ವೈಭವೀಕರಿಸುವುದೂ ಇಲ್ಲ, ಖಳನಾಯಕಿ ಯಂತೆಯೂ ಚಿತ್ರಿಸುವುದಿಲ್ಲ. ಅವಳು ಗೆಂಡೆತಿಮ್ಮನಿಗಿಂತ ಮೊದಲೇ ಆಧುನಿಕ ಳಾಗಿದ್ದಳು ಅಷ್ಟೆ. ಅವಳ ಗತಿಗೆ ಗೆಂಡೆತಿಮ್ಮ ಸ್ಪಂದಿಸುವುದು ಸಾಧ್ಯವಿರಲಿಲ್ಲ, ಮರಂಕಿಯನ್ನು ಲಗ್ನವಾದ ಮೇಲೆ ಗೆಂಡೆತಿಮ್ಮನಿಗೆ ತನಗೆ ನಾಲ್ಕಕ್ಷರ ಓದಲು ಬರುತ್ತಿದ್ದರೆ ಎಂಬ ಆಸೆ ಹುಟ್ಟುವುದು ಮಹತ್ತ್ವದ ಸಂಗತಿ. ಆದರೆ ಮರಂಕಿ ಬಾಹ್ಯದಲ್ಲಿ ತನ್ನ ಗಂಡನನ್ನು ಎಷ್ಟೇ ಆಧುನಿಕಗೊಳಿಸಿದರೂ ಅವನ ಅಂತಃಸ್ಸತ್ವ ಬೇರೆಯದೇ ಆಗಿತ್ತು. ಅವನು ಮರಂಕಿಯ ಆಸೆಗಳನ್ನು ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳುವಷ್ಟು ಪ್ರಜ್ಞಾವಂತನಾಗಿರಲಿಲ್ಲ. ಗೆಂಡೆತಿಮ್ಮನದು ಒಂದು ರೀತಿಯ ಪ್ರಿಮಿಟಿವ್ ಮುಗ್ಧತೆ. ಈ ಮುಗ ತೆ ಮರಂಕಿಯನ್ನು ಗಾಢವಾಗಿ ಪ್ರೀತಿಸುತ್ತಿತ್ತು. ಆದರೆ ಅದರ ಅಭಿವ್ಯಕ್ತಿಯ ನಯಗಾರಿಕೆ ಅವನಿಗೆ ಗೊತ್ತಿರಲಿಲ್ಲ. ಮರಂಕಿಯೂ ಗಂಡ ನನ್ನು ಪ್ರೀತಿಸಿದ್ದಳು. ಆದರೆ ಅವಳ ಮೈಮನಸ್ಸುಗಳಿಗೆ ಬೇಕಾದದ್ದು ಗೆಂಡೆತಿಮ್ಮ ನಿಂದ ಎಲ್ಲ ಸಮಯದಲ್ಲೂ ಸಿಗುತ್ತಿರಲಿಲ್ಲ. ಇದಕ್ಕೆ ಒಂದು ಕಾರಣ ಅವನ ಆರ್ಥಿಕತೆ ಯಾದರೆ ಇನ್ನೊಂದು ಕಾರಣ ಅವನ ಸಂವೇದನೆ. ಮರಂಕಿ, "ಗಂಡ ಇದ್ದಾಗ ಅವನಿಗೆ ಒಂದು ಚೂರು ವಂಚನೆಯನ್ನು ಮಾಡದೆ ಅವನನ್ನು ಸುಖಪಡಿಸುತ್ತಲೂ ಇದ್ದಳು". ಆದರೆ ಮಾದೇವ ಕೊಟ್ಟಂಥ ಸುಖವನ್ನು ಗೆಂಡೆತಿಮ್ಮ ಮರಂಕಿಗೆ ಒಂದು ದಿನವೂ ಕೊಟ್ಟಿರಲಿಲ್ಲ: "ಅವನು ತನ್ನ ಲಂಗ, ಬಾಡಿ, ಗಮದೆಣ್ಣೆಗಳಿಗೇ ಬೆರಗಾಗಿ, ಏನು ಮಾಡುವುದು ಅನ್ನುವುದೇ ತಿಳಿಯದೆ ಪೆದ್ದುಪೆದ್ದಾಗಿ, ಭಯದಿಂದಲೇ ಮುಟ್ಟಿ ಮುಟ್ಟಿ ಏನೊ ತಪ್ಪು ಮಾಡುತ್ತಿರುವವನಂತೆ ನಡುಗುತ್ತಲೇ ತನ್ನನ್ನು ಕೂಡಿದ್ದು, ಒಂದಿಷ್ಟೇ ಹೊತ್ತು ತುಂಬಾ ಅವಸರಿಸಿದವನೆ ತಣ್ಣಗಾಗಿ ಬಿಟ್ಟಿದ್ದು, ತನಗೆ ಬೇಕೆನಿಸುತ್ತಿ ದ್ದಾಗ ಅವನು ಗೊರೆಯುತ್ತಾ ಮಲಗಿದ್ದು ಎಲ್ಲಾ ನೆನಪಾಗಿ ನಗುಬಂತು". "ಮರಂಕಿಗೆ ತನ್ನ ಗಂಡನ ಬಗ್ಗೆ ಗಾಢವಾದ ಪ್ರೀತಿಯೂ ಜೊತೆಗೆ ಆಗೀಗ ಸಹಿಸಲಾಗದಂಥ ಜಿಗುಪ್ಸೆಯೂ ಉಂಟಾಗುತ್ತಿತ್ತು. ತಾನೆಷ್ಟೇ ಸಾಹಸಪಟ್ಟರೂ ತನ್ನ ಗಂಡ ನಂಜನ ಗೂಡಿನ ಮಾದೇವ ಇಲ್ಲವೆ ಗೌಡರ ಶಿವಣ್ಣನಂತೆ ಡಿಕಾವ್ ಆಗಿ ಕಾಣಲಾರ ಅನ್ನುವುದು ಸ್ಪಷ್ಟವಾಗಿತ್ತು". "ಒಟ್ಟಾರೆ ಅವರ ಬದುಕು ಯಾವ ಉಬ್ಬರವಿಳಿತಕ್ಕೂ ಸಿಕ್ಕದೆ

ಪ್ರಶಾಂತವಾಗಿ ಸಾಗಿತ್ತಾದರೂ ಮುರಂಕಿಗೆ ದಿನ ಕಳೆದಂತೆ ತುಂಬಾ ಬೇಜಾರಾಗ ತೊಡಗಿತು.

ಈ ಬೇಸರ ಮುರಂಕಿಗೆ ಅವಳ ಹೊಸ ಮೌಲ್ಯ ವ್ಯವಸ್ಥೆಯಿಂದ ಬಂದದ್ದು ಎನ್ನು ವುದು ಮುಖ್ಯ. ಆ ಮೌಲ್ಯ ವ್ಯವಸ್ಥೆಯಲ್ಲಿ ಅವಳ ಗಂಡ ಅವಳಿಗೆ ಜೊತೆಗಾರ ನಾಗಿರಲಿಲ್ಲ. ಅವನಿಗೆ ತನ್ನದೇ ಆದ ಮಿತಿಗಳಿದ್ದವು. ಹಾಗಾಗಿ ಮುರಂಕಿ, ಗೆಂಡೆ ತಿಮ್ಮ ಇಬ್ಬರ ಬಗ್ಗೆಯೂ ಸಹಾನುಭೂತಿ ಹುಟ್ಟುತ್ತದೆ. ಅಂದರೆ, ಕಾದಂಬರಿ ಗೆಂಡೆತಿಮ್ಮ-ಮುರಂಕಿಯರ ಚಟುವಟಿಕೆಗಳನ್ನು ಸರಳ ನೈತಿಕ, ಮಾನವೀಯ ನೆಲೆಯಿಂದ ಮಾತ್ರ ನೋಡದೆ ಈ ಹೊಸ ಮೌಲ್ಯ ವ್ಯವಸ್ಥೆ ಸೃಷ್ಟಿಸಿದ ಹೊಸ ಸಮಸ್ಯೆಗಳಾಗಿಯೂ ನೋಡುತ್ತದೆ. "ಗೆಂಡೆತಿಮ್ಮನ ಸಾವು ತನ್ನ ಕಠಿಣ ಕೃತ್ಯದಿಂದಲೇ ಆಯಿತೆಂಬ ಪಾಪ ಪ್ರಜ್ಞೆಗೆ ಗೌಪ್ಪಳ್ಳಿಯನ್ನು ಒಳಗು ಮಾಡಿದರೆ ಅತ್ತ ಸಾಲುಂಡಿಯಲ್ಲಿ ನೀರು ಕುಡಿದು ಊದಿಕೊಂಡು ವಿಕಾರವಾಗಿದ್ದ ಅವನ ಮೃತ ದೇಹದ ಜೊತೆಗೆ ನೇಣು ಹಾಕಿಕೊಂಡು ಸತ್ತ ಮುರಂಕಿಯ ಹೆಣವೂ ಇಡೀ ಊರಿಗೆ ದೊಡ್ಡ ಸಮಸ್ಯೆಯಾಗಿದ್ದವು" ಎಂದು ಕಾದಂಬರಿ ದಾಖಲಿಸುವಾಗ ಅದು ಪರ್ಯಾಯವಾಗಿ ಇವರೀರ್ವರ ಹೊಸ ಮೌಲ್ಯ ಗಳು ಆ ಹಳ್ಳಿಗಳಲ್ಲಿ ಸೃಷ್ಟಿಸಿದ್ದ ವಿಸ್ಮಯಗಳನ್ನೂ ಸೂಚಿಸುತ್ತದೆ. "ಶಿವಣ್ಣನನ್ನು ಇಟ್ಟುಕೊಳ್ಳುವುದು ಕೂಡ ಒಂದು ಸಾಮಾಜಿಕ ಪ್ರತಿಷ್ಠೆಯೆಂದೆ ತಿಳಿದಿದ್ದ ಅವಳ ಮುಗ್ಧ ಮನಸ್ಸನ್ನು ಯಾವ ನೈತಿಕ ಮೌಲ್ಯಗಳೂ ಕಾಡಿರಲಿಲ್ಲ. ತನ್ನ ತಿಳಿಗೇಡಿತನ ದಿಂದಾಗಿ ಸಂಭವಿಸಿದ ದುರಂತದಿಂದ ಅವಳಿಗೆ ಚೇತರಿಸಿಕೊಳ್ಳಲಾಗಲಿಲ್ಲ". ಅಂದರೆ ತಾನು ಅಪ್ಪಿಕೊಂಡ ಆಧುನಿಕತೆಯೊಂದಿಗೆ ಏಗುವುದು ಗೆಂಡೆತಿಮ್ಮನಿಗೆ ಸಾಧ್ಯವಿರಲಿಲ್ಲ. ಆಧುನಿಕತೆಯನ್ನು ಮುರಂಕಿ ಸರಿಯಾಗಿ ಅರ್ಥೈಸಿಕೊಂಡಿರಲಿಲ್ಲ. ಅದು ಅರ್ಥವಾಗುವ ಮೊದಲೇ ಅವರ ದುರಂತ ಸಂಭವಿಸಿತ್ತು. ಆದರೆ ಸಾಲುಂಡಿ, ಗೌಪ್ಪಳ್ಳಿಗಳು ಸಾಕಷ್ಟು ಆಧುನಿಕವಾಗಿಬಿಟ್ಟಿದ್ದವು. ಪರಂಪರೆ ನಿಧಾನವಾಗಿ ಆಧುನಿಕತೆಗೆ ದಾರಿ ಬಿಟ್ಟುಕೊಡಲಾರಂಭಿಸಿತ್ತು.

"ಕಾಡು"ನಲ್ಲಿ ಅಸ್ಪಷ್ಟವಾಗಿ ಕಾಣಿಸಿಕೊಂಡಿದ್ದ ಆಧುನೀಕರಣದ ಪ್ರಕ್ರಿಯೆ "ಗೆಂಡೆತಿಮ್ಮ"ದಲ್ಲಿ ಹೆಚ್ಚು ಮೂರ್ತವಾಗುತ್ತಾ ಬೆಳೆದರೆ ಕೃಷ್ಣರ ಮೂರನೆಯ ಕಾದಂಬರಿ "ಭುಜಂಗಯ್ಯನ ದಶಾವತಾರಗಳು"ದಲ್ಲಿ ಒಂದು ಪ್ರಜ್ಞಾಪೂರ್ವಕ ಆಶೋ ತ್ತರವಾಗಿ ಬೆಳೆಯುತ್ತದೆ. ಇಲ್ಲಿ ಕೃಷ್ಣರ ಹಿಂದೆ ಕಾರಂತರೂ ಇದ್ದಾರೆ. "ಮರಳಿ ಮಣ್ಣಿಗೆ"ಯಂತೆ "ಭುಜಂಗಯ್ಯನ ದಶಾವತಾರಗಳು" ಹೋಟೆಲ್ ಇಡುವುದನ್ನು ಹೊಸ ಉತ್ಪಾದನಾಕ್ರಮ, ಹೊಸ ಉದ್ಯೋಗಾವಕಾಶದ ನೆಲೆಗಳಲ್ಲೇ ಶೋಧಿಸಿಕೊಳ್ಳು ತ್ತದೆ. ಮೊದಲೆರಡು ಕಾದಂಬರಿಗಳಲ್ಲಿ ಕೃಷ್ಣ ಪ್ರಾದೇಶಿಕ ಅಳಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದರೆ ಇಲ್ಲಿ "ಭುಜಂಗಯ್ಯ ..."ದಲ್ಲಿ ವಿಸ್ತಾರವನ್ನು ಪ್ರಯತ್ನಿಸುತ್ತಾರೆ. ಹಾಗಾಗಿ

ಮೊದಲೆರಡು ಕಾದಂಬರಿಗಳಷ್ಟು "ಭುಜಂಗಯ್ಯ" ಸಾಂದ್ರವೆನಿಸದೆ ಹೋಗಬಹುದು. ಆದರೆ ಕೃಷ್ಣರ ಕಾದಂಬರಿಗಳ ಜಗತ್ತು ಬೆಳೆದಿದೆ. ಮೈಸೂರೂ ಅದರಲ್ಲಿ ನೇರವಾಗಿಯೇ ಪ್ರವೇಶಿಸಿದೆ. ಭುಜಂಗಯ್ಯ, ಕಿಟ್ಟಿ, ಗೆಂಡೆತಿಮ್ಮರ ಹಾಗೆ ಮುಗ್ಧನಲ್ಲ. ಕಿಟ್ಟಿ ಆಧುನಿಕ ಲೋಕವನ್ನು ಕಂಡು ಬೆಚ್ಚುತ್ತಾನೆ. ಗೆಂಡೆತಿಮ್ಮ ಅಳುಕಿನಿಂದ ಪ್ರವೇಶಿಸುತ್ತಾನೆ. ಆದರೆ ಭುಜಂಗಯ್ಯ ಯೋಚಿಸಿ, ಚರ್ಚಿಸಿ, ಪ್ರಜ್ಞಾಪೂರ್ವಕ ನಿರ್ಧಾರ ತೆಗೆದುಕೊಳ್ಳುತ್ತಾನೆ. ಪರ್ಯಾಯವಾಗಿ ಕೃಷ್ಣರ ಜೀವನದೃಷ್ಟಿಯೂ ಹೆಚ್ಚು ಮುಕ್ತವಾಗಿ, ವ್ಯಾಪಕವಾಗಿ ಬೆಳೆಯುತ್ತದೆ. "ಕಾಡು"ನಲ್ಲಿ ವಾಸ್ತವತೆ – ನವ್ಯತೆಗಳ ಕಿರು ಇಕ್ಕಟ್ಟಾದ ದಾರಿಯಲ್ಲಿ ತಮ್ಮ ಪ್ರಯಾಣ ಪ್ರಾರಂಭಿಸಿದ ಕೃಷ್ಣ "ಗೆಂಡೆತಿಮ್ಮ"ದಲ್ಲಿ ರಸ್ತೆಗೆ ಇಳಿದಿದ್ದರೆ "ಭುಜಂಗಯ್ಯ"ದಲ್ಲಿ ವಾಸ್ತವತೆಯ ಹೆದ್ದಾರಿಗೇ ಬಂದಿದ್ದಾರೆ. 1982ರಲ್ಲಿ ಪ್ರಕಟವಾದ ಈ ಕಾದಂಬರಿ ಕನ್ನಡದಲ್ಲಿ ವಾಸ್ತವಮಾರ್ಗ ಇನ್ನೂ ಮುಗಿದಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲ, ಈ ಮಾರ್ಗದಲ್ಲಿ ನಾವು ನಡೆಯಬೇಕಾದಷ್ಟು ನಡೆದಿಲ್ಲ ಎಂಬುದನ್ನೂ ಸೂಚಿಸುತ್ತದೆ. ಇನ್ನಷ್ಟು ವಾಸ್ತವವಾದೀ ಕಾದಂಬರಿಗಳನ್ನು ನಿರೀಕ್ಷಿಸುತ್ತದೆ.

ಭುಜಂಗಯ್ಯ ಮೂಲಭೂತವಾಗಿ ಒಬ್ಬ ರೈತ. ಪರಂಪರಾಗತವಾಗಿ ವ್ಯವಸಾಯಮಾಡಿಕೊಂಡು ಬಂದವನು. ಮಳೆಯನ್ನೇ ನೆಚ್ಚಿಕೂರುವ ಕಷ್ಟ ಅವನಿಗೆ ಗೊತ್ತು. ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದು ಹೇಗೆ ಎಂದು ಆಗಾಗ ಚಿಂತಿಸುತ್ತಾನೆ. ಹೊಸದೇನನ್ನಾದರೂ ಮಾಡಬೇಕೆನ್ನುವ ಕುತೂಹಲದ, ಸಾಹಸದ ಪ್ರವೃತ್ತಿ ಈ ಅವಶ್ಯಕತೆಯೊಡನೆ ಸೇರಿ ತುಂಬ ಚಡಪಡಿಕೆಯಲ್ಲಿದ್ದಾನೆ. ಅಂದರೆ ಆಧುನಿಕತೆಯನ್ನು ಅವನು ಬಯಸುವಂತೆ ಅದು ಅವನಿಗೆ ಅನಿವಾರ್ಯವೂ ಆಗಿದೆ: "ಗದ್ದಿಗೆ ಬಯಲಿಗೆ ನಾಲೆ ಬಂದಾಗ ಅಲ್ಲೇ ಹೋಗಿ ಊರವರೆಲ್ಲ ಜಮೀನು ಹಿಡಿಯುವ ಅಂತ ತಾನೆ ಹತ್ತಾರು ಜನಕ್ಕೆ ಒತ್ತಾಯಿಸಿದರೂ ಒಪ್ಪಲಿಲ್ಲ. ತಮಿಳರೆಲ್ಲ ಬಂದು ಆ ಬಯಲನ್ನೇ ಆಕ್ರಮಿಸಿಕೊಂಡರು. ಈಗ ಅವರೆಲ್ಲ ಮಜವಾಗಿದ್ದಾರೆ. ನಮ್ಮ ಹಾಗೆ ಯಾವ ಆತಂಕವೂ ಇಲ್ಲ. ಕೊಡಗಿನಲ್ಲೆಲ್ಲೊ ಮಳೆ ಬಿದ್ದರೆ ಸಾಕು ಇವರ ಗದ್ದೆಗಳಿಗೆಲ್ಲ ನೀರು ತುಂಬುತ್ತದೆ. ಇವರೇ ನಿಜವಾಗಿ ಪುಣ್ಯವಂತರು. ತಾವು ಕೇಳಿಕೊಂಡು ಬಂದಿದ್ದು ಬರೀ ಕಷ್ಟಪಡುವುದನ್ನೆ ಅಂತ ಕಾಣುತ್ತೆ".

ಭುಜಂಗಯ್ಯ ಈ ನೆಲದಲ್ಲೇ ಬೇರು ಬಿಟ್ಟವನು. ಆದರೆ ಪ್ರಪಂಚವನ್ನೂ ಕಂಡವನು. ಹಾಗಾಗಿ ಒಂದು ರೀತಿಯ ಉದಾರವಾದಿತ್ವ ತಾನೇ ಬಂದುಬಿಟ್ಟಿದೆ: "ಭುಜಂಗಯ್ಯನಿಗೆ ಶಿವಪೂಜೆಯ ನಿಷ್ಠೆ ಲಿಂಗ ಕಟ್ಟಿಸಿಕೊಂಡ ದಿನದಿಂದ ಒಗ್ಗಿ ಬಂದಿತ್ತು. ಯಾವತ್ತೂ ಪೂಜೆಯಿಲ್ಲದೆ ಉಣ್ಣುತ್ತಿರಲಿಲ್ಲ. ಆದರೆ ಆಗೀಗ ಕೋಟೆಗೊ ಮೈಸೂರಿಗೊ ಹೋದಾಗ ಅದೂ ತಮ್ಮ ಲಿಂಗಾಯಿತರ ಹೋಟೆಲುಗಳು

ಸಿಕ್ಕದಿದ್ದಾಗ ಬ್ರಾಹ್ಮಣರ ಹೋಟೆಲಿನಲ್ಲಿ ಶಿವಪೂಜೆಯಿಲ್ಲದೆ ತಿಂದುಬಿಟ್ಟದ್ದು ಒಂದೆರಡು ಸಲ ತಪ್ಪು ಮಾಡಿದೆನೆಂಬ ಭಯಕ್ಕೆ ಒಳಗಾಗಿದ್ದರೂ ಕ್ರಮೇಣ ಆ ಭಯದಿಂದ ಮುಕ್ತನಾಗಿದ್ದ."

ಭುಜಂಗಯ್ಯನ ಮನೋಭಾವಕ್ಕೆ ಮತ್ತೊಂದು ಸರಸ ಸಂಭಾಷಣೆಯನ್ನು ಗಮನಿಸೋಣ: "ಬಿಗುಮಾನ ಬಿಟ್ಟು ಭುಜಂಗಯ್ಯ ತಮಾಷೆಯಾಗಿ ಹೆಂಡತಿಗೆ 'ಅಲ್ಲ ಕಣೆ ಏನಂದೆ ? ಮಳೇನೂ ಮಕ್ಕಳ್ನೂ ದೇವ್ರು ಕೊಡ್ತಾನೆ ಅಂದ್ಯ' ? ಎಂದಾಗ ಪಾರ್ವತಿ "ಇನ್ನೇನು ಮತ್ತೆ" ಎಂದು ಗಂಡನನ್ನೆ ನೋಡಿದಳು. ತಾನು ಹೇಳಿದ್ದರಲ್ಲಿ ಯಾವ ತಪ್ಪೂ ಇಲ್ಲ ಎಂಬ ನಂಬಿಕೆಯಿಂದ ಭುಜಂಗಯ್ಯ ಮತ್ತೆ ನಗುತ್ತಲೆ 'ನೋಡು ನಿನಗೆ ಎರಡು ಮಕ್ಕಳಾದದ್ದು ನನ್ನಿಂದಲೋ ದೇವರಿಂದಲೊ' ಎಂದ ಕೂಡಲೆ ಪಾರ್ವತಿಗೂ ನಗು ಬಂತು." ಮನುಷ್ಯ ಪ್ರಯತ್ನಗಳಿಗೆ ಭುಜಂಗಯ್ಯ ಕೊಡುವ ಒತ್ತು ಮುಂದೆ ಇಡೀ ಕಾದಂಬರಿಯ ವಿನ್ಯಾಸವನ್ನೇ ಕಟ್ಟುತ್ತದೆ.

ಆಧುನಿಕತೆಯೆಂಬುದು ಶೂನ್ಯದಿಂದ ಉದ್ಭವಿಸುವಂಥ ಮಾಂತ್ರಿಕತೆ ಏನೂ ಅಲ್ಲವಷ್ಟೆ. ಆಧುನಿಕತೆಯ ಪ್ರವೇಶಕ್ಕೆ ಸಾಮಾಜಿಕ ಒತ್ತಡಗಳೂ, ಅನಿವಾರ್ಯತೆಗಳೂ ಕಾರಣವಾಗಿರುತ್ತವೆ. ಮಾದಳ್ಳಿಯನ್ನೇ ತೆಗೆದುಕೊಳ್ಳಿ. ಊರಿಗೆ ಬಸ್ಸು ಬಂದಿತ್ತು. ಬೇರೆಬೇರೆ ಹಳ್ಳಿಗಳಿಂದ ಒಂದು ನಿರ್ದಿಷ್ಟ ಜಾಗದಲ್ಲಿ ಬಸ್ಸು ಹತ್ತಲು ಪ್ರಯಾಣಿಕರು ಬರುತ್ತಿದ್ದರು. ಅಂದರೆ ಈ ಪ್ರಯಾಣಿಕರಿಂದಾಗಿ ಒಂದು ಹೊಸ ಸಾಮಾಜಿಕ ಸಂಸ್ಥೆಯ ನಿರ್ಮಾಣವಾಗುತ್ತದೆ. ಈ ಬಸ್ ಪ್ರಯಾಣಿಕರಿಗೆ ತಮ್ಮದೇ ಆದ ಸಮಸ್ಯೆಗಳಿರುತ್ತವೆ, ಅವಶ್ಯಕತೆಗಳಿರುತ್ತವೆ. ಈ ಸಂದರ್ಭವನ್ನು ಗಮನಿಸಿ:

"ಇಷ್ಟರಲ್ಲಾಗಲೆ ಬರಬೇಕಿದ್ದ ಬಸ್ಸೇಕೋ ಇವತ್ತು ಇನ್ನೂ ಬಂದಿರಲಿಲ್ಲ. ಕೆಲವು ಪ್ರಯಾಣಿಕರು ಬಿಸಿಲ ಝಳಕ್ಕೆ ಆಗಲೇ ತೂಕಡಿಸುತ್ತಿದ್ದರು. ಮತ್ತೆ ಕೆಲವರು ಬಾಯಾರಿಕೆಯಿಂದ ಪರದಾಡುತ್ತ ಇಲ್ಲೆಲ್ಲೂ ನೀರು ಸಿಕ್ಕುವುದಿಲ್ಲವೆಂದು ತಿಳಿದಿದ್ದರೂ ಬಾಯಿ ಚಪಲಕ್ಕೆ "ನೋಡ್ರಪ್ಪ ಇಲ್ಲೆಲ್ಲಾದ್ರೂ ಕುಡಿಯಾಕಿಷ್ಟು ನೀರು ಸಿಕ್ಕದಾ ?" ಎಂದು ಪ್ರಶ್ನಿಸಿ ತಾವೇ ತೆಪ್ಪಗಾದರು. ಈ ಜಾಗದ ಸಮೀಪ ಎಲ್ಲೂ ನೀರಿರಲು ಸಾಧ್ಯವೇ ಇಲ್ಲವೆಂಬುದು ಎಲ್ಲರಿಗೂ ವೇದ್ಯವಾಗಿತ್ತು. ತುಂಬಾ ಬಾಯಾರಿದ್ದವನೊಬ್ಬ ಸ್ವಲ್ಪ ಕಟುವಾಗಿ "ಇಂಥ ಸುಡುಗಾಡು ಜಾಗ ನಾನೆಲ್ಲೂ ನೋಡಿಲ್ಲ ಬುಡ್ರಿ, ಕುಡಿಯಾಕೆ ಒಂದು ತೊಟ್ಟು ನೀರು ಸಿಕ್ಕಲ್ಲ ಅಂದ್ರೆ" ಎಂದವನೆ "ಅಲ್ಲಿ ಎಲ್ಲೆಲ್ಲೋ ಹೋಟ್ಲು ಅಂತ ಇಡ್ತಾ ಅವ್ರೆ ಈ ಜಾಗದಲ್ಲಿ ಯಾಕೆ ಇಡ ಬ್ಯಾಡ್ದು ? ದಿನಾ ಇಷ್ಟೊಂದು ಜನ ಬರ್ತಾರೆ ಒಂದೊಂದು ಕಾಫಿ ಕುಡದ್ರೂ ಸಾಕು, ಸರಿಯಾಗೇ ವ್ಯಾಪಾರ ಆಯ್ತದಪ್ಪ" ಎಂದಾಗ ಭುಜಂಗಯ್ಯನ ಕಿವಿಗಳು ಚುರುಕಾದವು. ಆ ಪ್ರಯಾಣಿಕನ ಮಾತುಗಳಲ್ಲಿ ಅರ್ಥವಿತ್ತು. ಅವನತ್ತ

ಕುತೂಹಲದಿಂದ ನೋಡಿದ. ಮತ್ತೆ ಪ್ರಯೋಣಿಕ ತನ್ನ ಮಾತಿಗೆ ಬೆಲೆ ಸಿಕ್ಕಿತೆಂಬ ಖುಷಿಯಿಂದ ಸ್ಫೂರ್ತಿಗೊಂಡವನಂತೆ "ನೋಡಿ ಸ್ವಾಮಿ ಮಾದಾಪುರದ ಕೂಡುರಸ್ತೆ ಇಲ್ಲವಾ ಅಲ್ಲೂ ಮೊದಲು ಇಂಗೇ ಇತ್ತು. ಯಾವನೋ ಒಬ್ಬ ಬಂದು ಬರೀ ಝೋಪಡಿ ಹಾಕಿ ಹೋಟ್ಲಿಟ್ಟಾ ನೋಡಿ. ಇವತ್ತು ಅವನನ್ನು ಯಾರು ಹಿಡ ಕಳಂಗಿಲ್ಲ. ಎರಡೇ ವರುಸಕ್ಕೆ ಗಟ್ಟಿಕುಳ ಆಗ್ಬುಟ್ಟ. ಅವನ ಮನೆಯೇನು ಕೇಳ್ತೀರಿ? ಮೊನ್ನೇ ಹೋಗಿದ್ದೆ. ಆಗ ಖುದ್ದಾಗಿ ಅವನೆ ಯೇಳ್ದ. ನಾಕೆಕರೆ ಗದ್ದೆ ಬ್ಯಾರೆ ತಕ್ಕೊಂಡನಂತೆ. ನಾವು ರಾತ್ರಿ ಹಗಲೂ ತಿಕಕೆರೆಯಾಕೆ ಪುರಸತ್ತಿಲ್ದೆ ಗೇದ್ರೂ ನಮ್ಮ ಯಿಟ್ಟು ಬಟ್ಗೆ ಸಾಕಾಗಕಿಲ್ಲ. ನಮ್ದೇನು ಜಲ್ಮಾನೊ ಕಾಣೆ" ಎಂದ.

"ಭುಜಂಗಯ್ಯನಿಗೆ ಹಠಾತ್ತನೆ ದಿವ್ಯದರ್ಶನವಾದಂತಾಯಿತು. ತನಗೆ ಬೆಳಗಿ ನಿಂದಲೂ ಅನ್ನಿಸುತ್ತಿದ್ದುದಕ್ಕೆ ಥಟ್ಟನೆ ಆಕಾರ ಬಂದಂತಾಯಿತು. ಯಾಕಾಗಿ ಏನು ಬೇಕಾಗಿ ತಾನು ಹುಡುಕುತ್ತಿದ್ದೆ ಅನ್ನುವುದೀಗ ತಾನಾಗಿಯೇ ಅವನ ಕಣ್ಣಮುಂದೆ ತೆರೆದುಕೊಂಡಿತು. ಮೊದಲಿನಿಂದಲೂ ತನಗೆ ವ್ಯವಸಾಯದ ಜೊತೆಗೆ ಬೇರೆ ಏನಾದರೂ ಮಾಡಬೇಕು, ಮುಂದೆ ಬರಬೇಕು ಅನ್ನುವ ಬಯಕೆ ಅದಮ್ಯವಾಗಿ ದ್ದರೂ ಏನು ಮಾಡಬೇಕೆಂಬುದು ಸ್ಪಷ್ಟವಾಗಿ ಹೊಳೆದಿರಲಿಲ್ಲ. ಈಗ ಅವನಿಗೆ ಅವನ ಮುಂದಿನ ಯೋಜನೆಗಳ ಒಂದು ಮಾದರಿ ಸವಿವರಪೂರ್ಣವಾಗಿಯೇ ಒಡಮೂಡತೊಡಗಿತು.

ಹೋಟೆಲ್ ಇರುವುದು ಭುಜಂಗಯ್ಯನಿಗೆ ಕೇವಲ ಒಂದು ಹವ್ಯಾಸಿ ಸಾಹಸದ ಪ್ರಶ್ನೆ ಅಲ್ಲ. ಹೊಸ ಉತ್ಪಾದನಾ ವ್ಯವಸ್ಥೆ, ಹೊಸ ಉದ್ಯೋಗಾವಕಾಶಗಳ ಮೂಲಕ ವರ್ಗಸ್ಥಿತಿಯನ್ನು ಮೀರಬಹುದೆಂಬ ಯೋಚನೆ ಅಸ್ಪಷ್ಟವಾಗಿ ಅವನ ಮನಸ್ಸಿನಲ್ಲಿದೆ. ಅವನ ಮನಸ್ಸಿನಲ್ಲಿ ಮಾತ್ರವಲ್ಲ ಇನ್ನೂ ಅನೇಕರಿಗೆ ಇದೆ. ಪರಂಪರಾಗತ ವ್ಯವ ಸಾಯ ತಮಗೆ ಎಲ್ಲ ಸುಖಸಂತೋಷಗಳನ್ನೂ ತಂದುಕೊಡಲಾರವು: ತಮ್ಮ ಎಲ್ಲ ಅವಶ್ಯಕತೆ–ನಿರೀಕ್ಷೆಗಳನ್ನೂ ಪೂರೈಸಲಾರದು ಎಂಬ ತಿಳುವಳಿಕೆ ಒಳಗಿನಿಂದ ಮೊಳೆ ಯುತ್ತಿದೆ. ಬದಲಾವಣೆಯ ಸ್ವರೂಪದ ಬಗ್ಗೆ ಖಚಿತವಾಗದಿದ್ದಾಗಲೂ ಬದಲಾ ವಣೆಯ ಅನಿವಾರ್ಯತೆಯ ಅರಿವು ಗುಪ್ತವಾಗಿ ಇದ್ದೇ ಇದೆ. ಭುಜಂಗಯ್ಯನಂಥ ವರಲ್ಲಿ ಅದು ತೀವ್ರವಾಗಿ ಅಭಿವ್ಯಕ್ತಿಪಡೆದುಕೊಳ್ಳುತ್ತದೆ ಅಷ್ಟೆ. "ತನ್ನ ಅಪ್ಪ ಮತ್ತೆ ಅವನ ಅಪ್ಪ ಎಲ್ಲರೂ ಬದುಕಿದ್ದು ಹೀಗೆಯೆ. ಆಠಕ್ಕೆ ಏರಲಿಲ್ಲ ಮೂರಕ್ಕೆ ಇಳಿಯ ಲಿಲ್ಲ. ಯಾರೊಬ್ಬರೂ ಗೆಜ್ಜಲು ನೆಲ ಕೆರೆಯುವ ಬವಣೆಯಿಂದ ತಪ್ಪಿಸಿಕೊಳ್ಳ ಲಾಗಲಿಲ್ಲ. ತಾನು ಚಿಕ್ಕವನಾಗಿದ್ದಾಗ ಈಗ ಇರುವಂತೆ ಬಸ್ಸಿನ ಅನುಕೂಲತೆಯಿದ್ದರೆ, ಪೇಟೆಯಲ್ಲಿ ಒಬ್ಬಿಬ್ಬರು ಅಪ್ಪನಿಗೂ ತಿಳಿದವರಿದ್ದರೆ ತಾನೂ ಓದಿ ಒಳ್ಳೆಯ ಕೆಲಸಕ್ಕೇ ಹೋಗಬಹುದಿತ್ತು. ತನ್ನ ವಾರಿಗೆಯವನೆ ಪಕ್ಕದ ಸರಗೂರಿನ ಗೌಡರ ಮಗ ಈಗ

ಎಲ್ಲೋ ಶೇಕದಾರನಾಗಿದ್ದಾನೆ. ಅರ್ಧ ಊರೇ ಈಗ ಅವನ ಅಪ್ಪನದಾಗಿದೆ. ಯಾವಾಗ ಊರಿಗೆ ಬಂದರೂ ಸಾವಿರ ಸಾವಿರ ಅಪ್ಪನಿಗೆ ಕೊಟ್ಟು ಹೋಗುತ್ತಾನಂತೆ. ಅಂಥ ಭಾಗ್ಯ ತನ್ನದಾಗಿದ್ದರೆ ?" ಎಂದು ಭುಜಂಗಯ್ಯ ಯೋಚಿಸುತ್ತಾನೆ.

"ಮರಳಿಮಣ್ಣಿಗೆ"ಯ ಈ ಒಂದು ಸಂದರ್ಭವನ್ನು ಗಮನಿಸಿ : "ವಾಸ್ತೇವ ಗುರಿಕಾರರ ಹಿರೇಮಗನು ಕುಂದಾಪುರದಲ್ಲಿ ಈಗಾಗಲೇ ವಕೀಲನಾಗಿ ಬಂದಿದ್ದನೆಂದೂ. ತಮ್ಮ ಊರಿನ ಕಕ್ಷಿಗಾರರೆಲ್ಲರೂ ಅವರಲ್ಲಿಗೆ ಇರುವೆಗಳಂತೆ ಸಾಲುಸಾಲಾಗಿ ಹೋಗಿ ರೂಪಾಯಿಗಳನ್ನು ಸುರಿಯುತ್ತಾ ಇದ್ದಾರೆ ಎಂಬುದನ್ನು ಕೇಳಿ. 'ತನ್ನ ಮಗ ಲಚ್ಚಣ್ಣ ವಕೀಲನಾದರೇನು' ಎಂದು ಮಾಡಬಾರದ ಯೋಚನೆ ಮಾಡುತ್ತಾರೆ. ಅಲ್ಲದೆ ಲಚ್ಚ ವೈದಿಕ ಬಿದ್ದಿರುವ ವಿಷಯದಲ್ಲಿ ಅವರಿಗೂ ಅತೃಪ್ತಿಯೇ ಸರಿ. ಕಾರಣ – ಶೀನ ಮಯ್ಯರ ಮಕ್ಕಳು. ನಡೆಯಲು ಬರುವ ಮೊದಲೇ ಬೆಂಗಳೂರಿಗೆ ಹೋಗಿ ರಾಶಿ. ರಾಶಿ ರೂಪಾಯಿಗಳನ್ನು ಸಂಪಾದಿಸುತ್ತಿರುವುದು ಅವರ ಕಣ್ಣಿಗೆ ಬಂದಿದೆ. ಆ ಮಕ್ಕಳಿಂದ ಶೀನಮಯ್ಯ, ಶೀನಮಯ್ಯರಾಗಿ ಮೆರೆದಾಡುವುದು ಅವರಿಗೆ ತಿಳಿದಿದೆ. ಅವನು ಗುರಿಕಾರನಾಗಿರುವಾಗ, ತನ್ನ ಮಗನಿಂದ ತನಗೆ ಯಾಕೆ ಕೀರ್ತಿ ಬರಬಾರದು? ಅವನ ಮಕ್ಕಳು ಕಾಫಿಲೋಟ ತೆರೆದು ಅಲ್ಲಿ ಹಣ ಮಾಡಿದರೆ, ತನ್ನ ಮಗನು ಇಂಗ್ಲಿಷನ್ನು ಕಲಿತು, ವಕೀಲನಾಗಿ ಊರಲ್ಲೇ ಯಾಕೆ ಹಣ ದೋಚಬಾರದು? – ಎಂಬ ಕನಸನ್ನು ಕಾಣತೊಡಗಿದರು."

ಅನ್ನದಾನವನ್ನು ಶ್ರೇಷ್ಠದಾನವೆಂದು ತಿಳಿದ. ಸಂಸ್ಕೃತ ಅಧ್ಯಯನವನ್ನೇ ಶ್ರೇಷ್ಠವಿದ್ಯೆ ಎಂದು ತಿಳಿದ ಬ್ರಾಹ್ಮಣರಿಗೆ ಅನ್ನ ಮಾರಿ ಹಣ ಸಂಪಾದಿಸುವ. ಮ್ಲೇಚ್ಛ ಭಾಷೆಯಾದ ಇಂಗ್ಲಿಷನ್ನು ಕಲಿಯುವ. ಆ ಮೂಲಕ ಜೀವನ ನಿರ್ವಹಣೆ ಮಾತ್ರವಲ್ಲ. ಸಾಫಲ್ಯವನ್ನೂ ಗಳಿಸುವ ಅಪೇಕ್ಷೆಯ ಹಿಂದಿನ ಪ್ರೇರಣೆಗಳೇನು ? ಭುಜಂಗಯ್ಯ ನಂಥ ರೈತಾಪಿವರ್ಗಕ್ಕೂ ಇದೇ ರೀತಿಯ ಕನಸುಗಳಿವೆಯಲ್ಲ ? 1942ರಲ್ಲಿ ಮೊದಲು ಪ್ರಕಟವಾದ "ಮರಳಿ ಮಣ್ಣಿಗೆ" 1982ರ "ಭುಜಂಗಯ್ಯ"ದ ಮೂಲ ಆಶಯ ಒಂದೇನಾ ? ಮೇಲುಸ್ತರದ ಸಾಂಸ್ಕೃತಿಕ ವಿವರಗಳಲ್ಲಿ ವ್ಯತ್ಯಾಸ ಕಂಡರೂ ಒಳಗಿನ ವಿನ್ಯಾಸಕ್ಕೆ ಕೆಲವು ಮೂಲ ರೂಪಗಳಿವೆಯೆ ? ಒಟ್ಟಾರೆ ಭಾರತೀಯ ಸಮಷ್ಟಿ ಮನಸ್ಸಿನ ಅಭಿವ್ಯಕ್ತಿ ಎಂದು ನಾವು ಭಾರತೀಯ ಕಾದಂಬರಿಗಳನ್ನು ಓದಬೇಕೆ ? ಮತ್ತೆ ಅದೇ ಪ್ರಶ್ನೆ. ಬದಲಾವಣೆಗೆ ತುಡಿಯುತ್ತಿದ್ದ ಭಾರತ ಪಾಶ್ಚಾತ್ಯ ನಾಗರಿಕತೆಯತ್ತ ಆಶೆತುಂಬಿದ "ಕಣ್ಣು"ಗಳಿಂದ ನೋಡಿತು ? ತಾನೂ ಹಾಗೇ ಆಗಲು ಪ್ರಯತ್ನಿಸಿತು ? ಇದು ಕೇವಲ ಅನುಕರಣೆಯ ಬಾಲಿಶ ಅಪೇಕ್ಷೆ ಅಲ್ಲವಷ್ಟೆ ?

"ಮರಳಿ ಮಣ್ಣಿಗೆ". "ಭುಜಂಗಯ್ಯನ ದಶಾವತಾರಗಳು" ಕಾದಂಬರಿಗಳ ಸಾಂಸ್ಕೃತಿಕ ಜಗತ್ತು ಬೇರೆಯಾದರೂ ಅವು ಕೆಲವು ಸಮಾನ ಅಂಶಗಳನ್ನು ರೂಢಿಸಿ

ಕೊಂಡಿವೆ. "ಕಾನೂರು ಹೆಗ್ಗಡಿತಿ", "ಭಾರತೀಪುರ" ಕಾದಂಬರಿಗಳಂತೆ. ಒಂದು ಕೃತಿ ಇನ್ನೊಂದರಿಂದ ಭಿನ್ನವಾಗಿದ್ದರೂ ಪರಂಪರೆಯಲ್ಲಿ ಕೊಂಡಿಗಳು ಸೇರಿಕೊಳ್ಳುವ ರೀತಿ ಇದು. ಒಬ್ಬ ಬ್ರಾಹ್ಮಣನ ಕಾದಂಬರಿ ಶೂದ್ರನೊಬ್ಬನ ಕಾದಂಬರಿಯಲ್ಲಿ ಏಕೆ ಮುಂದುವರಿಯುತ್ತದೆ? ಶೂದ್ರನೊಬ್ಬನ ಕಾದಂಬರಿ ಬ್ರಾಹ್ಮಣನ ಕಾದಂಬರಿಯಲ್ಲಿ ಏಕೆ ಮುಂದುವರಿಯುತ್ತದೆ?

ಭುಜಂಗಯ್ಯ ತನ್ನ ಅಭಿಲಾಶೆಯನ್ನು ಗೆಳೆಯರ ಮುಂದಿಟ್ಟಾಗ: ಅವರು ಅಸಹ್ಯವಾಗಿ ನಗುತ್ತಾ, "ಅದ್ಯಾಕಣ್ಣ ಈ ದುರ್ಬುದ್ಧಿ ಬತ್ತು ನಿಂಗೆ? ನಾವು ಸಿವಾಚಾರದವ್ರಾಗಿ ಯಾವ್ಯಾವ ಜಾತಿಯವ್ರೊ ಬಂದು ಕುಡಿಯೋ ಎಂಜಲು ಲೋಟ ತೊಳಿಬ್ಯಾಕ? ಇರೋನೊಬ್ಬ ನೀನು, ನಿಂಗೆ ನಿಮ್ಮಪ್ಪ ಮಡಗಿರೋ ಆಸ್ತಿನೇ ಸಾಕಪ್ಪ" ಎಂದು ಭುಜಂಗಯ್ಯನ ಬಯಕೆಯ ಅಡಿಪಾಯಕ್ಕೇ ಗುರಿಯಿಟ್ಟು ಅಲ್ಲಾಡಿಸಿದರು." ಭುಜಂಗಯ್ಯನಿಗೇ ಈ ಬಗ್ಗೆ ಸಾಕಷ್ಟು ದ್ವಂದ್ವ ಇತ್ತು: "ತಾನು ಹೋಟಲಿಡುವುದು ತಪ್ಪೇ? ಸರಿಯೇ? ಅದರಿಂದ ತನ್ನ ಘನತೆ ಗೌರವ ಹಾಳಾಗಿ ತಾನು ನಾಕು ಜನದ ಎದುರು ತಲೆತಗ್ಗಿಸಿ ನಡೆಯಬೇಕಾದ ಸ್ಥಿತಿಯೇನಾದರೂ ಬರುತ್ತದೆಯೇ?"

ಆಧುನೀಕರಣದ ಪ್ರಕ್ರಿಯೆ ವರ್ಗಸಮಾಜದ ಮೇಲೆ ಮಾಡುವ ಪರಿಣಾಮಗಳಿಗೂ ಜಾತಿಸಮಾಜದ ಮೇಲೆ ಮಾಡುವ ಪರಿಣಾಮಗಳಿಗೂ ತುಂಬಾ ವ್ಯತ್ಯಾಸಗಳಿವೆ. ವರ್ಗಸಮಾಜದಲ್ಲಿ ಚಲನೆ ನೇರ, ಸರಳರೇಖಾತ್ಮಕ, ಸರಳ. ಜಾತಿ ಸಮಾಜದಲ್ಲಿ ಇದು ತೀರ ಸಂಕೀರ್ಣ. ಈ ದೃಷ್ಟಿಯಿಂದಲೂ ಭಾರತೀಯ ವಾಸ್ತವವಾದೀ ಕಾದಂಬರಿ, ಯುರೋಪಿನ ವಾಸ್ತವವಾದೀ ಕಾದಂಬರಿ ನಡುವೆ ಅನೇಕ ವ್ಯತ್ಯಾಸಗಳಿವೆ.

ಭುಜಂಗಯ್ಯ ಹೋಟಲಿಡುವ ಸುದ್ದಿ ಕೇಳಿ, "ಅವನ ಧರ್ಮಪತ್ನಿಯಾದ ಪಾರ್ವತಿಯೂ ಅವನ ತಾಯಿಯಾದ ದೇವೀರಮ್ಮನೂ ಎದೆ ಬಡಿದುಕೊಂಡು ಅಳತೊಡಗಿದರು."

ಭುಜಂಗಯ್ಯನ ಮಾವ ಪರ್ವತಪ್ಪನ ಪ್ರತಿಕ್ರಿಯೆ: "ಮದುವೆಗೆ ಮುಂಚೆ ಸುಮಾರು ಜನ ಅಂದಿದ್ದು ನಿಜಾ ಬುಡು. ಮನೆ ಬಿಟ್ಟೋಡೋಗಿ ಅಲ್ಲಿ ಇಲ್ಲಿ ಎಂಜಲೆಲೆ ನೆಕ್ಕೊಂಡು ಬಿದ್ದಿದ್ದು, ತಿರುಗಿ ಬಂದಿದ್ದು ಮತ್ತೆ ನೆಪ್ಪಾಯ್ತು ಅಂತ ಕಾಣತ್ತದೆ. ತಿಕಾ ಮುಚ್ಕಂಡು ಗಿರಾಸ್ತನಂಗೆ ನಡ್ಕೊ. ಈ ಪತ್ರಾವಳಿ ಕೆಲ್ಸಕ್ಕೆ ಇಳ್ದು ತಿರ್ಗಾ ಥೂ ಅನ್ನಸ್ಕೋಬ್ಯಾಡ."

ಅಂದರೆ ಆಧುನಿಕತೆಯ ಬಗ್ಗೆ ಇರುವ ದೊಡ್ಡ ಭಯವೆಂದರೆ ಜಾತಿ ಕೆಡುವ ಭಯ. ಹಸಿವು, ಮಹತ್ವಾಕಾಂಕ್ಷೆ ಮಾತ್ರ ಈ ಭಯವನ್ನು ಗೆಲ್ಲಬಹುದು. "ಮರಳಿ ಮಣ್ಣಿಗೆ"ಯ ಈ ಸಂಭಾಷಣೆ ನೋಡಿ:

"ಐತಾಳರೇ. ಏನೆನ್ನುತ್ತೀರಿ ? ನಮ್ಮ ಮಾಣಿಯನ್ನು, ನರಸಿಂಹನನ್ನು ಬೆಂಗಳೂರಿಗೆ ಕಳುಹಿಸುವ ಎಂದು ಮಾಡಿದ್ದೇನೆ. ಅಲ್ಲಿ ನಮ್ಮ ಹೇರ್ಳೆ ಯವರ ಹೋಟೆಲಿದೆಯಂತಲ್ಲ. ಒಂದೊಂದು ವರಹ ತಿಂಗಳಿಗೆ ಕೈಮೇಲೆ ಹಾಕುವ ಎಂದಿದ್ದಾರೆ. ಒಂದಿಷ್ಟು ಸಾಲವೂ ಉಂಟು. ತೀರಿದ ಹಾಗೂ ಆಯಿತು. ಅಲ್ಲದೆ ನಾಲ್ಕು ಮಕ್ಕಳಿರುವಾಗ ಊರಲ್ಲೇ ಇದ್ದು ಏನು ಮಾಡುವುದು ?

"ನಿನಗೆ ಮರುಳು, ಶೀನ – ಯಾವಾವ ಜಾತಿಯವರು ತಿಂದುಬಿಟ್ಟ ಎಂಜಲನ್ನು ತೆಗೆಯಲಿಕ್ಕೆ ದೇವರು ನಮಗೆ ಬ್ರಾಹ್ಮಣ ಜನ್ಮ ಕೊಟ್ಟದ್ದೇನು ? ಹೇರ್ಳೆಯವರಿಗೇನು ? ಅನ್ನವನ್ನು ಮಾರಿ ಹಣ ಸಂಪಾದಿಸಿದರೂ ಚಿಂತೆ ಯಿಲ್ಲ. ಒಟ್ಟಿನಿಂದ ಮನೆಗೆ ಉಪ್ಪರಿಗೆ ಬಿದ್ದರಾಯಿತು...."

"ಐತಾಳರೇ. ಹೇರ್ಳೆಯವರ ಹೋಟೆಲು ಬೆಂಗಳೂರಿಗೇನೆ ಭಾರಿ ಹೆಸರಾದ ಹೋಟೆಲು. ತಿರುಪತಿಗೆ ಹೋದವರು ಅಲ್ಲಿ ಹೊಕ್ಕು ಬಂದವರು ಹೇಳು ತ್ತಾರೆ. ಬೆಂಗಳೂರು ಸಿಟಿಯಲ್ಲೇ ಅಂಥಾ ಮರ್ಯಾದೆಯಿದೆಯಂತೆ – ಅವರಿಗೆ. ಅಲ್ಲದೆ ಅಲ್ಲಿ ಬ್ರಾಹ್ಮಣರಿಗೆ ಮಾತ್ರ ಊಟವಂತೆ, ನೀವೇ ಹೇಳಿ – ಮನೆ ಯಲ್ಲಿ ಕುಳಿತರೆ, ಹೊಟ್ಟೆ ತುಂಬೀತೆ ? ಬರಿ ಎಂಟು ಮುಡಿ ಗದ್ದೆ ಇರುವುದು ನನಗೆ. ಅದರಲ್ಲಿ ಬೆಳೆದರೆ ಏನು ಬಂದೀತು ? ನಾನು ಕಣ್ಮುಚ್ಚಿ, ಮನೆ ಪಾಲಾದರೆ ಬರುವುದೆಷ್ಟು ? ತಲಾ ಒಂದರ ಎರಡು ಮುಡಿ ಗದ್ದೆ. ನಾಳೆ ನಾನು ಕಣ್ಮುಚ್ಚಿದರೆ ಅದರಿಂದ ಅವುಗಳು ಏನು ಜೀವನ ಮಾಡಿಯಾವು ... ಎಲ್ಲ ಆಪದ್ಧರ್ಮ: ವಿಶ್ವಾಮಿತ್ರನು ಬರಗಾಲಕ್ಕೆ ನಾಯಿ ಮಾಂಸ ತಿಂದನಂತೆ. ಅಂಥವನಿಗೇ ಕಾಲಗತಿಯಿಂದ ಹಾಗಾಯಿತಂತೆ. ನೀವು – ಅನ್ನ ಮಾರುವುದು ಅನ್ನುತ್ತೀರಿ. ಅನ್ನ ಮಾರುವುದೇನು ಕಡಿಮೆ. ಅಕ್ಕಿ ಮಾರುವುದೇನು ಹೆಚ್ಚು? ಕುಚಲಕ್ಕಿಯನ್ನು ಭತ್ತ ಬೇಯಿಸಿ ಮುಸುರೆ ಮಾಡಿಯೇ ಮಾಡುವುದಲ್ಲವೆ?"

"ಶೀನ. ನಿನ್ನ ನಾಲಿಗೆಯೆಂದರೆ ಕ್ಷೌರದವನ ಕತ್ತಿ. ನಾನು ಚೇಷ್ಟೆಗೆ ಅಂದೆನಷ್ಟೆ. ನೀನು ಮಗನನ್ನು ಬೆಂಗಳೂರಿಗೆ ಕಳುಹಿಸು. ಇಲ್ಲವೆ ಮೈಸೂರಿಗೆ ಕಳುಹಿಸು. ಒಟ್ಟಾರೆ ಅವನು ಒಳ್ಳೆಯದಾಗಿ ಬದುಕಿ ಇದ್ದರೆ ಸಾಕು."

ಯಶಸ್ಸು. ಕೇವಲ ಯಶಸ್ಸು ಈ ಜಾತಿಕೆಡುವ ಭಯವನ್ನು ದೂರಮಾಡುತ್ತದೆ. ಶೀನಮಯ್ಯ ಶೀನಮಯ್ಯರಾಗುತ್ತಾರೆ. ಭುಜಂಗಯ್ಯ ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿ ಭುಜಂಗಪ್ಪನವರು ಎಂದು ಕರೆಸಿಕೊಳ್ಳುತ್ತಾನೆ. ಹೊಸ ಸಾಮಾಜಿಕ ವರ್ಗವೊಂದನ್ನೇ ಪ್ರತಿನಿಧಿಸುವ "ಭುಜಂಗಯ್ಯ ಹೊಸ ಸಾಮಾಜಿಕ ರೀತಿನೀತಿಗಳನ್ನು ರೂಢಿಸಿಕೊಳ್ಳು ತ್ತಾನೆ : "ಭುಜಂಗಯ್ಯ ಹೋಟಲಿಟ್ಟ ದಿನದಿಂದ ವೇಷಭೂಷಣಗಳಿರಲಿ, ಮಾತಿನಲ್ಲೂ

ಬದಲಾಯಿಸಿದ್ದ. ನಿಷ್ಠುರವಾದ ಪದಗಳು ಅವನ ನಾಲಿಗೆಯಿಂದ ದೂರವಾಗಿ ಸರ್ವಜನ ಪ್ರಿಯವಾಗಬಲ್ಲ ಮಧುರವಾದ ನುಡಿಗಟ್ಟುಗಳನ್ನು ರೂಢಿಸಿಕೊಳ್ಳ ತೊಡಗಿದ." ತನ್ನ ಹೋಟಲಿಗೆ ಹೆಸರೊಂದನ್ನು ಇಡಬೇಕಾಗಿ ಬಂದ ಸಂದರ್ಭದಲ್ಲಿ "ತನ್ನ ಮನೆದೇವರಾದ 'ಹುಲಿಕಂತ್ಯಪ್ಪ'ನ ಹೆಸರಿಡುವ ಆಸೆ ಭುಜಂಗಯ್ಯನಿಗೆ ಗಾಢವಾಗಿದ್ದರೂ ಸ್ವಲ್ಪ ಓದು ಬರಹ ಬಲ್ಲ ಅವನ ಮನಸ್ಸಿಗೇಕೋ ಅದು ಪ್ರಿಯ ವಾಗಲಿಲ್ಲ." ಹುಲಿಕಂತ್ಯಪ್ಪನ ಹೆಚ್ಚು ಶಿಷ್ಟವಾದ "ಕೆಂಡಗಣ್ಣಸ್ವಾಮಿ"ಯ ಹೆಸರನ್ನು ಇಡುತ್ತಾನೆ. ಹೋಟೆಲ್, ಮಾದಳ್ಳಿಯಲ್ಲೂ ಅನೇಕ ಬದಲಾವಣೆಗಳನ್ನು ತರುತ್ತದೆ: "ದಿನವೂ ದಿನ ಹೊಸ ಹೊಸ ಗಿರಾಕಿಗಳು ಬರತೊಡಗಿದರು. ಹೋಟಲು ಪ್ರಾರಂಭ ವಾದ ಮೊದಲಲ್ಲಿ ಹಿರಿಯರ ಕಣ್ಣು ತಪ್ಪಿಸಿ ಬರುತ್ತಿದ್ದ ಮಾದಳ್ಳಿಯ ಹುಡುಗರು ಈಗ ಯಾವ ಆತಂಕವೂ ಇಲ್ಲದೆ ಬಂದು ತಿಂಡಿ ತಿನ್ನುತ್ತಿದ್ದರು. ಹರಿಜನರಿಗಾಗಿ ಹೋಟಲು ಹಿಂದೆ ಕಟ್ಟದ್ದ ಚಪ್ಪರವೂ ವ್ಯರ್ಥವಾಗಿರಲಿಲ್ಲ. ಅದೂ ದಿನದಿನವೂ ಬೆಳೆಯತೊಡಗಿ ಗಿರಾಕಿಗಳನ್ನು ಹಿಡಿಸದಾಯಿತು. ಹರಿಜನರಲ್ಲೂ ಎರಡು ಪಂಗಡ. ಎಡಗೈನವರು ಬಳಸುವ ಲೋಟವನ್ನು ಬಲಗೈನವರಾಗಲೀ ಬಲಗೈನವರದನ್ನು ಎಡಗೈನವರು ಬಳಸುತ್ತಿರಲಿಲ್ಲ. ಇಬ್ಬರಿಗೂ ಪ್ರತ್ಯೇಕ ವ್ಯವಸ್ಥೆ ಇದ್ದರೂ ಒಮ್ಮೊಮ್ಮೆ ಅವು ಅದಲು ಬದಲಾಗಿ ಸ್ವಲ್ಪ ಗೊಂದಲವನ್ನುಂಟು ಮಾಡದೆಯೂ ಇರಲಿಲ್ಲ. ಏನೇ ಆಗಲೀ ಭುಜಂಗಯ್ಯನ ಅದೃಷ್ಟ ಕುಲಾಯಿಸಿತ್ತು". ಅದೃಷ್ಟ ಮಾತ್ರ ಬದಲಾಗಿರ ಲಿಲ್ಲ. ಭುಜಂಗಯ್ಯನ ಜಗತ್ತೂ ವಿಸ್ತೃತಗೊಂಡಿತ್ತು: "ಯಾವುದೇ ಹೊಗಳಿಕೆಗೂ ತೆಗಳಿಕೆಗೂ ಹಿಗ್ಗದ ಕುಗ್ಗದ ಭುಜಂಗಯ್ಯನ ಸದಾಕಾರ್ಯಶೀಲ ಪ್ರವೃತ್ತಿ ಹೋಟಲ ಉದ್ಯಮದಿಂದಾಗಿ ಇನ್ನಷ್ಟು ತೀವ್ರವಾಗಿತ್ತು. ನಿತ್ಯವೂ ಹೊಸ ಹೊಸ ಮುಖ ಗಳನ್ನು ಕಾಣುವುದು, ಮಾತುಗಳನ್ನು ಕೇಳುವುದು ಅವನಿಗೆ ಪ್ರಿಯವಾಗಿತ್ತು. ಇದರಿಂದಾಗಿ ಅವನ ಲೋಕಾನುಭವವೂ ವಿಸ್ತರಿಸಿ ದೊಡ್ಡ ಮನುಷ್ಯರಿಗಿರಬೇಕಾದ ವ್ಯಕ್ತಿತ್ವ ಅವನಲ್ಲಿ ರೂಪಗೊಳ್ಳತೊಡಗಿತ್ತು." ಪಾರ್ವತಿಯೂ ಬದಲಾಗಿದ್ದಳು: "ತನ್ನ ಗಂಡ ಸಾಕ್ಷಾತ್ ದೇವರೇ ಸರಿ ಅಂದುಕೊಂಡ ಪಾರ್ವತಿಗೆ ಹೋಟಲಿಟ್ಟದ್ದು ತಪ್ಪೇನು ಆಗಲಿಲ್ಲ ಅನ್ನಿಸಿತು. ಯಾರು ಏನಂದುಕೊಂಡರೆ ತಮಗೇನಂತೆ ? ತಮಗೆ ಇಲ್ಲದಿದ್ದಾಗ ಯಾರೂ ಕೊಡುವುದೂ ಇಲ್ಲ ಬಾವಣಿಸುವುದೂ ಇಲ್ಲ. ಹೋಟಲಿಟ್ಟರೆ ಇಷ್ಟು ಲಾಭ ಬರುತ್ತೆ ಅನ್ನುವುದು ತನಗೆ ಮೊದಲೆ ತಿಳಿದಿದ್ದರೆ ತಾನು ಗಂಡನ ಜತೆ ಜಗಳವಾಡುತ್ತಲೇ ಇರಲಿಲ್ಲ."

"ಭುಜಂಗಯ್ಯನ ದಶಾವತಾರಗಳು" ಕಾದಂಬರಿಯ ಹಿನ್ನಲೆಯಲ್ಲಿ "ಮರಳಿ ಮಣ್ಣಿಗೆ" ಇದ್ದರೆ, ಮುನ್ನೆಲೆಯಲ್ಲಿ "ಒಡಲಾಳ", "ಕುಸುಮಬಾಲೆ" ಇವೆ. ಹೋಟೆಲ್ ಎಂಬ ಪ್ರತಿಮೆಯ ಮೂಲಕ ಆಧುನೀಕರಣ ಪ್ರಕ್ರಿಯೆಯ ಮೂರು ಘಟ್ಟಗಳನ್ನೇ ಇವು ಶೋಧಿಸಿವೆ. ವೈದಿಕರೂ, ಸನಾತನಿಗಳೂ ಬಿಡುಗಡೆ ಪಡೆದಂತೆ

ಶೂದ್ರರೂ ಬಿಡುಗಡೆ ಪಡೆದರಷ್ಟೆ. ಈಗ ದಲಿತರೂ ಹೋಟೆಲ್‌ನಲ್ಲಿ ತಮಗೂ ಸಮಾನ ಸ್ಥಾನಮಾನ ಕೇಳುತ್ತಾರೆ. ಮೊದಲು ಹೋಟೆಲ್ ಇಡುವ ಸಂದರ್ಭದಲ್ಲಿ ಸವರ್ಣೀಯರ ಒಳಗೇ ಹಳಬರಿಗೂ ಹೊಸಬರಿಗೂ ಸಂಘರ್ಷ ಪ್ರಾರಂಭವಾಗಿತ್ತಷ್ಟೆ. ಈಗ ಹೋಟೆಲ್ ಒಂದು ಸಾರ್ವಜನಿಕ ಸಂಸ್ಥೆಯಾಗಿಬಿಟ್ಟಮೇಲೆ ಒಟ್ಟಾರೆ ಸಮಾಜದ ಚಲನೆಯನ್ನೂ ಅನಿವಾರ್ಯವೆಂಬಂತೆ ಚುರುಕುಗೊಳಿಸುತ್ತದೆ. ದಲಿತರು – ಸವರ್ಣೀಯರ ನಡುವೆ ಸಂಘರ್ಷಕ್ಕೆ ಕಾರಣವಾಗಿ ತನ್ಮೂಲಕ ಹೊಸ ಮೌಲ್ಯಗಳ ಉದಯಕ್ಕೆ ನಾಂದಿ ಹಾಡುತ್ತದೆ. ಈ ದೃಷ್ಟಿಯಿಂದ ಕನ್ನಡ ಕಾದಂಬರಿ ಪರಂಪರೆಯನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದರೆ ನಮ್ಮ ಸಾಂಸ್ಕೃತಿಕ ಬೆಳವಣಿಗೆಯ ವಿವಿಧ ಘಟ್ಟಗಳನ್ನು ದಾಖಲಿಸುತ್ತ ಒಂದು ಸಾತ್ಯತೆಯನ್ನು ಕಾಪಾಡಿಕೊಂಡು ಬಂದಿರುವುದು ಸುಸ್ಪಷ್ಟವಾಗುತ್ತದೆ.

ಕೃಷ್ಣರ ಕಾದಂಬರಿಯಲ್ಲೇ ಹೋಟೆಲ್ ಸವರ್ಣೀಯರ ನಡುವಣ ಹೊಡೆದಾಟಕ್ಕೆ ಕಾರಣವಾಗುತ್ತದೆ. ಹರಿಜನ ಮೇಷ್ಟರೊಬ್ಬರು ಭುಜಂಗಯ್ಯನ ಹೋಟೆಲೊಳಗೇ ಬಂದು ಟೀ ಕುಡಿದು ಹೋಗುತ್ತಾರೆ. ಅವರು ಇನ್ನೊಬ್ಬ ಮೇಷ್ಟರೊಂದಿಗೆ ಬಂದದ್ದರಿಂದ ಮತ್ತು ಶುಭ್ರವಾದ ಬಟ್ಟೆ ತೊಟ್ಟಿದ್ದರಿಂದ ಅವರು ಹರಿಜನರೆಂದು ಹೋಟೆಲಿನ ಹುಡುಗರಿಗೆ ತಿಳಿಯುವುದಿಲ್ಲ. ಇದರಿಂದಾಗಿ ಊರಿನಲ್ಲೇ ಎರಡು ಗುಂಪಾಗಿ ದೊಡ್ಡ ಜಗಳವಾಗುತ್ತದೆ. ಭುಜಂಗಯ್ಯನ ವಿರೋಧಿಗಳಿಗೆ ದೊಡ್ಡದೊಂದು ಅಸ್ತ್ರವೇ ಸಿಕ್ಕಹಾಗಾಗುತ್ತದೆ. ಕಾದಂಬರಿಯ ಇಪ್ಪತ್ತೊಂಭತ್ತನೆಯ ಅಧ್ಯಾಯ ನಮ್ಮ ಜಾತಿಪ್ರಜ್ಞೆ ಎಷ್ಟು ಗಾಢವಾಗಿರುತ್ತದೆಂಬುದನ್ನು ಅಲ್ಲಿಯ ವಾದ ವಿವಾದಗಳ ಮೂಲಕ ಮಾರ್ಮಿಕವಾಗಿ ಚಿತ್ರಿಸುತ್ತದೆ: "ಮಾದಳ್ಳಿ ದ್ಯಾವಣ್ಣನಿಗೆ ಮತ್ತೆ ಹೋಟಲಲ್ಲಿ ಒಂದು ಲೋಟ ನೀರು ಕುಡಿಯುವುದೂ ಹೇಸಿಗೆಯೆನಿಸಿ ಭುಜಂಗಯ್ಯನನ್ನು ಚುಚ್ಚುವಂತೆ "ಅವನ್ಯಾವ ಜಾತಿ ಅಂತ ಮೊದ್ಲೆ ಕೇಳಾಕೆ ನಿಂಗೇನು ನಾಲ್ಗೆ ಇಂಗೋಗಿತ್ತ ? ನಮ್ಗೆಲ್ಲ ಜಾತ್ಗೆಡ್ಸಿ, ದೇವ್ರು ದಿಂಡ್ರಿಂದೆಲ್ಲ ದೂರ ಮಾಡ್ಬೇಕು ಅಂತ ಮಾಡ್ತಾ ಇದೀಯಾ" ಅಂದರೆ ರುದ್ರಪ್ಪ "ತಿಕಾ ಮುಚ್ಕಂಡು ಮೋಟ್ಲು ಮುಚ್ಬೇಕು" ಎಂದು ಬೆದರಿಸುತ್ತಾನೆ. ಈ ವಿವರ ಗಮನಿಸಿ: "ರುದ್ರಪ್ಪನ ಅಣ್ಣನ ಮಗ ಪಾತ್ರ ಒಳನುಗ್ಗಿ ಎದುರಾದ ಪಟಗಳನ್ನು ಕೀಳಬೇಕೆಂದುಕೊಂಡ. ಅವರೆ ಅವೆಲ್ಲ ತಮ್ಮ ದೇವರದೆಂದು ಭಯವಾಗಿ ಗಾಂಧಿಪಟವನ್ನು ಮಾತ್ರ ಕಿತ್ತು ಗಾಜೆಲ್ಲ ಚೂರಾಗುವಂತೆ ನೆಲಕ್ಕೆ ಅಪ್ಪಳಿಸಿದ". ಹೊಡೆದಾಟವಾಗುತ್ತದೆ. ರುದ್ರಪ್ಪ ಸ್ವತಃ ತಾನೇ ಪಟೇಲನಾಗಿದ್ದರೂ "ನಾಳೆ ಕೋಟೆ ಪೋಲೀಸ್ಗೆ ದೂರು ಕೊಟ್ಟು ಮಕ್ಕಳ್ಗೆ ಚಮಡಾ ಸುಲೀಸ್ದೆ ಹೋದ್ರೆ ನಮ್ಮಪ್ಪನ ಬೀಜಕ್ಕೇ ನಾನುಟ್ಟಲ್ಲ" ಎಂದು ಕೇರಿಯೇ ಮುಳುಗುವಂತೆ ಅರಚುತ್ತಾನೆ. ಊರಿನ ನ್ಯಾಯವನ್ನು ಇನ್ನು ಕೇಳುವರಾರು ? ಭುಜಂಗಯ್ಯ ಮಾದಳ್ಳಿಯ ಸಂದರ್ಭದಲ್ಲಿ ಯಾವತ್ತೂ ಆಧುನಿಕತೆಯ ಪ್ರತಿನಿಧಿಯಷ್ಟೆ.

ಅವನ ತಳಮಳ ಇದು: "ತನ್ನಿಂದಾಗಿ ಯಾವುದು ಸಂಭವಿಸಬಾರದೆಂದು ಭುಜಂಗಯ್ಯ ಇಚ್ಛಿಸಿದ್ದನೋ ಊರಲ್ಲಿ ಅದೇ ಸಂಭವಿಸಿತ್ತು. ತಾನು ಊರು ಬಿಟ್ಟರೂ ತನ್ನನ್ನು ಬಿಡದ ಊರು. ತನ್ನಷ್ಟಕ್ಕೆ ಬದುಕಲು ಬಿಡದೆ ಏನೋ ಒಳಸಂಚು, ಪಿತೂರಿ, ಇಲ್ಲದೆ ಆರೋಪಗಳಿಂದ ತನ್ನನ್ನೇಕೆ ಹೀಗೆ ಕಾಡುತ್ತಿದೆ ? ಈ ಊರಿಗೆ ತಾನು ಮಾಡಿರುವ ಪಾಪವಾದರೂ ಏನು ? ತಾನು ಯಾರಿಗೂ ಕೆಟ್ಟದೇನನ್ನೂ ಮಾಡುವುದಿರಲಿ, ಯೋಚಿಸಲೂ ಇಲ್ಲ. ಆದರೂ ತನ್ನ ಮೇಲೇಕೆ ಇವರಿಗೆ ಇಂಥ ಹಗೆತನ ? ಮೊದಲಿನಿಂದಲೂ ಇವರು ಕೊಟ್ಟ ಸತತ ಕಿರುಕುಳಗಳ ಪ್ರವಾಹದ ರಭಸವನ್ನು ಎದುರಿಸಿ ಇದೀಗ ಒಂದು ದಡವನ್ನು ಮುಟ್ಟದೆ ಅಂದುಕೊಳ್ಳುತ್ತಿದ್ದಂತೆ ಮತ್ತೊಂದು ಆಘಾತ. ಕೊನೆಗೊಂಡವೇನೋ ಅಂದುಕೊಂಡಿದ್ದ ಅನಿಷ್ಟ ಶಕ್ತಿಗಳನ್ನು ಊರು ಮತ್ತೆ ಆವಾಹನೆ ಮಾಡಿದೆ. ಕಲಹಕ್ಕೆ ಕಾಲು ಕೆರೆದ ಜನ ಅಹಂಕಾರದಿಂದ ತಪ್ಪರಾಗಿದ್ದಾರೆ. ರುದ್ರಪ್ಪ ಹಠಬಿಡದೆ ಕೋಟೆ ಪೋಲೀಸರಿಗೆ ದೂರು ಕೊಟ್ಟು ಬಂದ. ಹಾಗೆಯೇ ಗೌಡರ ಮಕ್ಕಳೂ ಪ್ರತಿಯಾಗಿ ಕೊಟ್ಟರು. ದೂರದಲ್ಲಿದ್ದ ಕೋಟೆ ಪೋಲೀಸರು ಮಾದಳ್ಳಿಗೆ ಹತ್ತಿರವಾಗುತ್ತಿದ್ದಾರೆ".

ಪೋಲೀಸು, ಕೋರ್ಟು, ಇಂಗ್ಲಿಷ್‌ಭಾಷೆ, ಹೋಟಲು, ಬಸ್ಸು, ಗೆಂಡೆತಿಮ್ಮ ಮಾರುವ ಒಳವಸ್ತುಗಳು, ಸುಗಂಧ ದ್ರವ್ಯಗಳು ಮೊದಲಾಗಿ ಇಡೀ ಗ್ರಾಮೀಣ ಭಾರತವನ್ನು ಆವರಿಸುತ್ತಿರುವ ಆಧುನಿಕತೆ ನಮ್ಮ ಮೂಲಭೂತ ಮೌಲ್ಯವ್ಯವಸ್ಥೆಗಳನ್ನು ಪಲ್ಲಟಗೊಳಿಸುತ್ತಿರುವ ಹಿನ್ನೆಲೆಯಲ್ಲೇ ಈ ಜಗಳಗಳನ್ನು ಅರ್ಥಮಾಡಿಕೊಳ್ಳಬೇಕು. ಆಧುನೀಕರಣದಿಂದ ಹೊಸ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳು ಹುಟ್ಟಿಕೊಳ್ಳುತ್ತಿವೆ. ಗೆಂಡೆತಿಮ್ಮ, ಭುಜಂಗಯ್ಯ ತಮಗೆ ಗೊತ್ತಿಲ್ಲದಂತೆಯೇ ಗ್ರಾಮೀಣ ಭಾರತದ ಫ್ಯೂಡಲ್ ವ್ಯವಸ್ಥೆಯ, ಜಾತಿವ್ಯವಸ್ಥೆಯ Authority ಯನ್ನೇ ಪ್ರಶ್ನೆ ಮಾಡುತ್ತಿದ್ದಾರೆ. ಹೊಸ ಕಾಲದ ಗ್ರಾಮೀಣ ಬದುಕಿನ ಸಂಘರ್ಷದ ಮೂಲ ಇರುವುದು ಇಲ್ಲಿ. 'ಎಲ್ಲ ಕಾಲದಲ್ಲೂ ಮನುಷ್ಯನ ಸ್ವಭಾವ ಒಂದೇರೀತಿ ಇರುತ್ತದೆ' ಎಂಬ ಸರಳ ನೈತಿಕ ನಿಲುವಿನಿಂದ ಮಾತ್ರ ಹೊರಟರೆ ಐತಿಹಾಸಿಕ ಪ್ರಕ್ರಿಯೆಯ ಸೂಕ್ಷ್ಮಗಳು ಕೈಗೆ ಸಿಕ್ಕುವುದೇ ಇಲ್ಲ. ಮೊದಲಿನಿಂದಲೂ ಆಧುನಿಕ ಕನ್ನಡ ಸಾಹಿತ್ಯ ಈ ಸೂಕ್ಷ್ಮಗಳಿಗೆ ಸ್ಪಂದಿಸಿದೆ. ಕನ್ನಡದ ಮೊದಲ ಸಾಮಾಜಿಕ ಕೃತಿ, "ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ" (1887) ರಿಂದ ಮೊದಲ್ಗೊಂಡು ಇತ್ತೀಚಿನ ಸಾಹಿತ್ಯ ಕೃತಿಗಳ ವರೆಗೆ ಆಧುನಿಕ ಕನ್ನಡ ಸಾಹಿತ್ಯಪರಂಪರೆ ಕನ್ನಡ ಬದುಕಿನ ಸಾಂಸ್ಕೃತಿಕ ಚರಿತ್ರೆಯೂ ಹೌದು. ಈ ಚರಿತ್ರೆಯನ್ನು ಕನ್ನಡದ ಯಾವ ಚರಿತ್ರಕಾರ ಇಲ್ಲವೆ ಸಮಾಜಶಾಸ್ತ್ರಜ್ಞ ಇಷ್ಟು ಸೂಕ್ಷ್ಮವಾಗಿ, ಸಮೃದ್ಧವಾಗಿ ಚಿತ್ರಿಸಿಲ್ಲ.

ಜಾತಿಯ ಕಟ್ಟುಗಳು, ಸಂಪ್ರದಾಯದ ಕಟ್ಟುಗಳು – ಆಧುನಿಕತೆ ಭೌತಿಕ ಮೌಲ್ಯಗಳಾಗಿ ಪ್ರವೇಶಿಸಿದಾಗ ಮಾತ್ರ ಮುರಿದು ಬೀಳುತ್ತವೆ ಎಂಬ ಸತ್ಯವನ್ನು ಕೃಷ್ಣರ ಕಾದಂಬರಿಗಳು ಸಾಧಿಸಿ ತೋರಿಸಿವೆ. ವಾಸ್ತವವಾಗಿ ಕಾದಂಬರಿ ಪ್ರಕಾರದ

ಅನನ್ಯತೆ ಇರುವುದೇ ಇಲ್ಲಿ. ಆದರೂ "ಕಾನೂರು ಹೆಗ್ಗಡತಿ"ಯ ಹೂವಯ್ಯ ತರುವ ಸುಧಾರಣೆಗಳಿಗೂ ಕೃಷ್ಣರ ಗೆಂಡೆತಿಮ್ಮ, ಭುಜಂಗಯ್ಯರು ತರುವ ಸುಧಾರಣೆಗಳಿಗೂ ಇರುವ ಮೂಲಭೂತ ವ್ಯತ್ಯಾಸವನ್ನು ಗುರುತಿಸಿಕೊಂಡರೆ ಕೃಷ್ಣರ ಕಾದಂಬರಿಗಳ ಮಹತ್ವ ತಿಳಿಯುತ್ತದೆ. ಉದಾಹರಣೆಗೆ ಹೂವಯ್ಯ ಮೈಸೂರು ಕಾಲೇಜಿನಲ್ಲಿ ಓದಿಬಂದ ವಿದ್ಯಾವಂತ. ಸ್ವಾತಂತ್ರ್ಯ ಚಳುವಳಿ, ರಾಷ್ಟ್ರೀಯ ನಾಯಕರು ಇವರ ಬಗ್ಗೆ ತಿಳುವಳಿಕೆಯಿಂದ ಮಾತನಾಡಬಲ್ಲವ. ಆಧುನಿಕ. ಆದರೆ ಹೂವಯ್ಯನ ಆಧುನಿಕತೆ ಅವನನ್ನು ಪರಕೀಯನನ್ನಾಗಿ ಮಾಡುತ್ತದೆ. "ಭಾರತೀಪುರ"ದ ಜಗನ್ನಾಥ ಇಂಗ್ಲೆಂಡಿಗೆ ಹೋಗಿ ಬಂದವನು. ಹೂವಯ್ಯನಿಗಿಂತ ಆಧುನಿಕ. ಹೂವಯ್ಯನಿಗಿಂತ ಹೆಚ್ಚು ಪರಕೀಯ. ಹಾಗಾಗಿ ಈ ಕಾದಂಬರಿಗಳಲ್ಲಿ ಆಧುನಿಕತೆ ಮುಖ್ಯವಾಗಿ ಈ ಪಾತ್ರಗಳ ಪ್ರಜ್ಞೆಯಲ್ಲಿದೆ. ಹೂವಯ್ಯ, ಜಗನ್ನಾಥರ ಸಾಮಾಜಿಕ ಸುಧಾರಣೆಯ ಆಶಯಗಳು ನಿಜಕ್ಕೂ ಮೂರ್ತವಾಗುವುದು ಕೃಷ್ಣ, ಮಹದೇವರ ಕಾದಂಬರಿಗಳಲ್ಲಿ. ಹೂವಯ್ಯ, ಜಗನ್ನಾಥರ ಪ್ರಖರವಾದ ಆಧುನಿಕ ಪ್ರಜ್ಞೆ ಮತ್ತು ಅದು ಹೊಳೆಯಿಸುವ ಒಳನೋಟ ಕೃಷ್ಣರಲ್ಲಿ ಇಲ್ಲ. ಆದರೆ ಪರಂಪರಾಗತ ಗ್ರಾಮೀಣ ಬದುಕು ನಿಜವಾಗಿಯೂ ಬೆಚ್ಚುವುದು ಹೂವಯ್ಯ, ಜಗನ್ನಾಥರವರಿಂದಲೋ ಭುಜಂಗಯ್ಯ, ಗೆಂಡೆತಿಮ್ಮರಂಥವರಿಂದಲೋ ಎಂಬುದನ್ನು ಗಾಢವಾಗಿ ಆಲೋಚಿಸಬೇಕು. ಆಯಾ ಕಾದಂಬರಿಗಳ ಒಟ್ಟಾರೆ ಗುಣಮಟ್ಟವನ್ನು ನಾನು ಈ ನೆಲೆಯಲ್ಲಿ ಅಳೆಯುತ್ತಿಲ್ಲ. ಆದರೆ ಕೃಷ್ಣರ ಮಾರ್ಗ ಎಲ್ಲಿ ಭಿನ್ನವಾಗಿದೆ ಮತ್ತು ಹಾಗಿರುವುದರಿಂದಲೇ ಅವರು ಸಾಧಿಸುತ್ತಿರುವ ಹೊಸ ಆಯಾಮಗಳೇನು ಎಂಬುದನ್ನು ಮಾತ್ರ ಇಲ್ಲಿ ಚರ್ಚಿಸುತ್ತಿದ್ದೇನೆ. ಮುಖ್ಯವಾದ ಮಾತು ಇದು: ಕನ್ನಡ ಕಾದಂಬರಿ ಹೂವಯ್ಯ, ಜಗನ್ನಾಥರ ಪ್ರಜ್ಞೆಯ ಮೂಲಕ ಬದಲಾಗುತ್ತಿರುವ ಕರ್ನಾಟಕವನ್ನು ಸೆರೆಹಿಡಿದಿದೆ; ಆಲನಹಳ್ಳಿ ಕೃಷ್ಣರ ಕಾದಂಬರಿಗಳ ದಟ್ಟ ಭೌತಿಕ ವಿವರಗಳಲ್ಲಿ ಈ ಬದಲಾವಣೆಯ ವಿನ್ಯಾಸವನ್ನು ಅಧಿಕೃತಗೊಳಿಸಿದೆ. ದೇವನೂರ ಮಹದೇವರ ಕಾದಂಬರಿಗಳ ದಲಿತ ಆಶಯ ಈ ವಿನ್ಯಾಸವನ್ನು ನಮ್ಮ ಸಮಾಜದ ಕಟ್ಟಕಡೆಯ ವರ್ಗದವರೆಗೆ ವಿಸ್ತರಿಸಿದೆ.

ಭುಜಂಗಯ್ಯ ತನ್ನ ಹೋಟೆಲಿನಲ್ಲಿ ಗಾಂಧೀಜಿಯ ಪಟವನ್ನು ದೇವರ ಪಟಗಳ ಪಕ್ಕ ತೂಗುಹಾಕಿದಾಗ ಅದೇನೂ ಅಂತಹ ಗಮನ ಸೆಳೆಯುವ ಘಟನೆಯಾಗಿರದಿದ್ದರೂ, ಭುಜಂಗಯ್ಯನ ಆಸಕ್ತಿಯನ್ನು ಕಂಡು ಅವನಿಗೆ ಓದಲೆಂದು ಗಾಂಧೀಜಿಯ ಆತ್ಮಕಥೆ ತಂದುಕೊಟ್ಟಿದ್ದ ಮೇಷ್ಟರಿಗೂ ಬೆರಗಾಗಿಬಿಡುತ್ತದೆ. ಏಕೆಂದರೆ "ಎಲ್ಲ ಪಟಗಳಿಗೂ ಪ್ರತ್ಯೇಕ ಪ್ರತ್ಯೇಕ ಪೂಜೆ ಮಾಡುತ್ತಿದ್ದ ಭುಜಂಗಯ್ಯ ಗಾಂಧಿಪಟಕ್ಕೂ ಪೂಜೆ ಮಾಡುತ್ತಿದ್ದ.... ತಮ್ಮ ಹಾಗೆಯೇ ಎಲ್ಲ ಆಸೆಗಳಿದ್ದು, ಎಲ್ಲ ತಪ್ಪುಗಳನ್ನೂ ಮಾಡಿ ಕಡೆಗೆ ಲೋಕವಲ್ಲ ಕೈ ಮುಗಿಯುವಂಥ ಮಹಾತ್ಮರಾಗಿದ್ದು ಭುಜಂಗಯ್ಯನಿಗೆ ತುಂಬಾ ಕುತೂಹಲವನ್ನುಂಟುಮಾಡಿತ್ತು. ತಮ್ಮ ಮಠದ ಜಗದ್ಗುರುಗಳಿಗಿಂತ

ಇವರೇ ದೊಡ್ಡವರಿರಬೇಕು ಎಂಬ ಅವನ ಗುಮಾನಿ ಕ್ರಮೇಣ ನಿಜವಾಗಿತ್ತು. ದೇಶ ದಲ್ಲಿ ತಮ್ಮ ಗುರುಗಳಂಥ ಲೆಕ್ಕವಿಲ್ಲದಷ್ಟು ಜಗದ್ಗುರುಗಳಿದ್ದರಂತೆ. ಆದರೆ ಗಾಂಧಿ ಮಹಾತ್ಮ ?" ಮುಂದೆ ಭುಜಂಗಯ್ಯನ ಹೋಟೆಲಿನ ಮೇಲೆ ದಾಳಿಯಾದಾಗ ಮೊದಲು ಪುಡಿಯಾಗುವುದು ಗಾಂಧಿಯ ಪಟವೇ.

ಭುಜಂಗಯ್ಯ ಸುಶೀಲಳಿಂದ ಆಕರ್ಷಿತನಾಗಿ ಮದುವೆಯಾಗುವುದು ಅವನ ಸಾಮಾಜಿಕ ಸಂದರ್ಭದಲ್ಲಿ ವಿಶೇಷವೇ. ಅದೊಂದು ಅಂತರ್‌ಜಾತೀಯ ವಿವಾಹ. ಭುಜಂಗಯ್ಯನನ್ನು ಕುಲದಿಂದ ಉಚ್ಚಾಟಿಸಲು ವೀರಶೈವ ಮುಖಂಡರು ಮಸಲತ್ತು ಮಾಡುತ್ತಿದ್ದರೆ ಭುಜಂಗಯ್ಯ ಸುಶೀಲಳಿಗೇ ಲಿಂಗಧಾರಣೆ ಮಾಡಿಸುತ್ತಾನೆ. "ಇದಾದ ನಂತರ ಊರಿನಲ್ಲಿ ಅವನಿಗಾಗದವರಿಗೆ ಇನ್ನಷ್ಟು ನಿರಾಶೆಯೂ ಹಾಗೆಯೇ ಅವನ ಬಗ್ಗೆ ಕ್ರೋಧವೂ ಇಮ್ಮಡಿಸಿದವು. ಭುಜಂಗಯ್ಯನ ಹೋಟಲಿಗೆ ಮಾದಳ್ಳಿಯ ವೀರಶೈವ ಜನಾಂಗದವರು ಯಾರೂ ಹೋಗಬಾರದೆಂದು ಕಟ್ಟು ಮಾಡಲಾಯಿತಾದರೂ ಈಗಾಗಲೇ ಹೋಟಲಲ್ಲಿ ಟೀ ಕುಡಿಯುವುದು ತಿಂಡಿ ತಿನ್ನುವುದು ಒಂದು ಅಭ್ಯಾಸವಾಗಿ ರೂಢಿಯಾಗಿದ್ದವರು ಯಾರೂ ಕುಲದ ಹಿರಿಯರ ಕಟ್ಟಳೆಯನ್ನು ಪರಿಪಾಲಿಸಲಿಲ್ಲ". ಗೆಂಡೆತಿಮ್ಮ, ಭುಜಂಗಯ್ಯ ಕ್ರಾಂತಿಕಾರಿಗಳೂ ಅಲ್ಲ, ಸಾಮಾಜಿಕ ಸುಧಾರಕರೂ ಅಲ್ಲ. ಅವರು ಗ್ರಾಮೀಣ ಭಾರತೀಯ ಬದುಕಿನಲ್ಲೇ ಬೇರುಬಿಟ್ಟವರು. ಅದರ ಬಹುತೇಕ ಮೌಲ್ಯಗಳನ್ನು ರೂಢಿಸಿಕೊಂಡವರು. ಆದರೆ ತಮಗೆ ಗೊತ್ತಿಲ್ಲದಂತೆಯೇ ಆಧುನೀ ಕರಣದ ಪ್ರಕ್ರಿಯೆಗೆ ಒಡ್ಡಿಕೊಂಡವರು; ಅದಕ್ಕೆ ಚಾಲನೆಯನ್ನು ಕೊಟ್ಟವರು. ಹೂವಯ್ಯ, ಜಗನ್ನಾಥರಂಥವರ ವಿಚಾರಗಳು ಗೆಂಡೆತಿಮ್ಮ, ಭುಜಂಗಯ್ಯರ ವ್ಯಕ್ತಿತ್ವ ದಲ್ಲಿ ಕರಗಿದಾಗ ಮಾತ್ರ ಸಾಮಾಜಿಕ ಸಂರಚನೆಗಳ ಪಲ್ಲಟ ಸಾಧ್ಯವೇನೋ. ಆಗಲೂ ಈ ಪಲ್ಲಟ ಪೂರ್ಣವಾಗಲಾರದು; ಅದಕ್ಕೆ ದಲಿತರೂ ಸಿದ್ಧವಾಗಬೇಕು ಎಂದು ಮಹಾದೇವರ ಕೃತಿಗಳು ಸೂಚಿಸುತ್ತವೆ. ಕೃಷ್ಣರ ಕಿಟ್ಟ, ರಾಜ, ಮಹಾದೇವರ ಶಿವೂ ಆಧುನಿಕ ವಿದ್ಯಾಭ್ಯಾಸ ಪಡೆದು ತಮ್ಮ ಸ್ಥಿತಿಯಿಂದ ಬಿಡುಗಡೆ ಪಡೆಯಬಲ್ಲರು ಎಂಬ ಸೂಚನೆ ಆಯಾ ಕಾದಂಬರಿಗಳಲ್ಲಿ ಇದೆ.

"ಕಾಡು" ತುಂಬಾ ದಟ್ಟವಾದ ಆದರೆ ಸೀಮಿತ ಆಶಯವುಳ್ಳ ಕೃತಿ. "ಭುಜಂಗಯ್ಯ" ತುಂಬಾ ಮಹತ್ವಾಕಾಂಕ್ಷೆಯುಳ್ಳ ಆದರೆ ಸಾಂದ್ರತೆಯನ್ನು ಕಳೆದು ಕೊಂಡಿರುವ ಕಾದಂಬರಿ. "ಪರಸಂಗದ ಗೆಂಡೆತಿಮ್ಮ" ದಲ್ಲಿ ಎರಡೂ ಹದವಾಗಿ ಬೆರೆತಿದೆ. ಹಾಗಾಗಿ ಅದು ನಿಸ್ಸಂದೇಹವಾಗಿ ಕೃಷ್ಣರ ಅತ್ಯುತ್ತಮ ಬರವಣಿಗೆ; ಕನ್ನಡ ಕಾದಂಬರಿಯ ಮುಖ್ಯ ಆಶಯಗಳನ್ನು ಗರ್ಭದಲ್ಲಿಟ್ಟುಕೊಂಡ, ಅವುಗಳಿಗೆ ತನ್ನ ಅನನ್ಯ ಆಯಾಮಗಳನ್ನು ಜೋಡಿಸಿದ ವಿಶಿಷ್ಟ ಕಾದಂಬರಿ. ಅಷ್ಟೇ ಅಲ್ಲ ಕನ್ನಡ ಕಾದಂಬರಿಗೆ ಒಂದು ಮುನ್ನೋಟ ಸೂಚಿಸಿದ ಕೃತಿಯೂ ಹೌದು. ದೇವನೂರ ಮಹಾದೇವ, ಕುಂ. ವೀರಭದ್ರಪ್ಪ, ಬಿ. ಚಂದ್ರೇಗೌಡ ಮೊದಲಾದ ಯುವ ಪೀಳಿಗೆಯ ಲೇಖಕರ ಹಿಂದೆ ಆಲನಹಳ್ಳಿ ಕೃಷ್ಣ ಖಂಡಿತವಾಗಿ ಇದ್ದಾರೆ. ●

# 'ಕಾಡ ಮೂಲಕವೇ ಪಥ ಆಗಸಕ್ಕೆ....'

---

**ಲಕ್ಷ್ಮೀಶ ತೋಳ್ಪಾಡಿ**

೧. "ಕಾಡು" ಒಂದು ಧ್ಯಾನದಂತಿದೆ. ಗಾಢವಾದ ಧ್ಯಾನ. ಅಚ್ಚರಿ ಎಂದರೆ ಇದು ಇಂದ್ರಿಯ ಪ್ರಪಂಚದ. ಪ್ರವೃತ್ತಿ ಪ್ರಪಂಚದ ಧ್ಯಾನ. ಧ್ಯಾನ ಹೇಗೆಂದರೆ ಇಲ್ಲಿನ ಮಂಡನೆ, ಆಯ್ಕೆ ಮತ್ತು ಆಯ್ಕೆಯ ಹಿಂದಿರುವ ಮೌಲ್ಯಗಳನ್ನು ದಾಟಿ ಮಾಡಿರುವ ಮಂಡನೆಯಾಗಿರುವುದರಿಂದ. ಕಾರಂತರಲ್ಲಿ ನೀವದನ್ನು ಬಹುತೇಕ ಕಾಣಲಾರಿರಿ. ಅನಂತಮೂರ್ತಿ, ತೇಜಸ್ವಿ ಇಂಥ ಕತೆಗಳನ್ನು ಬರೆದಿರುವರಾದರೂ ಮತ್ತು ಈ ಲೇಖಕರದು ಕಲೆಗಾರಿಕೆಯಲ್ಲಿ ಮೇಲ್ತರಗತಿಯಾದರೂ "ಕಾಡು" ಅನನ್ಯವಾಗಿರುವುದು ತನ್ನ ನಿಬಿಡ ಅನುಭವಗಳ ಮೌಲ್ಯನಿರಪೇಕ್ಷ ದಾಖಲೆಯಲ್ಲಿ. ಮನುಷ್ಯನ ಮೂಲ ಪ್ರಕೃತಿಯ ಲೋಕಕ್ಕೆ ಧ್ಯಾನದ ಮೂಲಕ ಕೈ ಹಾಕಿದಾಗ ಮಾತ್ರ ಇಂಥ ಕೃತಿ ಸಾಧ್ಯ: ವೈಚಾರಿಕತೆಯ ಮೂಲಕ ಕೈಹಾಕಿದಾಗ ಅಲ್ಲ. ಆದರೆ ಯಾರೂ ಇಂಥ ಧ್ಯಾನವನ್ನು ಸರ್ವಾರ್ಥ ಪ್ರತಿಪತ್ತಿದಾಯಕವೆಂದು ತಿಳಿಯದಿರಲಿ. ಏಕೆಂದರೆ ಇಂಥದೇ ಸಜಾತೀಯ ಕೃತಿ 'ಮಲೆಗಳಲ್ಲಿ ಮದುಮಗಳು'ವಿನ ಹತ್ತಿರಕ್ಕೂ "ಕಾಡು" ಸುಳಿಯಲೂ ಸಾಧ್ಯವಿಲ್ಲ. ಏಕೆಂದರೆ 'ಮಲೆಗಳಲ್ಲಿ ಮದುಮಗಳು' ಚರಿತ್ರೆಯ ಧ್ಯಾನವಾಗಿದೆ. ಆದುದರಿಂದಲೇ ಮೌಲ್ಯಗಳ ಜಿಜ್ಞಾಸೆಯೂ ಆಗಿದೆ. ಹಾಗಾಗಿ ನಾನು "ಕಾಡ"ನ್ನು ನವ್ಯದ ಒಂದು ಪ್ರಯೋಗವನ್ನಾಗಿ, ಗಂಭೀರವಾದ ಪ್ರಯೋಗವನ್ನಾಗಿ ಮಾತ್ರ ತಿಳಿಯುತ್ತೇನೆ.

೨. ಇದು ಎಂಥಲೋಕ ಈ 'ಕಾಡಿ'ನ ಲೋಕ! ಇಲ್ಲಿ ಎಲ್ಲವೂ ನಿಗೂಢ. ಚಂದ್ರೇಗೌಡರ ಹಾದರವನ್ನು ನಿಯಂತ್ರಿಸಲು ಗೌಡರ ಹೆಂಡತಿ ಮಂತ್ರವಾದಿಯ ಮೂಲಕ ಹನುಮಂತರಾಯನ ಗುಡಿಯ ಹಿಂದಿನ ಮೆಳೆಯಲ್ಲಿ ಭಯಂಕರ ಮಂತ್ರ ಹಾಕಿಸುತ್ತಾಳೆ. ದಾಂಪತ್ಯ ನೀತಿಯನ್ನು ಮನುಷ್ಯ ಉಲ್ಲಂಘಿಸುತ್ತಾನೆ ಏಕೆ ಎನ್ನುವುದು ಎಷ್ಟು ಗೂಢವೆಂದರೆ ಅದನ್ನು ನಿಯಂತ್ರಿಸಲು ಮರಳಿ ಆ ಗೂಢಕ್ಕೇ ಶರಣಾಗಬೇಕಾಗುತ್ತದೋ ಎನ್ನುವಂತೆ. ಹಾಗೆಯೇ, ಗಂಡ ಇನ್ನೊಬ್ಬಳ ತೆಕ್ಕೆಗೆ ಹೋಗುವುದರಿಂದ ಜೀವ ಕುಸಿಯುತ್ತಿರುವ ಈ ಹೆಂಡತಿ ತಾನೇ ಕೆಲವರ ಅತ್ಯಾಚಾರಕ್ಕೆ ತುತ್ತಾಗಿ 'ವಸ್ತು ಹೋಗಿಬಿಡುವ' ತನಕದ ಈ ಲೋಕ, ಎಲ್ಲ ಆಯಾಮುಗಳನ್ನೂ ತನ್ನೊಳಗೆ ಸೆಳೆಯುತ್ತ, ಎಲ್ಲವನ್ನೂ ತನ್ನಂತೆ ಮಾಡುವ Blackhole ನಂಥ ಲೋಕವೆ ? ಉದಾತ್ತೀಕರಣದ (Transecndence) ಬೀಜಗಳೆಲ್ಲ ಹುರಿಯಲ್ಪಟ್ಟಿವೆಯೆ ಈ ಬೀಜ ಭೂಮಿಯಲ್ಲಿ ? ಉದಾತ್ತೀಕರಣ ಎನ್ನುವುದೇ ಒಂದು ಬೌದ್ಧಿಕ ಮೋಸ ಎಂದು ರಾಕ್ಷಸ ನಿರ್ಲಕ್ಷದಿಂದ ಗಹಗಹಿಸುತ್ತಿರುವಂತಿದೆ. ಆದುದರಿಂದಲೇ ಈ Wild ಬದುಕಿನ ಚಿತ್ರದಲ್ಲಿ, ನವ್ಯರಲ್ಲಿ ಧಾರಾಳವಾಗಿದ್ದ 'ಒಳತೋಟಿ' ಒಳಹೊಕ್ಕಿಲ್ಲ. ಹಾಗೆಂದು ತನ್ನ ಗಾಯಗಳನ್ನು ತಾನೇ ನೆಕ್ಕುತ್ತ : ತನ್ನ ಹಿಂಸೆಯಲ್ಲಿ ತಾನೇ ರತವಾಗಿದೆ.

೩. ನಿಜಕ್ಕಾದರೆ "ಕಾಡು" ಮತ್ತು "ಭುಜಂಗಯ್ಯನ ದಶಾವತಾರ" ಗಳನ್ನು ಕೂಡಿಯೇ ಓದಬೇಕು. ಮತ್ತು ಅವೆರಡೂ ಸೇರಿಯೇ ಒಂದು ಕೃತಿ. ಕೃಷ್ಣ ಬರೆಯುತ್ತಿದ್ದುದು ಒಂದೇ ಕೃತಿ ಎಂದು ಹೇಳಬೇಕೆನಿಸುತ್ತದೆ. 'ಭುಜಂಗಯ್ಯನ ದಶಾವತಾರಗಳು' ಕೃತಿಯ ಮೊದಲಲ್ಲಿ ಕೊಟ್ಟಿರುವ ಮಧುರ ಚೆನ್ನರ ಅಸಾಮಾನ್ಯ ಹಾಡು 'ಕಾಡು'ವಿನ ಕೊನೆಯ ಹಾಡಾಗಿರಲೂ ಯೋಗ್ಯವಾಗಿದೆ. 'ಏಳಮ್ಮ ಮಲಗಿರುವ ತಾಯಿ ಪೃಥಿವಿ' – Transcend ಆಗಲು ಕೊಟ್ಟಿರುವ ಕರೆಯಂತಿದೆ. ಚಾರಿತ್ರಿಕ ಕರೆ.

೪. "ಕಾಡು"ವಿನಲ್ಲಿ ನಡೆದದ್ದು 'ಭುಜಂಗಯ್ಯ'ನಲ್ಲಿ ಮರಳಿ ಆವರ್ತಿಸುವುದು ಅರ್ಥಪೂರ್ಣವಾಗಿದೆ. ನಾಟಕ, ಬೆಂಕಿ, ಅತ್ಯಾಚಾರ.... ಇವೆಲ್ಲ, ಭುಜಂಗಯ್ಯನ ಹೋಟೆಲಿನ ಪ್ರಸ್ತಾವವೂ 'ಕಾಡಿ'ನಲ್ಲೇ ಬರುತ್ತದೆ.

"ಭುಜಂಗಯ್ಯ...."ನದೂ ವಸ್ತು ಅದೇ. ದಾಂಪತ್ಯದ ಎಲ್ಲೆಯ ಉಲ್ಲಂಘನೆ. ಆದರೆ ಭುಜಂಗಯ್ಯ ಮತ್ತು ಸುಶೀಲ ನಿಜವಾದ ದಂಪತಿಯೇ ಆಗಿ ನಿಲ್ಲುತ್ತಾರೆ. ಅಂದರೆ ದಾಂಪತ್ಯದ ಎಲ್ಲೆಯನ್ನು ಜೀವಂತವಾಗಿ ವಿಸ್ತರಿಸುತ್ತಾರೆ. ಇದು ಮುರಿದು ಕಟ್ಟುವ ಕೆಲಸ. ಆದರೆ ನಿಜವಾದ ದಾಂಪತ್ಯ ಸಿದ್ಧಿಸುವುದು ಅತ್ಯಾಚಾರಕ್ಕೆ ಒಳಗಾದ ಸುಶೀಲಳನ್ನು ಕುರುಡು ಭುಜಂಗಯ್ಯ, ಮಗುವಿನಂತೆ ಲಾಲಿಸುವುದರಲ್ಲಿ. ಆಕೆ

ಅತ್ಯಾಚಾರಕ್ಕೆ ಒಳಗಾದುದಕ್ಕೆ ಭುಜಂಗಯ್ಯ ಕುರುಡನಾಗಿರುವುದೂ ಪರೋಕ್ಷ ಕಾರಣವಾಗಿ ನಿಂತಿದೆಯಾದರೂ ಭುಜಂಗಯ್ಯ ಕೆಲವು ಅಸಾಮಾನ್ಯ ನಿಲುವುಗಳನ್ನು ತಳೆಯಲೂ ಆತನ ಕುರುಡು ಕಾರಣವಾಗಿದೆ. ಮಧುರ – ಚೆನ್ನರ ಹಾಡಿನ ಈ ಸಾಲು “ಕಾಣದ ಆ ಕುರುಡು, ಕಾಣುವ ಈ ಕುರುಡು, ಕಂಡೇನು ? ಕಾಣದಿದ್ದೇನು” “ಕಾಡು”ವಿನಲ್ಲಿ ಕಾಣುವ ಕುರುಡಿಗೂ ಭುಜಂಗಯ್ಯನ ಕುರುಡಿಗೂ ಕುರಿತಾಗಿ ಹೇಳಿದಂತಿದೆ.

೫. ಭುಜಂಗಯ್ಯ ಮೀರುತ್ತಿದ್ದಾನೆ. ಮೀರುವ ಈ ನಡಿಗೆಯಲ್ಲಿ ತಡವರಿಸುತ್ತಿರುವ ಅವನ ಕೈಗಳಿಗೆ ಆಧಾರವಾಗಿ ಸಿಕ್ಕುತ್ತಿರುವುದು ತೀರ ಹತ್ತಿರದ ವಸ್ತುಗಳೇ, ಪ್ರಾದೇಶಿಕ ಸಂಸ್ಕೃತಿಯ ಪರಿಕರಗಳೇ. ಹೋಟೆಲಿಟ್ಟು ಆಹಾರ ವಿಕ್ರಯ ಮಾಡಿದವನು ಭಿಕ್ಷೆ ನಿಸ್ಸಂಕೋಚವಾಗಿ ಎತ್ತುತ್ತಾನೆ. ಭಿಕ್ಷೆ ಈ ಸಂಸ್ಕೃತಿಯಲ್ಲಿ ಅವಮರ್ಯಾದೆಯಲ್ಲ; ಅವಮಾನವಲ್ಲ. ತನ್ನ ಅಹಂಕಾರವನ್ನು ಕಿತ್ತು ಉಳಿದವರನ್ನು ಮಾನವೀಕರಣ ಮಾಡುವ ಕಾಯಕ ಅದು. ಶರಣರು ಈ ಗುಟ್ಟನ್ನು ಭುಜಂಗಯ್ಯನಿಗೆ ತಿಳಿಸುತ್ತಾರೆ. ಸಮೃದ್ಧಿಯನ್ನು ಸೂಚಿಸುವ ‘ಸುಭಿಕ್ಷ’ ಎನ್ನುವ ಪದದ ವಾಚ್ಯಾರ್ಥವನ್ನು ಗಮನಿಸಿ. ಗೃಹಸ್ಥಧರ್ಮ ಕೇಂದ್ರಿತವಾದ ಮೌಲ್ಯಗಳಿಗೆ ‘ಭಿಕ್ಷೆ’ ಭಿನ್ನವಾದುದಾದರೂ; ಸಂಸ್ಕೃತೀಕರಣಕ್ಕೂ ಭಿನ್ನವಾದುದಾರೂ ‘ಭಿಕ್ಷೆ’ ಮೀರುವ ಒಂದು ಬಗೆಯಾಗಿದೆ.

ಹಾಗೆಯೇ, ಭುಜಂಗಯ್ಯ ಹೋಟೆಲಿಟ್ಟ ಕಾರಣವಾಗಿಯೇ ಆತ ಜಾತಿಯನ್ನು ಮೀರಬೇಕಾದ ಸ್ಥಿತಿ ಒದಗಿ, ಇಲ್ಲಿ ಗಾಂಧಿ ಆತನಿಗೆ ಆಸರೆಯಾಗುತ್ತಾರೆ. ದಾಟುವ ನಡಿಗೆ ಪ್ರಾರಂಭವಾಗುತ್ತೆ.

೬. Catch him young ಎನ್ನುವಂತೆ ಹೊಸ ಕೊಪ್ಪಲ ಬದುಕು ತಮ್ಮ ಮುದ್ರೆಗಳನ್ನು ಕಿಟ್ಟಿಯ ಸುಪ್ತ ಪ್ರಜ್ಞೆಯಲ್ಲಿ ಊರಿ ನಿಲ್ಲಿಸುತ್ತ ಅವನಲ್ಲಿ ತಮ್ಮ ವಾರಸುದಾರನನ್ನು ನೋಡುತ್ತಿವೆ. ಮಾದಳ್ಳಿಯ ಭುಜಂಗಯ್ಯನಿಗೆ ವಾರಸುದಾರರಿಲ್ಲ. ಅವನ ವಿಷ ಚಿಕಿತ್ಸೆಯ ವಿದ್ಯೆಕೂಡಾ ಅವನಲ್ಲಿಯೇ ಕೊನೆಗಾಣುತ್ತದೆ. ಈ ವಿದ್ಯೆಯಲ್ಲಿ ಅವನಿಗೆ ವಾರಸುದಾರರಿರುತ್ತಿದ್ದರೆ ಆತ ಬದುಕುಳಿಯುತ್ತಿದ್ದ. ಅವನು ಬದುಕಿಸಿದವರು ಅವನಿಗೆ ಕೃತಜ್ಞರೇ ಹೊರತು ಅವನ ವಾರಸುದಾರರಲ್ಲ. ಅವನ ಹೋಟೆಲು ಸುಟ್ಟು ಹೋದಂತೆ, ಪಾರ್ವತಿಯ ಜತೆಗಿನ ಅವನ ದಾಂಪತ್ಯವೂ ಮುರಿದದ್ದೇ. ತನ್ನ ಹಿಂದೆ ಇಂಥ ಏನನ್ನೂ ಉಳಿಸದೆ ಆದರೆ ಅದ್ಭುತವಾಗಿ ಬದುಕಿ ಸಂದುಹೋಗುವ ಭುಜಂಗಯ್ಯ ಒಂದು ಆಕಸ್ಮಿಕವೆಂದು ಕಂಡರೆ ಅಚ್ಚರಿಯಿಲ್ಲ. ಆದರೆ ಆಕಸ್ಮಿಕವೆಂದು ಕಂಡದ್ದೂ, ತಾನು ಕಂಡು ಬಂದ ಮೇಲೆ, ಚರಿತ್ರೆಯ ಕಾರಣಗಳಿಂದ ತಾಡಿತವಾಗುತ್ತಿರುವುದನ್ನು ತೋರಿಸುತ್ತದೆ. ಸಂಸ್ಕೃತಿಯ ವಾರಸುದಾರಿಕೆಯನ್ನು ತೋರಿಸುತ್ತದೆ. ಈ ದೃಷ್ಟಿಯಲ್ಲಿ ಕೂಡಾ ‘ಕಾಡು’ ’ಭುಜಂಗಯ್ಯನ ದಶಾವತಾರ’ಕ್ಕೆ ಪೂರ್ವಾರ್ಧವಾಗಿದೆ.

೭. ಸಾಂಕೇತಿಕ ಅರ್ಥವಂತಿಕೆಯಿಂದ ಇಡಿಕಿರಿದಂತೆ ಕಾಣುವ ಈ ಕೃತಿಗಳು, ದಿಟ್ಟಿಸಿ ನೋಡಿದರೆ ನಮ್ಮ ನೋಟವನ್ನು ಕಂಗೆಡಿಸಿ, ಸಂಕೇತ ಇತ್ಯಾದಿಗಳನ್ನು ಮೀರಿ ವಾಸ್ತವದ ಪಾತಳಿಯಲ್ಲೇ ಮೆರೆಯುತ್ತವೆ. ಕಾವ್ಯದಲ್ಲಿ "ಧ್ವನಿ"ಯಾಗಿ ಕಂಡದ್ದು, ಬದುಕನ್ನು ವಿಶಾಲ ಅರ್ಥದಲ್ಲಿ ತೆಗೆದುಕೊಂಡರೆ "ವಾಚ್ಯ"ವಾಗಿ ಬಿಡುವಂತೆ. "ಅನುಮಾನ," "ಆಗಮ" ಇತ್ಯಾದಿ ಪ್ರಾಮಾಣ್ಯ ಸಾಕೆನಿಸದೆ "ಪ್ರತ್ಯಕ್ಷ"ಕ್ಕೇ ಹಂಬಲಿಸುವಂತೆ. ತನ್ನ ಮಡದಿಯ ಮೇಲೆ ಅತ್ಯಾಚಾರ ಮಾಡಿದ ನಾರಾಯಣನ ವಿಷವನ್ನು ಹೀರಿಕಳೆವ ಭುಜಂಗಯ್ಯನ ಕ್ರಿಯೆ ಸಾಂಕೇತಿಕೆಯನ್ನು ಮೀರಿದ ಅರ್ಥವಂತಿಕೆಯನ್ನು ಪಡೆದಿದೆ. ಆದರೆ ಏನೇ ಆದರೂ ಸಾಹಿತ್ಯ, ಚರಿತ್ರೆಗೆ; ಬದುಕಿಗೆ ಪ್ರತ್ಯಾಮ್ನಾಯವೇ ಹೊರತು ತಾನೇ ಬದುಕಲ್ಲ. ತಾನೇ ಚರಿತ್ರೆಯಲ್ಲ. ಆದುದರಿಂದಲೇ ಕಲೆಯ ಗೆಲವನ್ನು ಕುರಿತೂ ನಾವು ಚಿಂತಿಸಬೇಕಾಗಿರುವುದು. ಪಾಬ್ಲೊ ನೆರೂಡ "ಗುಲಾಬಿಯನ್ನು ಕುರಿತು ಹೇಗೆ ಬರೆಯಲಿ ? ಇಲ್ಲಿ ರಸ್ತೆಯಲ್ಲಿ ರಕ್ತದ ಕಲೆಗಳಿವೆ" ಎನ್ನುವಾಗ ಗುಲಾಬಿಯ ಕೆಂಪು, ರಕ್ತದಿಂದ ಬಂದದ್ದು ಎಂದೂ ಹೇಳುತ್ತಿದ್ದಾರೆ. ಈ ಸಾದೃಶ್ಯದಲ್ಲೆ ಕಲೆಯ ಗೆಲುವಿರುವುದು. ಪಾರಂಗತನನ್ನು ಚಿತ್ರಿಸುವಾಗ ಪಾರಂಗತನು ಕೂಡ ಹೊಲೆಯ ಕರುಣೆಗೆ ಎಷ್ಟು ಋಣಿ ಎಂದು ಚಿತ್ರಿಸುವುದೇ ಸೂಕ್ತವಾದದ್ದು ಮತ್ತು ಭುಜಂಗಯ್ಯನದು ಇಂಥ ಚಿತ್ರಣ. ಈ ಅರ್ಥದಲ್ಲೆ "ಕಾಡು" ಮತ್ತು "ಭುಜಂಗಯ್ಯನ ದಶಾವತಾರ" ಕೂಡಿಯೇ ಒಂದು ಅಖಂಡ ಓದು ಎಂದು ನಾನು ಹೇಳುವುದು. ●

ಕಣ್ಣು ಅರಳದ ಕೂಸು ಮ್ಯಾಲೆ ಕತ್ತಲೆ ಗವಿಯು
ಆಗಲ್ಲ ಕಂಡೆ ನಾನೀಗ ।
ಕಾಣದ ಆ ಕುರುಡು ಕಾಣುವ ಈ ಕುರುಡು
ಕಂಡೇನು ಕಾಣದಿದ್ದೇನು ।
ಎಲ್ಲೀಯು ಈ ನಿದ್ದಿ ಕಾಳನ ಕರಿನಿದ್ದಿ
ಇದ್ದೇನು ಇಲ್ಲದಿದ್ದೇನು । ಏಳಮ್ಮಾ
ಮಲಗಿರುವ ತಾಯಿ ಪೃಥಿವಿ ॥

– ಮಧುರ ಚೆನ್ನ

(ಭುಜಂಗಯ್ಯನ ದಶಾವತಾರಗಳು ಕಾದಂಬರಿಯ ಆದಿಯಲ್ಲಿ ಉಲ್ಲೇಖಿತವಾಗಿರುವ ಕವಿತೆಯ ತುಣಕು)

# ಭುಜಂಗಯ್ಯನ ದಶಾವತಾರಗಳು: ಒಂದು ಅನುಭವ

**ಕೆ. ಸತ್ಯನಾರಾಯಣ**

ಅದೇನದು ಇದ್ದಕ್ಕಿದ್ದಂತೆ ಕನ್ನಡ ವಿಮರ್ಶಕರಿಗೆ ಶ್ರೀಕೃಷ್ಣ ಆಲನಹಳ್ಳಿಯ ಸಾಹಿತ್ಯ ಕೃಷಿ ಕಂಡರೆ ಅಷ್ಟೊಂದು ಆಸ್ಥೆ ? ಅಕಾಲದಲ್ಲಿ ನಿಧನರಾದವರೊಬ್ಬರ ಸಾವಿನ ಬಗ್ಗೆ ನಮ್ಮಲ್ಲಿ ಭಯದಿಂದಲೇನು ಈ ಆಸಕ್ತಿ ಮೂಡಿ ಬಂದಿರುವುದು ? ಅಥವಾ ಸತ್ತವರೆಲ್ಲರನ್ನೂ ಹುತಾತ್ಮರನ್ನಾಗಿಸುವ ಭಾರತೀಯ ಪ್ರಯತ್ನದ ಅಂಗವೆ ಇದು ? ಈ ಪ್ರಶ್ನೆಗಳನ್ನು ನನಗೆ ನಾನೇ ಕೇಳಿಕೊಂಡು ತಬ್ಬಿಬ್ಬಾಗಿದ್ದೇನೆ, ಸ್ಪಷ್ಟವಾದ ಉತ್ತರ ಈಗ ಹೊಳೆಯದೆ ಹೋದರೂ, ಸಾಹಿತ್ಯ ವಿಮರ್ಶೆ–ಚರ್ಚೆ ಇಂತಹ ಪ್ರಾಸಂಗಿಕ ಪ್ರಶ್ನೆಗಳ ಒತ್ತಾಯವನ್ನೂ ಮೀರಿ ಕೂಡ ಮುಂದೆ ಹೋಗಬೇಕೆಂಬ ಅರಿವು ಕೂಡ ನನಗಿದೆ. ಈ ಅರಿವಿದೆಯೆಂಬ ಕಾರಣಕ್ಕೆ ಮಾತ್ರವೇ ಮನಸ್ಸಿನ ಗೊಂದಲವನ್ನು ಹೇಳದೆ ಹೋಗುವುದು ಅಪ್ರಮಾಣಿಕವಾಗುತ್ತದೆ.

ನನ್ನ ಈ ಗೊಂದಲಗಳಿಗೆ ಸ್ಪಷ್ಟವಾದ ಉತ್ತರ ದೊರಕಿದ್ದು ಅವರ ಕೊನೆಯ ಕಾದಂಬರಿ 'ಭುಜಂಗಯ್ಯನ ದಶಾವತಾರ'ವನ್ನು ಮತ್ತೆ, ಮತ್ತೆ ಓದಿದಾಗ. ನಮ್ಮ ಸಾಹಿತ್ಯ ಲೋಕ ಈ ಕಾದಂಬರಿಯ ಬಗ್ಗೆ ತೋರಿಸಿದ ಅನಾದರ, ಉಪೇಕ್ಷೆ ಎಲ್ಲದಕ್ಕೂ ಕೃತಿಯ ಸ್ವರೂಪದಲ್ಲೇ ಕಾರಣಗಳನ್ನು ಹುಡುಕಬಹುದು. ಈ ಕಾರಣಗಳು ಹೀಗಿವೆ:

೧. ಸದ್ಯ ಚಾಲ್ತಿಯಲ್ಲಿರುವ ಸಾಹಿತ್ಯಿಕ ವಿಚಾರಗಳನ್ನು ಚಳುವಳಿಗಳಿಂದ ಪ್ರೇರಿತವಾದ ಮಾದರಿಗಳನ್ನು, ಈ ಕಾದಂಬರಿ ಸೃಜನಶೀಲವಾಗಿ ನಿರಾಕರಿಸಿತು. ಇದನ್ನು ಸ್ವಲ್ಪ ವಿವರಿಸಬೇಕು. ಆಧುನಿಕ ಮನುಷ್ಯನಲ್ಲಿ ಮುಖ್ಯವಾದ ದ್ವಂದ್ವ ಇದು: ಏಕಕಾಲದಲ್ಲಿ ಅವನು ಜೀವನದಲ್ಲಿ ಯಶಸ್ಸನ್ನು ಮತ್ತು ಅರ್ಥವನ್ನು ಹುಡುಕಲು ಯತ್ನಿಸುತ್ತಿರುತ್ತಾನೆ; ಇದರ ಸಂಘರ್ಷವನ್ನು ಅನುಭವಿಸುತ್ತಿರುತ್ತಾನೆ. ಈ ಸಂಘರ್ಷ ನಮ್ಮೆಲ್ಲ ಮುಖ್ಯ ಲೇಖಕರ ಕಥಾಸಾಹಿತ್ಯದ ವಸ್ತು. ಆದರೆ ಈ ಸಂಘರ್ಷವನ್ನು ಮೂಡಿಸಲು/ಶೋಧಿಸಲು ಅವರೆಲ್ಲ ಕಲಿತ/ಸೂಕ್ಷ್ಮ ಪ್ರಜ್ಞೆಯ ಪಾತ್ರಗಳನ್ನು ಆರಿಸಿ ಕೊಳ್ಳುತ್ತಾರೆ. ಅಶಿಕ್ಷಿತ ಅಥವಾ ಗ್ರಾಮ್ಯ ವಾತಾವರಣದಿಂದ ಬರುವ ಪಾತ್ರಗಳು ಸಂಕೇತಗಳಾಗಿ/ಪ್ರತೀಕಗಳಾಗಿ ಬದುಕಿನ ಬೇರೊಂದು ಸಾಧ್ಯತೆಯನ್ನು ತೋರಿಸು ವುದಕ್ಕೆ ಉದಾಹರಣೆಯಾಗಿ ಮಾತ್ರ ಬರುತ್ತವೆ. ತೇಜಸ್ವಿಯವರ ಮಂದಣ್ಣ ತಕ್ಷಣ ನೆನಪಿಗೆ ಬರುತ್ತಾನೆ. ಅವನೆಷ್ಟೇ ಮಹತ್ವದವನೆನ್ನಿಸಿದರೂ, ಆ ಪಾತ್ರ ಮಾತ್ರ ಕಾದಂಬರಿಯಲ್ಲಿ ಮೈದುಂಬುವುದಿಲ್ಲ. 'ಭುಜಂಗಯ್ಯ'ನಲ್ಲಿ ಹೊಸ ಬದುಕಿನ ಮುಖ್ಯ ವಾದ ದ್ವಂದ್ವವೊಂದನ್ನು ಬೇರೆ ಪರಿಸರ, ಬೇರೆ ಹಿನ್ನೆಲೆಯಲ್ಲಿ ನೋಡಿದ್ದರಿಂದ, ಮಂಡಿಸಿದ್ದರಿಂದ ಅಂತಹ ಸಾಧ್ಯತೆಯನ್ನೂ ಊಹಿಸದಿದ್ದ ನಮಗೆ ತಕ್ಷಣ ಕೃತಿಗೆ ಪ್ರತಿಕ್ರಿಯಿಸುವುದು ಸ್ವಲ್ಪ ತೊಡಕಾಯಿತು. ಕೇವಲ ಸಂತೋಷವಾಗದೆ, ಪರ್ಯಾಯ ವಾಗದೆ ಪೂರಾ ಮೈ ತುಂಬಿಕೊಂಡ ಭುಜಂಗಯ್ಯ ತಾನಿದ್ದ ಕಡೆಯೇ ಜೀವನ ಪ್ರವಾಹ ನಿರಂತರವಾಗಿ, ಅಖಂಡವಾಗಿ ಹರಿಯುತ್ತಿರುವುದನ್ನೂ ಸೂಚಿಸಿದ. ಕೆ. ವಿ. ನಾರಾಯಣ್ 'ಶೂದ್ರ'ದ ಒಂದು ಲೇಖನದಲ್ಲಿ ಸೂಚಿಸಿರುವ ಹಾಗೆ ಗ್ರಾಮ ಸಮಾಜ ನಾಶವಾಗುತ್ತಿದೆ; ಪತನದ ಅಂಚಿನಲ್ಲಿದೆ....ನಾಗರೀಕತೆಯ ಆಘಾತವನ್ನು ಅದು ತಡೆದುಕೊಳ್ಳಲಾರದು—ಎಂಬೆಲ್ಲ ರೂಢಿಯಲ್ಲಿರುವ ಕಲ್ಪನೆಗಳಿಗೆ ಬದಲಾಗಿ, ಅಲ್ಲಿಯ ಚೈತನ್ಯ, ಸಂಘರ್ಷ ರೂಢಿಗಳು ಇವುಗಳಿಂದಲೆ ಮೂಡಿಬಂದು ಮಾಗುತ್ತಲೇ ಹೋದ ಭುಜಂಗಯ್ಯನ ಪಾತ್ರ ಕಲ್ಪನೆ/ಪರಿಸರ, ಇವೆರಡು ನಮ್ಮ ಸಂವೇದನೆಯೊಳಗೆ ಇಳಿ ಯುವುದು ಬಹಳ ತಡವಾಯಿತು.

೨. ಎರಡನೆಯ ಕಾರಣ ಮೊದಲನೆಯದಕ್ಕೆ ಪೂರಕವಾದದ್ದು. ಸದ್ಯದ ನಮ್ಮ ವಿಮರ್ಶಾ ಮಾದರಿ ವೈಚಾರಿಕ, ಬೌದ್ಧಿಕ ಆಕೃತಿಗಳಿಗೆ ಸ್ಪಂದಿಸುವಷ್ಟು ಬೇಗ ಅಖಂಡ ಅನುಭವದ ಆಕೃತಿಗಳಿಗೆ ಸ್ಪಂದಿಸಲಾರದು. ಯಾವ ಸಾಹಿತ್ಯ ಕೃತಿಯಲ್ಲಿ ವೈಚಾರಿಕ ಆಕೃತಿ ಢಾಳಾಗಿದ್ದು, ಪ್ರಧಾನವಾಗಿದ್ದು, ಅದು ಕೃತಿಯಲ್ಲಿನ ವಿವರ ಸಂಯೋಜನೆ ಇವೆಲ್ಲವನ್ನೂ ನಿರ್ಧರಿಸುತ್ತದೋ, ಅಂತಹ ಕೃತಿಗಳಿಗೆ ಸ್ಪಂದಿಸಲು, ಪ್ರತಿಕ್ರಿಯಿಸಲು ನಮ್ಮಲ್ಲಿ ಮಾದರಿಗಳಿವೆ. ತೇಜಸ್ವಿ, ಅನಂತಮೂರ್ತಿ, ಚಿತ್ತಾಲ— ಇವರುಗಳ ಕಥಾ ಸಾಹಿತ್ಯದಲ್ಲಿ ವೈಚಾರಿಕ ಆಕೃತಿಯೊಂದು ಕೃತಿ ನಿರ್ಮಾಣಕ್ಕೆ ಮುಂಚೆಯೇ ನಿರ್ಧಾರವಾಗಿದ್ದು, ಆ ಆಕೃತಿಯೆ ಕೃತಿಯ ಶಿಲ್ಪ ವಿವರಗಳೆಲ್ಲವನ್ನೂ

ಸ್ಥೂಲವಾದ ಅರ್ಥದಲ್ಲಿಯಾದರೂ, ಸಂಘಟಿಸುತ್ತಾ ಹೋಗುವುದನ್ನೂ ನೋಡಬಹುದು. ತೀರಾ ಈಚಿನ ಉದಾಹರಣೆಯೆಂದರೆ ತೇಜಸ್ವಿಯವರ 'ಚಿದಂಬರ ರಹಸ್ಯ'. ಕೆಸರೂರಿನ ಸದ್ಯದ ಮತ್ತು ಭವಿಷ್ಯದ ಬಗ್ಗೆ ಲೇಖಕರಿಗಿರುವ ಕಾಣ್ಕೆಯಲ್ಲಿ ಕಾದಂಬರಿಯೊಳಗೆ ಯಾವ ಬೆಳವಣಿಗೆಯೂ ಇಲ್ಲ. ಕೆಸರೂರು ವಿನಾಶಕ್ಕೆ ಅರ್ಹವಾದ್ದು. ಅದು ವಿನಾಶದ ಹಾದಿಯಲ್ಲಿದೆ ಎಂಬ ಕಾಣ್ಕೆಯನ್ನು ಗೃಹೀತವೆಂದು ಸ್ವೀಕರಿಸುವ ಆಧುನಿಕ ಪ್ರಜ್ಞೆ/ನಗರ ಪ್ರಜ್ಞೆ ನಮ್ಮಲ್ಲಿ ಈಗಾಗಲೇ ಬೆಳೆಸಿರುವ ವಿನಾಶದ ಪ್ರೀತಿಗೆ ಪೂರಕವಾದ್ದು. ಆದ್ದರಿಂದ ಓದುಗರಾದ ನಾವು ಕೂಡ ಆ ಕಾಣ್ಕೆಯನ್ನು ಒಪ್ಪಿಕೊಂಡೇ ಕಾದಂಬರಿಯನ್ನು ಸ್ವೀಕರಿಸುತ್ತೇವೆ. ಈ ಕಾರಣದಿಂದಾಗಿಯೇ ತೇಜಸ್ವಿಯ ಕಾದಂಬರಿಯ ಮೇಲೆ ಬಂದ ವಿಮರ್ಶೆಯಲ್ಲಿ ಏಕತಾನತೆ ಇರುವುದು.

ಭುಜಂಗಯ್ಯನ ಕ್ರಮ ಇದಕ್ಕೆ ವಿರುದ್ಧವಾದ್ದು. ಇಲ್ಲಿ ಕೃತಿಯ ಅನುಭವ/ವಿವರಗಳೇ ಕೃತಿಯ ವೈಚಾರಿಕ ಆಕೃತಿಯನ್ನು ಕಟ್ಟುತ್ತಾ ಹೋಗುತ್ತದೆ. ಈ 'ಕಟ್ಟುವಿಕೆ'ಯ ಕ್ರಿಯೆ ಕೊನೆಯವರೆಗೂ ಮುಂದುವರೆಯುತ್ತಾ ಹೋಗುತ್ತದೆ. ಹೀಗೆ ಅನುಭವ, ವಿವರಗಳ ಮೂಲಕ ಕೃತಿಯ ಆಕೃತಿಯನ್ನು ಕೊನೆಯವರೆಗೂ ಕಟ್ಟುತ್ತಾ ಹೋಗುವುದು ಕೂಡ ಜೀವನದ ನಿರಂತರತೆಯನ್ನು ಒಪ್ಪುವ ಪ್ರತಿಪಾದಿಸುವ ಈ ಕೃತಿಯ ತಾತ್ವಿಕತೆಯ ಒಂದು ಭಾಗ ಮತ್ತು ಈ ರೀತಿಯ ಕ್ರಮೇಣವಾದ, ಸಾವಯವವಾದ ಕಟ್ಟುವಿಕೆಯ ಮುಂದುವರಿಕೆಯಿಂದಾಗಿಯೇ ನೇರವೆಂದು, ಸರಳವೆಂದು ಕಾಣುವ ಕಥಾನಕದಲ್ಲಿ ಕೃತಿಯ ಬೆಳವಣಿಗೆಗೆ ಬೇಕಾದ ಕರ್ಷಣ ಸಿಕ್ಕಿರುವುದು. ಹೀಗೆ ಹೇಳಿದರೂ ಕೃತಿಯ ವೈಚಾರಿಕ ಆಕೃತಿಯೆಂಬುದು ಮೊದಲೇ ಹೇಳಿದ ಹಾಗೆ ಕಣ್ಣಿಗೆ ಕುಕ್ಕುವಂತಹದಲ್ಲ. ಅದು ಅದರ ಒಡಲೊಳಗೇ ಇರುವಂತಹದ್ದು; ನೀವು ಅದಕ್ಕೆ ಒಪ್ಪಿಸಿಕೊಂಡಾಗ ಮಾತ್ರ ಕ್ರಮೇಣ, ಕ್ರಮೇಣ ಬಿಟ್ಟುಕೊಡುವಂತಹದ್ದು. ಕೃತಿಯ ವೈಚಾರಿಕ ಆಕೃತಿಯೇನೆಂಬುವನ್ನು ಈಗಾಗಲೇ ಸೂಚಿಸಿರುವೆ. ಅದರ ವಿವರಣೆ ಲೇಖನದ ಮುಂದಿನ ಭಾಗದಲ್ಲಿದೆ.

೩. ಮೂರನೆಯ ಮತ್ತು ಕೊನೆಯ ಕಾರಣ ಕಾದಂಬರಿಯ ಗುಣವೊಂದರಿಂದಲೇ ಮೂಡಿಬಂದಂತದ್ದು – ನಿಮ್ಮ ವಿವೇಚನೆ, ವಿಮರ್ಶಾ ಪ್ರಜ್ಞೆ ಎಷ್ಟೇ ಜಾಗೃತವಾಗಿದ್ದರೂ, ಈ ಕೃತಿಯ ಓದು / ಅನುಭವ ಅವೆಲ್ಲವನ್ನೂ ಹಿಂದಕ್ಕೆ ಸರಿಸಿ ನಿಮ್ಮ ಸಹೃದಯತೆಗೇ ಲಗ್ಗೆ ಹಾಕುತ್ತಿರುತ್ತದೆ; ನಿಮ್ಮ ಸಹೃದಯತೆಯನ್ನು ತನ್ನ ಒಡಲೊಳಗೆ ಎಳೆದುಕೊಳ್ಳುತ್ತಿರುತ್ತದೆ; ಇದರಿಂದಾಗಿ ಕಾದಂಬರಿಯನ್ನು ವಿಮರ್ಶಿಸುವುದಕ್ಕಿಂತ / ವಿವೇಚಿಸುವುದಕ್ಕಿಂತ ಅದನ್ನು ನಮ್ಮ ಅಂತರಂಗದ ಒಂದು ಭಾಗವಾಗಿ ಮಾಡಿಕೊಳ್ಳುವ ಪ್ರಯತ್ನ, ನಮ್ಮೊಳಗೆ ನಮ್ಮನ್ನೇ ಮೀರಿ ನಡೆಯುತ್ತಿರುತ್ತದೆ. ಅಂದರೆ ಕಾದಂಬರಿಯ ಓದು 'Literary experience' ಗಿಂತಲೂ ಮೇಲು

ಮುಟ್ಟಿದ್ದಾದ್ದರಿಂದ ಅದರ ವಿಮರ್ಶೆ, ವಿವೇಚನೆ, ಬಹಿರಂಗ ಚರ್ಚೆಗೆ ಮನಸ್ಸು ಅಷ್ಟು ಬೇಗ ಸಿದ್ಧವಾಗುವುದಿಲ್ಲ. ಇದನ್ನು ನಾನು ಸ್ವಂತ ಅನುಭವದಿಂದ ಹೇಳುತ್ತಿರುವುದರಿಂದಲೇ ಈ ಲೇಖನವನ್ನು 'ಭುಜಂಗಯ್ಯ' ಕಾದಂಬರಿಯನ್ನು ಅನುಭವಿಸಿದ ರೀತಿಯ ಒಂದು ಭಾಗವಾಗಿ ಮಂಡಿಸಲು ಯತ್ನಿಸಿದ್ದೇನೆ. ಏನನ್ನೇ ಬರೆದರೂ, ಸಹೃದಯತೆಯ ತೆಕ್ಕೆಯೊಳಗೆ ಸೇರಿದ್ದೆಲ್ಲವೂ ಈಚೆಗೆ ಹೊರಬರುತ್ತದೆಂಬ ಖಾತ್ರಿ ಏನು ? ಅದರ ಸ್ವಾರ್ಥ, ಅದಕ್ಕೆ! ತನಗೆ ಬೇಕಾದ್ದನ್ನು, ತನಗೆ ಪವಿತ್ರವೆನಿಸಿದ್ದನ್ನು ಅದು ಹಾಗೆಯೆ ಉಳಿಸಿಕೊಳ್ಳಬಹುದು; ಇತರರ ಜೊತೆ ಹಂಚಿಕೊಳ್ಳಲು ನಿರಾಕರಿಸಬಹುದು. ಸಾಹಿತ್ಯ ಕೃತಿಯೊಂದರ ಕ್ಲಾಸಿಕ್ ಗುಣವೆಂದರೆ ಮುಖ್ಯವಾಗಿ ಇದೇನೇ; ಅದು ಕೃತಿಯ ಕಲಾತ್ಮಕ ಆಯಾಮಕ್ಕೆ ಸಂಬಂಧಿಸಿದ್ದಲ್ಲ. ಕಲಾತ್ಮಕ ಆಯಾಮ ಅದರ ಕನಿಷ್ಠ ಅವಶ್ಯಕತೆ ಮಾತ್ರ. ಪ್ರತಿಯೊಬ್ಬ ಓದುಗನ ಅಂತರಂಗದ ಆಸ್ತಿಯಾಗುವ. ಆ ಆಸ್ತಿಯನ್ನು ಜತನದಿಂದ ಇಟ್ಟುಕೊಳ್ಳುವ ಆಸೆಯನ್ನು ಹುಟ್ಟಿಸದ ಕೃತಿ ಕ್ಲಾಸಿಕ್ ಆಗಲಾರದು. ಪ್ರತಿಯೊಬ್ಬ ಓದುಗನ 'ವಿಶಿಷ್ಟ'ದಲ್ಲಿ ಮಾತ್ರ ನಿಜವಾಗುವ ಅರಳಿಕೊಳ್ಳುವ ಕ್ಲಾಸಿಕ್ ಕೃತಿಗೆ ಯಾರೇ ಬರೆಯುವ ವಿಮರ್ಶೆಯ ಮಾತುಗಳು ಸಾಮಾನ್ಯವಾಗಿರುತ್ತವೆ, ಸ್ಥೂಲವಾಗಿರುತ್ತವೆ. ಈ ಮಿತಿಯನ್ನು ಒಪ್ಪಿಕೊಂಡೇ ಕಾದಂಬರಿಯ ಅನುಭವದ ಕೆಲವು ನೆಲೆಗಳನ್ನು ನಾನು ಮುಂದಿನ ಭಾಗದಲ್ಲಿ ಗುರುತಿಸಿದ್ದೇನೆ.

೨

ಮೊದಲನೆಯ ನೆಲೆ ಕಾದಂಬರಿಯ ಅಸ್ವಸ್ಥತೆ ಮತ್ತು ದೈನಿಕವನ್ನು ಕ್ರಿಯಾಶೀಲವಾಗಿಸಿಕೊಳ್ಳುವ, ಹೊಸದು ಮಾಡಿಕೊಳ್ಳುವ ಸ್ತರಕ್ಕೆ ಸಂಬಂಧಪಟ್ಟದ್ದು. ಇದು ಮುಖ್ಯವಾಗಿ ವ್ಯಕ್ತವಾಗುವುದು ಭುಜಂಗಯ್ಯನ ಮೂಲಕ ಮತ್ತು ಆತನ ಚಟುವಟಿಕೆಯಿಂದ ಚಡಪಡಿಸುವ, ಅಸ್ವಸ್ಥಗೊಳ್ಳುವ ಹಾಗೆಯೇ ಕ್ರಿಯಾಶೀಲವೂ ಆಗುವ ಮಾದಳ್ಳಿಯ ಮೂಲಕ. ಕಾದಂಬರಿ ಪ್ರಾರಂಭವಾಗುವುದೂ ಭುಜಂಗಯ್ಯನ ಅಸ್ವಸ್ಥತೆ ಮತ್ತು ಹೊಸದರ ಹಂಬಲದಿಂದ. ಈ ಹಂಬಲ ಅಸ್ವಸ್ಥತೆ ಅವನ ವ್ಯಕ್ತಿತ್ವದೊಳಗೆ ಇರುವಂತದ್ದು ಮತ್ತು ಸದಾ ಹೊಸ ಅವಕಾಶಗಳನ್ನು ಹುಡುಕುತ್ತಾ ಇರುವಂತದ್ದು. ಈ ವಾಕ್ಯವನ್ನು ಗಮನಿಸಿ:

"ಯಾರೆಷ್ಟೇ ಅಡ್ಡಿ ಆತಂಕಗಳನ್ನು ತಂದೊಡ್ಡಿದರೂ ಯಾವುದನ್ನೂ ಲೆಕ್ಕಿಸದೇ ಅದಮ್ಯ ಉತ್ಸಾಹ ಮತ್ತು ಸಾಹಸ ಪ್ರವೃತ್ತಿಗೆ ಸಾಕ್ಷಿಯಾಗಿ ." (ಪು. 21)

ಇದು ಕಾದಂಬರಿಯಲ್ಲಿ ನಿರಂತರವಾಗಿ ಮುಂದುವರೆಯುವ ಮೂಲಭೂತ ಕ್ರಿಯೆ ಮತ್ತು ಇದರಿಂದಾಗಿಯೇ ಕಾದಂಬರಿಗೆ ಕರ್ಷಣ ಬರುವುದು ಕೂಡ. ಹಾಗಾಗಿಯೇ ನೇರ ಮತ್ತು ಸರಳವೆಂದು ಕಾಣುವ ಕಥನದ ಅಂತರಂಗದಲ್ಲೂ ಕರ್ಷಣ ಇರುವುದು; ಕಾದಂಬರಿಗೆ ಓಟ ಮತ್ತು ಚಲನ ಬರುವುದು.

ಈ ಅಸ್ವಸ್ಥತೆ ಮತ್ತು ಹೊಸದರ ಹಂಬಲ ಭುಜಂಗಯ್ಯನ ವ್ಯಕ್ತಿತ್ವಕ್ಕೆ, ಮಾದಳ್ಳಿಗೆ ತರುವಂತದ್ದೆಲ್ಲ ಹೊಸದೇ ಆಗಿದೆ—ಪತ್ರಿಕೆ, ಹೋಟಲು, ಸುಶೀಲ. ವ್ಯಾಪಾರ, ಬಾವಿ, ಕಂಟ್ರಾಕ್ಟರ್‌ಗಿರಿ, ಕಾಮಗಾರಿ ಇತ್ಯಾದಿ. ಇವೆಲ್ಲವುಗಳ ಮೂಲಕ ಭುಜಂಗಯ್ಯನನ್ನು ಕ್ರಿಯಾಶೀಲವಾಗಿಸುವುದರ ಜೊತೆಗೆ ಮಾದಳ್ಳಿ ಅವೆಲ್ಲವನ್ನೂ ಒಪ್ಪಲು, ನಿರಾಕರಿಸಲು ಪ್ರತಿಕ್ರಿಯಿಸಲು ಸದಾ ಆತಂಕದಲ್ಲಿರುತ್ತದೆ. ಈ ಆತಂಕ ವೆಂದರೆ ಜೀವನನಾಡಿಯ ಮಿಡಿತದ ಸ್ವರೂಪದ್ದು. ಈ ಆತಂಕ, ಈ ಮಿಡಿತದಿಂದಾಗಿಯೇ ಘಟನೆಗಳು ಅದನ್ನು ಆಹ್ವಾನಿಸುವ ಮನೋಭೂಮಿಕೆ ಮತ್ತು ಅದಕ್ಕೆ ಪ್ರತಿ ಕ್ರಿಯಿಸುವ ಮನೋಭೂಮಿಕೆ ಒಂದರ ಹಿಂದೆ ಒಂದು ಓಘವಾಗಿ ಸೇರಿಕೊಂಡು ಕತೆ ಬೆಳೆಯುತ್ತದೆ. ಕಾದಂಬರಿಗೆ ಚಲನೆ ಬರುತ್ತದೆ. ಈ ಚಲನೆ ಮತ್ತು ಈ ಚಲನೆಗೆ ದೈನಿಕದ ಪ್ರತಿಹೆಜ್ಜೆಯನ್ನು ಬದಲಾಯಿಸುವ. ವಿಸ್ತರಿಸುವ ಶಕ್ತಿ ಇರುವುದರಿಂದಲೋ ಏನೋ ಈ ಕಾದಂಬರಿಯಲ್ಲಿ Gestures ಮುಖ್ಯವಾದಷ್ಟು, ಇತರ ಕನ್ನಡ ಕಾದಂಬರಿಗಳಲ್ಲಿ ಆಗುವುದಿಲ್ಲ. ಕೂರುವುದು, ನಿಲ್ಲುವುದು, ನೋಡುವುದು, ಉಣ್ಣುವುದು, ಮಲಗುವುದು, ಉಳುವುದು, ಫಸಲಾಗುವುದು—ಇವೆಲ್ಲ ಇಲ್ಲಿಯ ನಿತ್ಯಕ್ರಿಯೆಗಳಾಗಿವೆ. ಇದಕ್ಕಿಂತ ಮುಖ್ಯವಾಗಿ ಇದನ್ನು ಸಾವಧಾನವಾಗಿ ಗಮನಿಸುವುದನ್ನು ಕಾದಂಬರಿ ಒಂದು ಮೌಲ್ಯವಾಗಿ ಒಪ್ಪಿಕೊಂಡಿದೆಯೆಂಬ ಸೂಚನೆ ಅನೇಕ ಕಡೆ ಸಿಕ್ಕುತ್ತದೆ. ಈ ಸಾಲುಗಳನ್ನು ಗಮನಿಸಿ:

"ಹೆಂಡತಿ ಮನೆಯ ಹಂತಗಳನ್ನು ಹತ್ತುತ್ತಿದ್ದ ಹಾಗೆ ಅವಳ ಪ್ರತಿಯೊಂದು ಚಲನವಲನಗಳೂ ಅರಿವಾಗುತ್ತಿದ್ದವು. ಅವಳು ಬಳೆ ಕುಕ್ಕೆಯನ್ನು ಮೂಲೆಯಲ್ಲಿಟ್ಟಿದ್ದು. ಕೊಟ್ಟಿಗೆಗೆ ಹೋದದ್ದು ಅಲ್ಲಿಂದ ನೀರು ಮನೆಯಲ್ಲಿ ಕೈಕಾಲು ಮುಖ ತೊಳೆಯಲು ಹೋದದ್ದು, ಬಂದು ದೀಪ ಹಚ್ಚಿದ್ದು, ಒಂದೊಂದೂ ಭುಜಂಗಯ್ಯನ **ಬೆಳಕಿಲ್ಲದ ಕಣ್ಣಿಗೆ ಕಟ್ಟಿಕೊಂಡವು."** [ಪು. 501. ಒತ್ತು ನನ್ನದು]

ಇದೆಲ್ಲವನ್ನೂ ಗಮನಿಸುವ ವ್ಯವಧಾನ ಕಲಾತ್ಮಕವಾದದ್ದು ಮಾತ್ರವಲ್ಲ. Gesture ನ ಸಾವಧಾನ, 'ಪ್ರತಿಯೊಂದು ಹೆಜ್ಜೆ ಅದರ ಏದುಸಿರು ಎಲ್ಲದಕ್ಕು ಅಪರಪೂರ್ವಕ್ಕೇ ಅದಕ್ಕೆ ಮಹತ್ವವಿದೆ' ಎಂದು ಕೂಡ ಕಾದಂಬರಿ ಒಪ್ಪಿಕೊಳ್ಳುತ್ತದೆ. ಇಲ್ಲದಿದ್ದರೆ gestures ಪುನರುಕ್ತಿ ಎನ್ನುವಷ್ಟು ಮತ್ತೆ ಮತ್ತೆ ಕೃತಿಯೊಳಗೆ ಬರುತ್ತಿರಲಿಲ್ಲ. ಅನಂತಮೂರ್ತಿ, ಖಾಸನೀಸ್, ಮಹದೇವ ಇಂತಹ ಲೇಖಕರಿಗೆ ದೈನಿಕದ Gesturesನ ಪ್ರತೀಕಾತ್ಮಕತೆ, ಧ್ವನಿಪೂರ್ಣತೆಯಲ್ಲಿ ಆಸಕ್ತಿಯಿದ್ದು ಅದರಿಂದಾಗಿ ಅವುಗಳು ಅವರ ಕಲಾಕೃತಿಗಳ ಒಂದು ಭಾಗವಾದರೆ, ಆಲನಹಳ್ಳಿಯಲ್ಲಿ ಅದನ್ನು ಮಂಡಿಸುವ ಕ್ರಮ ಒಂದು ಜೀವನ ದೃಷ್ಟಿಗೆ ಸಂಬಂಧಿಸಿದ್ದಾಗಿದೆ. ಈ ಜೀವನ ದೃಷ್ಟಿ ಕೆಲವು ರೀತಿಯ ಭಾರತೀಯ ಮನಸ್ಸುಗಳಿಗೆ ವಿಶಿಷ್ಟವಾದದ್ದು. ಜೀವನದ ನಿರಂತರ

ತೆಯನ್ನು, ಅಖಂಡತೆಯನ್ನು ಪ್ರತಿಕ್ಷಣದಲ್ಲು ಪ್ರತಿ ನಡಾವಳಿಯಲ್ಲು ಕಾಣುವುದು ಮತ್ತು ಅವುಗಳ ಮಹತ್ವ ತನ್ನಷ್ಟಕ್ಕೆ ತಾನೇ ಸ್ವಯಂಪೂರ್ಣವೆಂದು ತಿಳಿಯುವ ದೃಷ್ಟಿ ಇದು. ಈ ದೃಷ್ಟಿಗೆ ನೈತಿಕ ತೀರ್ಪಿನ ಆತುರವಿಲ್ಲ, ಗಹನತೆಯ ಚೌಕಟ್ಟಿನ ಗುಂಗೂ ಇಲ್ಲ. ಹಾಗೇ ಹರಿಯುವ, ಹರಿಯುವುದನ್ನು, ಹರಿಯುವ ಗತಿಯಲ್ಲೇ ಗುರುತಿಸುವ, ಗುರುತಿಸುವವನ ದೃಷ್ಟಿಕೋನಗಳನ್ನೂ ಅನಿಸಿಕೆಗಳನ್ನೂ, ಮೂಡಿತಿ ತೂರಿಸಿ ಮುಂದೆ ಮಾಡದ ದೃಷ್ಟಿ ಕೋನ ಇದು. ಜೀವನ ಹೀಗಿದೆ, ಅದರ ಗತಿ ಇದು ಎಂದು 'ನಾನು' ಒಪ್ಪಿಕೊಳ್ಳುವುದರಲ್ಲಿ ಇರುವ ಅಹಂಕಾರವನ್ನು ಮೀರಿದ ಸ್ಥಿತಿ ಎಂಬುದರ ಜೊತೆಗೇ ಇದು ಕೇವಲ ಒಬ್ಬ ನೋಟಕನ ನಿರ್ಮಮ ಭಾವ ಮಾತ್ರವಲ್ಲ, ಎಂಬುದರ ಜೊತೆಗೇ ಒಳಗೆ ಹೋಗಿ ದರ್ಶನ ಪಡೆದು, ಆ ದರ್ಶನದಿಂದ ಬಂದ ತಾದಾತ್ಮ್ಯದಿಂದ, ಸಮಾಧಾನದಿಂದ ಮೂಡಿದ ದೃಷ್ಟಿಕೋನವಿದು ಎಂಬುದನ್ನು ಕೂಡ ಹೇಳಬೇಕು. 500 ಪುಟಗಳಿಗೂ ಮಿಕ್ಕಿದ ಈ ಕಾದಂಬರಿ ಉದ್ದಕ್ಕೂ ಹೀಗಿದೆ ಎಂಬುದು ನನ್ನ ವಾದವಲ್ಲ. ಕಣ್ಣು ಕಳೆದುಕೊಂಡ ಭುಜಂಗಯ್ಯನ ಸಮಾಧಾನ, ವೈರಾಗ್ಯ, ಒಳತೋಟಿ ಇವೆಲ್ಲವೂ 'ಆದರ್ಶೀಕರಣ'ದ ಛಾಪಿಲ್ಲದೆ ನಮಗೆ ಸಹಜವೆನ್ನಿಸುವಂತೆ ಮಾಡುವುದು ಈ ದೃಷ್ಟಿಕೋನ ಮಾತ್ರ ಎಂಬುದನ್ನು ನಾನಿಲ್ಲಿ ಹೇಳಬೇಕು.

ಈ ದೃಷ್ಟಿಕೋನ ಕಾದಂಬರಿಯ ಭಾಷೆ ಮತ್ತು ಸ್ವರೂಪವನ್ನು ಕೂಡ ನಿರೂಪಿಸುತ್ತದೆ. ಈಗಾಗಲೇ ಸೂಚಿಸಿರುವ ಲೇಖಕರ ಭಾಷೆಯಂತೆ, ಇಲ್ಲಿಯ ಭಾಷೆ ಕಾವ್ಯಾತ್ಮಕವಲ್ಲ, ರೂಪಕವಾದದ್ದಲ್ಲ. ಈ ಕೃತಿಯಲ್ಲಿ ಉದ್ದೀಪನ ಶಕ್ತಿ ಅಡಕವಾಗಿರುವುದು ಮತ್ತು ವಿಜೃಂಭಿಸುವುದು ವಿವರಗಳಿಂದ, ಘಟನೆಗಳಿಂದ, ಮತ್ತು ಸನ್ನಿವೇಶಗಳಲ್ಲೇ ಅಡಗಿರುವ ಭಾವ ಶ್ರೀಮಂತಿಕೆಯಿಂದ. ಆದರೆ ಮೇಲೆ ಸೂಚಿಸಿದ ದೃಷ್ಟಿಕೋನವನ್ನುಳ್ಳ ಈ ಲೇಖಕನಿಗೆ ಇಲ್ಲಿ ಎಲ್ಲವೂ ಮುಖ್ಯವೆ, ಎಲ್ಲವೂ ಅಮುಖ್ಯವೆ ಎಲ್ಲವೂ ವಿವರವೆ, ಎಲ್ಲವೂ ಸಂಕೇತವೆ. ಅವನು ಅದನ್ನು ಸಂಕೇತಗೊಳಸಲಾರ, ಪ್ರತೀಕಗೊಳಿಸಲಾರ. ಇರುವ ಸ್ಥಿತಿಯಲ್ಲೆ ಅದು ಅವನಿಗೆ 'ಎಲ್ಲವೂ' ಆಗಿರುತ್ತದೆ. ಕಲಾಕೃತಿಯೊಳಗೆ ಆಗಬೇಕಾದ 'ಮಾರ್ಪಾಡಿ'ನಿಂದ ಉನ್ನತೀಕರಣಗೊಳ್ಳಬೇಕಾದ ಹಂಗೇನಿಲ್ಲ. ಈ ಕಾರಣದಿಂದಲೇ ಕತೆ ಅಥವಾ ಕಾದಂಬರಿ ಇಲ್ಲಿ ಅಕ್ಷರಶಃ ನಡೆಯುತ್ತದೆ, ಬೆಳೆಯುವುದಿಲ್ಲ. ಮುಂದೆ ಮುಂದೆ ಹೆಜ್ಜೆ ಹಾಕಿ 'ನಡೆಯುತ್ತದೆ', ವಿಸ್ತಾರಗೊಳ್ಳುವುದಿಲ್ಲ. ಕೊನೆಗೆ ಕತೆ ಕೂಡ ಇನ್ನೂ ನಡೆಯಲಿ ನಡೆಯುತ್ತಿರಲಿ ಎಂಬ ಬಯಕೆಯನ್ನೂ ಹುಟ್ಟಿಸುತ್ತದೆ.

ಈ ಅಸ್ವಸ್ಥತೆ ಮತ್ತು ಹೊಸ ಬಯಕೆಯ ಮೂಲಕ ಮಂಡನೆಯಾಗುವುದು, ನಮ್ಮ ಕಾಲದ ಮುಖ್ಯ ದ್ವಂದ್ವ–ಜೀವನದಲ್ಲಿ ಅರ್ಥ ಮತ್ತು ಯಶಸ್ಸು ಎರಡನ್ನೂ ಏಕಕಾಲದಲ್ಲಿ ಬಯಸುವ – ಆಧುನಿಕ ಮನುಷ್ಯನ ದ್ವಂದ್ವ. ಎಷ್ಟೇ ಸಾಧಿಸಿದರೂ

ಎಷ್ಟೇ ಪ್ರಯೋಗ ಮಾಡಿದರೂ, ಭುಜಂಗಯ್ಯನನ್ನು ಕೊನೆಗೂ ತಾನು ಮಾಡಿದ್ದೆಲ್ಲದರ ಅರ್ಥದ ಪ್ರಶ್ನೆ ಮಾತ್ರ ಬಾಧಿಸುತ್ತಲೇ ಇರುತ್ತದೆ. ಈ ಬಾಧೆಯಿಂದಲೇ ಅವನ ವ್ಯಕ್ತಿತ್ವಕ್ಕೊಂದು ಕಾಂತಿಯೂ, ಅರ್ಥವೂ ಬರುತ್ತದೆ. ಯಶಸ್ಸು ಎಲ್ಲ ಉತ್ತಮ ಸಾಹಿತ್ಯ ಕೃತಿಗಳಲ್ಲಾಗುವಂತೆ, ಅಲನಹಳ್ಳಿ ದ್ವಂದ್ವಕ್ಕೆ ಉತ್ತರ ನೀಡುವುದಿಲ್ಲ. ಅದಕ್ಕೆ ಪ್ರಯತ್ನಿಸುವುದಿಲ್ಲ. ಅರ್ಥ ಮತ್ತು ಯಶಸ್ಸಿನ ನಡುವಿನ ದ್ವಂದ್ವ ನಮ್ಮ ಕಾಲದ ಮನುಷ್ಯನ ಅದೃಷ್ಟ ಮತ್ತು ಹೋರಾಟಗಳ ಮೇಲೆ ಮಾಡುವ ಪರಿಣಾಮವನ್ನು ನಿರ್ಮಮವಾಗಿ ಮಂಡಿಸುತ್ತಾರೆ. ಹಾಗೆಂದೇ ಎಷ್ಟೇ ತನ್ಮಯತೆಯಿದ್ದರೂ, ನಿಲುವಿಲ್ಲದ ಕೃತಿ ಇದು.

ಅಸ್ವಸ್ಥತೆ, ಹೊಸದರ ಬಯಕೆ, ಅರ್ಥ – ಯಶಸ್ಸಿನ ದ್ವಂದ್ವ ಇವೆಲ್ಲವನ್ನೂ ಒಟ್ಟಂದದಲ್ಲಿ ಕಾಣುತ್ತಾ ಹೋಗುವಾಗ ಹುಟ್ಟಿಕೊಳ್ಳುವ ಜೀವನ ದೃಷ್ಟಿಯನ್ನು ವಿವರಿಸಿದ ಮೇಲೆ, ಕಾದಂಬರಿಯಲ್ಲಿ ಅಷ್ಟೊಂದು ಸ್ಪಷ್ಟವಾಗದ ಅಥವಾ ಈ ರೀತಿಯ ನೇರ ಸರಳ ಕಥಾನಕದ ಕ್ರಮದಲ್ಲಿ ಸ್ಪಷ್ಟವಾಗಲಾರದ ಇನ್ನೊಂದು ನೆಲೆಯ ಬಗ್ಗೆ ಒಂದೆರಡು ಮಾತು ಹೇಳಬಹುದು. ಪ್ರೀತಿ ಮತ್ತು ಸಾವು– ಈ ಸ್ತರವನ್ನು ಕುರಿತ ಕಾದಂಬರಿಯ ಮಂಡನೆ ಅಸ್ವಸ್ಥತೆ ಮತ್ತು ಕ್ರಿಯಾಶೀಲತೆಯ ನೆಲೆಗಳಷ್ಟು ಸಮರ್ಥವಾಗಿ ಮಂಡಿತವಾಗಿಲ್ಲ. ಅದು ಎಳೆ ಎಳೆಯಾಗಿಯೆ ಉಳಿಯುತ್ತದೆ. ಸುಶೀಲಳ ಆಗಮನದಿಂದಾಗಿ ಭುಜಂಗಯ್ಯನಲ್ಲಿ ತಟಕ್ಕನೆ ಉಕ್ಕುವ ಅನುರಾಗದ ಮೂಲಕ ಹಾವಿನ ಸಾವು ಮುಂದೆ ಮುಂದೆ ಸಾಗುತ್ತದೆ. ಭುಜಂಗಯ್ಯನ ಪ್ರೀತಿ ಮತ್ತು ಕಸುಬುಗಾರಿಕೆ ಯಿಂದಾಗಿ ಗೌಡರ ಸಾವು ಮುಂದೆ ಹೋಗುತ್ತದೆ. ವ್ಯಂಗ್ಯವೋ ಎಂಬಂತೆ ಅವನ ಮಗನೇ ಭುಜಂಗಯ್ಯನ ಸಾವಿಗೆ ಕಾರಣನಾಗುತ್ತಾನೆ. ಇವೆಲ್ಲವು ನಮಗೆ ಪ್ರತ್ಯೇಕ ಘಟನೆಗಳಾಗಿ, ವಿವರಗಳಾಗಿ ನಮಗೆ ಒಪ್ಪಿಗೆಯಾಗುತ್ತವೆಂದು ಹೊರತು, ಅವೆಲ್ಲವೂ ಎಷ್ಟರ ಮಟ್ಟಿಗೆ ಕಾದಂಬರಿಯ ಅಂತರಾತ್ಮದ್ದು ಎಂಬ ಪ್ರಶ್ನೆಗೆ ಉತ್ತರ ಕಷ್ಟ. ಭುಜಂಗಯ್ಯ ನಾರಾಯಣನನ್ನು ಬದುಕಿಸುವುದು ಈ ಸಮರ್ಥವಲ್ಲದ ಎಳೆಗೆ ಒಂದು ಅಪವಾದ. ಆದರೆ ಅಷ್ಟು ಹೊತ್ತಿಗೆ ಭುಜಂಗಯ್ಯನ ಪ್ರೀತಿ 'ತಿಳುವಳಿಕೆಯ ದರ್ಶನ' ಕೂಡ ಆಗಿಬಿಟ್ಟಿರುತ್ತದೆ. ಅವನ ಪ್ರೀತಿ 'ಕೇವಲ ಮನುಷ್ಯ'ನ ಪ್ರೀತಿಗಿಂತಲೂ ಆಚೆಗೆ ಹೋಗಿರುತ್ತದೆ.

೩

ಭುಜಂಗಯ್ಯ ಈ ಕಾದಂಬರಿಯ ನಾಯಕನಾದರೂ ಕಾದಂಬರಿ ಕೇಂದ್ರ ಪ್ರಜ್ಞೆ ಯನ್ನು ಹೇಗೆ ನಿರಾಕರಿಸುತ್ತದೆ ಮತ್ತು ಸಮುದಾಯದ ಬೇರೆ ಬೇರೆ ಸ್ತರಗಳನ್ನು ಒಳಗೊಳ್ಳುತ್ತಾ ಹೋಗುತ್ತದೆ ಎಂಬ ಸಂಗತಿ ಕೂಡ ಗಮನಿಸಬೇಕಾದ್ದು. ಇವನು ಅನೇಕ ಪ್ರವೃತ್ತಿಗಳ ಮನುಷ್ಯ–ಸದ್ಯದವನು, ಹೊಯ್ದಾಟದವನು. ಅವನ ಒಂದೊಂದು ಪ್ರವೃತ್ತಿ, ಒಂದೊಂದು ಹೊಯ್ದಾಟವೂ ಬೇರೆ ಬೇರೆ ಘಟನೆ, ಬೇರೆ

ಸ್ವಭಾವದ ಜನ, ಬೇರೆ ಬೇರೆ ಸ್ಥಳಗಳನ್ನು ಹುಡುಕುತ್ತವೆ. ಆದ್ದರಿಂದ ಕತೆ ಮುಂದು ವರೆದಂತೆಲ್ಲ ಹೆಚ್ಚು ಹೆಚ್ಚಿನ ಸ್ತರಗಳನ್ನು, ಆಶಯಗಳನ್ನು ಒಳಗೊಳ್ಳುತ್ತಾ ಹೋಗು ತ್ತದೆ, ತನ್ನೊಳಗೆ ಅದುಮಿಟ್ಟುಕೊಳ್ಳುತ್ತಾ ಹೋಗುತ್ತದೆ. ಭುಜಂಗಯ್ಯನ ಪ್ರವೃತ್ತಿ ಗಳಿಗೆ ವೈಯಕ್ತಿಕತೆಯನ್ನು ಮೀರಿದ ಛಾಪಿದೆ. ಏಕೆಂದರೆ ಅವನ ಪ್ರತಿಯೊಂದು ಪ್ರವೃತ್ತಿಯೂ, ಚಟುವಟಿಕೆಯೂ ಇಡೀ ಸಮುದಾಯದ ಪ್ರವೃತ್ತಿಯಾಗಿ ಚಟುವಟಿಕೆ ಯಾಗಿ, ಸಮುದಾಯವನ್ನೂ, ಹಳ್ಳಿಯನ್ನೂ 'ಒಗ್ಗೂಡಿ'ಸುತ್ತಿರುತ್ತದೆ; ಬೆಸುಗೆಗೆ ಕಾರಣವಾಗುತ್ತಿರುತ್ತದೆ. ಕೊನೆಗೆ ಅವನ ಆಧ್ಯಾತ್ಮದ ಹಂಬಲಕ್ಕೂ ಕೂಡ ಒಂದಿಷ್ಟು ಜನರ ನಡುವೆ ಬೆಸುಗೆ ಹಾಕುವಷ್ಟು ಶಕ್ತಿಯಿದೆ. ಬೆಸುಗೆ ಹಾಕುವ, ಒಟ್ಟಿಗೆ ಕೂಡಿ ಸುವ, ಸಮಾಜದ ಹೆಚ್ಚು ಹೆಚ್ಚು ಸ್ತರಗಳನ್ನೂ ಒಳಗೊಳ್ಳುವುದಕ್ಕೆ ಕಾರಣವಾಗುವ ಭುಜಂಗಯ್ಯ ಸಮುದಾಯದಿಂದಲೂ ಪ್ರಚೋದನೆಗೆ, ತಿರಸ್ಕಾರಕ್ಕೆ ಒಳಗಾಗುತ್ತಿರು ತ್ತಾನೆ. ಅವನ ಸೃಷ್ಟಿ ಮತ್ತು ವೈಫಲ್ಯ–ಎರಡೂ ಕೂಡ ಮಾದಳ್ಳಿಯವೆ. ಈ ಕಾರಣದಿಂದಾಗಿ, ಬೀಜವು ಅಲ್ಲಿಯದೆ, ಫಸಲೂ ಕೂಡ ಅಲ್ಲಿಯದೆ. ವ್ಯಕ್ತಿ–ಸಮು ದಾಯದ ಕೊಡಕೊಳ್ಳುವಿಕೆ ನಿರಂತರವಾಗಿ ನಡೆಯುವಾಗ ನಾಯಕ ಏನೇ ಆದರೂ, ಎಷ್ಟೇ ಬೆಳೆದರೂ, ಆತ ಒಬ್ಬ ಮನುಷ್ಯನೇ ಹೊರತು ಸಾಂಪ್ರದಾಯಿಕ ಅರ್ಥದಲ್ಲಿ 'ನಾಯಕ'ನಲ್ಲ; ಕೇಂದ್ರ ಪ್ರಜ್ಞೆಯಾಗುವುದಿಲ್ಲ. ಅವನು ಎಷ್ಟೇ ಬೆಳೆದರೂ ಅವನ ಮುಖ್ಯ ಕಾಳಜಿ ತಾನು ಎಷ್ಟು ಒಳಗೊಂಡೆ, ಎಷ್ಟು ಸ್ತರವನ್ನು ತನ್ನೊಳಗೆ ಒಳಗು ಮಾಡಿಕೊಂಡೆ ಎಂಬುದಾಗುತ್ತದೆಯೆ ಹೊರತು, ತಾನೆ ಇಡಿಯಾದೆನೆ, ತಾನು ಗಟ್ಟಿ ಯಾದೆನೆ ಎಂಬುದರಲ್ಲಿಲ್ಲ. ಈ ವಾತಾವರಣದಲ್ಲಿ ವ್ಯಕ್ತಿ ವೈಶಿಷ್ಟ್ಯಕ್ಕೆ ಸಮುದಾಯದ ಬೀಜವಿದೆ: ಸಮುದಾಯದ ಫಸಲಿಗೆ ವ್ಯಕ್ತಿ ವೈಶಿಷ್ಟ್ಯದ ಗೊಬ್ಬರವಿದೆ.

ಒಂದು ಪ್ರಾಸಂಗಿಕ ಪ್ರಶ್ನೆ: ಇದು ಮನುಷ್ಯನಲ್ಲೆ ಅಂತರ್ಗತವಾಗಿರುವ ಪ್ರವೃತ್ತಿಯೋ ಅಥವಾ ಸಮುದಾಯವಾಗಿಯೆ ಜೀವನ ನಡೆಸುವ ನಮ್ಮ ಗ್ರಾಮ ಸಮಾಜದ ಜೀವನ ಕ್ರಮವೋ ? ಹೇಗಾದರೂ ಸರಿ, ಒಟ್ಟನಲ್ಲಿ ಅದು ಆರೋಗ್ಯಕರ ವಾದದ್ದೇ ಎಂಬ ನಿಲುವಿನವ ನಾನು. ಆಧುನಿಕ ಪ್ರಜ್ಞೆಯ ನಾಯಕರುಗಳು, ಕೃಷ್ಣಪ್ಪಗೌಡ (ಅವಸ್ಥೆ), ನಾಗಪ್ಪ (ಶಿಕಾರಿ) ಇವರೆಲ್ಲ 'ಇಡಿ'ಯಾಗಲು, 'ಶುದ್ಧ' ವಾಗಲು ಹಂಬಲಿಸುವವರೇ. ಹಾಗಾಗುವುದಕ್ಕೆ ಕೂಡ ಅವರು ತಮಗೆ ಇದುವರೆಗೆ ಪರಿಚಯವಿರುವವರಿಂದ, ತಮ್ಮನ್ನು ಬೆಳೆಸಿದವರಿಂದ ವಿಮುಖರಾಗಬೇಕಾಗಿದೆ. ಸೂಕ್ಷ್ಮ ಪ್ರವೃತ್ತಿಯವರಾದ ಅವರಿಗೆ ಸಂತೆಯಲ್ಲೆ ಕುಳಿತರೂ ತಪಸ್ಸು ಮಾಡುವ ಶಕ್ತಿಯಿದೆ. ಆದರೆ ಅವರ ಭಜನೆಗೆ, ತಂಬೂರಿನಾದಕ್ಕೆ ಭುಜಂಗಯ್ಯನ ಕೀರ್ತನೆಗೆ ಸೇರಿದಂತೆ ಜನ ಸೇರಲಾರರು. ಅವರಿಗೆ ದೇವರು, ಅಂತಿಮ ಸತ್ಯ, ಎಲ್ಲವೂ ಕಾಣುವ ಸಾಧ್ಯತೆ ಇದೆ. ಆದರೆ ಅದು ಅವರೊಬ್ಬರಿಗೆ ಮಾತ್ರ. ಅವರೊಟ್ಟಿಗೆ ಸೇರಿ ನಾವೂ ಆ ದೇವರನ್ನು ಕಾಣಲಾರೆವು. ಏಕೆಂದರೆ ಅವರ ಏಕಾಗ್ರತೆಗೆ ಭಂಗ ಬರಬಹುದು.

ಇನ್ನೂ ಹೇಳಬೇಕೆಂದರೆ ನಮ್ಮ ಪರವಾಗಿ 'ಅವರು ಕಾಣಬಹುದು': ನಾವು ಅವರ ಜೊತೆಗಾರರಾಗಲಾರೆವು. ಕಾದಂಬರಿಗೆ ಕೇಂದ್ರ ಪ್ರಜ್ಞೆಯನ್ನು ನಿರಾಕರಿಸಿ ಸಮುದಾಯದ ಹೆಚ್ಚು ಹೆಚ್ಚು ಸ್ತರಗಳನ್ನು ಒಳಗೊಳ್ಳುವುದು ಸಾಧ್ಯವಾದದ್ದು ಕೇವಲ ಭುಜಂಗಯ್ಯ ಅನೇಕ ಪ್ರವೃತ್ತಿಗಳ ಮನುಷ್ಯನಾಗಿದ್ದರಿಂದ ಮಾತ್ರ ಎಂದು ತಿಳಿಯಬಾರದು–ಕಾದಂಬರಿ ಮನುಷ್ಯನ ಪ್ರವೃತ್ತಿಯನ್ನು, ಅದರ ಬಲವನ್ನು ಒಂದು ಮೌಲ್ಯವಾಗಿ ನೆಚ್ಚುತ್ತದೆ. ಎಲ್ಲ ಪಾತ್ರಗಳು, ಎಲ್ಲ ಸನ್ನಿವೇಶಗಳು ಇಲ್ಲಿ ಪ್ರವೃತ್ತಿಯ ಎರಕದಲ್ಲೇ ಕಡೆಯಲ್ಪಟ್ಟಿದೆ. ಒಂದರ್ಥದಲ್ಲಿ ಅವಕ್ಕಿನ್ನೂ ಸಂಸ್ಕೃತಿಯ, ಶಿಕ್ಷಣದ–ಮೈಲಿಗೆಯಿಲ್ಲ. ಪ್ರವೃತ್ತಿಯನ್ನು ನೆಚ್ಚಿಕೊಂಡು ಪಾತ್ರಗಳ ಅಂತರಂಗದ ಪರಿವೀಕ್ಷಣೆಗೆ ಈ ಕಾದಂಬರಿ ತೊಡಗುವುದರಿಂದ ಪ್ರತಿಯೊಂದು ಪಾತ್ರದ ಆತ್ಮಾವಲೋಕನದಲ್ಲೂ 'ವೈಚಾರಿಕ ನಿಷ್ಠುರತೆ'ಯನ್ನು ಮೀರಿದಂತಹ ಸಹಜತೆಯೊಂದಿದೆ. ಕೆಲವು ಉದಾಹರಣೆಗಳನ್ನು ಗುರುತಿಸಬಹುದು:

(೧) ವೈರಾಗ್ಯದ ಪದಗಳನ್ನು ಹೇಳುವ ಅಯ್ಯನವರು ಕೂಡ ಅವರ ಪ್ರವೃತ್ತಿ–ಸ್ವಭಾವಕ್ಕನುಗುಣವಾಗಿ ಸಿಟ್ಟು ಮಾಡಿಕೊಳ್ಳಬಲ್ಲರು. ಭುಜಂಗಯ್ಯ–ಸುಶೀಲಳ ಸಂಬಂಧವನ್ನು ಮೊದಲು ಒಪ್ಪದೆ, ಅನಂತರ ಹೃತ್ಪೂರ್ವಕವಾಗಿ ಒಪ್ಪಿಕೊಳ್ಳಬಲ್ಲವರು. ಪ್ರವೃತ್ತಿಗೆ ಅನುಗುಣವಾಗಿ ಅವರ ಚಿಂತನೆಗಳು–ಅನಿಸಿಕೆಗಳು ಕಾಲದಿಂದ ಕಾಲಕ್ಕೆ, ಕ್ಷಣದಿಂದ ಕ್ಷಣಕ್ಕೆ ಬದಲಾಗುತ್ತಾ ಹೋದರೂ 'ಅವರ ಮನಸ್ಸು ಮಾತ್ರ ಯಾವತ್ತೂ ರೋಸಿರಲಿಲ್ಲ'. [ಪು. 273]

(೨) ಬೇರೆ ಜಾತಿಯವರಿಗೆ ಹಾವು ಕಚ್ಚಿದಾಗ ವಿಷ ಕುಡಿಯಬಾರದೆಂಬ ತಿಳುವಳಿಕೆಯಿದ್ದರೂ, ಒಂದು ಕ್ಷಣದ ಒತ್ತಡದಲ್ಲಿ ಗೌಡರ ದೇಹದಿಂದ ವಿಷ ಹೀರುವುದು, ಪ್ರವೃತ್ತಿಯನ್ನೇ ನೆಚ್ಚಿಕೊಂಡ ಭುಜಂಗಯ್ಯನ ಸ್ವಭಾವಕ್ಕೆ ಅನುಗುಣವಾಗಿಯೆ ಇದೆ. [ಪು. 270–273]

(೩) ತನ್ನ ಸ್ವಭಾವ ಮತ್ತು ಪ್ರವೃತ್ತಿಗಳಿಗನುಸಾರವಾಗಿ ಹೊಂದಿಕೊಂಡು ಭುಜಂಗಯ್ಯ ಬದುಕುವಾಗ ಅವನನ್ನು ಪಾರ್ವತಿ ಕೂಡ ಇಷ್ಟಪಡುತ್ತಾಳೆ ಎಂಬ ಸೂಚನೆ ಕಾದಂಬರಿಯ ಪ್ರಾರಂಭದ ಪುಟಗಳಲ್ಲಿದೆ.

(೪) ಪಾರ್ವತಿಯ ಅಪ್ಪ ಪರ್ವತಪ್ಪ ಕೂಡ ತನ್ನ ಪ್ರವೃತ್ತಿಗನುಗುಣವಾಗಿ ಸುಶೀಲೆಯ ಬಗ್ಗೆ ನಿಷ್ಠುರ, ನಿಷ್ಠುರವಾಗಿ ಯೋಚಿಸುತ್ತಲೇ ತನ್ನ ಮಗಳ ಮಿತಿಯನ್ನೂ ಕೂಡ ಸ್ಪಷ್ಟವಾಗಿ ಕಾಣಬಲ್ಲ [ಪು. 435]. ಸುಶೀಲಳನ್ನೂ ಸೈ ಎಂದು ಮೆಚ್ಚಬಲ್ಲ.

(೫) ಮಾದಳ್ಳಿಯ ಚೌಕಟ್ಟಿಗೆ ಮೀರಿದ ಸುಶೀಲಳ ಪ್ರೇಮವನ್ನು ಒಪ್ಪಲು ಕಷ್ಟಪಡುವ ಹಳ್ಳಿ ಅವಳ ಸಮರ್ಪಣಾ ಭಾವವನ್ನು ಮೆಚ್ಚೇ ಮೆಚ್ಚುತ್ತದೆ, ಏಕೆಂದರೆ ಸುಶೀಲಳ ಪ್ರವೃತ್ತಿಗೆ ಸಹಜವಾದ್ದು ಸಮರ್ಪಣಾ ಭಾವ, ಈ ಸಾಲುಗಳನ್ನು ಗಮನಿಸಿ:

"ಈಗ ಅವಳ ಕಣ್ಣುಗಳು ಅವಳವಷ್ಟೇ ಆಗಿರದೆ ಗಂಡನ ಕಣ್ಣುಗಳೂ ಆಗಿದ್ದವು. ಭುಜಂಗಯ್ಯನ ಭಾರವನ್ನೆಲ್ಲ ತಾನೇ ಹೊತ್ತು ನಿಧಾನವಾಗಿ ಗಂಭೀರವಾಗಿ ಹೆಜ್ಜೆಯಿಡುತ್ತಿದ್ದಳು. ಮಾದಳ್ಳಿಯ ಬೀದಿ ಉದ್ದಕ್ಕೂ ನಡೆದು ಬಂದ ಮಗುವೇನೋ ಎನ್ನುವಂತೆ ಜೋಪಾನವಾಗಿ ನಡೆಸಿಕೊಂಡು ಬಂದ ಸುಶೀಲಳನ್ನು ಕಂಡ ಕಣ್ಣುಗಳು ಒದ್ದೆಯಾದವು." [ಪು. 453]

ಹೀಗೆ ಪ್ರವೃತ್ತಿ ಮಾತ್ರವೇ ಮೌಲ್ಯವಾಗಿರುವ ಹಳ್ಳಿಯಲ್ಲಿ 'ಇದ್ದವರು ಇಲ್ಲದವರ ಎಲ್ಲರ ಮುಖದಲ್ಲೂ ಒಂದೇ ಬಗೆಯ ತೃಪ್ತಿ.' [ಪು. 481]

ಪ್ರವೃತ್ತಿಯನ್ನೇ ಆಸರೆಯಾಗಿ ತಿಳಿಯುವ ಈ ಕಾದಂಬರಿ ಆದರ್ಶೀಕರಣವನ್ನು ಪ್ರಯತ್ನ ಪಡದೆಯೇ ನಿರಾಕರಿಸುತ್ತದೆ. ಅಷ್ಟೇ ಅಲ್ಲ, ಪ್ರವೃತ್ತಿಯ ಕೋಟೆಯ ಶಿಲ್ಪ ಎಷ್ಟು ಸಹಜವಾದ್ದು, ಗಟ್ಟಿಯಾದದ್ದೆಂದರೆ ನೀವು ಅಲ್ಲಿ ನಡೆಯುವ ಯಾವ ಘಟನಾವಳಿಯನ್ನು ಕೂಡ ಕಾದಂಬರಿಗೆ ಹೊರತಾದ ಜಗತ್ತಿನಿಂದ ಮೌಲ್ಯಮಾಪನ ಮಾಡಲು ಹೋದರೆ ನೂರೆಂಟು ರೀತಿಯ ತೊಡಕಾಗುತ್ತದೆ. ಸುಶೀಲಳ ಲಿಂಗಧಾರಣಾ ಪ್ರಕರಣ ಅಥವಾ ಅವಳ ವೀರಶೈವ ಜಾಯಮಾನಕ್ಕೆ ಅನುಗುಣವಾಗಿ ನಡೆಯುವ ಪ್ರಯತ್ನ ಇವೆಲ್ಲವುಗಳನ್ನು ನೀವು ಆಯಾ ಪಾತ್ರದ ಪ್ರವೃತ್ತಿಗಳ ಆಸರೆಯಲ್ಲಿ ನಿಂತು ನೋಡಬೇಕೆ ಹೊರತು ಶಿಷ್ಟ ಜಗತ್ತಿನ ಮೌಲ್ಯಗಳ ಒರೆಗಲ್ಲಲ್ಲ. ಹೀಗೆ ತಾನು ಕಟ್ಟಿದ ಪ್ರವೃತ್ತಿಯ ಶಿಲ್ಪದಿಂದಲೆ ನಿಮ್ಮ ನಾಗರಿಕ ತಿಳುವಳಿಕೆಯನ್ನು ಹೊರಗಿಡುವ, ನಿರಾಕರಿಸುವಂತ ಪ್ರಯತ್ನ ಕನ್ನಡ ಕಾದಂಬರಿಯಲ್ಲಿ ಅಪರೂಪ. ಶ್ರೇಣೀಕರಣದ ವಿವೇಚನೆಯ ಮೂಲಕ, ಇಲ್ಲಾ ಆದರ್ಶೀಕರಣದ ಮೂಲಕ ನಿಮ್ಮ ಶಿಷ್ಟ ಪ್ರಜ್ಞೆಗೆ ಆಹ್ವಾನ ಸಿಗುತ್ತಿರುತ್ತದೆ. ಆದರೆ ಇಲ್ಲಿ ಹಾಗಲ್ಲ. ಮತ್ತು ಇದೇ ಕಾದಂಬರಿಯ ಮುಖ್ಯವಾದ ತಾತ್ವಿಕ ದೃಷ್ಟಿಕೋನ ಎಂದು ಕೂಡ ನನ್ನ ಅಭಿಪ್ರಾಯ.

೪

ಈ ಕೃತಿಯಲ್ಲಿಯ ಬದುಕು ಕಾಲಾತೀತವಾಗುವುದಕ್ಕೆ ಕಾರಣ ಕೂಡ ಈ ಪ್ರವೃತ್ತಿ ಮತ್ತು ಸದ್ಯತನಗಳಿಗಿರುವ ಒತ್ತೇ ಆಗಿದೆ. ಪ್ರವೃತ್ತಿ ಮತ್ತು ಸದ್ಯತನದಿಂದ ಪ್ರೇರಿತವಾಗುವ ಚಲನೆ ನಿರಂತರವಾದದ್ದು. ಕಾದಂಬರಿಯ ವಿವರಗಳು ಸೃಷ್ಟಿಸುವ ದಟ್ಟವಾದ ಪ್ರಪಂಚ ನಮ್ಮನ್ನು ಬೇರೆ ಕಾಲಕ್ಕೊಯ್ಯುತ್ತದೆ ಎಂಬುದು ಎಲ್ಲ ಕಾದಂಬರಿಗಳ ಬಗ್ಗೆಯೂ ಹೇಳಬಹುದಾದ ಮಾತು. ಅದು ಓದುಗರು ಕಾದಂಬರಿಯ ಕಾಲದೊಳಗೆ (Novel's time) ಪ್ರವೇಶಿಸುವ, ಸೇರಿಹೋಗುವ ಕ್ರಮ. ಆದರೆ ಕಾಲಾಧೀನವಲ್ಲದ ಪ್ರವೃತ್ತಿ, ನಂಬಿಕೆಗಳಿಂದ ಒಂದು ಕೃತಿಯ ಬದುಕು ಕಾಲಾತೀತವಾಗುವುದು, ಹಾಗೆಯೆ ಮನುಷ್ಯನೇ ಕಲ್ಪಿಸಿಕೊಂಡ ಋತುಮಾನ–ಸಂವತ್ಸರಗಳ ಹಂಗಿನಿಂದ ದೂರವಾಗುವುದು ಬೇರೆ. ಸುಶೀಲ – ಭುಜಂಗಯ್ಯರ ಪ್ರೇಮ, ವಯಸ್ಸು ಮತ್ತು ದೇಹವನ್ನು

ಮೀರಿದ ಸಂಗತಿಯಾಗುವುದು ಕೂಡ ಕಾಲಾತೀತ ಆಯಾಮವನ್ನು ಸೂಚಿಸುವ ಒಂದು ಕ್ರಮ. ಭುಜಂಗಯ್ಯ – ಸುಶೀಲರ ಬದುಕಿಗೆ ಈಗ ಋತುಮಾನಗಳ ಹಂಗಿರಲಿಲ್ಲ [ಪು. 497]. ಅಷ್ಟೇ ಅಲ್ಲ, ಊರವರ ಪಾಲಿಗೆ ಭುಜಂಗಯ್ಯ ಇದ್ದಕ್ಕಿದ್ದಂತೆ ಎಲ್ಲಿಂದಲೋ ಇಳಿದು ಬಂದವನಂತೆ ಕಾಣುತ್ತಾನೆ [ಪು. 512]. ಭುಜಂಗಯ್ಯ ಸುಶೀಲರ ಪ್ರೇಮ ದೇಹ ಮನಸ್ಸನ್ನು ಮೀರಿದ ಸ್ಥಿತಿ ಎಂಬುದನ್ನು ಒಪ್ಪಿದಾಗ ಮಾತ್ರ ನಾರಾಯಣನ ಬಲಾತ್ಕಾರಕ್ಕೆ ಭುಜಂಗಯ್ಯನ ಪ್ರತಿಕ್ರಿಯೆ ಸರಿಯಾಗಿ ಅರ್ಥವಾಗುತ್ತದೆ. ಮೇಲಾಗಿ ಭುಜಂಗಯ್ಯನ ಆಧ್ಯಾತ್ಮದ ಹಂಬಲ ಕೂಡ ಮನುಷ್ಯನಲ್ಲಿರುವ ಕಾಲಾತೀತ ಪ್ರವೃತ್ತಿಗಳ ವ್ಯಾಖ್ಯಾನಕ್ಕೆ ಮೀಸಲಾಗಿರುವಂತಿದೆ. ಮನುಷ್ಯನಲ್ಲಿರುವ ಬಯಕೆ – ನಿಯಮಗಳ ನಿಯಂತ್ರಣವನ್ನು ಮೀರಿದ ಪ್ರಕೃತಿ ವ್ಯಾಪಾರಗಳು ಮಾತ್ರ ಮಾದಳ್ಳಿಯ ಬದುಕನ್ನು ನಿಯಂತ್ರಿಸುವುದು ಕೂಡ ಕೃತಿಯ ಬದುಕಿಗೆ ಕಾಲಾತೀತವಾದ ಆಯಾಮವನ್ನು ಕೊಡುತ್ತದೆ. ಪುಟ 516–517ರಲ್ಲಿ ಬಿಸಿಲಿನ ಧಗೆಗೆ ಅದರ ತಾಪಕ್ಕೆ ಬೇಸತ್ತು ನಿಂತು ಆಸರೆಗೆ ಆಕಾಶ ನೋಡುವ ಸುಶೀಲ ಯಾವ ಕಾಲದವಳು ಬೇಕಾದರೂ ಆಗುವ ಸಾಧ್ಯತೆಯಿದೆ. ಹೀಗಾಗಿ ತಾಯಿನಾಡು ಪತ್ರಿಕೆ, ಗಾಂಧೀಜಿ ಪ್ರಸ್ತಾಪ, ಹೋಟೆಲಿಗೆ ಹರಿಜನರ ಪ್ರವೇಶದಂತೆ ಕಾಲಮಾನವನ್ನು ಸೂಚಿಸುವ ವಿವರಗಳು ಬಂದರೂ ಕೃತಿಯ ಬದುಕಿನ ಮೂಲದ್ರವ್ಯ ಮಾತ್ರ ಪ್ರವೃತ್ತಿ–ಪ್ರಕೃತಿ ವ್ಯಾಪಾರಗಳಿಂದ ಪ್ರೇರಿತವಾಗಿ ನಡೆಯುತ್ತಿರುವುದರಿಂದ ಕೃತಿ ಕಾಲಾತೀತವಾಗಲು ತನ್ನ ಒಡಲಿನಲ್ಲೇ ಎಲ್ಲ ಸಿದ್ಧತೆಗಳನ್ನೂ ನಡೆಸಿದೆ.

ಎಲ್ಲಕ್ಕಿಂತ ಇದು ಸ್ಪಷ್ಟವಾಗುವುದು ಕಾದಂಬರಿಯ ಅಂತ್ಯದಲ್ಲಿ. ನಮ್ಮ ಕಾದಂಬರಿಗಳೆಲ್ಲ ಹಳ್ಳಿಯ ಬದುಕನ್ನು ತಾನೆ ಹಿಡಿದು ಹೊರಟಿರುವುದು. ಆದರೆ ಅವೆಲ್ಲವೂ ಅಂತ್ಯದ ಹಾದಿಯನ್ನು ಹಿಡಿದಿವೆ, ವಿನಾಶದ ಅಂಚನ್ನು ತಲುಪಿವೆ: ಕೆಸರೂರು (ತೇಜಸ್ವಿ), ಕಂಬಳ್ಳಿ (ಲಂಕೇಶ್), ತಿರುಮಲಾಪುರ (ಭೈರಪ್ಪ), ಪಾದಳ್ಳಿ (ರಾವ್‌ಬಹದ್ದೂರ್). ಇದಕ್ಕೆ ವಿರುದ್ಧವಾದ ಇನ್ನೊಂದು ಆಲೋಚನಾ ಕ್ರಮವೂ ಇದೆ: ಕಾದಂಬರಿ ಮುಗಿಸಿದ ಮೇಲೆ ನಾವು ನಾಯಕನ ಭವಿಷ್ಯದ ಬಗ್ಗೆ ಯೋಚಿಸುವಂತೆ ಆಗುತ್ತದೆ. ಉದಾ : ಪ್ರಾಣೇಶಾಚಾರ್ಯ (ಅನಂತಮೂರ್ತಿ), ನಾಗಪ್ಪ (ಚಿತ್ತಾಲ). ಆದರೆ ಈ ಕೃತಿಯಲ್ಲಿ ಮಾತ್ರ ನಾವು ಕಾದಂಬರಿಯನ್ನು ಕುರಿತು ಯೋಚಿಸುವಾಗ ಮಾದಳ್ಳಿಯ ನಾಳೆಗಳ ಬಗ್ಗೆ ಯೋಚಿಸಬೇಕಾಗುತ್ತದೆ. ಕಾದಂಬರಿ ನಂಬುವ ಮತ್ತು ಸಾಧಿಸುವ ಪ್ರಕಾರ ಅದರ ಭವಿಷ್ಯ ಆಶಾದಾಯಕವಾಗಿಯೆ ಇದೆ. ಆ ಹಳ್ಳಿ ಈವತ್ತಿನ್ನದಲ್ಲ. ಯಾವ ಕಾಲದ್ದು ಎಂದು ಸೂಚಿಸಲಾಗದಷ್ಟು ಹಳೆಯದು ಕೂಡ. ಮೊದಲ ಹೂವು ಮಾದಳ್ಳಿಯಲ್ಲಿ ಬಿಟ್ಟದ್ದು ಯಾವಾಗ ? ಮೊದಲಿನ ಬೆಳಗು ಯಾವತ್ತಿನದು ? ಎಂಬುದು ಕೂಡ ತಿಳಿಯುವುದಿಲ್ಲ. ಮಳೆ, ಬೆಳೆ, ಬಸ್ಸು, ಹೋಟೆಲು, ಬಾವಿ, ಸುಶೀಲ, ಭುಜಂಗಯ್ಯ ಇವೆಲ್ಲವನ್ನೂ ಈಗಾಗಲೇ ಅದು

ಕಂಡಿದೆ. ಜೀರ್ಣಿಸಿಕೊಂಡಿದೆ. ಅದೂ ಅಲ್ಲದೆ ಭುಜಂಗಯ್ಯನ ಸಾವು. ತ್ಯಾಗಕ್ಕೆ ಪ್ರತಿಕ್ರಿಯೆಯಾಗಿ ಇಡೀ ಮಾದಳ್ಳಿಯೆ ಕಕ್ಕಿಬಿಡುವಂತೆ ಗೋಳಿಟ್ಟು, ಹೃದಯ ಹಗುರ ಮಾಡಿಕೊಂಡು ಭವಿಷ್ಯದ ಕಡೆಗೆ ದೃಷ್ಟಿಚಾಚುವಂತೆ ಮಾಡಿದೆ. ಊರ ಹೊರಗೆ ಹೋಟಲಿಟ್ಟು ಭಿನ್ನನಾಗಬಯಸಿದ ಭುಜಂಗಯ್ಯ ಊರೊಳಗೆ ಸತ್ತು ಸಾವಿನಲ್ಲೂ ಊರನ್ನು ಅಭಿನ್ನಗೊಳಿಸಿದ್ದಾನೆ. ಮಾದಳ್ಳಿಗೆ ನಾಳೆಗಳಿವೆ. ಆದರೆ ಅದು ಮಾದಳ್ಳಿಗೆ ಗೊತ್ತಿರುವುದಿಲ್ಲ. ಅಷ್ಟೊಂದು ಅಂತರ್ಗತವಾದ ತಿಳುವಳಿಕೆ ಅದು. ಅದಕ್ಕಾಗಿಯೇ ಕಾದಂಬರಿಯ ಅಂತ್ಯ ನಿರಾಳವಾದ ಮನಸ್ಥಿತಿಯನ್ನು ಸೂಚಿಸುತ್ತೆ, ಆತಂಕವನ್ನಲ್ಲ.

ಃ

ಸ್ವಘೋಷಿತ ರಾಜಕೀಯ ಸಾಂಸ್ಕೃತಿಕ ನಿಲುವಿನ ಈವತ್ತಿನ ದಿನಗಳಲ್ಲಿ, ತನ್ನ ಅನುಭವ ದ್ರವ್ಯದ ಒಡಲಿನಿಂದಲೇ ಮೂಡಿಸಿದ ಈ ಕೃತಿಯ ಅಪರೂಪದ ವಾಗ್ವಾದಗಳಿಗೆ, ತಾತ್ವಿಕತೆಯ ಕಡೆಗೆ ಗಮನ ಕೊಡುವ ಅವಶ್ಯಕತೆಯಿದೆ. ಏಕೆಂದರೆ ನಮ್ಮ ಅನೇಕ ನಿಲುವು ತಿಳುವಳಿಕೆಗಳನ್ನು ನಾವೇ ಸರಿಯಾಗಿ ಅರ್ಥಮಾಡಿಕೊಳ್ಳಲು ನೆರವಾಗುವ ಸಾಧ್ಯತೆ ಕೂಡ ಇದರಲ್ಲಿ ಅಡಗಿದೆ. ವೈಯುಕ್ತಿಕವಾಗಿ ನನಗೆ ಈ ಕೃತಿಯಿಂದಾಗಿ ವ್ಯಕ್ತಿ – ಸಮುದಾಯ, ಗ್ರಾಮ ಸಮಾಜದ ಧಾರಣಾಶಕ್ತಿ, ಕೃತಿಯೇ ಸೃಷ್ಟಿಸುವ ಜಗತ್ತಿನ ಮೌಲ್ಯಮಾಪನಕ್ಕೆ ಬೇಕಾದ–ಪರಿಕರ ಇಂತಹವುಗಳ ವಿಷಯದಲ್ಲಿ ಅನೇಕ ಸಂಗತಿಗಳು ಸ್ಪಷ್ಟವಾಗಿವೆ.

ಇಷ್ಟೆಲ್ಲಾ ಹೇಳಿದ ಮೇಲೆ ಕಾದಂಬರಿಯ ದೋಷಗಳ, ಮಿತಿಗಳ ಬಗ್ಗೆಯೂ ಹೇಳಬೇಡವೆ ? ಬೇಡವೆನ್ನಿಸುತ್ತದೆ. ಏಕೆಂದರೆ ಈ ಕೃತಿಯಲ್ಲಿ ದೋಷವಾಗಿ ಕಾಣಬಹುದಾದ ವಿವರಗಳ ಪುನರುಕ್ತಿ, ತೀರಾ ಸಾಮಾನ್ಯವೆನ್ನಿಸುವ ಘಟನೆಗಳು, ಸ್ಪಷ್ಟವಾಗಿ ಮೂಡಲಾಗದ ಎಷ್ಟೋ ಪಾತ್ರಗಳು–ಇಂತಹ ಅನೇಕ ವಿಸಂಗತಿಗಳಿವೆ. ಒಂದು ದೊಡ್ಡ ಕೃತಿಯಲ್ಲಿ ಇರಬಹುದಂತದ್ದು–ಇರಲೇಬೇಕಾದ್ದು. ಆದರೆ ಇಂತಹ ಬೀಸಿನ, ಹರವಿನ ಕಾದಂಬರಿಯಲ್ಲಿ ಇದೆಲ್ಲವೂ ಅನಿವಾರ್ಯವೇನೋ ಅನ್ನಿಸುವಷ್ಟರ ಮಟ್ಟಿಗೆ ತಾನೇ ಕನ್ನಡದಲ್ಲಿ ಕಾದಂಬರಿ ಮಾಧ್ಯಮ ಇದುವರೆಗೆ ಬೆಳೆದಿರುವುದು ! ●

[ಟಿಪ್ಪಣಿ: 1. ಈ ಲೇಖನದಲ್ಲಿ ಪ್ರವೃತ್ತಿ ಅನ್ನುವುದನ್ನ Elemental ಮತ್ತು Instinct ಇವುಗಳ ನಡುವಿನ ಅರ್ಥ ಬರುವ ರೀತಿಯಲ್ಲಿ ಉಪಯೋಗಿಸಿದ್ದೇನೆ.

2. ಈ ಲೇಖನದಲ್ಲಿ ಉಲ್ಲೇಖಗೊಂಡಿರುವ ಪುಟಗಳ ಸಂಖ್ಯೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಕಾದಂಬರಿಯ ಎರಡನೇ ಆವೃತ್ತಿಗೆ ಅನುಗುಣವಾಗಿದೆ.]

# ಭುಜಂಗಯ್ಯನ ಪಾತ್ರಸೃಷ್ಟಿ: ಕೆಲವು ಆಲೋಚನೆಗಳು

**ಎಚ್. ಎಸ್. ರಾಘವೇಂದ್ರರಾವ್**

ಕಾದಂಬರಿಯ ಸಮಗ್ರ ಅಧ್ಯಯನವನ್ನು ಮಾಡದೆ, ಅದರ ನಾಯಕ ಪಾತ್ರದ ಹಲವು ನೆಲೆಗಳ ವಿಶ್ಲೇಷಣೆಯ ಮೂಲಕ ಕೃತಿಯ ಆಶಯ ಮತ್ತು ಸ್ವರೂಪಗಳ ಮೇಲೆ ಬೆಳಕು ಚೆಲ್ಲುವ ಉದ್ದೇಶದಿಂದ ಈ ಲೇಖನವು ಪ್ರೇರಿತವಾಗಿದೆ. ಏಕೆಂದರೆ ಭುಜಂಗಯ್ಯನ ಪಾತ್ರ ಕಲ್ಪನೆಯು ಕನ್ನಡ ಕಾದಂಬರೀ ಲೋಕದಲ್ಲಿ ಈವರೆಗೆ ಮೂಡಿ ಬಂದಿರುವ ಹಲವು ಮಾದರಿಗಳಿಗಿಂತ ಭಿನ್ನವಾಗಿದ್ದು ಕಾದಂಬರಿಯ ಸ್ವರೂಪದ ಮೇಲೆ ನಿರ್ಣಾಯಕವಾದ ಪ್ರಭಾವವನ್ನು ಬೀರಿದೆ. ನಮಗೆ ಪರಿಚಿತವಾಗಿರುವ ಕಾದಂಬರೀ ಬಂಧದಲ್ಲಿ ದೋಷಗಳೆಂದು ತೋರುವ ಕೆಲವು ಲಕ್ಷಣಗಳು ಬೇರೆ ದೃಷ್ಟಿ ಕೋನದಿಂದ ನೋಡಿದಾಗ ಸಮರ್ಪಕವೆಂದು ಸಾಬೀತಾಗುತ್ತವೆ. "ಭುಜಂಗಯ್ಯನ ದಶಾವತಾರಗಳು" ಕೃತಿಯನ್ನು ವಾಸ್ತವವಾದೀ ಕಾದಂಬರಿಯೆಂದಾಗಲೀ, ನವ ಕಾದಂಬರಿಯೆಂದಾಗಲೀ ತಿಳಿದು ಪರಿಶೀಲಿಸುವುದು ಅದಕ್ಕೆ ನ್ಯಾಯ ದೊರಕಿಸಿ ಕೊಡುವುದಿಲ್ಲ. ಆದ್ದರಿಂದಲೇ ಈ ಲೇಖನವು ಆಲನಹಳ್ಳಿಯವರಲ್ಲಿ ಇದ್ದಕ್ಕಿದ್ದಂತೆ ಕಾಣಿಸಿಕೊಂಡಿತೆನ್ನಲಾದ ವಾಸ್ತವಮಾರ್ಗದ ಅನ್ವೇಷಣೆಯು ಎಷ್ಟರ ಮಟ್ಟಿಗೆ ಮೌಲಿಕವೆಂಬ ಸಂಗತಿಯನ್ನೂ ಗಮನಿಸುತ್ತದೆ.

ಈ ಕಾದಂಬರಿಕಾರರ ಬರವಣಿಗೆಯಲ್ಲಿ ಮೊದಲಿನಿಂದಲೂ ಅನ್ಯಕೇಂದ್ರಿತ ಮತ್ತು ಆತ್ಮಕೇಂದ್ರಿತ ಧಾರೆಗಳೆರಡನ್ನೂ ಗುರುತಿಸಬಹುದು. ಆದರೆ ಕಥೆ–ಕಾದಂಬರಿಗಳ 'ಕಥನ'ದಲ್ಲಿ ತೊಡಗಿಸಿಕೊಂಡಿರುವ 'ದೃಷ್ಟಿಕೋನ'ದ ಹಿನ್ನೆಲೆಯಲ್ಲಿ ನೋಡಿದಾಗ ಅನ್ಯಕೇಂದ್ರಿತವೆನಿಸುವ ಬರಹವೂ ವ್ಯಕ್ತಿನಿಷ್ಠವಾದ ನೆಲೆಗಳಿಂದಲೇ ನಿಯಂತ್ರಿತವಾಗಿರುವುದನ್ನು ಕಾಣುತ್ತೇವೆ. ಇದರ ಪರಿಣಾಮವಾಗಿ ಇವರ ಕೃತಿಗಳಲ್ಲಿ ಮತ್ತೆ ಮತ್ತೆ ಶೋಧಿತವಾಗುವುದು ವ್ಯಕ್ತಿಯೊಬ್ಬನ ಜೀವನ ಕ್ರಮವೇ ವಿನಾ ಇಡೀ ಸಮುದಾಯದ ಅನುಭವವಲ್ಲ. ಬಂದರೂ ಅದು ಆನುಷಂಗಿಕ ಮಾತ್ರ. ಏಕೆಂದರೆ ಆ ರೀತಿಯ ಹುಡುಕಾಟಕ್ಕೆ ಅಗತ್ಯವಾದ ಬಹುಮುಖೀ ದೃಷ್ಟಿಕೋನದಿಂದ ಕಾದಂಬರಿಯು ವಂಚಿತವಾಗಿರುತ್ತದೆ. ಕಾದಂಬರಿಯಲ್ಲಿ ಮಂಡಿತವಾಗಿರುವ ದೈನಿಕದ ವಿವರಗಳ ಅಧಿಕೃತತೆ ಹಾಗೂ ಕಥೆಯ ವ್ಯಾಪ್ತಿಗಳನ್ನೂ ಮೀರಿ, ನಾಯಕ ಕೇಂದ್ರಿತವಾದ ಸಂವೇದನೆಯು ಕಾದಂಬರಿಗೆ ಕೆಲವು ಪರಿಮಿತಿಗಳನ್ನು ತಂದುಬಿಡುತ್ತದೆ. ಹೂವಯ್ಯ, ದಾದಾ, ಚಿಕವೀರರಾಜೇಂದ್ರನನ್ನು ಬದಿಗೆ ತಳ್ಳಿ, ಬೇರೆ ಏನನ್ನೋ ಮುಖ್ಯವೆನ್ನಿಸುವ ಸಂಯೋಜಕ ಪ್ರತಿಭೆಯ ಅಭಾವವು ಈ ಕಾದಂಬರಿಯ ಮುಖ್ಯ ಕೊರತೆ. ಲೇಖನದ ಮೊದಲ ಭಾಗದಲ್ಲಿ ಇಂಥ ಪರಿಮಿತಿಗಳನ್ನು ಗುರುತಿಸಿ ಆಮೇಲೆ ಕಾದಂಬರಿಯು ಮಿತಿಗಳನ್ನು ಮೀರುವ ಬಗೆಗಳನ್ನು ಹೇಳಲಾಗಿದೆ.

ಸಾಮಾನ್ಯತೆಯನ್ನು ಉಳಿಸಿಕೊಂಡೇ ಅಲೌಕಿಕತೆಯ ನೆಲೆಗೆ ಹಂತ ಹಂತದ ಪ್ರಯಾಣ ಬೆಳೆಸಿರುವ ಭುಜಂಗಯ್ಯನನ್ನು ಕಾದಂಬರಿಕಾರರು ಮೊದಲಿನಿಂದ ಕೊನೆಯವರೆಗೆ ನೋಡಿರುವುದು ಸುಶೀಲೆಯ, ಅದಕ್ಕಿಂತ ಹೆಚ್ಚಾಗಿ, ರಾಜುವಿನ ಬೆರಗು ತುಂಬಿದ ಕಣ್ಣುಗಳಿಂದಲೇ. ತಾನು ಸಕ್ರಿಯ ಪಾತ್ರಧಾರನಲ್ಲದ, ಗ್ರಾಮೀಣ ಬದುಕಿನ ಹರಹನ್ನು ಸೃಜನ ಪ್ರಕ್ರಿಯೆಯ ವ್ಯಾಪ್ತಿಯೊಳಗೆ ತಂದುಕೊಳ್ಳುವ ಪ್ರಯತ್ನ ಮಾಡಿದಾಗಲೆಲ್ಲ, ಶ್ರೀಕೃಷ್ಣ ಅವರು ಬಳಸಿಕೊಂಡಿರುವುದು ಅಡೊಲೊಸೆಂಟ್ ಬಾಲಕನೊಬ್ಬನ ದೃಷ್ಟಿಕೋನವನ್ನು. 'ಕಾಡು' ಕಾದಂಬರಿಯ ಕಿಟ್ಟಿ ಇಂಥದೇ ಇನ್ನೊಂದು ನಿದರ್ಶನ. ಆದರೆ ಅವರು ಈ ಸಂದರ್ಭಗಳಲ್ಲಿ ನಿರೂಪಕನಾಗಿ ಉತ್ತಮಪುರುಷ ಏಕವಚನವನ್ನು ಬಳಸಿಕೊಳ್ಳದಿರುವುದು ಕೃತಿಗೆ ಒಂದುಬಗೆಯ ಸಮತೋಲನವನ್ನು ತಂದುಕೊಡುತ್ತದೆ. ಇದು ಭುಜಂಗಯ್ಯನೇ ಹೇಳಿಕೊಳ್ಳುವ ಆತ್ಮಕಥೆಯಲ್ಲ. ಬದಲಾಗಿ, ಅವನ ಬಗ್ಗೆ ಸಹಾನುಭೂತಿಯಿರುವ ವೀಕ್ಷಕನೊಬ್ಬನು ಅವನ ಬದುಕಿನ ಬಗ್ಗೆ ನೀಡುವ ರನಿಂಗ್ ಕಾಮೆಂಟರಿ. ಆದ್ದರಿಂದಲೇ ಇತರ ಪಾತ್ರಗಳ ವರ್ತನೆಯನ್ನು ಸ್ವತಂತ್ರವಾಗಿ ವರ್ಣಿಸುವ, ವ್ಯಾಖ್ಯಾನಿಸುವ ಸ್ವಾತಂತ್ರ್ಯವನ್ನು ನಿರೂಪಕ ಉಳಿಸಿಕೊಂಡಿರುತ್ತಾನೆ. ಆದ್ದರಿಂದ ಭುಜಂಗಯ್ಯನ ನಿಜವಾದ ವ್ಯಕ್ತಿತ್ವವು ಓದುಗನ ಗ್ರಹಿಕೆಯೊಳಗೆ ಬರುವುದು (i) ಅವನ ಕ್ರಿಯೆಗಳು (ii) ಆಲೋಚನೆಗಳು ಮತ್ತು (iii) ಅವನ ಬಗೆಗಿನ ನಿರೂಪಕನ ಹೇಳಿಕೆಗಳೆಂಬ ಮೂರು ನೆಲೆಗಳಿಂದ.

ಈ ಮೂರು ನೆಲೆಗಳ ಪರಸ್ಪರ ಪೂರಕತೆಯಿಂದ ಓದುಗನು ಪರಿಭಾವಿಸುವ ಭುಜಂಗಯ್ಯನು ಲೇಖಕರು ಚಿತ್ರಿಸಬಯಸುವ ಪವಾಡಪುರುಷನಿಗಿಂತ ಭಿನ್ನವಾಗು ತ್ತಾನೆ. ಆದರೂ 'ಕಾಡು' ಕಾದಂಬರಿಯ ಸಂದರ್ಭದಲ್ಲಿ ಯಶಸ್ವಿಯಾಗುವ ಇಂಥ 'ಸೀಮಿತ ದೃಷ್ಟಿಕೋನ'ವು (Limited Point of View) ಈ ಕಾದಂಬರಿಯ ವಿಶಾಲ ಹರಹಿನಲ್ಲಿ ಅಷ್ಟು ಯಶಸ್ವಿಯಾಗುವುದಿಲ್ಲ. ಏಕೆಂದರೆ, ಕಾದಂಬರಿಯ ಪ್ರತಿಯೊಂದು ಪಾತ್ರವೂ ಭುಜಂಗಯ್ಯನನ್ನು ರಾಜು ಕೊಟ್ಟ ಬಣ್ಣದ ಕನ್ನಡಕಗಳ ಮೂಲಕವಾಗಿಯೇ ನೋಡುತ್ತಿದೆ. ಅವನನ್ನು ಕುರಿತಾದ ದ್ವೇಷವೂ, ತಾನು ಅವನ ಹಾಗೆ ಆಗಲಿಲ್ಲವೆಂಬ ಕರುಬುವಿಕೆಯಿಂದ ಪ್ರೇರಿತವೇ ವಿನಾ ಅಸಮ್ಮತಿಯಿಂದ ಅಲ್ಲ. ಆಲನಹಳ್ಳಿಯವರ ಬೇರೆ ಕೆಲವು ಕಥೆಗಳಲ್ಲೂ ಬರುವ ಈ ಭುಜಂಗಯ್ಯ ಲೇಖಕರ ಬಾಲ್ಯದ ಚಿತ್ತಭಿತ್ತಿಯಲ್ಲಿ ಅಚ್ಚೊತ್ತಿ ನಿಂತಿರುವ ಆರಾಧ್ಯಪುರುಷರಲ್ಲಿ ಒಬ್ಬ.

ಮೇಲಿನ ಮಾತುಗಳಿಗೆ ಪುರಾವೆಯನ್ನು ಕಾದಂಬರಿಯ ಪುಟ ಪುಟಗಳಲ್ಲೂ ನೋಡಬಹುದು. ನಿರೂಪಿತವಾಗುತ್ತಿರುವ ಘಟನೆಗಳಲ್ಲಿ ಅಲ್ಲ, ಅವುಗಳಿಗೆ ಕೊಡ ಲಾಗುವ ವ್ಯಾಖ್ಯಾನದಲ್ಲಿ ಈ ಬಗೆಯ ರೊಮ್ಯಾಂಟಿಕ್ ಧೋರಣೆ ತಾನೇ ತಾನಾಗಿದೆ. ಅವನು ನಾಟಕದ 'ಸೂತ್ರಧಾರ'ನಾದಾಗ (ಪಾತ್ರವಲ್ಲ). ಕರೀಗೌಡರ ಜೀವ ಉಳಿಸಿ ದಾಗ, ಅತ್ಯಾಚಾರಕ್ಕೆ ಗುರಿಯಾದ ಸುಶೀಲೆಯನ್ನು ಕ್ಷಮಿಸಿದಾಗ, ಹೊಲ ಮಾರಿ ಸಾಲ ತೀರಿಸಿದಾಗ–ಇಂಥ ಹತ್ತು ಹಲವು ಸಂದರ್ಭಗಳಲ್ಲಿ ಅವನ ಕ್ರಿಯೆ ಹಾಗೂ ಆದಕ್ಕೆ ದೊರೆಯುವ ವ್ಯಾಖ್ಯಾನಗಳೆರಡೂ ಅವನ ಅ–ಸಾಮಾನ್ಯತೆಗೆ ಸಾಕ್ಷಿಯಾಗಿವೆ. ಇದೇ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಭುಜಂಗಯ್ಯನು ಮಾಡಿಕೊಳ್ಳುವ ಆತ್ಮನಿಂದೆ, ಅಂತರಂಗ ಪರಿವೀಕ್ಷಣೆಗಳನ್ನು, ಅವನು ತನ್ನನ್ನು 'ಮೀರಿ'ಮಾಡುವ ಮಹಾಕಾರ್ಯಗಳ ಸಂಗಡ ಜೊತೆಜೊತೆಯಾಗಿಸಿರುವ (Juxtapose) ರೀತಿ. ಆಗ ಅವನ ಆತ್ಮನಿಂದೆಯೂ ಉದಾತ್ತತೆಯನ್ನು ಪೋಷಿಸುವ ಸಂಗತಿಯೇ ಆಗಿಬಿಡುತ್ತದೆ. ಆದರೆ ಅವನು ನಿಜವಾಗಿಯೂ ಭಾವನಾತ್ಮಕ ಸಂಘರ್ಷಕ್ಕೆ ಗುರಿ ಯಾಗಬಹುದಾಗಿದ್ದ ಸನ್ನಿವೇಶಗಳನ್ನು ಪಾರ್ವತಿಯ ಪಾತ್ರದ ದುಷ್ಟೀಕರಣದಿಂದಲೋ, ಬಳೀಶೆಟ್ಟರ ಪಾತ್ರದ ವಿದೂಷಕೀಕರಣದಿಂದಲೋ ಸರಳಗೊಳಿಸಲಾಗಿದೆ. ಇಲ್ಲದೆ ಹೋದರೆ ತನ್ನ ಸ್ವಂತ ಮಕ್ಕಳ ಮೇಲೆ ಪಾರ್ವತಿ ತೋರಿಸುವ ಕ್ರೌರ್ಯಕ್ಕೆ ಬೇರೆ ಯಾವ ನಿಯೋಗವೂ (Function) ಇರುವುದಿಲ್ಲ. ತನ್ನ ಮಗಳು ಭುಜಂಗಯ್ಯನ ಜೊತೆ ಯಲ್ಲಿ ಓಡಿಹೋದಳೆಂಬ ಸಂಗತಿ ತಿಳಿದು ದುಃಖಿಸುತ್ತಿರುವ ಬಳೀಶೆಟ್ಟರನ್ನು ಹೀಗೆ ವರ್ಣಿಸಿರುವುದು ಆಕಸ್ಮಿಕವಲ್ಲ:

"....ಗಂಡನ ಮೇಲಿನ ರೋಷವನ್ನೆಲ್ಲ ಅವಳು ಕಕ್ಕಿದಳು. ಶೆಟ್ಟರ **ಮೂಗಿಂದ** ನೀರು ಧಾರಾಕಾರವಾಗಿ ಇಳಿಯುತ್ತಿತ್ತು. ಹಾಗೆಯೇ ಕಣ್ಣಿನಿಂದ ಕೂಡ" [ಪು. 256]

ಈಗಾಗಲೇ ಹೇಳಿದಂತೆ ಹಾವು ಕಚ್ಚಿದ ಕರಿಗೌಡರ ಜೀವ ಉಳಿಸಿ 'ಆತ್ಮದಾತ್ರ' ನಾದ ನಂತರದಲ್ಲೇ ಅವನ ಮನಸ್ಸು ತೊಡಗುವ ಆತ್ಮನಿಂದೆಯನ್ನು ಗಮನಿಸಿ :

"ತಾನು ಪಾಪಿ, ನಿಜ. ದುರಾಶಾಪೀಡಿತನಾಗಿ ಧರ್ಮವನ್ನು ಮರೆತೆ. ತಾನು ಗಳಿಸುವುದು ಪಾಪದ ಧನ ಸತ್‌ಪಾತ್ರಕ್ಕೆ ಸಲ್ಲದು. ಅದು ನಾಯಿಯ ಹಾಲೆ ಹೊರತು ಪಂಚಾಮೃತವಲ್ಲ. ತಾನು ಮಾಡಿದ್ದೆಲ್ಲ ತನ್ನ ಮೈಸುಖಕ್ಕೆ. ಕಾಮ ಮತ್ತು ಹಣ ಇವೆರಡೇ ಸರ್ವಸ್ವವಲ್ಲ, ಹಾಗೆಂದು ತಾನು ತಿಳಿಯದಿದ್ದರೂ ತಾನು ಅವಕ್ಕೇ ವಶನಾದೆ. ತನ್ನನ್ನು ಕೆಳಗೆ ತಳ್ಳುವ ವಿಕಾರಗಳಿಂದ ತಾನು ಮುಕ್ತನಾಗಬೇಕು." [ಪುಟ 275-76]

ಇದಾದ ಒಂದೆರಡು ಕ್ಷಣಗಳಲ್ಲೇ ಅವನ ಚಿಂತನೆಯು ದಿಕ್ಕು ಸ್ವಸಮರ್ಥನೆಯ ದಾಗುತ್ತದೆ:

"ಕ್ಷಣ ಭುಜಂಗಯ್ಯನಿಗೆ ತಾನು ಮಾಡಬಾರದ್ದು ಮಾಡಿಲ್ಲ ಅನಿಸಿತು. ಅವಳ ರೂಪಿಗೆ ತಾನು ಮರುಳಾಗಿದ್ದು ನಿಜ. ಆದರೆ ತನ್ನದು ಕ್ಷಣಿಕ ಬಯಕೆ ಅಲ್ಲ. ಶಿವನ ಮುಂದೆ ಕೈಹಿಡಿದು ಕರೆದು ತಂದೆ. ಶಿವ ಮೆಚ್ಚುವಂತೆಯೇ ಅವಳ ಜೊತೆಯೂ ಬದುಕುವೆ, ಯಾರು ಕೋಪಗೊಂಡರೂ ತನಗೇನಿಲ್ಲ, ಊರೇ ಕಡೆಗಣಿಸಿದರೂ ತನಗೇನು ?" [ಪುಟ 276-77]

ಈ ಮಾತುಗಳು ಎಷ್ಟು ಮೇಲುನೆಲೆಯವಾಗಿವೆಯೆಂದರೆ, ಭುಜಂಗಯ್ಯನಿರಲಿ, ಅವನ ಓದುಗರಾದ ನಾವೇ, "ಛೇ, ಎಲ್ಲಾದರೂ ಉಂಟೆ ! ಭುಜಂಗಯ್ಯ ಅಂಥವ ನಲ್ಲ, ಒಳ್ಳೆಯ ಮನುಷ್ಯ" ಎಂದುಕೊಂಡು ಸುಮ್ಮನಾಗಿಬಿಡುತ್ತೇವೆ.

ಹೀಗೆಯೇ, ತನ್ನ ದಶಾವತಾರಗಳಿಗಿಂತ ಹಿಂದಿನ ಜನ್ಮದ 'ಅಪರಾಧ'ವನ್ನು ಕುರಿತು ಭುಜಂಗಯ್ಯ ಆಲೋಚಿಸುವುದು ತನ್ನ ಕಣ್ಣುಗಳನ್ನು ಕಳೆದುಕೊಂಡು ಅಪಾರ ವಾದ ಅನುಕಂಪಕ್ಕೆ ಪಾತ್ರನಾಗುವ ಸ್ಥಿತಿಯಲ್ಲಿ ಇದ್ದಾಗ. ಆಗಲೂ ಅದು ಅವನ ಗೂಡನ್ನು ಬೆಚ್ಚಗೆ ಮಾಡುವ ನೆನಪಾಗಿಯೇ ಮೂಡಿಬರುತ್ತದೆ.

ಈ ರೀತಿಯಲ್ಲಿ ಇಡೀ ಕಾದಂಬರಿಯಲ್ಲಿ ನಾಯಕ ಕೇಂದ್ರಿತವಾದ ದೃಷ್ಟಿಕೋನ ವೊಂದು ನಿಯಂತ್ರಿತವಾಗಿ ಅದಕ್ಕೆ ಅ-ವಾಸ್ತವವಾದ, ರೊಮ್ಯಾಂಟಿಕ್ ನೆಲೆಗಳನ್ನು ತಂದುಕೊಟ್ಟಿದೆಯೆಂದು ತೋರಿಸಿದಮೇಲೆ, ಇವನು ಎಂಥ ನಾಯಕ, ಇದು ಎಂಥ ಕಾದಂಬರಿ ಎಂಬ ಪ್ರಶ್ನೆಗಳನ್ನು ಇನ್ನಷ್ಟು ಆಳವಾಗಿ ಪರಿಶೀಲಿಸಬಹುದು.

ತನ್ನ ಸಮುದಾಯದ ಪ್ರಧಾನ ಆಶಯಗಳು ಮತ್ತು ಆಸಕ್ತಿಗಳೊಂದಿಗೆ ತನ್ನನ್ನೂ ಗುರುತಿಸಿಕೊಂಡು ಅದರೊಂದಿಗೆ ಬೆಳೆಯುವ, ಅದನ್ನೂ ಬೆಳೆಸುವ ಏಕೀಕೃತ

ನಾಯಕನನ್ನಾಗಲೀ (Integrated Hero) ಅಥವಾ ಸಮುದಾಯದ ಸ್ವೀಕೃತ ಮೌಲ್ಯ ಗಳ ವಿರುದ್ಧ ದಂಗೆಯೆದ್ದು ಅದರೊಂದಿಗಿನ ಸಂಘರ್ಷದಲ್ಲೋ, ಏಕಾಂತದ ನೋವಿನಲ್ಲೋ ಬದುಕುವ ಪ್ರತ್ಯೇಕಿತ ನಾಯಕನನ್ನಾಗಲೀ (Alieanated Hero) ಭುಜಂಗಯ್ಯನಲ್ಲಿ ಗುರ್ತಿಸಲಾಗುವುದಿಲ್ಲ. ಹಾಗೆ ನೋಡಿದರೆ ಅವನು ಈ ಎರಡು ಬಗೆಯ ನಾಯಕರನ್ನೂ ತನ್ನೊಳಗೆ ಮುದುಗಿಸಿಕೊಂಡವನು. ಹಳ್ಳಿಯ ಜನರ ಜೀವನ ಕ್ರಮವನ್ನು ಬದಲಾಯಿಸಬೇಕೆಂಬ ಅಭೀಪ್ಸೆಯಾಗಲೀ, ಅವರ ನಾಯಕನಾಗಬೇಕೆಂಬ ಆಸೆಯಾಗಲೀ ಭುಜಂಗಯ್ಯನಲ್ಲಿಲ್ಲ. ಅವನಲ್ಲಿ ತನ್ನ ದಿನದಿನದ ಸಮಸ್ಯೆಗಳನ್ನು ತನಗೆ ವಿಶಿಷ್ಟವಾದ ರೀತಿಯಲ್ಲಿ ಬಿಡಿಸಿಕೊಳ್ಳುತ್ತಲೇ ಇತರರಿಗೆ ಮಾದರಿಯಾಗ ಬಲ್ಲವನು. ಡಾ॥ ಕೆ. ವಿ. ನಾರಾಯಣ ಅವರು ಹೇಳುವಂತೆ ಅವನು ಕಾದಂಬರಿ ಗಿಂತ ಹೆಚ್ಚಾಗಿ ರಮ್ಯಕಥಾನಕವೊಂದರ ನಾಯಕನಂತೆ, ಯಾವ ಪೂರ್ವಸಿದ್ಧತೆಯೂ ಇಲ್ಲದೆ ಬಂದುದನ್ನು ಬಂದಂತೆ ಎದುರಿಸುತ್ತಾ ಆ ಎದುರಿಸುವ ಕ್ರಿಯೆಯಲ್ಲೇ ಆಗುತ್ತಾ ಹೋಗುತ್ತಾನೆ. ಕಾದಂಬರಿಯ ಉದ್ದಕ್ಕೂ ಭುಜಂಗಯ್ಯ ಹೇಗೆ ತನ್ನ ಊರಿನ ಜನರಿಗೆ ಅನುಕರಣೀಯನಾದ, ಪ್ರಗತಿಯ ನೆಲೆಯನ್ನು ತೋರಿಸಿದ ಎಂದು ಹೇಳುವ ಹಾಗೆಯೇ, ಅವನು ಸಮುದಾಯದ ಇತರರಿಗಿಂತ ಭಿನ್ನವಾಗಿದ್ದ ಎನ್ನುವುದರ ಕಡೆಗೂ ಒತ್ತು ಕೊಡಲಾಗಿದೆ. ಆ ಭಿನ್ನತೆಯು ಭುಜಂಗಯ್ಯನು ಹಿಟ್ಟಿಗಿಂತ ಹೆಚ್ಚಾಗಿ ಅನ್ನವನ್ನು ಇಷ್ಟಪಡುತ್ತಿದ್ದನೆನ್ನುವಂಥ ಸಣ್ಣ ವಿವರದಿಂದ ಹಿಡಿದು, ಸುಶೀಲೆಯೊಂದಿಗೆ ಬಹಿರಂಗವಾಗಿ ಸಂಸಾರ ನಡೆಸುವಂತಹ ಮಹತ್ವದ ಸಂಗತಿಯವರೆಗೆ ಹರಡಿಕೊಂಡಿದೆ. ಪ್ರವೃತ್ತಿಜನ್ಯವಾದ ಕ್ರಿಯೆಗಳಲ್ಲಿ ಅವನು ಸಮುದಾಯದ ಸಂಗಡವೇ ಇದ್ದರೆ, ವೈಚಾರಿಕವಾದ ನೆಲೆಗಳಲ್ಲಿ ಭಿನ್ನನಾಗುತ್ತಾನೆ.

ಈ ಕಾದಂಬರಿಯ ಪ್ರಮುಖ ಕರ್ಷಣವಿರುವುದು ಇಲ್ಲಿಯೇ. ಆವನತಿಪರವೆಂದು ಲೇಖಕರೇ ತಿಳಿಯುವ ಸಮುದಾಯದಲ್ಲಿ, ಉದಾತ್ತತೆಯ ಕಡೆಗೆ ಚಲಿಸುವ ನಾಯಕ ನನ್ನು ಸ್ಥಾಪಿಸುವ ಮೂಲಕ, ಒಂದರಿಂದ ಇನ್ನೊಂದರ ಪರಿಣಾಮವನ್ನು ತೀವ್ರ ಗೊಳಿಸಲಾಗಿದೆ. ಎಂಥ ಸಮರ್ಥನೇ ಇರಲಿ, ವ್ಯಕ್ತಿಯೊಬ್ಬ ಸಮುದಾಯದ ಚಲನೆಯ ದಿಕ್ಕನ್ನು ನಿಯಂತ್ರಿಸಬಲ್ಲನೆಂಬ ತಿಳುವಳಿಕೆ ಸಾಮಾಜಿಕ ಪ್ರಕ್ರಿಯೆಗಳ ಮಸಿ ಅರಿವಿನಿಂದ ಹುಟ್ಟಿರುತ್ತದೆ. ಮಾದಳ್ಳಿಯಲ್ಲಿ ಆಗಿರುವ ಹಲವು ಬದಲಾವಣೆಗಳಿಗೆ ಭುಜಂಗಯ್ಯನು ನಿಮಿತ್ತ ಮಾತ್ರವಿರಬಹುದು; ಕಾರಣಪುರುಷನಲ್ಲ. ಇದು ಕಾದಂಬರಿಕಾರರಿಗೂ ಗೊತ್ತು. ಆದರೆ ಭುಜಂಗಯ್ಯನ ಬಗ್ಗೆ ಅವರಿಗಿರುವ ಅಭಿಮಾನ ಅವರಿಂದ ಇಂಥ ಮಾತುಗಳನ್ನು ಬರೆಸುತ್ತದೆ:

"ಸಾವೊಂದನ್ನು ಗೆದ್ದಿದ್ದ ಜೀವ ಈಗ ತಾನೇ ಸಾವಿನ ಕ್ರೂರ ದವಡೆಗೆ ಸಿಕ್ಕಿ ಬಿದ್ದಿತ್ತು. ಇದನ್ನು ಉಳಿಸಬಲ್ಲ ಪವಾಡಪುರುಷ ಮಾದಳ್ಳಿಯಲ್ಲಿ ಬೇರೆ ಯಾರೂ

ಇರಲಿಲ್ಲ. ಇಷ್ಟು ಹೊತ್ತೂ ಬೇಸೆಯನ್ನೆಲ್ಲ ತಡೆದುಕೊಂಡು ಉಬ್ಬಸಪಡುತ್ತಿದ್ದ ಮಾದಳ್ಳಿ ಅದನ್ನೆಲ್ಲ ಒಮ್ಮೆಲೇ ಕಕ್ಕಿಬಿಡುವಂತೆ ಗೋಳಿಟ್ಟಿತು". [ಪುಟ 526]

ರಾಗರಂಜಿತವಾದ ಈ ಬರವಣಿಗೆ ನಾಯಕನೊಂದಿಗೆ, ಲೇಖಕನಿಗಿರುವ ತಾದಾತ್ಮ್ಯಕ್ಕಿಂತ ಹೆಚ್ಚಿನದೇನನ್ನೂ ಹೇಳುವುದಿಲ್ಲ,

ಭುಜಂಗಯ್ಯ ಎಂಥ ಕ್ಲಿಷ್ಟ ಪರಿಸ್ಥಿತಿಯಲ್ಲೂ ಬದುಕುವ ಹೊಸದಾರಿಗಳನ್ನು ಕಂಡುಕೊಳ್ಳುವ ಪ್ರತ್ಯುತ್ಪನ್ನಮತಿಯಾಗಿರುವುದರ ಮೂಲಕ, ಗ್ರಾಮ ಸಮುದಾಯಕ್ಕೆ ಇರುವ ಧಾರಣ ಸಾಮರ್ಥ್ಯವನ್ನು ಎತ್ತಿಹಿಡಿಯುತ್ತಿದ್ದಾನೆಯೇ ಎನ್ನುವುದು ಮತ್ತೊಂದು ಮುಖ್ಯಪ್ರಶ್ನೆ. ಗ್ರಾಮದ ಬದುಕು ತನ್ನ ಜೀವಂತಿಕೆಯನ್ನು ಕಳೆದು ಕೊಂಡು ಸರ್ವನಾಶದ ಕಡೆಗೆ ಚಲಿಸುತ್ತಿದೆಯೆನ್ನುವ ಗ್ರಹಿಕೆಗಳ ಹಿನ್ನೆಲೆಯಲ್ಲಿ, ಭುಜಂಗಯ್ಯನು ರಚನಾತ್ಮಕ ಸಾಧ್ಯತೆಗಳ ಕಡೆಗಿನ ದಿಕ್ಸೂಚಿಯೇ ಎಂದು ಯೋಚಿಸ ಬೇಕು. ಆಲನಹಳ್ಳಿಯವರು ನಾಗರಿಕತೆಯ ಸಮಗ್ರ ವಿವರಗಳನ್ನು ನಿರಾಕರಿಸಿ, ಹಿಂದೆಂದೋ ಇದ್ದಿರಬಹುದಾದ ಗ್ರಾಮೀಣ ಮುಗ್ಧತೆಗಾಗಿ ಹಳಹಳಿಸುವ ನಾಸ್ಟಾಲ್ಜಿಕ್ ಲೇಖಕರೇನೂ ಅಲ್ಲ. ನಾಗರಿಕತೆಯ ಫಲವಾಗಿ ಸಿಗುವ ಸಣ್ಣಪುಟ್ಟ ಸೂಚನೆಗಳನ್ನು ಕ್ರಿಯಾಶೀಲವಾಗಿ ಅಳವಡಿಸಿಕೊಳ್ಳುವ ಭುಜಂಗಯ್ಯ ಅವರ ಮೆಚ್ಚಿಗೆಗೇ ಪಾತ್ರ ನಾಗುತ್ತಾನೆ. ಆದರೆ ಕೃಷಿಯಿಂದ ವೈರಾಗ್ಯದವರೆಗಿನ ಭುಜಂಗಯ್ಯನ ಜೀವನ ಪಥವು ಯಾವುದೇ ಹೊರಗಿನ ಅಥವಾ ಒಳಗಿನ ತಾತ್ವಿಕತೆಯ ಚೌಕಟ್ಟಿನಿಂದ ಬದ್ಧ ವಾಗಿಲ್ಲ. ಅವನು ಕ್ರಿಯಾತತ್ಪರನೇ ವಿನಾ ವಿಚಾರಮಗ್ನನಲ್ಲ. ಆಗೀಗ ಆಲೋಚನೆಗೆ ತೊಡಗಿದಾಗಲೂ ಅವನ ಧ್ಯಾನಕ್ಕೆ ವಸ್ತುವಾಗುವುದು ಭೂತಕಾಲ. ಆದ್ದರಿಂದಲೇ ಭುಜಂಗಯ್ಯನಿಗೆ ಅನಿವಾರ್ಯವಾಗುವ ಹೊಸ ಸಾಧ್ಯತೆಗಳ ಆಯ್ಕೆಯು ಎಷ್ಟರಮಟ್ಟಿಗೆ ಅವನ ಆಯ್ಕೆಯೋ ಅಷ್ಟರಮಟ್ಟಿಗೆ ಹೊರಗಿನ ಆಕಸ್ಮಿಕಗಳಿಂದ ನಿಯಂತ್ರಿತವಾದವು. (ಬರಗಾಲ, ಹೋಟೆಲ್ ಮೇಲಿನ ಆಕ್ರಮಣ, ಸುಶೀಲೆಯ ಮೇಲಿನ ಅತ್ಯಾಚಾರ, ಕಣ್ಣುಹೋಗಿದ್ದು, ನಾರಾಯಣನಿಗೆ ಹಾವು ಕಚ್ಚಿದ್ದು ಇತ್ಯಾದಿ). ಅಂಥ ಆಕಸ್ಮಿಕಗಳನ್ನು ಎದುರಿಸಬೇಕಾದವರೆಲ್ಲ ಭುಜಂಗಯ್ಯನಂತೆ ಬೆಳೆಯುತ್ತಾ ಹೋಗುವರೆಂಬ ಮಾತು ಸುಳ್ಳು. ಅಂಥದೊಂದು ತುಡಿತ ಅವನಲ್ಲಿಯೇ ಇದೆ. ಆದರೆ ಭಕ್ತಿ, ಅನುಭಾವ, ವೈರಾಗ್ಯಗಳ ಕಡೆಗಿನ ಭುಜಂಗಯ್ಯನ ಚಲನೆಯು ಸಮಗ್ರ ಸಮುದಾಯವೇ ಆಧು ನಿಕತೆಯ ಪರವಾಗಿ ಮಾಡಿಕೊಂಡ ಆಯ್ಕೆಯೆಂದು ಹೇಗೆ ಹೇಳುವುದು ? ಭುಜಂ ಗಯ್ಯನ ಹತ್ತು ಅವತಾರಗಳಲ್ಲಿ ಕನಿಷ್ಠ ಪಕ್ಷ ಐದಾದರೂ ಅಸಹಾಯಕತೆಯ ನೆಲೆ ಯಲ್ಲೇ ರೂಪುಗೊಂಡಿವೆಯೆನ್ನುವುದು ಸತ್ಯಕ್ಕೆ ಹತ್ತಿರವಾದ ಮಾತು. ಆದ್ದರಿಂದಲೇ ಕಾದಂಬರಿಯ ಕೊನೆಯಲ್ಲಿ ಭುಜಂಗಯ್ಯ ಮಾದಳ್ಳಿಯ ಜನರ ಗೌರವ, ಕುತೂಹಲ ಗಳಿಗೆ ವಸ್ತುವಾಗುವನೇ ಹೊರತು ಅನುಕರಣೀಯನೆನಿಸುವುದಿಲ್ಲ. ಲಂಕೇಶರ

'ಮುಸ್ಸಂಜೆಯ ಕಥಾಪ್ರಸಂಗ'ದಲ್ಲಿ ಮಂಜ–ಸಾವಂತ್ರಿಯರು ತಲುಪುವ, ಹಾಗೆಯೇ ತೇಜಸ್ವಿಯವರ ಜಯಂತಿ–ರಫಿಯರು ತಲುಪುವ ನೆಲೆಯೊಂದಿಗೆ ಭುಜಂಗಯ್ಯನ ಆಯ್ಕೆಗಳನ್ನು ಹೋಲಿಸಿದಾಗ ಈ ಅಂಶವು ಚೆನ್ನಾಗಿ ಮನದಟ್ಟಾಗುತ್ತದೆ. ಯಾವುದೇ ಪರಿಮಿತ ಸಂದರ್ಭದಲ್ಲೂ ಆತ್ಮತೃಪ್ತಿಯ ನೆಲೆಗಳನ್ನು ಕಂಡುಕೊಳ್ಳುವ ಭುಜಂಗಯ್ಯ ವೈಯಕ್ತಿಕ ನೆಲೆಯಲ್ಲಿ ಪರ್ಯಾಯ ಸಾಧ್ಯತೆಗಳನ್ನು ಧ್ವನಿಸುತ್ತಿದ್ದಾನೆ; ಇಡೀ ಸಮುದಾಯಕ್ಕೆ ತೆರೆದುಕೊಂಡಿರುವ ಸಾಧ್ಯತೆಗಳನ್ನಲ್ಲ. ಇವನ ಹಾಗೆಯೇ 'ಕಾನೂರು ಹೆಗ್ಗಡಿತಿ'ಯ ಹೂವಯ್ಯ ತನ್ನ ಬದುಕಿನ ಬಗ್ಗೆ ತೆಗೆದುಕೊಳ್ಳುವ ತೀರ್ಮಾನಗಳು ಅವನ ಸಮುದಾಯಕ್ಕೆ ಮಾದರಿಯಾಗಲಿಲ್ಲ. ಇವನ ಬದುಕಿನ ಮೊದಮೊದಲ ಅವತಾರಗಳು ಮುಖ್ಯವಾಗಿ ಆರ್ಥಿಕ ಕಾರಣಗಳಿಂದ ಅನುಕರಣೀಯವೆನಿಸಿದರೆ ಕೊನೆಯವು ಕೇವಲ ಆರಾಧನೆಗೆ ವಸ್ತುವಾಗುತ್ತವೆ.

ಭುಜಂಗಯ್ಯನು ರಂಗಮಧ್ಯದಿಂದ ಕದಲದ ನಾಯಕ. ಕುವೆಂಪು, ಕಾರಂತರ ಮಹಾನ್ ವಾಸ್ತವತಾವಾದೀ ಕಾದಂಬರಿಗಳಲ್ಲಿ ಆಗುವ ಹಾಗೆ ಇಲ್ಲಿ ಭುಜಂಗಯ್ಯನ ಕಥೆಗೆ ಸಮಾನಾಂತರವಾಗಿ ಚಲಿಸುವ ಉಪಹಂದರಗಳಿಲ್ಲ. ಎಲ್ಲ ಅಧ್ಯಾಯಗಳಲ್ಲೂ ಭುಜಂಗಯ್ಯನು ಬಂದೇ ಬರುತ್ತಾನೆ. ಜಾನಪದ ಹಾಗೂ ಪ್ರಾಚೀನ ಕಾವ್ಯಗಳಲ್ಲಿ ಆಗುವಂತೆ ಭುಜಂಗಯ್ಯನೂ ಕೃತಿಯ ಒಳಗೆ ವಿಮರ್ಶಾತ್ಮಕ ಪರಿಶೀಲನೆಗೆ ವಸ್ತುವಾಗದ ನಾಯಕ. ವಿಮರ್ಶೆಯೇನಿದ್ದರೂ ಸ್ವವಿಮರ್ಶೆ ಅಥವಾ ವಾಚನದ ಹಂತದಲ್ಲಿ ಓದುಗರಿಂದಲೇ ನಡೆಯುವ ವಿಮರ್ಶೆ.

ಕಾದಂಬರಿಯ ಕೆಲವು ಪಾತ್ರಗಳು ಭುಜಂಗಯ್ಯನ ಬದುಕಿನ ಕೆಲವು ಆಯಾಮಗಳನ್ನು ಪ್ರತಿಫಲಿಸುವುದು ಕುತೂಹಲಕಾರಿಯಾದ ಸಂಗತಿ. ಕಾದಂಬರಿಕಾರರಿಗೆ ತಿಳಿದೋ ತಿಳಿಯದೆಯೋ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮಗಳನ್ನು ಪ್ರತಿನಿಧಿಸುವ ತಂಬೂರಿ ಅಯ್ನೋರು, ಅಜ್ಜಪ್ಪ ಮತ್ತು ಪುಂಡ್ರಿಯರು ಭುಜಂಗಯ್ಯನ ಅಂತರಂಗದಲ್ಲಿ ತಮ್ಮದೇ ಆದ ಕೋಣೆಗಳನ್ನು ಹೊಂದಿದ್ದಾರೆ. ಅವರ ಪಾತ್ರಗಳನ್ನು ಅದೊಂದು ಆಯಾಮಕ್ಕೆ ಮಾತ್ರ ಸೀಮಿತವಾಗುವಂತೆ ಕಟ್ಟಲಾಗಿದೆ. ಆದರೆ ಭುಜಂಗಯ್ಯನಲ್ಲಿ ಈ ವಿಭಿನ್ನ ನೆಲೆಗಳು ಒಂದರೊಡನೊಂದು ಹೆಣೆದುಕೊಂಡು ಸಂಕೀರ್ಣವಾದ ವ್ಯಕ್ತಿತ್ವವೊಂದನ್ನು ಕಟ್ಟಿಕೊಡುತ್ತವೆ. ಆದರೆ ಈ ಸಂಕೀರ್ಣತೆಗೆ ವೈದೃಶ್ಯವಾಗಲೆಂದು, ಭುಜಂಗಯ್ಯನೊಬ್ಬನನ್ನು ಬೆಳೆಯುವ, ಬದಲಾಗುವ ಪಾತ್ರವಾಗಿಟ್ಟುಕೊಂಡು ಉಳಿದೆಲ್ಲರನ್ನೂ ಸಿದ್ಧಪಾತ್ರಗಳಾಗಿ ಮಾಡಿರುವುದು ಕಾದಂಬರಿಯ ಜಗತ್ತಿನ ಅಧಿಕೃತತೆಗೆ ಒಂದು ಮಿತಿಯಾಗಿದೆ. ಈ ಮಾತಿಗೆ ಕಾದಂಬರಿಯ ಬಹು ಮುಖ್ಯವಾದ ಪಾತ್ರವಾದ ಸುಶೀಲಾ ಕೂಡ ಅಪವಾದವಲ್ಲ, ಸುಶೀಲಾ ಕೂಡ ಭುಜಂಗಯ್ಯನಂತೆಯೇ ಈ ಕಾದಂಬರಿಯಲ್ಲಿ ಆಗುವ, ಮಾಗುವ ಪ್ರಕ್ರಿಯೆಗೆ

ಒಳಗಾದರೂ ಅವಳು ಮುನ್ನೆಲೆಗೆ ಬರುವುದು ಅಪರೂಪ. ಉಳಿದಂತೆ ಪುರುಷ ಪ್ರಧಾನ ಸಮಾಜದ ಒತ್ತಡಗಳಿಗೆ ಸಿಕ್ಕ ಮಿದುಮಣ್ಣಾಗುವ ಹೆಣ್ಣು ಅನಿವಾರ್ಯ ವಾದಾಗ ಗಟ್ಟಿಯಾಗುವ, ಮೂರ್ತಿಯಾಗುವ ಬಗೆಗೆ ಸುಶೀಲಾ ಸಾಕ್ಷಿಯಾಗುತ್ತಾಳೆ. ಇನ್ನೊಂದು ಅಚ್ಚರಿಯೆಂದರೆ ಆಲನಹಳ್ಳಿಯವರ ಹಲವು ಕಥೆ ಕಾದಂಬರಿಗಳ ನಾಯಕಿ ಯರಿಗೆ ಆಗುವಂತೆ ಸುಶೀಲಾ ಕಾಮವೆಂಬ ಮೌಲ್ಯದ ಅರ್ಥಶೋಧನೆಗೆ ನೆರವಾಗುವ ಉಪಕರಣವಾಗಿ ಮಾತ್ರ ಉಳಿಯುವುದಿಲ್ಲ. ಬದಲಾಗಿ ಅವಳ ವ್ಯಕ್ತಿತ್ವದಲ್ಲಿ ಶೋಧಿತ ವಾಗಿರುವುದು ಭಾವನಾಮಯವಾದ ಪ್ರೇಮವೆಂಬ ಮೌಲ್ಯ. ಅದು ಕಾಮದ ಭದ್ರ ವಾದ ನೆಲೆಗಟ್ಟನ್ನು ಹೊಂದಿದ್ದರೂ, ಕೊಡುವ–ಪಡೆಯುವ–ದುಡಿಯುವ–ಪ್ರೀತಿ ಯಿಂದ ಗೆಲ್ಲುವ ಪ್ರೇಮ. ಭುಜಂಗಯ್ಯನ ಪಾತ್ರದಲ್ಲಿ ಅಡಗಿರುವ ವೈಚಾರಿಕ ಸಾಧ್ಯತೆ ಗಳನ್ನು ವಾಚಾಳಿಯಲ್ಲದ ಕ್ರಿಯೆಯ ಹಂತದಲ್ಲಿ ಅವಳು ಸಾಧಿಸುತ್ತಾಳೆ. ಕನ್ನಡ ಕಾದಂಬರೀ ಪರಂಪರೆಯಲ್ಲಿ, ಅದಕ್ಕಿಂತ ಹೆಚ್ಚಾಗಿ ಬಂಗಾಳೀ ಕಾದಂಬರಿಗಳಲ್ಲಿ ಈ ಬಗೆಯ ಹಲವು ನಾಯಕಿಯರು ಬರುತ್ತಾರೆ. ತಮ್ಮ ಕಾಲ–ದೇಶಗಳ ಸೀಮಿತದಲ್ಲಿ, ತಮ್ಮ ಬದುಕನ್ನು ಅರ್ಥಪೂರ್ಣವಾಗಿ ನಡೆಸುವ ಇಂಥ ಸ್ತ್ರೀ ಪಾತ್ರಗಳು ವಿಶಿಷ್ಟ ವಾದವು. ವೈಚಾರಿಕತೆಯಲ್ಲ, ಸಂವೇದನಾಶೀಲತೆ ಅವಳ ಪಾತ್ರದ ಮುಖ್ಯ ಗುಣ. ಈ ಸಂವೇದನಾಶೀಲತೆಯು ತನ್ನ ಅಂತಿಮ ಸಾರ್ಥಕತೆಯನ್ನು ಕಂಡುಕೊಳ್ಳುವುದು ಭುಜಂಗಯ್ಯನನ್ನು ತಾಯಿಯಂತೆ ಆರೈಕೆ ಮಾಡುವುದರಲ್ಲಿ. ಅವಳು ಅಂಥ ಪಾತ್ರ ವನ್ನು ವಹಿಸಿದ್ದು ಕಾದಂಬರಿಯ ತುಂಬ ಹರಡಿಕೊಂಡಿರುವ ಭುಜಂಗಯ್ಯನ ಹುಡುಕಾಟಕ್ಕೆ ಮಂಗಳ ಹಾಡುತ್ತದೆ. ಆದರೆ ಸುಶೀಲೆಯ ಪಾತ್ರದ ಒಂದು ಕುತೂ ಹಲಕಾರೀ ಎಳೆಯೆಂದರೆ ಅವಳು ಅನುಭವಿಸುವ ಪಾಪಪ್ರಜ್ಞೆ. ರಾಜುವಿನ ಸಂಗಡ ಇದ್ದಾಗ ನಡೆದ ಘಟನೆಗೆ ಅವಳು ತೋರಿಸುವ ಪ್ರತಿಕ್ರಿಯೆ ಮತ್ತು ನಾರಾಯಣನ ಅತ್ಯಾಚಾರಕ್ಕೆ ತನ್ನ ದೇಹ ಸ್ಪಂದಿಸುವ ರೀತಿಗೆ ಅವಳ ಅಪರಾಧೀ ಮನೋಭಾವ ಎರಡೂ ಕಾದಂಬರಿಯ ಚೌಕಟ್ಟಿನಲ್ಲಿ ಹೇಗೆ ಅನಿವಾರ್ಯವೆಂದು ಹೇಳಲಾಗುವುದಿಲ್ಲ.

ಇದೆಲ್ಲ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಭುಜಂಗಯ್ಯನ ಪಾತ್ರದ ಬೆಳವಣಿಗೆಯ ಬಗ್ಗೆ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಬಹುದು. ಕಥನಕೃತಿಯಲ್ಲಿ ಪಾತ್ರದ ರಚನೆಯು ಎರಡು ರೀತಿಯಲ್ಲಿ ನಡೆಯುತ್ತದೆ. 'ನಿರ್ದಿಷ್ಟ ಗುಣ'ಗಳನ್ನು ಈಗಾಗಲೇ ತನ್ನ ಸ್ವಭಾವದ 'ಘಟಕ'ಗಳಾಗಿ ಹೊಂದಿರುವ 'ಸಿದ್ಧ ಪಾತ್ರ'ವೊಂದು ತಾನು ಎದುರಿಸುವ 'ಸನ್ನಿವೇಶ'ಗಳಿಗೆ 'ಪೂರ್ವನಿರ್ಧಾರಿತ'ವಾದ ರೀತಿಯಲ್ಲಿ ಪ್ರತಿಕ್ರಿಯಿಸುವ ಬಗೆ ಮೊದಲನೆಯದು. ಇಂಥಲ್ಲಿ ಪಾತ್ರಗಳ ವರ್ತನೆಯು 'ಪ್ರಿಡಿಕ್ಟಬಲ್' ಆಗಿರುತ್ತದೆ. ರಾಮ, ಧರ್ಮರಾಯ ಮುಂತಾದ ಪಾತ್ರಗಳು ಹೀಗೆ ತಮ್ಮಿಂದ 'ನಿರೀಕ್ಷಿತ'ವಾದ ವರ್ತನೆ ಮಾದರಿಗಳ ಒತ್ತಡದೊಳಗೆ ಕೆಲಸಮಾಡುತ್ತಾರೆ. ಭುಜಂಗಯ್ಯ ಎರಡನೆಯ ಬಗೆಯ ಪಾತ್ರ. ಅವನು ಕ್ರಿಯೆಯಲ್ಲಿ ಸಂಭವಿಸುತ್ತಾ

ಹೋಗುವ ಪಾತ್ರವೇ ವಿನಾ, ಘಟನೆಗಳಿಗೆ ಪ್ರತಿಕ್ರಿಯಿಸುತ್ತಾ ಹೋಗುವ 'ಗುಣ ಸಮಗ್ರ'ವಲ್ಲ. ಸರಳವಾಗಿ ಹೇಳುವುದಾದರೆ ಭುಜಂಗಯ್ಯನೆಂದರೆ ಅವನ ಬದುಕಿನ ಬೇರೆ ಬೇರೆ ಸಂದರ್ಭಗಳಲ್ಲಿ ತೊಡಗಿಕೊಳ್ಳುವ ಕ್ರಿಯೆಗಳ ಮೊತ್ತವೇ ಹೊರತು ಬೇರೇನೂ ಅಲ್ಲ. ಪ್ರತಿಯೊಂದು ಹೊಸ ಸನ್ನಿವೇಶವೂ ಅವನ ಪಾತ್ರಕ್ಕೆ ಒಂದು ಮಗ್ಗುಲನ್ನು ಜೋಡಿಸುತ್ತದೆ.

ನಾಯಕ ಪಾತ್ರದ ರಚನೆಯ ಬಗೆಗಿನ ಈ ಮಾತು ಒಟ್ಟು ಕಾದಂಬರಿಯ ಸ್ವರೂಪದ ಮೇಲೂ ಬೆಳಕು ಚೆಲ್ಲುತ್ತದೆ. ಮೇಲುನೋಟಕ್ಕೆ ಹಾಗೆ ಕಾಣದಿದ್ದರೂ ಈ ಕಾದಂಬರಿಯು ನಾಯಕನೊಬ್ಬನ ಸಾಹಸಗಳ ಸರಣಿಯ ರೋಚಕ ಮಂಡನೆ ಯಲ್ಲಿ ಆಸಕ್ತಿಯನ್ನು ತಳೆದ ಜಾನಪದ 'ರಮ್ಯಕಥಾನಕ'ದ ಮಾದರಿಯನ್ನು ಅಳವಡಿಸಿಕೊಂಡಿದೆ, ಅಂಥ ರಚನೆಗೆ ಸಹಜವಾದ ನಾಯಕನ ಗುಣಗಾನ, ವೈಭವೀ ಕರಣ, ವಿವರಗಳ ಪುನರಾವರ್ತನೆ, ಪ್ರಕೃತಿಯಲ್ಲಿ ಮನುಷ್ಯತ್ವಾರೋಪಣೆ, ಪ್ರಾಣಿ ಲೋಕದೊಂದಿಗಿನ ಸೇಂದ್ರಿಯ ಸಂಬಂಧ ಮುಂತಾದ ಲಕ್ಷಣಗಳು ಇಲ್ಲಿಯೂ ಹುದುಗಿವೆ. ಆದರೆ ಕಾದಂಬರಿಯು ಆಧುನಿಕ ಸಮುದಾಯವೊಂದರಲ್ಲಿ ಸ್ಥಾಪಿತ ವಾಗಿರುವುದರಿಂದ ಅತಿಮಾನುಷತೆ ಹಾಗೂ ಜಾನಪದ ಭಾಷೆಗಳ ಬಳಕೆಗೆ ಇಲ್ಲಿ ಅವಕಾಶವಾಗಿಲ್ಲ. ಇಡೀ ಕಾದಂಬರಿಯಲ್ಲಿ ಭುಜಂಗಯ್ಯನ ನೇರಪ್ರಸ್ತಾಪವಿಲ್ಲದ, ಅವನ ಕಥೆ ಮುಂದೆ ಚಲಿಸದ ಒಂದೇ ಒಂದು ಅಧ್ಯಾಯವೂ ಇಲ್ಲವೆನ್ನುವುದು ಆಕಸ್ಮಿಕ ವಲ್ಲ. ಹಾವುಗಳನ್ನು ಹಿಡಿದು ಆಡಿಸುವ ಭುಜಂಗಯ್ಯನ ಕೌಶಲ್ಯವು ಅತಿಮಾನುಷ ವೆನಿಸಿದರೂ, ಅದನ್ನು ಮತ್ತು ಔಷಧವನ್ನು ತಾನು ಹರಿಜನ ಮುದುಕನೊಬ್ಬನಿಂದ ಕಲಿತೆನೆಂದು ಭುಜಂಗಯ್ಯನೇ ಹೇಳಿಕೊಂಡುಬಿಡುತ್ತಾನೆ. ಅದೂ ಅಲ್ಲದೆ ಹಾವುಗಳು ಸ್ವತಃ ಭುಜಂಗಯ್ಯನೇ ಹಿಡಿದು ಪಳಗಿಸಲು ಯತ್ನಿಸಿದ ಮಾದಳ್ಳಿಯ ದುಷ್ಟ ಶಕ್ತಿಗಳಿಗೆ ಸಂಕೇತವೂ ಆಗುತ್ತವೆ. ಹಾಗೆಯೇ ಭುಜಂಗಯ್ಯನು ಹಿಂದಿರುಗಿದ್ದು ಕಾಡುಕುರುಬನೊಬ್ಬ ಮತ್ತು ಅವನ ಹೆಂಡತಿ ಮಾಡಿದ ಮಾಟದಿಂದ ಎಂದು ಊರ ಜನರೆಲ್ಲ ತಿಳಿದಾಗಲೂ ಅದು ಹಾಗಲ್ಲವೆಂಬ ವಾಸ್ತವತೆಯು ಸ್ವತಃ ಭುಜಂಗಯ್ಯನಿಗೇ ಗೊತ್ತಿರುತ್ತದೆ. ಹೀಗೆ ಕಾದಂಬರಿಯ ಹಲವು ಕಡೆಗಳಲ್ಲಿ ತಾನು ಅತಿಮಾನವನೆನ್ನು ವಂಥ ಅನಿಸಿಕೆಗಳನ್ನು ಭುಜಂಗಯ್ಯನು ಅಲ್ಲಗಳೆಯುತ್ತಾ ಹೋಗುತ್ತಾನೆ. ಎಂದರೆ ಕ್ರಿಯೆಯ ಹಂತದಲ್ಲಿ ಮತ್ತೆ ಮತ್ತೆ ತನ್ನನ್ನು ತಾನು ಮೀರುವ ಈ ನಾಯಕ, ಆಲೋಚನೆಯ, ಆತ್ಮಸಾಕ್ಷಿಯ ಹಂತದಲ್ಲಿ ಸಾಮಾನ್ಯರಿಗೆ ಸಹಜವಾದ ವಿನಯ ಮತ್ತು ವಾಸ್ತವಪ್ರಜ್ಞೆಗಳನ್ನು ಉಳಿಸಿಕೊಂಡಿರುತ್ತಾನೆ. 'ವಚನ ವೀರತ್ವ'ದ ಪ್ರತೀಕ ಗಳಾದ ಹಲವು ಕನ್ನಡ ಕಾದಂಬರೀಲೋಕದ ನಾಯಕರೊಂದಿಗೆ ಹೋಲಿಸಿದರೆ ಭುಜಂಗಯ್ಯ ಈ ನೆಲೆಯಲ್ಲೂ ವಿಶಿಷ್ಟ.

ಈ ಕಾದಂಬರಿಯು ತನ್ನ ಶಿಲ್ಪದ ಮೂಲಕ ಹೇಳಿಕೊಳ್ಳುವ ಕೆಲವು ಸಂಗತಿ ಗಳು, ಅದಕ್ಕಿರುವ ನಾಯಕಕೇಂದ್ರಿತ ಲಕ್ಷಣಗಳನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ

ಮಾಡಿಕೊಳ್ಳುವುದೆಂದು ತೋರಿಸಿಕೊಡುತ್ತಾ ಈ ಪರಿಶೀಲನೆಯನ್ನು ಮುಕ್ತಾಯ ಮಾಡಬಹುದು.

ಒಂದು ಕಾದಂಬರಿಯ ಶಿಲ್ಪದ ಸಾರ್ಥಕತೆಯಿರುವುದು ಅದು ಕಾದಂಬರಿಕಾರನ ಆಶಯಗಳನ್ನೂ ಮೀರಿ ಓದುಗನೊಂದಿಗೆ ಸ್ಥಾಪಿಸಿಕೊಳ್ಳುವ ಜೀವಂತ ಸಂಬಂಧದಲ್ಲಿ. ಕಾದಂಬರಿಕಾರನು ಹೇಳಬಯಸುವ ಅಥವಾ ನಾಯಕನ ಮೂಲಕ ಧ್ವನಿಸುತ್ತಿರುವ ತಥ್ಯಗಳಿಗಿಂತ ಭಿನ್ನವಾದ ನೆಲೆಗಳನ್ನು ಓದುಗನು ತಲುಪುವುದು ಸಾಧ್ಯವಾದರೆ, ಅಂಥದೊಂದು ವಿಭಿನ್ನವಾದ ತಿಳಿವಳಿಕೆಗೆ ಬೇಕಾದ ಪ್ರಚೋದಕಗಳೂ ಕೃತಿಯ ನುಡಿ ಮೈಯಲ್ಲಿಯೇ ಅಡಗಿರುತ್ತವೆ. ಕಾದಂಬರಿಯ ಬಿಡಿಘಟನೆಗಳೂ ಮತ್ತು ವಾಸ್ತವದ ವಿವರಗಳ ಸಂಯೋಜನೆಯಿಂದ ಹುಟ್ಟುವ 'ಪಠ್ಯ'ವು ಈ ರೀತಿಯ ಕೆಲಸ ಮಾಡುತ್ತದೆ. ಅವೆಲ್ಲವೂ ಕೇವಲ ಕಥೆಯನ್ನು ಕಟ್ಟಲೆಂದು ಬರದೆ ತಮ್ಮದೇ ಆದ ವ್ಯಥೆಯನ್ನೂ ಕೆಳದನಿಯಲ್ಲಿ ಹೇಳುತ್ತಿರುತ್ತವೆ.

'ಭುಜಂಗಯ್ಯನ ದಶಾವತಾರಗಳು' ನಾಯಕನ ನೆಲೆಗಳನ್ನು ದಾಟಿ ಬೆಳೆಯು ವುದು ತಾನು ವಿಫುಲವಾಗಿ ಕೊಡುವ ಜೀವನ ವಿವರಗಳಿಂದ. ಆ ವಿವರಗಳು ಹೇಗೆ ಭುಜಂಗಯ್ಯನನ್ನು ಬೆಳೆಸುತ್ತವೆಯೋ ಹಾಗೆಯೇ ಮಾದಳ್ಳಿಯನ್ನೂ ಬೆಳಗಿಸುತ್ತವೆ. ಅಲ್ಲಿ ಆಡಿಸಲಾದ ಬಯಲು ನಾಟಕ, ಸ್ವಾಮಿಗಳ ಆಗಮನ–ನಿರ್ಗಮನ, ಕಂಟ್ರಾಕ್ಟರ್ ನರಸಿಂಹಯ್ಯನ ಪ್ರಸಂಗ, ಹರಿಜನ ಮೇಷ್ಟ್ರು ಹೋಟಲಿನಲ್ಲಿ ಟೀ ಕುಡಿದ ಘಟನೆ, ಮುದ್ದೇಗೌಡರ ಮೈಸೂರು ಯಾತ್ರೆ, ಗಾಂಧಿಯನ್ನು ಕುರಿತಾದ ಪ್ರಸ್ತಾಪಗಳು ಮುಂತಾದ ಹಲವು ನಿದರ್ಶನಗಳನ್ನು ಕೊಡಬಹುದು. ಇವುಗಳಿಗೂ ಭುಜಂಗಯ್ಯನ ಸ್ವಂತ ಬದುಕಿನ ವಿಕಸನಕ್ರಮಕ್ಕೂ ಅನಿವಾರ್ಯ ಸಂಬಂಧವೇನೂ ಇಲ್ಲ. ಆದರೆ ಇವು ಕಾದಂಬರಿಯಲ್ಲಿ ಮುಖ್ಯವಾಗುವುದು ಭುಜಂಗಯ್ಯನ ಹೊರಗಿನ ಜಗತ್ತು ಅವನಿಂದ ಕೊಂಚವೂ ಪ್ರಭಾವಿತವಾಗದೆ ತನ್ನದೇ ಆದ ದಿಕ್ಕಿನಲ್ಲಿ ಸಾಗುತ್ತಿದೆಯೆಂಬ ಸತ್ಯವನ್ನು ಸಾಧಿಸುವುದರಿಂದ. ಲೈಂಗಿಕತೆಯಿಂದ ಹಿಡಿದು ಧಾರ್ಮಿಕತೆಯವರೆಗೆ ಅನೇಕ ಕ್ಷೇತ್ರಗಳಲ್ಲಿ ಬೇರೆಬೇರೆಯವರ ನಡೆ-ನುಡಿಗಳು ಭುಜಂಗಯ್ಯನನ್ನು ನಿರ್ಲಕ್ಷಿಸಿ ತಮಗೆ ತೋರಿದಂತೆಯೇ ಇರುತ್ತವೆ. ಕಾದಂಬರಿಯಲ್ಲಿ ಮತ್ತೆಮತ್ತೆ ಬರುವ ಗಾಂಧಿ ಕೂಡ ಭುಜಂಗಯ್ಯನಿಗೆ ಸಂವಾದಿಯಾಗಿಯೇ ಸೋತಿರುವುದು ಗಮನಾರ್ಹವಾಗಿದೆ. ಈ ಸೋಲು ಭುಜಂಗಯ್ಯನಲ್ಲಿ ಯಾವುದೇ ತೀವ್ರ ವಿಷಾದಕ್ಕೆ ಕಾರಣವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಹೋಟೆಲು ವಿಧ್ವಂಸವಾದಾಗ ಬರುವ ಎರಡು ವಿವರಗಳು ತಮ್ಮದೇ ಆದ ಅರ್ಥತರಂಗಗಳನ್ನು ಎಬ್ಬಿಸುತ್ತವೆ:

"ರುದ್ರಪ್ಪನ ಅಣ್ಣನ ಮಗ ಮಾತ್ರ ಒಳಗೆ ನುಗ್ಗಿ ಕಣ್ಣಿಗೆ ಎದುರಾದ ಪಟ ಗಳನ್ನು ಕೀಳಬೇಕೆಂದುಕೊಂಡ. ಆದರೆ ಅವೆಲ್ಲ 'ತಮ್ಮ ದೇವರವೆಂದು' ಭಯವಾಗಿ

ಗಾಂಧಿ ಪಟವೊಂದನ್ನು ಮಾತ್ರ ಕಿತ್ತು ಗಾಜೆಲ್ಲ ಚೂರಾಗುವಂತೆ ನೆಲಕ್ಕೆ ಅಪ್ಪಳಿಸಿದ.... ಒಡೆದಿದ್ದ ಗಾಂಧಿ ಪಟವನ್ನೂ ಶಿವ ಎತ್ತಿತಂದು ರೂಮಿನಲ್ಲೇ ಇಟ್ಟ. ಗಾಜು ಮಾತ್ರ ಚೂರುಚೂರಾಗಿದ್ದರೂ ಗಾಂಧಿಯ ನಗು ಮಾತ್ರ ಕೊಂಚವೂ ಮಾಸಿರಲಿಲ್ಲ". [ಪುಟ: 312–14]

"ಸೋಮ ಸುಟ್ಟುಹೋದ ಹೋಟಲಿನ ಒಂದು ಭಾಗವನ್ನು ನಿಧಾನವಾಗಿ ನೋಡಿದ. ಅಪ್ಪ ಮಲಗುತ್ತಿದ್ದ ಮಂಚದ ಕೆಳಗಿರುತ್ತಿದ್ದ ಗ್ರಾಮಾಫೋನ್ ಏನಾಗಿದೆ ಯೆಂದು ಕುತೂಹಲದಿಂದ ದಿಟ್ಟಿಸಿದ. ಮಂಚದ ಜೊತೆ ಅದೂ ಸುಟ್ಟು ಅದರ ಹಾಡುವ ಕೊಳವೆ ಮಾತ್ರ ಬೂದಿಯೊಳಗಿಂದ ಮುಖ ಹೊರಗೆ ಚಾಚಿತ್ತು. ಅದರಿಂದ ಹೋಟಲೇ ಅಳುತ್ತಿರುವ ಹಾಡು ಹೊರಗೆ ಬರುತ್ತಿದೆ ಅಂತ ಅನ್ನಿಸುತ್ತಿತ್ತು. ಸೋಮನಿಗೆ ಅದನ್ನು ಅಲ್ಲಿಂದ ಹೊರತೆಗೆವ ಆಸೆ. ಆದರೆ ಅವನು ಒಳಗೆ ಹೋಗಲು **ದೊಡ್ಡವರು ಬಿಡಲಿಲ್ಲ".** [ಪುಟ: 322]

ಅಥವಾ ನಾರಾಯಣನ ಅತ್ಯಾಚಾರದ ನಂತರ ಸುಶೀಲಾ ಊರಿಗೆ ಹಿಂದಿರುಗಿದಾಗ ಬರುವ ಈ ಮಾತುಗಳನ್ನು ಗಮನಿಸಿ;

"ಮುಟ್ಟಬಾರದ ಅಸಹ್ಯವನ್ನು ಹೊತ್ತು ನಡೆದಂತೆ ತನ್ನ ದೇಹವನ್ನು ಹೊತ್ತು ನಡೆದ ಸುಶೀಲಾ ಊರು ಮುಟ್ಟುವಷ್ಟರಲ್ಲಿ ಊರೆಲ್ಲ ಬೆಳಕಿನಿಂದ ಝಗಝಗಿ ಸುತ್ತಿತ್ತು. ಹಬ್ಬದ ಹಿಂದಿನ ದಿನವೇ ಎಲ್ಲರೂ ಮನೆಯ ಹಿಂದೆ ಮುಂದೆ ಇರಲಿ, **ತಿಪ್ಪೆಗುಂಡಿಗಳಲ್ಲೂ** ದೀಪ ಹಚ್ಚಿಡುವುದು ಮಾದಳ್ಳಿಯಲ್ಲಿ ವಾಡಿಕೆಯಾಗಿತ್ತು". [ಪುಟ: 506]

ಈ ರೀತಿಯ ನಿದರ್ಶನಗಳಿಂದ ಸ್ಥಾಪಿತವಾಗುವ ಸಂಗತಿಯೆಂದರೆ ಈ ಕಾದಂಬರಿಯ ನಾಯಕನನ್ನು ಕುರಿತಾದ ವಿಮರ್ಶೆಯ ನೆಲೆಗಳ ಬದಲಾಗಿ ಅವನದಕ್ಕಿಂತ ಭಿನ್ನವಾದ ಜೀವನಕ್ರಮಗಳ ಮಂಡನೆಯಿಂದ ಕೃತಿ ಸಮತೋಲನವನ್ನು ಸಾಧಿಸುತ್ತದೆ ಯೆನ್ನುವುದು.

ಕಾದಂಬರಿಯ ಮತ್ತೊಂದು ಹೆಗ್ಗಳಿಕೆಯಿರುವುದು, ಕಾದಂಬರಿಕಾರರು ಗ್ರಾಮ ಜೀವನದ ಲಕ್ಷಣಗಳ ಬಗ್ಗೆ ನಾಸ್ಟಾಲ್ಜಿಯ (ಹಳಹಳಿಕೆ) ಇಲ್ಲದ ಆಧುನಿಕ ದೃಷ್ಟಿ ಕೋನವನ್ನು ತಳೆದಿರುವುದರಲ್ಲಿ. 'ಪರಸಂಗದ ಗೆಂಡೆತಿಮ್ಮ'ದಲ್ಲಿ ಕಂಡುಬರುವ ದ್ವಂದ್ವ ಇಲ್ಲಿ ಮಾಯವಾಗಿದೆ. ನಗರ ಸಂಸ್ಕೃತಿಯ ಆಕ್ರಮಣಕ್ಕೆ ತುತ್ತಾಗಿ ತನ್ನತನ ವನ್ನು ಕಳೆದುಕೊಳ್ಳುತ್ತಿರುವ ಮುಗ್ಧಕನ್ಯೆಯ ಹಾಗೆ ಹಳ್ಳಿ ಚಿತ್ರಿತವಾಗಿಲ್ಲ. ಏಕೆಂದರೆ ಗ್ರಾಮೀಣ ಬದುಕಿನ ಕ್ರೌರ್ಯ ಮತ್ತು ಕ್ಷುದ್ರತೆಗಳು ಅಲನಹಳ್ಳಿಯವರಿಗೆ ಚೆನ್ನಾಗಿ ಗೊತ್ತು. 'ಫ್ಯೂಡಲ್' ಆದಾಗ ಅಥವಾ 'ಈಸ್ಥೇಟ್' ಆದಾಗ ಮಾತ್ರ ಸಾಧ್ಯವಾಗುವ

ಇಂಥ ಹಳಹಳಿಕೆಯು ಗ್ರಾಮಜೀವನದ ಆಂಶಿಕಗ್ರಹಿಕೆಯಿಂದ ಹುಟ್ಟಿರುತ್ತದೆ. ಆದರೆ ಈ ಲೇಖಕರು ವಿದ್ಯಾಭ್ಯಾಸ, ಪೋಲೀಸು, ಕೋರ್ಟು, ಹೋಟಲು ಮುಂತಾದವು ಗ್ರಾಮ ಸಮುದಾಯದ ಬಹುಸಂಖ್ಯಾತರಿಗೆ 'Liberating Force' ಆಗಿ ಕೆಲಸ ಮಾಡುತ್ತವೆಂದು ತಿಳಿದಿದ್ದಾರೆ. ತನ್ನ ಸನ್ನಿವೇಶದ ಶಕ್ತಿ, ಕ್ರೌರ್ಯ, ದುರಂತ ಮತ್ತು ಸೌಂದರ್ಯಗಳನ್ನು ಏಕಕಾಲದಲ್ಲಿ ದಾಖಲೆ ಮಾಡುವ ಸಾಮರ್ಥ್ಯವಿರುವುದರಿಂದಲೇ ಈ ಕಾದಂಬರಿಗೆ ವಸ್ತುನಿಷ್ಠತೆ ಬಂದಿದೆ. ಪ್ರಕೃತಿಯ ಚಿತ್ರದ ಮೂಲಕ ಮನುಷ್ಯ ಜೀವಿತದ ಸತ್ಯವನ್ನು ಧ್ವನಿಸುವ ಕೆಳಗಿನ ವರ್ಣನೆಯು ಇಂಥ ಸಮಗ್ರ ದೃಷ್ಟಿಕೋನಕ್ಕೆ ಸಾಕ್ಷಿಯಾಗಿದೆ:

"ಹುಂಡಿಯಿಂದ ಕೆರೆ ತನಕ ನೆಲವೆಲ್ಲ ಸುಟ್ಟು ಕರಕಾಗಿದ್ದರೂ ಗಿಡಮರಗಳು ಹಸಿರು ಮುಕ್ಕಳಿಸುತ್ತಿದ್ದವು. ತಲೆಮೇಲೆ ಕೆಂಡ ತುಂಬಿಕೊಂಡ ಆಕಾಶ. ಕೆಳಗೆ ಸುಟ್ಟು ಹೋದ ನೆಲ. ನಡುವೆ ನಗುವ ಗಿಡಮರಗಳು, ಭುಜಂಗಯ್ಯನಿಗೆ ದೈವಸೃಷ್ಟಿ ವಿಚಿತ್ರವೆನಿಸಿತು". [ಪುಟ: 245]

ಕಾದಂಬರಿಯ ನಾಯಕ ಪಾತ್ರದ ಹಿನ್ನೆಲೆಯಲ್ಲಿ ಮಂಡಿತವಾಗಿರುವ ಈ ಕೆಲವು ಆಲೋಚನೆಗಳು, ಸಮಸ್ಯೆಗಳನ್ನು ಬಿಡಿಸುವುದರ ಬದಲಾಗಿ, ಪ್ರಶ್ನೆಗಳನ್ನು ಎತ್ತುವುವರಲ್ಲಿ ಆಸಕ್ತವಾಗಿವೆ. ಪ್ರಸ್ತುತ ಕಾದಂಬರಿಯನ್ನು ಕುರಿತಂತೆ ಇದುವರೆಗೆ ಬಂದಿರುವ ವಿಮರ್ಶೆಯ ಹಿನ್ನೆಲೆಯಲ್ಲಿ ಇಂಥದೊಂದು ಲೇಖನಕ್ಕೆ ಅವಕಾಶವಿದೆಯೆಂದು ನನಗೆ ತೋರುತ್ತದೆ. ●

(ಈ ಲೇಖನದ ತಯಾರಿಯಲ್ಲಿ ಸಲಹೆ ಮತ್ತು ಚರ್ಚೆಗಳ ಮೂಲಕ ನೆರವು ನೀಡಿದ ಡಾ|| ಕೆ. ವಿ. ನಾರಾಯಣ ಅವರಿಗೆ ಲೇಖಕನು ಕೃತಜ್ಞನಾಗಿದ್ದಾನೆ.)

# ಶ್ರೀಕೃಷ್ಣರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು

**ನೇಮಿಚಂದ್ರ**

ಶ್ರೀಕೃಷ್ಣ ಆಲನಹಳ್ಳಿಯವರ ಅನುಭವ ಗ್ರಹಿಸುವ ಬಗೆ ಬೆರಗುಗೊಳಿಸುತ್ತದೆ. ಒಂದೇ ಘಟನೆಯನ್ನು ಹತ್ತು ಹಲವು ಜನ ಹೇಳುವಾಗ ಅವರವರ ಪೂರ್ವಾಗ್ರಹಗಳು ಕೆಲಸ ಮಾಡಿ ಪಾತ್ರಗಳಿಗೆ ವಾಸ್ತವಕ್ಕೆ ಮೀರಿದ ಬಣ್ಣ ಬಳಿವ ದುರಂತವನ್ನೇ ಹೆಚ್ಚು ಕಾಣುತ್ತೇವೆ. ಆದರೆ ಆಲನಹಳ್ಳಿ, ಪ್ರತಿ ಪಾತ್ರವನ್ನು ಆಸಕ್ತಿಯಿಂದ ವೀಕ್ಷಿಸಿದ್ದಾರೆ, ತುಂಬು ಸಹೃದಯತೆಯಿಂದ ಅರ್ಥೈಸಿದ್ದಾರೆ; ಸಾಮಾನ್ಯ ಲೇಖಕನೊಬ್ಬನ ಬರಹದಲ್ಲಿ ವಿವರಗಳ ಕಳಕೊಂಡು ಕಪ್ಪು – ಬಿಳುಪಾಗುವ ಚಿತ್ರಗಳು, ವಾಸ್ತವದ ಆ ತುಣುಕುಗಳು, ಅಂತರ್ನೋಟಗಳು ಇವರ ಕಾದಂಬರಿಗಳಲ್ಲಿ ಅತಿ ಸಹಜವಾಗಿ ತೆರೆದುಕೊಳ್ಳುತ್ತವೆ.

ಇವರ ಪ್ರಕಟಿತ ಕಾದಂಬರಿಗಳು ಮೂರು. 1971ರಲ್ಲಿ ಹೊರಬಂದ 'ಕಾಡು', 1974ರಲ್ಲಿ ಪ್ರಕಟವಾದ 'ಪರಸಂಗದ ಗೆಂಡೆತಿಮ್ಮ' ಹಾಗೂ 1983 ರಲ್ಲಿ ಬೆಳಕು ಕಂಡ 'ಭುಜಂಗಯ್ಯನ ದಶಾವತಾರಗಳು'. ಈ ಮೂರು ಕಾದಂಬರಿಗಳ ಆಧಾರದ ಮೇಲೆ ಸ್ತ್ರೀ ಪಾತ್ರಗಳ ಅರ್ಥೈಸುವುದು ಎಷ್ಟು ಸರಿಯೋ ಗೊತ್ತಿಲ್ಲ. ಕಾರಣ ಈ ಮೂರೂ ಕಾದಂಬರಿಗಳು ಸ್ತ್ರೀ ಪ್ರಧಾನವಾದವುಗಳಲ್ಲ. ಇದು ಆಕ್ಷೇಪಣೆಯಲ್ಲ: ಕಾದಂಬರಿಯ ವಸ್ತು, ಆಯ್ಕೆ, ಮಹಿಳಾ ಪಾತ್ರಗಳಿಗೆ ನೇರ ಸಂಬಂಧಿಸಿಲ್ಲದ ಕಾರಣ,

ಸ್ತ್ರೀ ಪಾತ್ರಗಳ ಬಗೆಗಿನ ಆಲನಹಳ್ಳಿಯವರ ಪೂರ್ಣ ಕಾಳಜಿಯನ್ನು ಆಮೂಲಾಗ್ರವಾಗಿ ಗಮನಿಸುವಲ್ಲಿ ಬಹಳಷ್ಟು ಮಿತಿಗಳು ಎದುರಾಗುತ್ತವೆ.

ಐನೂರು ಪುಟಗಳುಳ್ಳ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯಲ್ಲಿ ಭುಜಂಗಯ್ಯನೇ ಕೇಂದ್ರ ವ್ಯಕ್ತಿಯಾಗಿ ಸ್ತ್ರೀ ಪಾತ್ರಗಳಷ್ಟೇ ಅಲ್ಲ, ಮತ್ತೆಲ್ಲ ಪಾತ್ರಗಳೂ ಪೋಷಕ ಪಾತ್ರಗಳಾಗುವಷ್ಟು, ಏಕ ವ್ಯಕ್ತಿಯ 'ವ್ಯಕ್ತಿ ಚಿತ್ರ'ವಾಗುವಷ್ಟು–ಭುಜಂಗಯ್ಯನ ಬದುಕಿನ ಏರಿಳಿತಗಳನ್ನು ಆಸ್ಥೆಯಿಂದ, ಆತ್ಮೀಯವಾಗಿ ಲೇಖಕರು ಬಿಚ್ಚಿಟ್ಟಿದ್ದಾರೆ. ಕಮರಿಕೊಳ್ಳುವ ಕತ್ತಲಲ್ಲಿ ನಡೆದು ಹೋಗುವ ಹಸಿ ಹಸಿ ಬದುಕಿನ ಕ್ರೌರ್ಯವು ಕಿಟ್ಟಯ ಕಣ್ಣೆದುರು ತೆರೆದುಕೊಳ್ಳುವ ಕತೆ 'ಕಾಡು' ಕಾದಂಬರಿಯದು. 'ಪರಸಂಗದ ಗೆಂಡೆತಿಮ್ಮ'ದಲ್ಲಷ್ಟೆ ಪೂರ್ಣ ಪ್ರಮಾಣದ ಸ್ತ್ರೀ ಪಾತ್ರವಾಗಿ ಮರಂಕಿ ಮೂಡಿಬರುತ್ತಾಳೆ.

ಹೀಗಿದ್ದೂ, ಆಲನಹಳ್ಳಿಯವರ ಕಾದಂಬರಿಗಳಲ್ಲಿ ಇಣುಕುವ ಸ್ತ್ರೀ ಪಾತ್ರಗಳ ವೈವಿಧ್ಯ ಅದ್ಭುತದ್ದು. ಪುಟ್ಟವ್ವನಂಥಾ ಪವಿತ್ರ ಆಕಳಿನಂಥಾ ಪಾತ್ರಗಳಷ್ಟೇ ದಿಟವಾಗಿ 'ಒಂದು ಚೀಟಿ ಸೀರೆಗಾಗಿ ಮಲಗುವ' ದೇವಿಯ (ಕಾಡು) ಪಾತ್ರಗಳೂ ಮೂಡಿಬಂದಿವೆ. ರಾತ್ರಿಯಾಗುತ್ತಲೇ 'ಜಿರಕಿ ಜೋಡು ಮೆಟ್ಟಿ ನಡೆದೇ ಬಿಡುವ ಮಾವನ (ಕಾಡು) ಚಾಳಿಗಳನ್ನೆಲ್ಲಾ ಸದ್ದಿಲ್ಲದೆ ಸ್ವೀಕರಿಸಿ, ಅವನ ಉಳಿಸಿಕೊಳ್ಳಲು ಕುರಿ, ಕೋಳಿ ಕೊಯ್ಯುವ ಅತ್ತೆಯಂಥಾ ಅಸಹಾಯಕ ಪಾತ್ರದಷ್ಟೇ ಸಹಜವಾಗುವುದು, ಗಂಡ ಬೇರೊಬ್ಬಳ ಇಟ್ಟುಕೊಳ್ಳುವುದ ಸಹಿಸದೆ ಬದುಕನ್ನೇ ಬಗೆದು ಬರಿದಾಗುವ ಜಕ್ಕಳ್ಳಿ ಹೆಣ್ಣು ಪಾರ್ವತಿಯದು (ಭುಜಂಗಯ್ಯನ ದಶಾವತಾರಗಳು); ಇಟ್ಟುಕೊಂಡವಳಾಗಿ ಬಂದು ಕಟ್ಟಿಕೊಂಡವಳಿಗಿಂತ ನಿಯತ್ತಿನಿಂದುಳಿದು ಶರಣೆಯ ಸಾಲಿಗೆ ಸೇರುತ್ತಿದ್ದಂತೆಯೇ ಅಲ್ಲೆಲ್ಲೋ ರಾಜನಲ್ಲಿ ಮನ ಸಡಿಲಿಸಿ ಜೀವಂತವಾಗುವ ಸುಶೀಲೆಯದು (ಭುಜಂಗಯ್ಯನ ದಶಾವತಾರಗಳು). ಗಂಡನೆಲ್ಲ ಹೊರಸಂಬಂಧಗಳ ಸಹಿಸಿಕೊಂಡು ಕಾಯುವ ಪಾಪ ಚಿಂತನೆ ಇಲ್ಲದ ಅತ್ತೆಯ ಪಾತ್ರದಷ್ಟೇ credible ಆಗುವುದು, ವಿವಾಹದ ಹೊರಗೂ ಸಂಬಂಧಗಳ ಸುಖವನ್ನು ಮೊಗೆದು ಮುಗ್ಧವಾಗಿ ಕುಡಿದು ಬಿಡುವ ಮರಂಕಿಯ ಪಾತ್ರ (ಪರಸಂಗದ ಗೆಂಡೆತಿಮ್ಮ). ಓರ್ವ ಸಾಮಾನ್ಯ ಲೇಖಕನ ಕೈಯಲ್ಲಿ ಮರಂಕಿ ಪೂರಾ ಹಾದರಗಿತ್ತಿಯೋ, ಹಳ್ಳಿಯ ಸ್ವಚ್ಛಂದ ವಾತಾವರಣವ ಬಗ್ಗಡಗೊಳಿಸಿದ ಮನೆಹಾಳಿಯೋ, ಪಟ್ಟಣದ ಲಕ ಲಕ ಹೊಳೆವ 'ವೈಯ್ಯಾರಿ'ಯೋ ಆಗಿಬಿಡಬಹುದಾಗಿದ್ದ ಪಾತ್ರ, ಶ್ರೀಕೃಷ್ಣರ ಕಾದಂಬರಿಯಲ್ಲಿ ಪರಿವರ್ತನೆಯ ಪ್ರವಾಹಕಳಾಗಿ, ಕೊಳಕು ಗಂಜಲದ ಹಾಳು ಸುರಿಯುತ್ತಿದ್ದ ಹಳ್ಳಿಗೆ ಅನಿವಾರ್ಯ ನಾಗರಿಕತೆಯ ತರುವಲ್ಲಿ ಪ್ರಮುಖ ಪಾತ್ರವಾಗಿ, ಅಲ್ಲೆಲ್ಲೋ ಗಂಡನನ್ನು ತೃಪ್ತಿಪಡಿಸುತ್ತಲೇ ತಾನಿಷ್ಟು ಹಸಿದುಳಿದು ಮಹದೇವನಲ್ಲಿ ಸುಖಿಸುವಾಗ ಒಂದಿಷ್ಟು ಸ್ತ್ರೀ–ಲೈಂಗಿಕತ್ವದ ತುಣುಕು ಸೋಟವಾಗಿ ಕತೆಯ ಆ ತಿರುವಿನಲ್ಲಿ ದುರಂತಕ್ಕೀಡಾದರೂ ಅತ್ಯಂತ ಜೀವಂತವಾಗುಳಿವ ಪಾತ್ರವಾಗಿದೆ.

## 2

'ಭುಜಂಗಯ್ಯನ ದಶಾವತಾರಗಳು' ಅಲಸನಹಳ್ಳಿಯವರ ಕೊನೆಯ ಹಾಗೂ ಬೃಹತ್ ಕಾದಂಬರಿ. ಪ್ರಕೃತಿಯ ಸೆರಗಲ್ಲಿ ಮುಗ್ಧವಾಗಿ ಮಲಗಿದ್ದ ಪುಟ್ಟ ಹಳ್ಳಿಯೊಂದರಲ್ಲಿ ಹುಟ್ಟುವ ರಾಜಕಾರಣ, ಜಾತೀಯ ಗಲಭೆ, ಒಳ ಜಗಳ, ಅಸೂಯೆ–ಹಗೆತನ, ಈ ಎಲ್ಲವುಗಳ ನಡುವೆಯೂ ಮೆಲ್ಲನೆ ಹರಿವ ಪ್ರೀತಿ, ಸ್ನೇಹ; ಜಾತಿ ಮರೆತ ಅನ್ಯೋನ್ಯತೆ, ಕೆಟ್ಟದ್ದನ್ನೇ ಕಾಣದ ಮುಗ್ಧತೆ – ಇವುಗಳ ವಿವಿಧ ಮುಖಗಳು ಭುಜಂಗಯ್ಯನ ಬದುಕಿನ ವಿಸ್ತಾರದಲ್ಲಿ ತೆರೆದುಕೊಳ್ಳುತ್ತವೆ.

ಈ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳೆಂದರೆ ಭುಜಂಗಯ್ಯನ ಅವ್ವ–ಎಲ್ಲಿಲ್ಲದ ಗಟ್ಟಿಗಿತ್ತಿ. ಇದ್ದಷ್ಟೂ ದಿನವೂ ಹೊಲ–ಗದ್ದೆ ಎಂದು ಗೇಯ್ದು ದುಡಿದ ಜೀವ. ಭುಜಂಗಯ್ಯನ ಹೆಂಡತಿ–ಜಕ್ಕಳ್ಳಿಯ ಪಾರ್ವತಿ. ಊರಿಗೆಲ್ಲ ಭುಜಂಗಯ್ಯನ ಇಟ್ಟುಕೊಂಡವಳಾಗಿ ಬಂದು 'ಊರೇ ಸೈ' ಅನ್ನುವಂತೆ ಬದುಕುವ ಭುಜಂಗಯ್ಯನ ಎರಡನೇ ಹೆಂಡತಿ–ಸುಶೀಲೆ. ಕೆಟ್ಟದ್ದೊಂದೂ ಅರಿಯದ, ಬಂದಾಗೆಲ್ಲ ತಂಬಿಗೆ ತುಂಬಾ ತಿಳಿಮಜ್ಜಿಗೆ ನೀಡುವ ತುಂಬು ಪ್ರೀತಿಯ ಪುಟ್ಟವ್ವ, ಕಾಳವ್ವ.

ಶ್ರೀಕೃಷ್ಣರ ಕಾದಂಬರಿಯ ಸೊಗಸೆಂದರೆ ಹಳ್ಳಿಯ ಬದುಕನ್ನು ಅವರು ತೆರೆದಿಡುವ ಪರಿ. ಇಲ್ಲಿಯ ಸ್ತ್ರೀ ಪಾತ್ರಗಳೂ ಅವರ ಈ ಸೊಗಸಿನಲ್ಲಿ ಮೈ ತಳೆಯುತ್ತವೆ. ಇವು ಹಿಡಿ ಹಿಡಿ ರಕ್ತ ಮಾಂಸದ ಜೀವಂತ ಪಾತ್ರಗಳು. ದೇವತೆಯಾಗಿ ಅಟ್ಟಕ್ಕೆ ಏರಿದವಲ್ಲ, ರಕ್ಕಸಿಯರಾಗಿ ಪಾತಾಳಕ್ಕೆ ಇಳಿದವಲ್ಲ, ಅತ್ಯಂತ ಜೀವಂತವಾಗಿ ಬದುಕಿದವು. ಹಾಗೆಂದೇ ಇಲ್ಲಿ ಹೆಣ್ಣಿನ ಬಗ್ಗೆಯ ಪೂರ್ವಾಗ್ರಹಗಳನ್ನಾಗಲೀ, ತುರುಕಿ ಇಟ್ಟಂಥಾ ಸ್ತ್ರೀವಾದಗಳನ್ನಾಗಲೀ ಕಾಣುವುದಿಲ್ಲ. ಒಂದು ಹೆಣ್ಣು ಅವಳ ಪರಿಸರದಲ್ಲಿ ಅವಳಿಗೆ ತೋಚಿದಂತೆ ಬದುಕಿದ್ದರ, ಯಥಾರ್ಥ ದಾಖಲೆಯೋ ಎಂಬ ಮಟ್ಟಿಗೆ ಲೇಖಕ ಪಾತ್ರಗಳ ಪರ–ವಿರೋಧ ವಹಿಸದೆ ಚಿತ್ರಿಸಿದ್ದಾರೆ.

ಭುಜಂಗಯ್ಯ ಎಲ್ಲಿಲ್ಲದ ಸಂಭಾವಿತನೇನೂ ಅಲ್ಲ. ಆದರೂ ವಿವಾಹವಾದ ಮೇಲೆ ಪತ್ನಿ ಪಾರ್ವತಿಗೆ ನಿಷ್ಠನಾಗೇ ಉಳಿದವನು. ಪಾರ್ವತಿ ಸ್ವಲ್ಪ ಜೋರು ಬಾಯಿಯವಳು. ಅವಳ ಜಕ್ಕಳ್ಳಿಯ ಭಾಷೆಗೆ ಕೊಂಚ ವಿದ್ಯಾವಂತನೆನಿಸಿದ ಭುಜಂಗಯ್ಯ ನಡುಗಿ ಹೋಗುತ್ತಿದ್ದರೂ ಭುಜಂಗಯ್ಯನಲ್ಲಿ ಪೂರ್ಣ ವಿದ್ಯಾವಂತರ ನಾಗರಿಕತೆಗಳೇನೂ ಮೈಗೂಡಿದ್ದು ಕಾಣುವುದಿಲ್ಲ. ಅವಳ ಬಾಯಿ ಜೋರಿನಂತೆಯೇ ಭುಜಂಗಯ್ಯನ ಕೈಯೂ ಜೋರು. ಶಿವಾಚಾರದ ಗಂಡ ಹೋಟಲಿಡಲು ಹೊರಟಾಗ ಜನರ ಬಾಯಿಗೆ ಹೆದರಿ 'ಸಿವಾಚಾರದವ್ರಾಗಿ ಯಾವ್ಯಾವ ಜಾತಿಯವ್ರೋ ಬಂದು ಕುಡಿಯೋ ಎಂಜಲು ಲೋಟ ತೊಳಿಯೋ' ಕೆಲಸಕ್ಕೆ ಪಾರ್ವತಿ ಪೂರ್ಣ ವಿರೋಧಿ. ಈ ಹೋಟಲ ಉದ್ಯಮದಲ್ಲಿ ಗಂಡ ಹೊಲ–ಗದ್ದೆ ಮರೆಯುತ್ತಾನೆಂಬ ಭಯ

ಆಕೆಯದು. ಯಾವುದಕ್ಕೂ ಜಗ್ಗದೆ ಭುಜಂಗಯ್ಯ ಕಡೆಗೂ ಹೋಟಲಿಟ್ಟು ಕೈ ತುಂಬಾ ಹಣ ದೋಚಿ ಹೆಂಡತಿಗೇ ತಂದು ಕೊಟ್ಟಾಗ, ನೋಡ ನೋಡುತ್ತಿದ್ದಂತೆ ಹಳ್ಳಿಯ ಗಣ್ಯಸ್ಥನಾಗಿ ನ್ಯಾಯಕ್ಕೂ ಕರೆಯಲ್ಪಟ್ಟಾಗ, ಪಾರ್ವತಿ ತನ್ನ ವರ್ತನೆಯ ಬಗ್ಗೆ ಪೂರಾ ನಾಚುತ್ತಾಳೆ. ಗಂಡನ ಬಗ್ಗೆ ತುಂಬು ಅಭಿಮಾನ ಪ್ರೀತಿ ಬೆಳೆಸಿಕೊಳ್ಳುತ್ತಾಳೆ. 'ತೆಪ್ಪಾಯ್ತು' ಎಂದು ಕಾಲಿಗೆ ಬಿದ್ದು ಬೇಡುವವರೆಗೂ ಅವಳ ಮನ ಹರಿಯುತ್ತದೆ. ನಾಕು ಹನಿ ಬಿದ್ದಾಗ ಗಂಡ ಬೇಸಾಯ ಕಡೆಗಣಿಸದೆ ಮತ್ತೆರಡು ಎಕರೆ ಸಿಂಗಾರಿಯ ಗದ್ದೆ ಕೊಂಡಿದ್ದು ಅವಳಲ್ಲಿ ಅತಿಶಯದ ಅಭಿಮಾನ ಉಕ್ಕಿ ತರುತ್ತದೆ. ಸುಗಮವಾಗಿ ಸಾಗಿದ್ದ ಈ ಕೌಟುಂಬಿಕ ಚಿತ್ರಕ್ಕೆ ಮಸಿ ಹತ್ತುವುದು, ಮಂಜನ ಬಾಯಿಂದ ಗಂಡನಿಗೂ –ಬಳೆ ಶೆಟ್ಟರ ಸುಶೀಲೆಗೂ ಇರುವುದೋ ಇಲ್ಲದ್ದೋ ಸಂಬಂಧ ಹೊರಬಿದ್ದಾಗ. ಪಾರ್ವತಿ ಚಂಡಿ ಚಾಮುಂಡಿಯಾಗುತ್ತಾಳೆ. ಇಟ್ಟುಕೊಂಡರೂ–ಕಟ್ಟಿಕೊಂಡರೂ ಮೌನವಾಗಿ ಅನುಭವಿಸುವ ಇತರ ಹೆಣ್ಣುಗಳ ಜಾತಿಗೆ ಸೇರಿಲ್ಲದ ಪಾರ್ವತಿ ನಿಜಕ್ಕೂ ಹುಲಿಯಾಗುತ್ತಾಳೆ. ಒಂದಿಷ್ಟು ಜಕ್ಕಳ್ಳಿ ಬಾಯಿಯ ಹೆಂಡತಿಯನ್ನು ಕಂಡ ಭುಜಂಗಯ್ಯನನ್ನು 'ಜೋರಾಗಿ ಆಡಿದರೆ ಮಾತೆಲ್ಲಿ ನೊಂದುಕೊಂಡು ಬಿಡುತ್ತದೋ ಅನ್ನುವ ನಾಜೂಕಿನ' ಮೈಸೂರಿನ ಹುಡುಗಿ ಸುಶೀಲೆ ಆಕರ್ಷಿಸಿದ್ದು ಸುಳ್ಳಲ್ಲ.

ಪಾರ್ವತಿ ಕೋಪ, ಅಸೂಯೆ, ಅಸಮಾಧಾನದಿಂದ ಬುಸುಗುಡುತ್ತಾಳೆ. ಮನ ತಡೆಯದೆ ಗಂಡ ಊಟಕ್ಕೆ ಕೂತಿದ್ದಂತೆಯೇ 'ನಿಮ್ಗೇನು ಮಾನ ಮರ್‍ಯಾದೆ ಇಲ್ವ. ಅವ್ಳು ಯಾವಳೋ ಗುಡಸೆಟ್ಟಿ ಜೊತೆ ವೋಟ್ಲಲ್ಲಿ ಚಕ್ಕಂದ ಆಡೋಕೆ ? ಅಂದದ್ದೇ ತಡ. ಭುಜಂಗಯ್ಯ ಎದುರಿಗಿದ್ದ ಬಿಸಿ ಅನ್ನದ ಪಾತ್ರೆಯನ್ನೇ ಎತ್ತಿ ಪಾರ್ವತಿಗೆ ಅಪ್ಪಳಿಸಿ, ಅವಳ ತುರುಬು ಹಿಡಿದೆಳೆದು 'ಏನೆ ಲೌಡಿ ನಾಲ್ಗೆ ಉದ್ದ ಮಾಡ್ತಾ ಇದ್ದಿ. ತಂದಾಕಿದ್ದ ತಿಂದ್ಕಂಡು ತೆಪ್ಪಗಿರ್ದೆ ಆಗ್ಲೆ ಜಕ್ಕಳ್ಳಿ ವರ್ಸೆ ತೋರ್‍ಸ್ತಾನ ಅಂತ ವೊಂಟ್ಯ' ಎಂದು ಸೊಂಟ ಮುರಿದು ಬೀಳುವಂತೆ ಒದ್ದು, ಅವಳು ಜ್ಞಾನವಿಲ್ಲದೆ ಕುಸಿದು ಬಿದ್ದರೂ ಹಿಂತಿರುಗಿ ನೋಡದೆ ನಡೆದುಬಿಡುತ್ತಾನೆ. ಈ ಹಂತದಲ್ಲೇ ಇಲ್ಲಿಯ ಪ್ರಮುಖ ಸ್ತ್ರೀ ಪಾತ್ರಗಳಾದ ಪಾರ್ವತಿ–ಸುಶೀಲೆಯರಲ್ಲಿ ಪರಿವರ್ತನೆ ಕಾಣುವುದು.

ಒಂದಿಷ್ಟು ವಿದ್ಯಾವಂತನೆನಿಸಿಕೊಂಡ ಭುಜಂಗಯ್ಯ ಹೆಂಡತಿಯ ಜಕ್ಕಳ್ಳಿಯ ಭಾಷೆಯ ಸಮಕ್ಕೂ ಬಾಯಿ ತೆರೆದದ್ದಲ್ಲದೆ 'ತಂದು ಹಾಕಿದ್ದ ತಿಂದುಕೊಂಡು ತೆಪ್ಪಗಿರ ಬೇಕಾದ' ಸ್ತ್ರೀಧರ್ಮದಾಚೆ ತನ್ನ ಹಕ್ಕು ಪ್ರಶ್ನಿಸುವ ಪತ್ನಿಗೆ ಸರಿಯಾಗಿಯೇ ಒದೆ ಯುತ್ತಾನೆ. ಭುಜಂಗಯ್ಯ ಏಕೋ ಪತ್ನಿಯ ಮನಸ್ಸಿಗೆ ಸಮಾಧಾನವಾಗುವಂತೆ ನಾಲ್ಕು ಮಾತಾಡಿ ಸಂಬಂಧ ಸರಿ ಮಾಡಿಕೊಳ್ಳಲು ಪ್ರಯತ್ನಿಸುವುದೇ ಇಲ್ಲ. 'ನಾನು ಸುಶೀಲೆಯನ್ನು ಬಯಸಿದರೆ, ಒಂದು ಪಕ್ಷ ಇಟ್ಟುಕೊಡೇಬಿಟ್ಟರೂ ಕೂಡಾ ಇವಳಿ ಗೇನು ಕಷ್ಟ ? ಹೆಂಗಸು ಹೆಂಗಸಿನಂತಿರಬೇಕು' ಎಂಬ ಭುಜಂಗಯ್ಯನ ವರಸೆ ಪಾರ್ವತಿಗೆ ಅರ್ಥವಾಗದ್ದೇ ಇಲ್ಲಿಯ ದುರಂತ !

ಮಕ್ಕಳೊಡನೆ ಪಾರ್ವತಿ ಅಪ್ಪನ ಮನೆ ಸೇರುತ್ತಾಳೆ. ಮಕ್ಕಳನ್ನು ಕರೆತರಲು ಹೋಗುವ ಭುಜಂಗಯ್ಯನಿಗೆ 'ಕಳ್ಸಿಕಿಲ್ಲ' ಎಂಬ ಮಾವನ ಮಾತು ಎದುರಾಗುತ್ತದೆ. ಭುಜಂಗಯ್ಯನ ಉತ್ತರ ಮರ್ಮಕ್ಕೇ ನಾಟುವಂಥದ್ದು; 'ಸರಿ ಇಟ್ಕಳಿ ಅವು ನಂಗುಟ್ಟಿದ್ರೆ ಇವತ್ತಲ್ಲ ನಾಳೆ ಅವೆ ಬತ್ತಾವೆ, ಇಲ್ಲ ಇನ್ಯಾರಿಗಾದ್ರೂ ವುಟ್ಟಿದ್ರೆ ಯಲ್ಲಾರು ವೋಯ್ತಾವೆ'. ಹೆಣ್ಣಿನ ಶೀಲವನ್ನು ಸಾರ್ವಜನಿಕವಾಗಿ ಜಾಲಾಡಿ ತೂಗಾಡುವ ಅಪ್ಪಟ ಉದಾಹರಣೆಯೊಂದನ್ನು ಲೇಖಕ ತೇಲಿ ಬಿಡುತ್ತಾರೆ.

ಇಲ್ಲಿಂದಾಚೆಗೆ ಏಕೋ ಲೇಖಕರು ಪಾರ್ವತಿಯ ಬಗ್ಗೆ ಪೂರಾ ಅನುಕಂಪ ಕಳ ಕೊಂಡಂತೆ ಭಾಸವಾಗುತ್ತದೆ. ಗಂಡನ ತೊಡೆಯ ಮೇಲಿಟ್ಟು ಲಾಲಿಸಿದ ಪಾರ್ವತಿ. ತನ್ನ ತಪ್ಪುಗಳ ಅರಿತು ಅವನತ್ತ ಅಭಿಮಾನ ತಳೆದ ಪಾರ್ವತಿ, ಹೊಲ–ಮನೆ ಎಂದು ಗೇಯ್ದು ದುಡಿವ ಗಟ್ಟಿ ಹೆಣ್ಣು ಪಾರ್ವತಿ ತಟ್ಟನೆ ಪೂರಾ ಜಗವೊಂಡಿಯಾಗಿ, ಗಂಡ ತಂದು ಕೊಟ್ಟ ಬತ್ತಾಸನ್ನು ಮಕ್ಕಳ ಬಾಯಿಂದ ಒದ್ದು ಕಕ್ಕಿಸುವವರಗೂ ಹೋಗು ತ್ತಾಳೆ. ಕರಗುವುದು–ದ್ರವಿಸುವುದು ಅಲ್ಲೊಮ್ಮೆ ಇಲ್ಲೊಮ್ಮೆ ಮಾತ್ರ. ಗಂಡುಳ್ಳ ಗರತಿ ಬೇರೊಬ್ಬನೊಡನೆ ಮಲಗಿದರೆ ಪಂಚಾಯಿತಿಗೆ ಎಳೆವ, ಆವಳೊಡನೆ ಮಲಗಿ ದವರೇ ಅವಳ ಕಪಾಳಕ್ಕೆ ಬಿಗಿವ (ಕಾಡು) ಸಮಾಜದಲ್ಲಿ, ಗಂಡನ ಪೂರ್ಣ ಪ್ರೀತಿ– ನಿಯತ್ತನ್ನು ಹಕ್ಕಿನಂತೆ ಬಯಸುವ ಪಾರ್ವತಿಯಂಥಾ ಹೆಣ್ಣಿಗೆ ಹೆಚ್ಚು ಅನುಕಂಪ ಉಳಿಯುವುದಿಲ್ಲ. ಹೀಗಿದ್ದೂ ಪಾರ್ವತಿ ಬದುಕಿನಲ್ಲಿ ಬಹಳಷ್ಟು ಕಳಕೊಂಡರೂ ಬದುಕುಳಿಯುವ, ತನ್ನ ಬಾಯಿಯಿಂದಲೇ ಹಾಳಾಗುವಂತೆ ಬಾಯಿಯಿಂದಲೇ ಬದು ಕುವ ಗಟ್ಟಿಗಿತ್ತಿ. ಅವಳ ಪಾತ್ರದ ಮೂಲಕವೇ ಭುಜಂಗಯ್ಯ ಜೀವಂತನಾಗುತ್ತಾನೆ. ಅತಿ ಎತ್ತರದ ಕಾಲ್ಪನಿಕವಾಗಬಹುದಿದ್ದ, 'ಹೀರೋ' ಆಗಿ ಬಿಡುವ ಅಪಾಯದಲ್ಲಿದ್ದ ಭುಜಂಗಯ್ಯ ತನ್ನ 'ಅಸಾಮಾನ್ಯ' ಜೀವನದಲ್ಲೂ ಸಾಮಾನ್ಯನಾಗುತ್ತಾನೆ, ನಮ್ಮಲ್ಲೊಬ್ಬನಾಗುತ್ತಾನೆ. ಊರಿಗೇ ನ್ಯಾಯ ಹೇಳಿದರೂ ಭುಜಂಗಯ್ಯನಲ್ಲಿ ಟಿಪಿಕಲ್ 'ಗಂಡುತನ' ಕಾಣುವುದು, ಪ್ರಶ್ನಿಸುವ ಪತ್ನಿಗೆ ಸೊಂಟ ಮುರಿಯುವಂತೆ ಒದೆವಾಗ, 'ತಂದದ್ದನ್ನು ತಿಂದು ತೆಪ್ಪಗೆ ಬಿದ್ದಿರಬೇಕೆ'ನ್ನುವಾಗ, 'ಇಟ್ಟುಕೊಂಡರೆ ಇವಳಿಗೇನು ಕಷ್ಟ' ಎಂಬ ಗತ್ತಿನಲ್ಲಿ 'ನನ್ನವಾದ್ರೆ ಬತ್ತಾವೆ ...' ಎಂದು ಪತ್ನಿಯ ಶೀಲಕ್ಕೆ ಸವಾಲೆಸೆಯುವಾಗ. ಬಹುಶಃ ಇದರಿಂದಲೇ ಭುಜಂಗಯ್ಯ ದೊಡ್ಡ ಶರಣನೋ, ಸುಧಾರಕನೋ, ಅಸಾಮಾನ್ಯನೋ, ಆಗಿಬಿಡುವ ಅಪಾಯದಿಂದ ತಪ್ಪಿಸಿಕೊಂಡಿದ್ದಾನೆ.

ಪಾರ್ವತಿಯದು ಈ ಕತೆಯಾದರೆ, ಭುಜಂಗಯ್ಯನ ಪೂರ್ಣ ಪ್ರೀತಿಯ ಪಡೆದೂ ಬರೀ 'ಕಣ್ಣೀರ ಸುಕ' ಕಂಡ ದುರಂತ ಪಾತ್ರ ಸುಶೀಲೆಯದು. ಬಾಲ್ಯದಲ್ಲೇ ತಾಯಿಯ ಕಳಕೊಂಡು ಮಲತಾಯಿಯ ಕಿರುಕುಳದಿಂದ ಬಳೆಕುಕ್ಕೆ ಹೊತ್ತು ತಂದೆಯ ಹಿಂಬಾಲಿಸಿವ

ಹುಡುಗಿ, ಗೌಡರ ನಾರಾಯಣನ ಕಾಮುಕ್ಕೂ ಸಿಗದೆ ಗೆದ್ದವಳು, ಮಧ್ಯವಯಸ್ಕ, ವಿವಾಹಿತ ಭುಜಂಗಯ್ಯನಿಗೆ ಮನ ಸೋಲುತ್ತಾಳೆ. ಜಾತಿಯ ಗಡಿದಾಟಿದರೂ, ಲಿಂಗ ಧಾರಣೆಯಾದರೂ ಹಳ್ಳಿಯವರ ಕಣ್ಣಲ್ಲಿ 'ಇಟ್ಟುಕೊಂಡವಳಾಗಿಯೇ' ಉಳಿಯ ಬೇಕಾದ ಕಾರಣಕ್ಕೊ ಎಂಬಂತೆ ಅವಳ ಪತಿ ಪರಾಯಣ ಲಿಂಗಾಚಾರಗಳು ಕಟ್ಟಿ ಕೊಂಡವಳಿಗಿಂತ ನಿಷ್ಠವಾಗಿರುತ್ತವೆ. ಹಳ್ಳಿಯವರ ಬಾಯಲ್ಲಿ 'ಸೈ' ಎನ್ನಿಸಿಕೊಂಡರೂ ಸುಶೀಲೆ ಸುಖ ಉಣ್ಣುವುದಿಲ್ಲ. ಒಂದಿಷ್ಟು ತನ್ನ ಮನೆ–ಹಣ ಅನ್ನುವಾಗಲೇ ಭುಜಂಗಯ್ಯನಿಗೆ ಡೈನಮೈಟ್ ಸಿಡಿದು ಕಣ್ಣು ಕಳಕೊಳ್ಳುತ್ತಾನೆ. ಸಾಲದ ಹೊರೆ ಯಿಂದ ಮುಕ್ತನಾಗಲು ಹೊಲ–ದನ ಮಾರುತ್ತಾನೆ. ಹತಾಶೆಯನ್ನು ವೈರಾಗ್ಯದ ತುದಿಗೇರಿಸಿ ಸುಶೀಲೆಯನ್ನು ಸಾವಿನಲ್ಲೂ ಮರೆಯುತ್ತಾನೆ. ಸುಶೀಲೆ ಇಹ–ಪರದ ಸುಖ ಕಾಣದೆ ಗಂಡನನ್ನು ಕಳಕೊಂಡು 'ಬದುಕುಳಿದ ನಾರಾಯಣ'ರ ಪಾಲಿಗೆ ಭಕ್ಷ್ಯ ವಾಗುತ್ತಾಳೆ. ಸುಶೀಲೆಯ ಪಾತ್ರ ಅತ್ಯಂತ ದುರಂತವಾಗುವುದು ಇಲ್ಲಿಯೇ. ಪತ್ನಿ ಪಾರ್ವತಿಗಿದ್ದ ಮನೆ–ಮಕ್ಕಳ ಕೌಟುಂಬಿಕ ಸುಖವೂ ಇಲ್ಲದೆ, ಹೊಲ–ಗದ್ದೆಗಳ ಆರ್ಥಿಕ ಬೆಂಬಲವೂ ಇಲ್ಲದೆ, ಕೈಹಿಡಿದವನ ಪ್ರೀತಿ ಪರಿಸ್ಥಿತಿಯ ವಿಕೋಪದಲ್ಲಿ ವೈರಾಗ್ಯದ ಹಾದಿ ತುಳಿದಾಗ–ಸಂಪೂರ್ಣ ಖಾಲಿಯಾದವಳು ಸುಶೀಲೆಯೇ. ಹೀಗಿದ್ದೂ ಈ ಪಾತ್ರದ ವೈಶಿಷ್ಟ್ಯವೆಂದರೆ ಸುಶೀಲೆ ಸೋತ ಹೆಣ್ಣಾಗಿ ಮೂಡಿಬರುವುದಿಲ್ಲ. ನಿಜವಾದ ಸುಶೀಲೆ ಹೊರಬರುವುದು ಅಂಗಡಿಯೇರಿ ಕುಳಿತಾಗ, ಏನನ್ನೂ ನಿಭಾಯಿಸ ಬಲ್ಲವಳು. ಕುರುಡು ಗಂಡನ ನಿರ್ಲಿಪ್ತತೆಯಲ್ಲಿ, ಅವಳ ವ್ಯಾವಹಾರಿಕ ಧೈರ್ಯವಷ್ಟೇ ಮನೆ ತೂಗಿಸುತ್ತದೆ. ಎಲ್ಲವನ್ನೂ ಕಳಕೊಂಡು 'ಶಿವನ ಲೀಲೆ'ಯೆಂದು ಕೈಕಟ್ಟಿ ಕುಳಿತ ಗಂಡನ ಮುಂದೆ ಬಳೆಕುಕ್ಕೆ ಎತ್ತಿ ನಡೆದೇಬಿಡುತ್ತಾಳೆ, ದುಡಿದು ತರುವ ಹಾದಿಯಲ್ಲಿ. ಆ ಹಾದಿಯಲ್ಲಿ ಒಂದಷ್ಟು ನಾರಾಯಣರು ಎದುರಾಗುವುದು, 'ಬಿಕ್ಕುತ್ತಲೇ ತೊಡೆ ಸಡಿಲಿಸುವುದು' ದುರಂತವಾದರೂ, ಸುಶೀಲೆಯದು ನೋವಿನಲ್ಲೂ ತಲೆ ಎತ್ತಿ ನಿಂತ ಗಟ್ಟಿಗಿತ್ತಿಯ ಪಾತ್ರ. ಅಲ್ಲೆಲ್ಲೋ ಆ ಬಲಾತ್ಕಾರದಲ್ಲೂ 'ತೊಡೆ ಸಡಿಲಿಸುವ' ಸುಶೀಲೆಯಲ್ಲಿ ಲೇಖಕ 'female sexuality'ಯ ಅತಿ ಸೂಕ್ಷ್ಮ ಎಳೆ ಯೊಂದನ್ನು ಜಾರಿ ಬಿಡುತ್ತಾರೆ. ಅದು ಸುಶೀಲೆಯ 'ರೇಪ್ ವಿಷ್' ಆಗಿತ್ತೆ, ಅವಳು ಸುಖಿಸಿದಳೆ, ಇಲ್ಲವೆ, ಎಂಬ ಒಂದು ಯಕ್ಷ ಪ್ರಶ್ನೆಯ ಉಳಿಯ ಬಿಡುತ್ತಾರೆ.

ಸುಶೀಲೆಯ ಬಗ್ಗೆ ಲೇಖಕರು ಕೊಂಚ ಭಾವುಕರಾಗುವುದು ನಿಜ. 'ಶರಣೆ'ಯ ಎತ್ತರಕ್ಕೆ ಏರಿದರೂ, ಭುಜಂಗಯ್ಯನ ಬಡತನ–ದುರಾದೃಷ್ಟವನ್ನಷ್ಟೇ ಹಂಚಿಕೊಂಡು ಅವನ ಕುರುಡು ಬಾಳಿಗೆ ಕೋಲೂರಿದರೂ, ಏಕೋ ಸುಶೀಲೆಗೆ ಆಯ್ಕೆಗಳೇ ಇರಲಿಲ್ಲ ಅನಿಸುತ್ತದೆ. ಮಲತಾಯಿಯಿಂದ ತಪ್ಪಿಸಿಕೊಂಡು, ಅಪ್ಪನಿಂದ ದೂರಾದ ಸುಶೀಲೆಗೆ 'ಇಟ್ಟುಕೊಂಡವಳ'ಲ್ಲಿ ಕಟ್ಟಿಕೊಂಡವಳ ನಿಷ್ಠೆ ಪ್ರತಿಪಾದಿಸುವ ಅವಶ್ಯಕತೆ ಸ್ವಲ್ಪ ಹೆಚ್ಚೇ ಇತ್ತು. ಇಂಥ ಯಾವುದೇ ಅನಿವಾರ್ಯಗಳಿಲ್ಲದೆ, ಒಳಗೆ ಅನಿಸಿದ್ದನ್ನು ನಡು

ಬೀದಿಯಲ್ಲಿ ಕಾರಿಬಿಡುವ ಪಾರ್ವತಿ ತನ್ನ ಒಡ್ಡುತನದಲ್ಲೂ ಜೀವಂತವಾಗುತ್ತಾಳೆ. ಭುಜಂಗಯ್ಯನೇ ಪೂರ್ಣ ತುಂಬಿದ ಈ ಕಾದಂಬರಿಯಲ್ಲಿ ಪಾರ್ವತಿ–ಸುಶೀಲೆ ನೆನಪಲ್ಲಿ ಉಳಿವ ಪಾತ್ರಗಳು.

3

'ಪರಸಂಗದ ಗೆಂಡೆತಿಮ್ಮ' ಆಲನಹಳ್ಳಿಯವರ ಎರಡನೇ ಕಾದಂಬರಿ. ಪೂರ್ಣ ಪ್ರಮಾಣದ ಸ್ತ್ರೀ ಪಾತ್ರವನ್ನು ಅರ್ಥೈಸಲು ಇಲ್ಲಿಯ 'ಮರಂಕಿ' ಉತ್ತಮ ಉದಾಹರಣೆಯಾಗಬಲ್ಲಳು.

ಹಳ್ಳಿ–ಹಳ್ಳಿಗೆ, ಎಲೆ–ಅಡಿಕೆ–ಕಡ್ಡಿಪುಡಿಯ ಕುಕ್ಕೆ ಹೊತ್ತು ಮಾರುತ್ತಾ, ಅಪ್ಪ–ಅಣ್ಣ–ಅತ್ತಿಗೆಯೊಡನೆ ಅತ್ಯಂತ ಮುಗ್ಧವಾಗಿ, ಶಾಂತವಾಗಿ ನಡೆದು ಹೋಗುತ್ತಿದ್ದ ಗೆಂಡೆತಿಮ್ಮನ ಬದುಕು ಬದಲಾಗುವುದು ಪತ್ನಿ ಮರಂಕಿಯ ಪ್ರವೇಶದಲ್ಲಿ. ಹಳ್ಳಿಯ ಕೊಳಕುತನವ ಗುಡಿಸಿ, ಸಾರಿಸಿ ಥಳ ಥಳಿಸಹೊರಟ 'ಪ್ಯಾಟೆ ಕಂಡ' ಮರಂಕಿಯ ರೀತಿಗಳು ಅತ್ತೆ–ಸೊಸೆಯರ ಅಖಂಡ ಜಗಳಕ್ಕೆ ಕಾರಣವಾಗಿ 'ಬಸವಣ್ಣನಂಥಾ ಮಗ' ಗೆಂಡೆತಿಮ್ಮನೂ ಬೇರೆಯಾಗುತ್ತಾನೆ. ಹಳ್ಳಿಯ ಕೊಳಕು ದುರ್ನಾತದಲ್ಲಿ, ಮಂದೆ ಹೇನು–ಕೂರಿನ ಸಾಮ್ರಾಜ್ಯದಲ್ಲಿ, ಕಟ್ಟಿಕೊಂಡ ಬಚ್ಚಲಿನ ಕ್ರಿಮಿಕೀಟದಲ್ಲಿ, ಮನೆ ಒಳಗೇ ಅಡ್ಡಾಡುವ ಕೋಳಿ–ನಾಯಿಗಳ ಹೊಲಸಿನಲ್ಲಿ ತೊಳಲುತ್ತಿದ್ದ ಮನೆ–ಮಠ–ಹಳ್ಳಿಗೆ ಮರಂಕಿ ಸ್ವಚ್ಛತೆಯ, ನಾಗರಿಕತೆಯ ಹೊಸಗಾಳಿ ತರುತ್ತಾಳೆ. ಗೆಂಡೆತಿಮ್ಮನ ಎಲೆ–ಕುಕ್ಕೆಯಲ್ಲಿ ಲಂಗ–ಬಾಡಿಗಳು ತೂರಿಕೊಂಡು, ಹಳ್ಳಿಯ ಹುಡುಗಿಯರ ನಿರ್ಬಂಧಿತ ಬಯಕೆಗಳು ಹಬೆಯಾಡುತ್ತವೆ. ಹಿರಿಯರ ಬಿಗಿ ಮುಷ್ಟಿಗಳಲ್ಲಿ ಹೊಸಕಿ ಹೋಗುತ್ತಿದ್ದ ಕಿರಿಯರು ಮೆಲ್ಲ ಮೆಲ್ಲನೆ ಬಂಡೇಳಲು ಮರಂಕಿ ಅಮೂರ್ತ ಪ್ರೇರಣೆಯಾಗುತ್ತಾಳೆ.

ಈ ಕಾದಂಬರಿಯಲ್ಲಿ, ಮರಂಕಿಯ ಪಾತ್ರ ನಿರ್ವಹಣೆಯಲ್ಲಿಯ ಸಂಯಮ ಅಗಾಧವಾದದ್ದು. ಒಂದು ಕಾಡು ಹಳ್ಳಿಗೆ ನಾಗರಿಕತೆಯ ಹೊಸ ಗಾಳಿ–ಬೆಳಕುಗಳ ಹೊತ್ತು ತರುವ ಅಭಿಸಾರಿಕೆ ಅವಳು. ಅಲ್ಲಿಯ ವಾಸ್ತವದ ರಾಡಿಯಲ್ಲಿ, ಶತಶತಮಾನದ ಕಮಟುಗಟ್ಟಿ ನಿಂತ ಗಾಳಿಯಲ್ಲಿ, ಹೊಸ ಉಸಿರಾಟ ತಂದವಳು. ಅವಳ ಪ್ರೇಮ–ಕಾಮದ ಚಿತ್ರಗಳಲ್ಲೂ ಕಾಣುವ ಮುಗ್ಧತೆ–ಸಹಜತೆ ನಂಬುವಂಥದ್ದು. ಮರಂಕಿ–ಮಾಹದೇವನ ಸಂಬಂಧದಲ್ಲಿ, ಬದುಕ ಸ್ವೀಕರಿಸುವ ಪರಿ ಅದ್ಭುತವಾಗಿದೆ. ಮನ ತುಂಬಿಯೇ ಗಂಡನನ್ನು ಸುಧಾರಿಸುವ, ಪ್ರೀತಿಸುವ, ತೃಪ್ತಿ ಪಡಿಸುವ ಮರಂಕಿಯ ದೇಹ ಶಿವಣ್ಣನಲ್ಲಿ ಸುಖಿಸುವುದು 'ಗಂಡ ಎಂದೂ ತನಗೆ ಸಾಕಾಗುವಂತಿರಲಿಲ್ಲ'ವೆಂಬ ಸತ್ಯದ ಗುರುತು ಹತ್ತಿದಾಗ. ಅತಿ ಮಡಿಯಾಗಿ ಪಾತಿವ್ರತ್ಯದಲ್ಲಿ ಮುದುಡಿ ಮುಚ್ಚಿಟ್ಟ ಹೆಣ್ಣಿನ 'ಹಸಿವ'ನ್ನು ಅತಿ ಸಹಜವಾಗಿ ಇಲ್ಲಿ 'ಗುಟ್ಟೇನು ?'

ಎಂಬಂತೆ ತೆರೆದು ಬಿಡುತ್ತದೆ ಇಂಥ ಒಂದು ಸಂದರ್ಭ! 'ಇವಳಿಗೇನು ಕಡಿಮೆ ಮಾಡಿದ್ದೆ ...' ಎಂಬ ಭುಜಂಗಯ್ಯನ ಧೋರಣೆಗಿಂತ, 'ಇಷ್ಟಕ್ಕೆಲ್ಲ ಪ್ರಾಣ ಕಳಕೊಂಡು ಬಿಡುತ್ತಾನೆಂದು ಒಂದಿಷ್ಟಾದರೂ ಅನ್ನಿಸಿದ್ದರೆ ನಾ ಈ ಸುಖವನ್ನು ಬಯಸುತ್ತಿರಲಿಲ್ಲ, ಎಂಬ ಹೆಣ್ಣುತನ ಎದೆ ತಟ್ಟುತ್ತದೆ. ಯಾವುದೇ ಅಖಂಡ ಪ್ರೀತಿಯು ಸೆರಗಲ್ಲಿ ಮರಂಕಿ ಮುಖ ಮುಚ್ಚಿಕೊಳ್ಳುವುದಿಲ್ಲ. ದೇಹಕ್ಕೆ ಅತ್ಯಂತ ಸಹಜ ನೀತಿಯೆಂಬಂತೆ ನಡೆದು ಕೊಂಡಿರುತ್ತಾಳೆ. ಗೆಂಡೆತಿಮ್ಮನ ಸಾವಿನಲ್ಲಿ ಆಕೆಗೆ ಪ್ರೀತಿಯು, ಪ್ರೀತಿ ಬಯಸುವ ನಿಯತ್ತಿನ ಅರಿವಾಗುತ್ತದೆ. ತನ್ನನ್ನು ತನು–ಮನದಿಂದ ಇಡಿಯಾಗಿ ಆಶಿಸಿದ ಗೆಂಡೆ ತಿಮ್ಮ 'ಇಷ್ಟಕ್ಕಾಗಿ....' ಪ್ರಾಣ ಬಿಡುವ ಯೋಚನೆಯೇ ಅವಳನ್ನು ತಲ್ಲಣಗೊಳಿಸು ತ್ತದೆ. ತನ್ನ ವ್ಯವಹಾರದ ಗುಟ್ಟು ತನ್ನೊಳಗೇ ಉಳಿಯಬಹುದಿದ್ದ ಸಾಧ್ಯತೆಯಲ್ಲೂ ತೀವ್ರ ಪಶ್ಚಾತ್ತಾಪದಿಂದ ಮರಂಕಿ ನೇಣು ಹಾಕಿಕೊಳ್ಳುತ್ತಾಳೆ.

ಕಥೆಯ ಅರ್ಥಪೂರ್ಣ ಕೊನೆ ಇರುವುದು ಈ ದುರಂತದಲ್ಲಲ್ಲ. ಊರ ಹಿರಿಯರು ಎಷ್ಟೇ ವಿಧದಲ್ಲಿ ಅಮುಕಿಟ್ಟರೂ ಮನೆ ಮನೆಯಲ್ಲೂ 'ಮರಂಕಿ'ಯರು ಅವತರಿಸಿಬಿಡುವ ರೀತಿಯಲ್ಲಿ, ಅತ್ತೆತನದ ಬಿಗಿ ಸಡಿಲಕೊಳ್ಳುವ ಬಗೆಯಲ್ಲಿ. ಮುಚ್ಚಿಟ್ಟ ಕಿಟಕಿಗಳು ತೆರೆದು ಮೆಲ್ಲನೆ ಬೆಳಕ ಬರಮಾಡಿಕೊಳ್ಳುವ ಈ ಮರಂಕಿಯರಲ್ಲಿ.

ಮರಂಕಿಯಾಚೆ ಗಮನ ಸೆಳೆವ ಮತ್ತೊಂದು ಪಾತ್ರ ಗೆಂಡೆತಿಮ್ಮನ ಅವ್ವ ಬೇದಿಯಮ್ಮನದು. ನಮ್ಮ ಸಮಾಜದಲ್ಲಿ ಹೆಣ್ಣಿಗೆ ಎಲ್ಲಿಲ್ಲದ ಮರ್ಯಾದೆ, ಅಧಿಕಾರ ಇರುವುದು 'ಅವ್ವ'ನ ರೂಪದಲ್ಲಿ. ಬದುಕು ಪೂರಾ ಬಾಗಿ ಬಗ್ಗಿದ ಹೆಂಗಸು, ಅತ್ತೆಯ ರೂಪದಲ್ಲಿ ಸಿಕ್ಕ ಅಧಿಕಾರವ ಪೂರಾ ಚಲಾಯಿಸುತ್ತಾಳೆ. ಗಂಡನ ಮೇಲೆಂದೂ ಚಲಾ ಯಿಸದ ಅಧಿಕಾರವನ್ನು ಮಗ–ಸೊಸೆಯರ ಮೇಲೆ ಜಬರಿಸಿ ತೃಪ್ತಿ ಪಡುವ ಅತ್ತೆ ಗಿರಿಯ ಸೊಗಸಾದ ಚಿತ್ರಣವನ್ನು ಬೇದಿಯಮ್ಮನಲ್ಲಿ ಕಾಣಬಹುದು. ಗೌಡರ ಮಗಳು 'ರತ್ನಿ'ಯನ್ನು 'ಪ್ಯಾಟೆ'ಗೆ ಕೊಡುವ ದೇವೀರವ್ವನ ಹಂಬಲದಲ್ಲಿ, ಪ್ಯಾಟೆಯ ಹೆಚ್ಚು ನಾಗರಿಕ ವಾತಾವರಣದಲ್ಲಿ ಅತ್ತೆಗಾರಿಕೆಯ ಗತ್ತು ಇರಲಾರದೆಂಬ ಆಸೆಯೂ ಮುಖ್ಯ ಕಾರಣವಾಗಿರುತ್ತದೆ.

4

'ಕಾಡು' ಆಲನಹಳ್ಳಿಯವರ ಮೊಟ್ಟ ಮೊದಲ ಕಾದಂಬರಿ. ಬಹಳ ಜನ ಪ್ರಿಯವಾದದ್ದು, 'ಕಮರಿ'ಕೊಳ್ಳುವ ಕತ್ತಲಲ್ಲಿ, 'ಕೆನೆಗಟ್ಟಿದ' ಕತ್ತಲಲ್ಲಿ ನಡೆದು ಹೋಗುವ ಹಸಿ ಹಸಿ ಬದುಕಿನ ಕ್ರೌರ್ಯವನ್ನು ತೆರೆದಿಡುವ ಬಗೆ ಮೆಲ್ಲನೆ ಎದೆ ನಡುಗಿಸುತ್ತದೆ.

ಇಲ್ಲಿ ಗಂಡಸರ ಅಹಂಕಾರದ ಆಡಳಿತದಲ್ಲಿ, ಪರಸ್ಪರ ಬಡಿದಾಟದಲ್ಲಿ, ಇಟ್ಟು ಕೊಂಡ ಗತ್ತುಗಾರಿಕೆಯಲ್ಲಿ, ಹೆಣ್ಣಿನ ಪಾತ್ರಗಳು ಹೊಲ–ಮನೆಗಳಲ್ಲಿ ಗೇಯುತ್ತಾ

ಗಂಡನ ಸುರಕ್ಷತೆಗಾಗಿ ಕಂಡಕಂಡಲ್ಲಿ ಬೇಡುತ್ತಾ, ಅವನನ್ನುಳಿಸಿಕೊಳ್ಳಲು ಹೆಣಗಾಡುತ್ತಾ, ಕಡೆಗೆ 'ಒಂದು ಚೀಟಿ ಆಸೆಗೆ ಮಲಗುವ' ದೇವಿಯೋ, ಬಸಿರಾಗಿ ನೇಣು ಹಾಕಿಕೊಂಡ ಸಾವಿತ್ರಿಯೋ, ಅತ್ಯಾಚಾರಕ್ಕೀಡಾಗಿ ಸಾಯುವ ಅತ್ತೆಯೋ ಆಗಿ ಕೊನೆಯಾಗುತ್ತವೆ. ಒಂದು ಬದುಕನ್ನು, ಒಂದು ಪರಿಸರವನ್ನು ರಮ್ಯಗೊಳಿಸದೆ ಅದರೆಲ್ಲ ಕಟು ವಾಸ್ತವದೊಂದಿಗೆ ತೆರೆದಿಡುವ ಪರಿಯಲ್ಲಿ ಮತ್ತೆಲ್ಲ ಪಾತ್ರಗಳಂತೆ, ಸ್ತ್ರೀ ಪಾತ್ರಗಳೂ ಮೂಡಿ ಬಂದಿವೆ.

ಈ 'ಕಾಡಿ'ನಲ್ಲಿ ಹೆಣ್ಣು–ಗಂಡಿನ ಸಂಬಂಧಗಳಲ್ಲಿ, ಸ್ನೇಹ–ಸಾಂಗತ್ಯದಂಥಾ ನವಿರಾದ ಭಾವನೆಗಳು ಹುಡುಕಿದರೂ ಸಿಗುವುದಿಲ್ಲ. ದೇವಿ–ಕೆಂಚನ, ಚಂದ್ರೇಗೌಡ-ಬಸಕ್ಕನ, ಅಯ್ನೋರು–ಹೊಲೆಯರವಳ ಹಸಿ ಹಸಿ ಮೈಯ ವಿವಾಹೇತರ ಸಂಬಂಧಗಳು ಒಂದು ಕಡೆಯಾದರೆ, ವಿವಾಹದೊಳಗಿನ ಸಂಬಂಧಗಳಲ್ಲೂ ಸೌಹಾರ್ದತೆಯ ತುಣುಕ ಕಾಣುವುದು ಅಪರೂಪವೇ. ಮಾವ–ಅತ್ತೆಯ ನಡುವೆ ಕಿಟ್ಟಿ ಕಾಣುವ ಒಂದೇ ಒಂದು ಸೌಹಾರ್ದದ ಸಂದರ್ಭವೆಂದರೆ, ಓಕಳಿಯಲ್ಲಿ ಪೆಟ್ಟು ತಿಂದು, ಅಂದು ಹಟ್ಟಿಯಲ್ಲೇ ಉಳಿದ ಮಾವನಿಗೆ, ಅತ್ತೆ ಉಣ್ಣಿಸಿದಾಗ. 'ಮಾವ ಯಾವತ್ತೂ ಅತ್ತೆ ಜೊತೆಯಲ್ಲಿ ಹೀಗೆ ಮಾತಾಡಿರಲಿಲ್ಲ. ಕಿಟ್ಟಿಗೆ ತುಂಬಾ ಹಿಗ್ಗಾಯಿತು. ಮಾವ ದಿನವೂ ಹೀಗೆ ಹಟ್ಟಿಯಲ್ಲಿ ತಮ್ಮ ಜೊತೆಗೇ ಮಾತಾಡುತ್ತಾ ಇದ್ದುಬಿಟ್ಟರೆ ಚಂದ ಅನ್ನಿಸುತ್ತಿದ್ದಂತೆ ಮಾವ ಒಂದೊಂದು ಸಲ ಭಯಂಕರ ರಾಕ್ಷಸರ ಹಾಗೆ ಕಂಡು ಬಿಡುವುದು ಜ್ಞಾಪಕವಾಗಿ ಒಳಗೆ ಏನೋ ಮುರಿದುಕೊಂಡಂತಾಯಿತು'. ಕಿಟ್ಟಿಯ ಕಣ್ಣಿಗೆ ಕಾಣುವ ಈ ರಾಕ್ಷಸರು, ಅಲ್ಲಿಯ ಹೆಂಗಸರಿಗೇನೂ ಹೊರತಾದವರಲ್ಲ. ಇಡೀ ಕಾದಂಬರಿ. ಮಾವ ಅತ್ತೆಯ ಬಗ್ಗೆ ತೋರುವ ತಾತ್ಸಾರವನ್ನು, ಯಾವುದೇ ಮುಲಾಜಿಲ್ಲದೆ ಜಿರಕಿ ಜೋಡು ಮೆಟ್ಟಿ ನಡೆದು ಬಿಡುವ ವೈಖರಿಯನ್ನು, ಗಂಡನನ್ನು ಬಯ್ಯುವುದಕ್ಕಿಂತ ತಮ್ಮ ಹಣೆಬರಹವನ್ನೇ ಹಳಿಯಬೇಕಾದ ಈ ಅವಲಂಬಿತ ಹೆಣ್ಣುಗಳ ಪಾಡನ್ನು, 'ಅವಳೇನೋ ಮಾಟ ಮಾಡಿಸಿರಬೇಕೆಂದು' ಶಪಿಸಿ ತಿರುಮಾಟಗಳಿಗೆ ಕೋಳಿ ಕೊಯ್ಯಿಸುವ ಪರಿಯನ್ನೂ, ಪ್ರತಿ ರಾತ್ರಿ ಗಂಡ ಉಳಿದಾನೇನೋ ಎಂಬ ನಿರೀಕ್ಷೆಯಲ್ಲಿ ಸವೆಯುವ, ಪೆಟ್ಟು ತಿಂದು ಬಿದ್ದಾಗ ಸೇವೆ ಮಾಡುವ, ಮುಗಿಬಿದ್ದ ತಣ್ಣನೆಯ ಕತ್ತಲೆಯ ಕ್ರೌರ್ಯಕ್ಕೆ, ಅತ್ಯಾಚಾರಕ್ಕೆ ಈಡಾಗಿ ಕೊನೆಯಾಗುವ ಹೆಣ್ಣುಗಳ ನಿಸ್ಸಹಾಯಕ ಬದುಕನ್ನು ತೆರೆದಿಟ್ಟಿದೆ.

ಬಸಕ್ಕನೊಡನೆ ಮಲಗಿ ಬರುವ ಮಾವನೇ ನ್ಯಾಯಕ್ಕೆ ಕೂತಾಗ ದೇವಿಗೆ ಕಪಾಳಕ್ಕೆ ಇಕ್ಕುತ್ತಾನೆ, ಕೆಂಚನಿಗೆ ರಕ್ತ ಬರುವಂತೆ ಬಡಿಯುತ್ತಾನೆ. ಉತ್ತಮರ ಕುಲದ, ಕದ್ದು ಬಸಿರಾದ ಸಾವಿತ್ರಿಗೆ ನೇಣು ಹಗ್ಗವೇ ಗತಿಯಾದರೆ, ಬಾಸುಂಡೆ ಎಬ್ಬಿಸುವ ಗಂಡನಿಂದ ಪಾರಾಗಲು ಕಲ್ಯಾಣಿ, ಆಳು ಹನುಮಂತನೊಡನೆ ಓಡುತ್ತಾಳೆ.

ಕ್ರೌರ್ಯ ತುಂಬಿದ ಹಳ್ಳಿಯ ವಾತಾವರಣದಲ್ಲಿ ಸ್ತ್ರೀಯರ ಬದುಕು ಪುರುಷರ ಹೊಡೆದಾಟ–ಬಡಿದಾಟದಲ್ಲಿ, ಹಮ್ಮು–ಬಿಮ್ಮುಗಳಲ್ಲಿ ಹರಿದು ಚಿಂದಿಯಾಗುತ್ತದೆ. ಇಲ್ಲಿ ಕಿಟ್ಟಿಯಂತೆಯೇ ಈ ಪಾತ್ರಗಳೂ ಆ ರಾಕ್ಷಸ ಗ್ರಾಮದಿಂದ ಪಾರಾಗಲು ಹಾತೊರೆಯುತ್ತವೆ, ಎಲ್ಲ ಪಾತ್ರಗಳೂ ದುರಂತದಲ್ಲಿ ಮುಗಿಯುತ್ತವೆ.

5

ಆಲನಹಳ್ಳಿಯವರು ಈ ಮೂರು ಕಾದಂಬರಿಗಳಲ್ಲಿ ಅನುಭವದ ಬ್ರಹ್ಮಾಂಡವನ್ನೇ ತೆರೆದಿಡುತ್ತಾರೆ. ಅವರ ಅನುಭವದ ಕುಕ್ಕೆಯಿಂದ ಮರಂಕಿಯಂಥಾ ಇನ್ನೂ ಎಷ್ಟು ಸ್ತ್ರೀ ಪಾತ್ರಗಳು ರೂಪುಗೊಳ್ಳಲಿದ್ದವೋ ಗೊತ್ತಿಲ್ಲ–ಅವರ ಅನಿರೀಕ್ಷಿತ ಸಾವು ಎಲ್ಲಕ್ಕೂ ತೆರೆ ಎಳೆದಿದೆ. ಅವರ ಈ ಮೂರು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳತ್ತ ಒಂದು ಇಣುಕು ನೋಟ ಸಿಗುತ್ತದೆ. ತುಂಬು ಸಹೃದಯತೆಯ, ಅನುಕಂಪದ ನೋಟ, ಲೋಕರೂಢಿಯ ನೀತಿ ನಿಯಮಗಳಲ್ಲಿ ಸ್ತ್ರೀ ಪಾತ್ರಗಳ ಕಟ್ಟಿಹಾಕದ ಸ್ವತಂತ್ರ ನೋಟ. ಲಿಂಗಭೇದವಿಲ್ಲದ ಲೇಖಕರ ಲೆಕ್ಕಣಿ ಹಳ್ಳಿಯ ಪ್ರತಿ ಜಾತಿ, ಕೋಮು, ಪುರುಷ ಪಾತ್ರಗಳಿಗೆ ನೀಡಿದ ಅದೇ ಸಮಸ್ಥಿತಿಯ ಸತ್ಯತೆಯ ನೆರವನ್ನು ಸ್ತ್ರೀ ಪಾತ್ರಗಳಿಗೂ ನೀಡಿದೆ. 'ಹೆಂಗಸು ಹೆಂಗಸಿನಂತಿರಬೇಕು' (ಭುಜಂಗಯ್ಯನ ದಶಾವತಾರ) ಎಂಬ ಮಾತುಗಳು ಕೂಡ ಕೇವಲ ಆ ಪಾತ್ರಗಳ ಮಾತುಗಳಾಗಿ ಲೇಖಕರದಾಗಿ ಧ್ವನಿಸುವುದಿಲ್ಲ. ಇಂಥ ದಿಟವುಟ್ಟದ ಹೆಣ್ಣುಗಳು ಆಲನಹಳ್ಳಿಯವರವು. ಅತ್ತೆಯಂಥಾ ಅವಲಂಬಿತರು, ಪಾರ್ವತಿಯಂಥಾ ಗಟ್ಟಿಗಿತ್ತಿಯರು, ಪುಟ್ಟವ್ವನಂಥಾ ಸಾಧ್ವಿಯರು, ದೇವಿಯಂಥಾ 'ಹಾದರ'ದವರು . . ಬದುಕಿನ ಎಲ್ಲ ಬಣ್ಣಗಳಲ್ಲೂ ದೊರೆತವರು, 'ಟೈಪ್' ಆಗದವರು, ಹಳ್ಳಿಯ ಬದುಕಿನ ಜೀವಂತ ಹೆಂಗಸರು.

I was only halfway through my first reading when I knew I had to make a film based on the novel. Wanting to turn a book into a film or a play (or even a translation) is one way of acknowledging one's total surrender to its power. It is also an expression of one's anger at not having written the book oneself, an attempt at expropriating to oneself the author's achievement.

*—Girish Karnad*

(ಕಾಡು ಕಾದಂಬರಿಯ ಇಂಗ್ಲಿಷ್ ಅನುವಾದ **The Woods**ನಲ್ಲಿ)

# ಪರಿವರ್ತನೆಯ ಕಿರು ಅಲೆಗಳ 'ಪರಸಂಗ...'

**ಜಿ. ಪಿ. ಬಸವರಾಜು**

ತಮ್ಮ ಮಿಂಚಿನ ಪ್ರತಿಭೆ ಮತ್ತು ಅದ್ಭುತ ಕಥನ ಶಕ್ತಿಗಳಿಂದ ಕನ್ನಡದ ಅತ್ಯುತ್ತಮ ಕಾದಂಬರಿಕಾರರಲ್ಲಿ ಒಬ್ಬರಾಗಿರುವ ಶ್ರೀಕೃಷ್ಣ ಆಲನಹಳ್ಳಿ ತಮ್ಮ ಬರವಣಿಗೆಯನ್ನು ಆರಂಭಿಸಿದ್ದು ನವ್ಯ ಸಾಹಿತ್ಯ ಉತ್ತುಂಗ ಸ್ಥಿತಿಯಲ್ಲಿದ್ದಾಗ. ಓದುಗರನ್ನು, ಸಹೃದಯರನ್ನು ಉಡಾಫೆಯಿಂದ ಉಪೇಕ್ಷಿಸಿ, ಪ್ರತಿಮೆ, ಸಂಕೇತ, ಶಿಲ್ಪ ಸೌಂದರ್ಯಗಳಲ್ಲಿ ತಲ್ಲೀನರಾಗಿದ್ದ ನವ್ಯರ ನಡುವೆಯೇ ಕುಡಿಯೊಡೆದ ಆಲನಹಳ್ಳಿ ತಮ್ಮ ಕೃತಿಗಳಿಂದ ಓದುಗರನ್ನು ಸೂಜಿಗಲ್ಲಿನಂತೆ ಸೆಳೆದುಕೊಂಡದ್ದು, ಓದುಗ ವಲಯವನ್ನು ಗಮನಾರ್ಹ ರೀತಿಯಲ್ಲಿ ವಿಸ್ತರಿಸಿಕೊಂಡದ್ದು ಅವರ ವಿಶಿಷ್ಟ ವ್ಯಕ್ತಿತ್ವವನ್ನು ತೋರುತ್ತದೆ.

ನವ್ಯ ಪ್ರಕಾರದ ಅತ್ಯುತ್ತಮ ಅಂಶಗಳನ್ನು ಸ್ವೀಕರಿಸಿಯೂ ಅದಕ್ಕೆ ಅಂಟಿಕೊಳ್ಳದೆ ಉಳಿದದ್ದು ಆಲನಹಳ್ಳಿಯವರ ವಿಶೇಷ. ಬಹುಪಾಲು ನವ್ಯಲೇಖಕರಂತೆ ತಮ್ಮ ಕೃತಿಗಳಿಗೆ ಪ್ರೇರಣೆಯನ್ನು ಕಮು–ಕಾಫ್ಕಾ ಅವರಿಂದ ಪಡೆಯದೆ, ಕುವೆಂಪು, ರಾವ್ ಬಹದ್ದೂರ್ ಅವರಂಥ ಲೇಖಕರಿಂದ ಪಡೆದ, ಅನಾಥಪ್ರಜ್ಞೆ, ಉಸಿರು ಕಟ್ಟಿಸುವ ನಗರ ಜೀವನ, ಮಧ್ಯಮವರ್ಗದ ತಲ್ಲಣಗಳು ಇವುಗಳ ಸುತ್ತ ಥಿರಕಿ ಹೊಡೆಯದೆ, ಸಮೃದ್ಧ ಗ್ರಾಮೀಣ ಬದುಕಿನ ಅನುಭವಗಳನ್ನು ಬೊಗಸೆಯಲ್ಲಿ ತುಂಬಿಕೊಂಡು ಕೃತಿ ರಚಿಸಿದ ಆಲನಹಳ್ಳಿ, ವಿಶಿಷ್ಟರೂ ಆದರು. ನವ್ಯರ ಆಚಾರ್ಯ ಕವಿ ಗೋಪಾಲಕೃಷ್ಣ

ಅಡಿಗರ ಮುಕ್ತ ಪ್ರಶಂಸೆಯಲ್ಲಿ ಮೈಮರೆತು ತನ್ನನ್ನೇ ಕಳೆದುಕೊಳ್ಳಬೇಕಾಗಿದ್ದ ಈ ತರುಣ ಅಂಥ ಅಪಾಯದಿಂದ ಅನಾಯಾಸವಾಗಿ ಪಾರಾಗಿ ನವ್ಯದ ಕುಬ್ಜ ದಿಗಂತಗಳನ್ನು ಮುಖಕ್ಕಿಡಿಯುವಂತೆ, ತಮ್ಮ ಗ್ರಾಮೀಣ ಅನುಭವಗಳಿಗೆ ನಿಷ್ಠರಾಗಿ ಅತ್ಯಂತ ರಭಸದಿಂದ ಕೃತಿಗಳನ್ನು ಕಟ್ಟಿದರು. ಅಪಾರ ಜನಪ್ರಿಯತೆ, ಜನಮನ್ನಣೆಯನ್ನು ಗಳಿಸಿ ಕನ್ನಡದ ಮಹತ್ವದ ಕಾದಂಬರಿಕಾರರು ಎಂದೆನಿದರು.

ಆಲನಹಳ್ಳಿಯವರ 'ಕಾಡು' ಕನ್ನಡದ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು ಎಂಬ ಗೌರವವನ್ನು ವಿಮರ್ಶಕರಿಂದ ಗಳಿಸಿತು. ಅವರ 'ಭುಜಂಗಯ್ಯನ ದಶಾವತಾರಗಳು' ಬಹು ದೊಡ್ಡ ಹರಹಿನ. ಮಹತ್ವಾಕಾಂಕ್ಷಿಯಾದ ಕಾದಂಬರಿ. ಇವೆರಡೂ ಚಲನಚಿತ್ರಗಳೂ ಆಗಿ ಜನಪ್ರಿಯತೆಯನ್ನು ಗಳಿಸಿಕೊಂಡ ಕೃತಿಗಳು. ಇವೆರಡರ ಮಧ್ಯೆ ಬಂದ 'ಪರಸಂಗದ ಗೆಂಡೆತಿಮ್ಮ' ಅಷ್ಟೇ ಜನಪ್ರಿಯವಾದ ಕಾದಂಬರಿ; ಹಾಗೆಯೇ ಚಲನಚಿತ್ರ ಕೂಡಾ. 1974ರಲ್ಲಿ ಮೊದಲ ಮುದ್ರಣ ಕಂಡ ಈ ಕಾದಂಬರಿ ಈವರೆಗೆ ಅನೇಕ ಮುದ್ರಣ ಕಂಡು ಸಾವಿರಾರು ಪ್ರತಿಗಳಲ್ಲಿ ಓದುಗರ ಬಳಿಗೆ ನಡೆದ ಕೃತಿ. ಜನಪ್ರಿಯತೆಯನ್ನು ಲೇಖಕನೊಬ್ಬನ ದೋಷವೆಂಬಂತೆ ನೋಡುತ್ತಿದ್ದ ಸಂದರ್ಭದಲ್ಲಿ ಆಲನಹಳ್ಳಿ ಅದಕ್ಕೊಂದು ವಿಶೇಷ ಅರ್ಥ ತಂದು ಕೊಟ್ಟು, ಅದು ಲೇಖಕನೊಬ್ಬನ ಸತ್ವಶಾಲೀ ಗುಣವೂ ಆಗುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಟ್ಟವರು.

ಉಳಿದೆರಡು ಕಾದಂಬರಿಗಳಂತೆ, 'ಪರಸಂಗ'ದ ಕೇಂದ್ರವೂ ಗ್ರಾಮೀಣ ಭಾರತವೇ. ಹಳ್ಳಿಯ ಜನ, ಅವರ ಬದುಕು, ನಂಬಿಕೆ, ಆಚಾರ, ವ್ಯವಹಾರ, ಆ ಮಣ್ಣಿಗಂಟಿದ ಗುಣ–ದೋಷ, ಅದರ ಚೆಲುವು ಹೀಗೆ ಎಲ್ಲವನ್ನೂ ಸಮಗ್ರವಾಗಿ, ಸೂಕ್ಷ್ಮವಾಗಿ, ಅರ್ಥಪೂರ್ಣವಾಗಿ ಗ್ರಹಿಸಿರುವ ಪರಿಯನ್ನು ನಾವಿಲ್ಲಿ ಕಾಣಬಹುದಾಗಿದೆ.

ಬಾಲ್ಯದಲ್ಲಿ ತಮ್ಮ ಮೇಲೆ ಗಾಢ ಪ್ರಭಾವ ಬೀರಿದ ಪರಸಂಗದ ಗೆಂಡೆತಿಮ್ಮ ಮತ್ತು ಅವನ ಹೆಂಡತಿ ಮರಂಕಿಯರನ್ನು ಆಲನಹಳ್ಳಿ ಇಲ್ಲಿ ಅಕ್ಷರ ಲೋಕಕ್ಕೆ ಎಳೆದು ತಂದು ಗ್ರಾಮೀಣ ಬದುಕನ್ನು ಚಿತ್ರಿಸಿದ್ದಾರೆ. ರಸಭರಿತವಾದ ಕಥೆಗಳನ್ನು, ಪ್ರಸಂಗಗಳನ್ನು ವರ್ಣಿಸುತ್ತಿದ್ದ ಅಪ್ಪಟ ಮುಗ್ಧ, ಪ್ರಾಮಾಣಿಕ ಗೆಂಡೆತಿಮ್ಮನ ಖಾಸಗೀ ಬದುಕನ್ನು ರೂಪಿಸುತ್ತಲೇ ಅವನು ಬದುಕಿದ್ದ ಗ್ರಾಮೀಣ ಪರಿಸರವನ್ನು, ಅದರ ಜೀವಂತಿಕೆಯನ್ನು, ಅದು ಕೊಳೆಯುತ್ತಿದ್ದ ಪರಿಯನ್ನು, ವಿಕಾಸಕ್ಕೆ ಚಾಚಿಕೊಳ್ಳುತ್ತಿದ್ದ ರೀತಿಯನ್ನು ಈ ಕಾದಂಬರಿ ಅರ್ಥಪೂರ್ಣವಾಗಿ ನಿರೂಪಿಸುತ್ತದೆ. ಕುತೂಹಲದ ಕಣ್ಣೊಂದು ಪ್ರೀತಿಯಿಂದ ನೋಡಿದುದರ ದಾಖಲೆ ಇಲ್ಲಿ ಓದುಗರಿಗೆ ಸಿಗುತ್ತದೆ.

ಕೆಲವು ಪಾತ್ರಗಳ, ಕುಟುಂಬಗಳ, ಒಂದೆರಡು ಹಳ್ಳಿಗಳ ಬದುಕು ಇಲ್ಲಿ ಚಿತ್ರಿತವಾಗಿದ್ದರೂ, ಕಾದಂಬರಿಕಾರರ ಅವಲೋಕನ ಕೇಂದ್ರೀಕೃತವಾಗಿರುವುದು ಈ

ಗ್ರಾಮೀಣ ಬದುಕಿನಲ್ಲಿ ಬದಲಾವಣೆಯ ಕಿರು ಅಲೆಗಳು ಎದ್ದಿವೆ, ಬದಲಾವಣೆ ಎಂದರೆ ಕಣ್ಣು ಕುಕ್ಕಿಸುವ ಬದಲಾವಣೆಗಳಲ್ಲ; ಆರ್ಥಿಕ ಪಲ್ಲಟಗಳಲ್ಲ; ರಾಜಕೀಯ ಏರುಪೇರುಗಳೂ ಅಲ್ಲ; ಗೆಂಡೆತಿಮ್ಮನ ಸಾಲುಂಡಿಯಲ್ಲಾಗಲಿ, ಮರಂಕಿಯ ಉಳಿ ಮಾವಿನಲ್ಲಾಗಲಿ ಅಥವಾ ಗೆಂಡೆತಿಮ್ಮನ ವ್ಯಾಪಾರದ ಊರಾದ ಗೌವ್ವಳ್ಳಿಯಲ್ಲಾಗಲಿ ಇಂಥ ಅಲ್ಲೋಲ ಕಲ್ಲೋಲ ಮಾಡುವಂಥ ಬದಲಾವಣೆಗಳೇನೂ ನಡೆದೇ ಇಲ್ಲ. ಅವೆಲ್ಲ ಮೊದಲಿನ ಹಾಗೇ ಅದೇ ಸ್ಥಿತಿಯಲ್ಲೇ ಉಳಿದಿವೆ. ಉತ್ತುವುದು–ಬಿತ್ತುವುದು, ಗೇಯುವುದು, ಮದುವೆಗಳು, ಪೂಜೆಗಳು, ದೇವರು ಮೈಮೇಲೆ ಬರುವುದು ಇತ್ಯಾದಿ ಕ್ರಿಯೆಗಳು ಯಾವ ಬದಲಾವಣೆಯೂ ಇಲ್ಲದೆ ಯಥಾಪ್ರಕಾರ ನಡೆಯುತ್ತಲೇ ಇವೆ. ಆದರೆ ಹೊಸ ನಾಗರಿಕತೆಯ ತುಣುಕೊಂದು ಈ ಹಳ್ಳಿಗಳ ಹಿಂಬಾಗಿಲಿನಿಂದ ನುಸುಳಿ ಬಂದು, ಒಳಗೇ ಥಣ್ಣಗೆ ಹರಿದು ಎಬ್ಬಿಸಿದ ಕಂಪನ ಈವರೆಗಿನ ಶಾಂತಿಯನ್ನು–ನೆಮ್ಮದಿಯನ್ನು ಕದಡಿದೆ. ಗೆಂಡೆತಿಮ್ಮ ಮೈಸೂರಿನಿಂದ ಕೊಂಡು ತಂದು ಗೌವಳ್ಳಿಯ ಹರೆಯದ ಹೆಣ್ಣುಗಳಿಗೆ ಕದ್ದು ಮುಚ್ಚಿ ಮಾರಿದ ಸ್ನೋ, ಪೌಡರು, ಗಮನದೆಣ್ಣೆ, ಬಾಡಿ, ಲಂಗಗಳ ನಾಗರಿಕತೆ ಎಬ್ಬಿಸಿದ ಕಂಪನ ಈ ಬಗೆಯದು.

ಮೇಲು ನೋಟಕ್ಕೆ ಇದು ಮಹತ್ವದ ಬದಲಾವಣೆ ಅಲ್ಲ. ಆದರೆ ಮಲೆತು ನಿಂತ ಬದುಕಿನಲ್ಲಿ ಇದು ಉಂಟು ಮಾಡಿದ ಪಲ್ಲಟ ವಿಶಿಷ್ಟವಾದದ್ದು. ಸ್ನೋ–ಪೌಡರುಗಳು ಹೊಸ ಜೀವನ ಶೈಲಿಯೊಂದರ ಸಾಧನಗಳಾಗಿರುವಂತೆಯೇ ಹೊಸ ಮೌಲ್ಯಗಳೂ ಆಗಿ ಹಳೆಯ ಸಂಪ್ರದಾಯಬದ್ಧ ಮೌಲ್ಯಗಳೊಂದಿಗೆ ಕಾದಾಟಕ್ಕಿಳಿಯುವುದು, ಸಂಬಂಧಗಳಲ್ಲಿ ಏರು–ಪೇರು ಉಂಟಾಗಿ ಸಂಘರ್ಷ ಏರ್ಪಡುವುದು, ಕುಟುಂಬದ ಸಂಗತಿಗಳು ಬೀದಿಗೆ ಬಂದು ಸಾರ್ವಜನಿಕ ಸ್ವರೂಪ ಪಡೆದುಕೊಳ್ಳುವುದು ಇತ್ಯಾದಿ ಪರಿಣಾಮಗಳಿಂದಾಗಿ ಈ ಬದಲಾವಣೆ ಏರಿಳಿತಗಳಿಲ್ಲದ ಬದುಕಿನಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡುವ ಬದಲಾವಣೆಯಾಗಿ ಮಹತ್ವ ಪಡೆದುಕೊಳ್ಳುತ್ತದೆ.

ಹಾಗೆ ನೋಡಿದರೆ ಗೆಂಡೆತಿಮ್ಮ–ಮರಂಕಿಯರು ಮುಗ್ಧ ವ್ಯಕ್ತಿಗಳಾಗಿರುವಂತೆಯೇ ಸಂಕೇತಗಳೂ ಆಗಿದ್ದಾರೆ. ಹೊಸ ನಾಗರಿಕತೆಯೊಂದರ ಪ್ರತಿರೂಪದಂತೆ ಆ ಹಳ್ಳಿಯಲ್ಲಿ ಕಾಣಿಸಿಕೊಳ್ಳುವ ಮರಂಕಿ ಹೊಸ ಮೌಲ್ಯಗಳ ಸಂಕೇತವೂ ಹೌದು. ಒಳಗೆ ಪ್ರತಿರೋಧ ಇಟ್ಟುಕೊಂಡೇ ಈ ಹೊಸತನಕ್ಕೆ ತನ್ನನ್ನು ಒಪ್ಪಿಸಿಕೊಳ್ಳುವ ಗೆಂಡೆತಿಮ್ಮ ಹಳೆಯ ಸಂಪ್ರದಾಯ ಮೌಲ್ಯಗಳ ಸಂಕೇತದಂತೆಯೂ ಭಾಸವಾಗುತ್ತಾನೆ. ಇವರಿಬ್ಬರ ನಡುವಣ ಸಂಘರ್ಷ–ತಿಕ್ಕಾಟಗಳೇ, ಪರಿವರ್ತನೆಯ ಸಂಕ್ರಮಣ ಸ್ಥಿತಿಯೊಂದರಲ್ಲಿ ಸಮಾಜ ಕಂಡುಕೊಳ್ಳುವ ಸಂಘರ್ಷ–ತಿಕ್ಕಾಟಗಳಾಗಿಯೂ ಕಂಡುಬರುತ್ತವೆ. ಹೀಗೆ ಕಾದಂಬರಿ ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ ತನ್ನ ಅರ್ಥವ್ಯಾಪ್ತಿಯನ್ನು ಹರಡಿ ಬೆಳೆಯುತ್ತ ಹೋಗುತ್ತದೆ.

ಹೀಗೆಂದ ಮಾತ್ರಕ್ಕೆ ಆಲನಹಳ್ಳಿ ತಮ್ಮೆಲ್ಲ ಪ್ರತಿಭೆಯನ್ನು ಸಂಕೇತ, ಪ್ರತಿಮೆಗಳ ಸೃಷ್ಟಿಗೇ ಧಾರೆ ಎರೆದಿದ್ದಾರೆ ಎಂದಲ್ಲ. ಹಾಗಾಗಿದ್ದರೆ ಅದು ಓದುಗರಿಂದ ದೂರವೇ ಉಳಿದುಬಿಡುವ ಸಂಭವವೇ ಹೆಚ್ಚಾಗಿತ್ತು. ಕೃತಕತೆ ಅಲ್ಲಿ ತಲೆ ಹಾಕುವ ಸಾಧ್ಯತೆಯೂ ಇತ್ತು. ಆದರೆ ಆಲನಹಳ್ಳಿ ದಟ್ಟ ಗ್ರಾಮೀಣ ವಿವರಗಳಿಂದ, ಸಹಜ ಪಾತ್ರಗಳ ನಿರೂಪಣೆಯಿಂದ, ಬದುಕಿನ ಸಕಲ ವ್ಯಾಪಾರಗಳ ಮಂಡನೆಯಿಂದ ಈ ಕೃತಿಯನ್ನು ನೈಜ ದಾಖಲೆಯನ್ನಾಗಿ ಮಾಡುತ್ತಲೆ ಇಲ್ಲಿಯ ಸಂಗತಿಗಳು, ಘಟನೆಗಳು, ಸಂಬಂಧ ಗಳು, ಸಂಘರ್ಷಗಳು, ಇನ್ನೊಂದು ಸ್ತರದ ಅರ್ಥವ್ಯಾಪ್ತಿಯನ್ನು ಪಡೆದು ಕೊಳ್ಳುವಂತೆ ಮಾಡುತ್ತಾರೆ. ಹೀಗಾಗಿಯೇ ಇದು ಸಂಕೇತ, ಪ್ರತಿಮೆಗಳಿಗೆ ಮಾತ್ರ ಜೋತುಬೀಳದೆ ಅರ್ಥಸಮೃದ್ಧಿಯನ್ನು ಚಿಮ್ಮಿಸುತ್ತ ಜೀವಂತಿಕೆಯನ್ನು ಪಡೆದು ಕೊಳ್ಳುತ್ತದೆ.

ಆಲನಹಳ್ಳಿ ಪೂರ್ವಾಗ್ರಹಗಳನ್ನು ದೂರವಿರಿಸಿ ಕೃತಿಕಟ್ಟುವ ಬರಹಗಾರ. ಇದು ಕಾರಣವಾಗಿರುವುದರಿಂದಲೇ ಈ ಕಾದಂಬರಿಯ ಗೆಂಡೆತಿಮ್ಮನಾಗಲಿ, ಮರಂಕಿ ಯಾಗಲಿ ಕಾದಂಬರಿಕಾರನ ಆಶಯಗಳಿಗೆ ತಕ್ಕ ಪಾತ್ರಗಳಾಗಿ ರೂಪ ಪಡೆಯುವ ಬದಲು, ಅವರು ಇರುವಂತೆಯೇ ಸಹಜ ವ್ಯಕ್ತಿತ್ವವನ್ನು ಉಳಿಸಿಕೊಂಡೇ ಕಾಣಿಸಿ ಕೊಳ್ಳುತ್ತಾರೆ. ಹಾಗಾಗಿಯೇ ಇವರು ಜೀವಂತ ವ್ಯಕ್ತಿಗಳಾಗಿ ನಮ್ಮೊಳಕ್ಕೆ ಇಳಿಯು ತ್ತಾರೆ. ನವ್ಯದ ಬಹುಪಾಲು ಲೇಖಕರಲ್ಲಿ ಅಥವಾ ಪೊಳ್ಳು ಬಂಡಾಯದ ಹಲವು ಬರಹಗಾರರಲ್ಲಿ ಇಂಥ ಪೂರ್ವಾಗ್ರಹಮುಕ್ತ ಮನೋಭಾವವೇ ಅಪರೂಪವಾಗಿರು ವುದರಿಂದಾಗಿ ಆಲನಹಳ್ಳಿಯವರ ಈ ಗುಣ ಬಹಳ ಮುಖ್ಯವಾಗುತ್ತದೆ.

ಅತ್ಯಂತ ರಭಸವಾಗಿ, ಅಷ್ಟೇ ಕಲಾತ್ಮಕವಾಗಿ ಕಥೆಯನ್ನು ಮುನ್ನಡೆಸಬಲ್ಲ ಅಗಾಧ ಸಾಮರ್ಥ್ಯವನ್ನು ಪಡೆದುಕೊಂಡಿದ್ದ ಆಲನಹಳ್ಳಿ ಅಷ್ಟೇ ಸಂಯಮವನ್ನೂ ತೋರುತ್ತಿದ್ದ ಬರಹಗಾರ. ಈ ಗುಣ ಆಲನಹಳ್ಳಿಯವರ 'ಪರಸಂಗ' ದಾರಿ ತಪ್ಪದಂತೆ ನೋಡಿಕೊಳ್ಳುತ್ತದೆ. ಅತ್ಯಂತ ರೋಚಕ ಹಂತದಲ್ಲೂ ಈ ಕಾದಂಬರಿ ತನ್ನ ಮಾರ್ಗದಿಂದ ಆಚೆಗೆ ಸಾಗುವುದಿಲ್ಲ. ಅನಗತ್ಯವಾಗಿ ತನ್ನ ಗಾತ್ರ ಹೆಚ್ಚಿಸಿ ಕೊಳ್ಳುವುದಿಲ್ಲ.

ಆಲನಹಳ್ಳಿಯವರ ಇನ್ನೊಂದು ವಿಶೇಷ ಗುಣ ಎಂದರೆ ಅವರು ಬಿಡುಗಣ್ಣಿನಿಂದ ಎಲ್ಲವನ್ನೂ ನೋಡುವ ಪರಿ. ಗೌವ್ವಳ್ಳಿಯ ಮನೆ, ತಿಪ್ಪೆ, ಕೊಟ್ಟಿಗೆ, ಬೀದಿ, ಮೂಗಿಗೆ ಅಪ್ಪಳಿಸುವ ವಾಸನೆ, ಹೇಲು, ಕೊಚ್ಚೆ, ಕೆಸರು, ನೊಣಗಳ ದಂಡು, ನಾಯಿ ಗಳ ಹಿಂಡು, ಗಮನದೆಣ್ಣೆಯನ್ನು ಅಸಹ್ಯ ಹುಟ್ಟಿಸುವ ವಾಸನೆ ಎಂದು ಭ್ರಮಿಸು ವಷ್ಟರ ಮಟ್ಟಿಗೆ ಕೊಳೆತ ಈ ಪರಿಸರಕ್ಕೆ ಹೊಂದಿಕೊಂಡ ಜನ–ಇದೆಲ್ಲವನ್ನು ಉತ್ಸಾಹ ದಿಂದ. ಕುತೂಹಲದಿಂದ, ಸಂಭ್ರಮಗಳಿಂದ ಅಲ್ಲಾಗುವ ಋತು ಪರಿವರ್ತನೆಗಳನ್ನು,

ಬೆಳಗಿನಲ್ಲಿ ಸುರಿಯುವ ಮಂಜನ್ನು, ಬಿಳಿ ಜಾಲದ ಹೂವಿನ ಮರವನ್ನು, ಸಮೃದ್ಧ ಹುಲ್ಲುಗಾವಲನ್ನು, ದಟ್ಟ ಕಾಡನ್ನು, ಮಣ್ಣು ಅರಳಿಸುವ ಸೌಂದರ್ಯವನ್ನು, ವಿಸ್ಮಯವನ್ನು ಕಾಣಬಲ್ಲರು ; ಕಣ್ಣಿಗೆ ಕಟ್ಟುವಂತೆ ವರ್ಣಿಸಬಲ್ಲರು. ಕುವೆಂಪುರವರ ಗದ್ಯದಲ್ಲಿ ಮಾತ್ರ ಕಾಣಸಿಗುವಂಥ ಈ ಬಗೆಯ ಬಣ್ಣನೆಗಳು ಆಲನಹಳ್ಳಿಯವರ ಈ ಕಾದಂಬರಿಯಲ್ಲಿ ಸಮೃದ್ಧವಾಗಿ ತುಂಬಿಕೊಂಡಿದ್ದು ಕಾದಂಬರಿಗೆ ವಿಶೇಷ ಕಳೆಯನ್ನು, ಜೀವಂತಿಕೆಯನ್ನು ತಂದುಕೊಡುತ್ತವೆ.

ಇವರ ಬರವಣಿಗೆಯ ಕೌಶಲ ಮತ್ತು ಕಲಾತ್ಮಕತೆಗಳು ಎಷ್ಟೊಂದು ಪ್ರೌಢ ವಾಗಿವೆಯೆಂದರೆ, ಆಲನಹಳ್ಳಿ ಯಾವುದೇ ಒಂದು ಸಂಗತಿಯನ್ನು ಅತಿರೇಕದ ಅಂಚಿಗೆ ಒಯ್ದು ಓದುಗರನ್ನು ರಂಜಿಸುತ್ತಿದ್ದಾರೆ ಎಂದು ಭಾಸವಾಗುತ್ತಿದ್ದಂತೆಯೇ, ಇದನ್ನು ತಲೆಕೆಳಗೆ ಮಾಡುವಂತೆ ಕಾದಂಬರಿ ಗಂಭೀರ ಸ್ವರೂಪವನ್ನು ಪಡೆದುಕೊಂಡು ಬಿಡುತ್ತದೆ. ಲಂಗ, ಬಾಡಿ, ಸ್ನೋ, ಪೌಡರು, ಗಮನದೆಣ್ಣೆ ತಮಾಷೆಯ ವಸ್ತು ಗಳಂತೆ ಕಾಣಿಸಿಕೊಳ್ಳುತ್ತವೆ. ಇವನ್ನು ಬಳಸುವವರು, ಇತರರ ಮೇಲೆ ಉಂಟಾಗುವ ಪರಿಣಾಮ ಇವೆಲ್ಲ ರಸ ಪ್ರಸಂಗಗಳಂತೆ ಆರಂಭದಲ್ಲಿ ತೋರುತ್ತವೆ. ಓದುಗರನ್ನು ರಂಜಿಸುವುದಕ್ಕಾಗಿ ಕಾದಂಬರಿಕಾರ ಇದನ್ನೆಲ್ಲ ಬಣ್ಣಿಸುತ್ತಿರುವಂತೆ ಭಾಸವಾಗುತ್ತದೆ. ಆದರೆ ಕಾದಂಬರಿ ಬೆಳೆದಂತೆ ಈ ವಸ್ತುಗಳ ಗಂಭೀರತೆ ಅರಿವಾಗುತ್ತದೆ. ಗಂಡ–ಹೆಂಡತಿಯರ ನಡುವೆ ಪ್ರೀತಿ–ಅನುಮಾನಗಳನ್ನು ಹುಟ್ಟು ಹಾಕುವಂತೆಯೇ ಈ ವಸ್ತುಗಳು ಅತ್ತೆ–ಸೊಸೆಯರ ಮಧ್ಯೆ ಕಾದಾಟವನ್ನು ಬಿತ್ತುತ್ತವೆ. ಕುಟುಂಬಗಳು ಹೋಳಾಗಲು, ಸಂಬಂಧಗಳು ಬಿಗಡಾಯಿಸಲು ಕಾರಣವಾಗುತ್ತವೆ. ನೋಡು ನೋಡುತ್ತಿದ್ದಂತೆಯೇ ಈ ವಸ್ತುಗಳು, ವಸ್ತುಗಳಾಗಿ ಉಳಿಯದೆ ಮೌಲ್ಯಗಳಾಗಿ ಪರಿವರ್ತನೆಗೊಳ್ಳುವುದು, ಹಿರಿ–ಕಿರಿಯರ ತಲೆಮಾರುಗಳ ನಡುವಿನ ಕಂದಕಗಳಾಗು ವುದು, ಸಂಘರ್ಷ ಏರ್ಪಡಿಸುವುದು, ಇಡೀ ಸಮಾಜವೊಂದು ಪರಿವರ್ತನೆಯನ್ನು ಕಂಡುಕೊಳ್ಳುವುದು, ಈ ಪರಿವರ್ತನೆಯ ಘಟ್ಟದಲ್ಲಿ ಅನಿವಾರ್ಯವಾಗಿ ಬಂದೆರಗುವ ಸಂಕಟಗಳು, ಸಾವು–ನೋವುಗಳು ಎಲ್ಲ ಅರ್ಥಪೂರ್ಣವಾಗಿ ಬಿಚ್ಚಿಕೊಂಡು ಕಾದಂಬರಿ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುತ್ತದೆ.

ಭಾಷೆಯ ಬಳಕೆಯಲ್ಲಿ ಕೂಡಾ ಆಲನಹಳ್ಳಿ ತಾವೊಬ್ಬ ಸಮರ್ಥ ಬರಹಗಾರ ಎಂಬುದನ್ನು ತೋರಿಸುತ್ತಾರೆ. ಮೈಸೂರು ಸುತ್ತಮುತ್ತಲ ಗ್ರಾಮಗಳ, ಒಕ್ಕಲಿಗ ಪರಿಸರದ ಆಡುಮಾತನ್ನು ಅದರೆಲ್ಲ ವಿಶಿಷ್ಟತೆಯಲ್ಲಿ, ಏರಿಳಿತದಲ್ಲಿ, ಲಯ, ವಿನ್ಯಾಸ ದಲ್ಲಿ ಗ್ರಹಿಸಿ ತಮ್ಮ ಪಾತ್ರಗಳಿಗೆ ತುಂಬುತ್ತ ಕಾದಂಬರಿಗೊಂದು ವಿಶೇಷ ಪ್ರಾದೇಶಿಕ ಸೊಗಡನ್ನು ತರುತ್ತಾರೆ. ಆಲನಹಳ್ಳಿಯವರ ಉಳಿದ ಕಾದಂಬರಿಗಳಲ್ಲಿ ಕಾಣಿಸುವ ಈ ಸೊಗಡು 'ಪರಸಂಗ'ದಲ್ಲೂ ಕಾಣಿಸುತ್ತದೆ; ಕಾದಂಬರಿಯ ಸತ್ವವನ್ನು ಹೆಚ್ಚಿಸುತ್ತದೆ.

ಮನುಷ್ಯ ಸಂಬಂಧಗಳಿಗೇ ಹೆಚ್ಚು ಒತ್ತು ಕೊಡುವ ಆಲನಹಳ್ಳಿ ಸಮಾಜವನ್ನು ಗ್ರಹಿಸುವುದು ಈ ಸಂಬಂಧಗಳ ಮೂಲಕವೇ. ಸಮಾಜದ ಪರಿವರ್ತನೆಗಳನ್ನು, ಏರು–ಇಳಿವುಗಳನ್ನು, ಪಲ್ಲಟಗಳನ್ನು ದಾಖಲಿಸುವುದೂ ಈ ವ್ಯಕ್ತಿ ಸಂಬಂಧಗಳ ಪರಿವರ್ತನೆಯಲ್ಲಿಯೇ. ಕಾದಂಬರಿಕಾರರು ಗೆಂಡೆತಿಮ್ಮನ ಕುಟುಂಬ ಕಥೆಯನ್ನು ಹೇಳುತ್ತಿರುವಾಗಲೇ, ಅದು ಗೆಂಡೆತಿಮ್ಮ ಬದುಕಿದ ಊರಿನ, ಅಂಥ ಹಲವಾರು ಊರುಗಳ ಕಥೆಯೂ ಆಗುವುದು, ಒಂದು ಕಾಲ ಘಟ್ಟದಲ್ಲಿ ಈ ಊರುಗಳ ಬದುಕು ಕಂಡುಕೊಳ್ಳುವ ಅವಸ್ಥಾಂತರದ ದಾಖಲೆಯೂ ಆಗುವುದು ಹೀಗೆಯೇ. ಒಂದು ಸಮರ್ಥ ಕಲಾಕೃತಿ ಮಾಡಬೇಕಾದ ಕೆಲಸ ಇದೇ ಅಲ್ಲವೇ ? ●

ಗ್ರಾಮ ಜೀವನವನ್ನು ಹಾಸ್ಯ ಪ್ರಸಂಗಗಳಿಗಾಗಿ ಅಥವಾ ಭಾವುಕ ವಿಜೃಂಭಣೆಗಾಗಿ ಬಳಸಿಕೊಂಡ ಕಾದಂಬರಿಗಳಿಗಿಂತ ತೀರ ಭಿನ್ನವಾದ ಕೃತಿ ಆಲನಹಳ್ಳಿಯವರ **ಕಾಡು**. ನಾಗರೀಕತೆಯ ಶೋಧದಲ್ಲಿ ಮಾನವ ಬಹುದೂರ ಬಂದಿದ್ದರೂ ಅವನ ಮೂಲ ಪ್ರವೃತ್ತಿಗಳಾದ ಕಾಮ, ದ್ವೇಷ, ಕ್ರೌರ್ಯಗಳು ಇನ್ನೂ ಆದಿಮ ಸ್ಥಿತಿಯಲ್ಲಿಯೇ ಇರುವುದು ಅವನ ಜೀವನದ ದುರಂತ. ಕೊನೆಯಿಲ್ಲದ ಈ ಅವಸ್ಥೆಯನ್ನೇ ಕೊಪ್ಪಲು, ಹೊಸೂರು ಇಂಥ ಕಾಡಿನ ಮಧ್ಯದ ಗ್ರಾಮಗಳ ಪರಿಸರದಲ್ಲಿ ನಡೆಯುವ ಕ್ರಿಯೆಯ ಮೂಲಕ ಆಲನಹಳ್ಳಿ ಅಭಿನಯಿಸಿ ತೋರಿಸಿದ್ದಾರೆ. ಇಂಥ ವಸ್ತುವನ್ನು ಹೊಂದಿದ ಅವರ ಕಾದಂಬರಿಗೆ ಸಾರ್ವತ್ರಿಕತೆಯನ್ನು ಹುಡುಕಿಕೊಂಡು ಹೋಗುವ ಪ್ರಸಂಗವೇ ಬರುವುದಿಲ್ಲ.

ಆಲನಹಳ್ಳಿಯವರ ಅನುಭವದಂತೆ ಅವರ ಕಲಾಪ್ರಜ್ಞೆಯೂ ಜೀವಂತವಾದುದರಿಂದ **ಕಾಡು** ಕಲೆಯ ದೃಷ್ಟಿಯಿಂದಲೂ ಯಶಸ್ವಿಯಾದ ಕೃತಿಯಾಗಿದೆ...ಕಿಟ್ಟಿಯ ಮುಗ್ಧತೆ ಮತ್ತು ಅವನ ಮೇಲೆ ಅಪ್ಪಳಿಸುವ ರಾಕ್ಷಸ ಲೋಕದ ಅನುಭವಗಳು ಇವುಗಳ ನಡುವಿನ ವಿರೋಧದಿಂದಾಗಿ ಕಾದಂಬರಿಯಲ್ಲಿ ಸಂಕೀರ್ಣತೆ ಹುಟ್ಟಿಕೊಳ್ಳುತ್ತದೆ. ಕಿಟ್ಟಿಯ ದೃಷ್ಟಿಕೋನದಿಂದ ಕಾದಂಬರಿಯ ಜಗತ್ತನ್ನು ನೋಡಿದಾಗ ಅದರ ಕ್ರೌರ್ಯ ಪ್ರಭಾವಶಾಲಿಯಾಗಿ ಓದುಗನ ಮನಸ್ಸು ಕಲಕುತ್ತದೆ. ಕ್ರೌರ್ಯ ಘಟನೆಗಳನ್ನು Sensational ಉದ್ದೇಶಗಳಿಗಾಗಿ ಬಳಸದೆ ಓದುಗನಿಗಾಗಿ ಓದುಗನಿಗೆ ಹೊಸ ತಿಳಿವನ್ನು ಕೊಡಲು ಯತ್ನಿಸುವ ಮೂಲಕ ಕಾದಂಬರಿ ಆಧುನಿಕತೆಯನ್ನು ಗಳಿಸಿಕೊಳ್ಳುತ್ತದೆ.

—ಜಿ. ಎಸ್. ಆಮೂರ

(1986ರಲ್ಲಿ 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳನ್ನು ಆಯ್ಕೆ ಮಾಡಿ, ಅದರಲ್ಲೊಂದಾದ 'ಕಾಡು' ಕುರಿತು ಬರೆದಿರುವ ಮಾತುಗಳಿಂದ)

# ಕಥೆಗಾರ ಕೃಷ್ಣ: ಒಂದು ವೈಯುಕ್ತಿಕ ಪ್ರತಿಕ್ರಿಯೆ

**ರಾಘವೇಂದ್ರ ಪಾಟೀಲ**

1975–76ರ ಸಮಯ. ವಾಸ್ತವದ ಗೊಂದಲಗಳಿಂದ ಬಳಲಿದ ನಾನು ಆಸರೆಗೆ ಮೊರೆಹೊಕ್ಕಿದ್ದು ಸಾಹಿತ್ಯವನ್ನು. ಸಾಹಿತ್ಯದ ಆಸರೆ ನನಗೆ ಎಷ್ಟು ಒಗ್ಗಿತೆಂದರೆ ನಾನು ಸಾಹಿತ್ಯದೀಕ್ಷೆ ಪಡೆದುಕೊಂಡೆ ಎಂದು ರೋಮ್ಯಾಂಟಿಕ್ಕಾಗಿ ಹೇಳಬಹುದಾದ ರೀತಿಯಲ್ಲಿ ಸಾಹಿತ್ಯವನ್ನು ಗುಂಗಾಗಿಸಿಕೊಂಡೆ. ಸಾಹಿತ್ಯದ ವಿದ್ಯಾರ್ಥಿಯಾದೆ. ಓದತೊಡಗಿದೆ. ನನ್ನ ಓದಿಗೆ ಸಹಜವಾಗಿ ದೊರತದ್ದು ನವ್ಯ ಸಾಹಿತ್ಯ. ನನ್ನ ನವೋದಯ, ಪ್ರಗತಿಶೀಲ ಸಾಹಿತ್ಯಗಳ ಪ್ರವೇಶ ಕೂಡ ನವ್ಯ ಸಾಹಿತ್ಯದ ಮೂಲಕವಾದುದೇ ಆಗಿದೆ. ಅದಿರಲಿ. ನನ್ನ ಓದು, ನವ್ಯ ಸಾಹಿತ್ಯದ ಮುಖ್ಯ ಗ್ರಹಿಕೆಗಳೇನು ಎನ್ನುವುವರ ಸುತ್ತ ಇದ್ದು, ಅಡಿಗರ ಕಾವ್ಯದಿಂದ–ಅದೂ 'ಭೂಮಿಗೀತ'ದಿಂದ ಆರಂಭಿಸಿದ್ದೆ. ಇದನ್ನು ಒಳ್ಳೆಯ ಆರಂಭವೆನ್ನಲಾಗದು. ಕಾವ್ಯದ ಅಸಂದಿಗ್ಧ, ಏಕಮೇವ ನೆಲೆಯಲ್ಲಿ ಕೂಡ ಕಮ್ಯುನಿಕೇಶನ್ ಪಡೆಯಲು ಅಶಕ್ತನಾದ ನಾನು ambiguityಯನ್ನು ಧ್ಯೇಯವಾಗಿಸಿಕೊಂಡ, ಅವ್ಯಕ್ತ ಮೆಟ್ಟಿಲುಗಳ, ಹಲವು

ಮಜಲುಗಳ ಭೂಮಿಗೀತವನ್ನು ಎದುರಿಸಿದ್ದು ಖಂಡಿತ ಉತ್ತೇಜಕ ಆರಂಭವಲ್ಲ. ಅಂತೂ ಈ ಆರಂಭ ನನ್ನಲ್ಲಿ ಸಾಹಿತ್ಯದ ತಿಳುವಳಿಕೆಗೆ ಸಂಬಂಧಿಸಿದಂತೆ ಮೂಡಿಸಿದ ಭಾವನೆ ಸೇಂಟ್ ಆಗಸ್ಟಿನ್ ಯಾವದೋ ವಿಷಯ ಕುರಿತು ಎಚ್ಚರಿಸಿದ ಮಾತು: "If not asked, I know ; If you ask me, I know not' ಇದರಂತಾದುದು. ಭೂಮಿಗೀತದ ಮನುಷ್ಯ–ಭೂಮಿ–ಗಂಡು–ಹೆಣ್ಣು–ಪ್ರಕೃತಿ–ಪುರುಷ ಸಂಬಂಧಗಳ ಗೊಂದಲಮಯ ಗಿರಕಿಯಿಂದ ಸುಸ್ತಾಗಿ ದಣಿವಾರಿಸಿಕೊಳ್ಳಲು ನಾನು ಓದಲು ಆರಿಸಿಕೊಂಡದ್ದು ಕಥೆಯ ಮಾಧ್ಯಮ.

ಲಂಕೇಶರ 'ನಾನಲ್ಲ' ಸಂಕಲನದ ಕಥೆಗಳು, ಅನಂತಮೂರ್ತಿಯವರ 'ಪ್ರಶ್ನೆ', 'ಮೌನಿ' ಸಂಕಲನದ ಕಥೆಗಳು, ಚಿತ್ತಾಲರ ಕಥೆಗಳು, ನನ್ನ ದಣಿವು ನಿವಾರಿಸಿಕೊಳ್ಳುವ ತಾಣಗಳೇನೂ ಆಗಲಿಲ್ಲ. ಇವು ನನ್ನ ಸಾಹಿತ್ಯದ ಆಸಕ್ತಿಗೆ ಒಂದು ಛಲದ ಮೊನಚು ನೀಡಿದವು. ಇನ್ನಷ್ಟು ಇನ್ನಷ್ಟು ಓದುವ ಆಕಾಂಕ್ಷೆಗೆ ನನ್ನನ್ನು ಒಡ್ಡಿದವು. ಇಂಥ ಮನಃಸ್ಥಿತಿಯಲ್ಲಿಯೇ ನಾನು ಮೊದಲ ಬಾರಿ ಕೃಷ್ಣನ ಕಥೆಗಳನ್ನು ಎದುರುಗೊಂಡದ್ದು. ನನ್ನ ಅಂದಿನ ಗೊಂದಲಗೊಂಡ ಮನಃಸ್ಥಿತಿಯಲ್ಲಿ ಕೃಷ್ಣನ ಫೀನಿಕ್ಸ್ ಕಥೆ ಭೂಮಿಗೀತವನ್ನು ಅರ್ಥೈಸಿಕೊಳ್ಳಲು ನನಗೆ ಹೊಸ ಸಹಾಯ ನೀಡತೊಡಗಿತು. ವಿದ್ಯುತ್ ಗಂಟೆಯಲ್ಲಿನ ಕಬ್ಬಿಣವನ್ನು ಅಯಸ್ಕಾಂತವಾಗಿಸುವ ವಿದ್ಯುತ್ ಪ್ರವಾಹ–ಆಯಸ್ಕಾಂತವಾದೊಡನೆ ನಿಂತು ಹೋಗುವ ಪ್ರವಾಹ–ಅಯಸ್ಕಾಂತೀಯ ಗುಣ ಕಳೆದುಹೋಗಿ ಪುನಃ ಉಂಟಾಗುವ ಪ್ರವಾಹ, ಇಂಥ ವಿಷಮ ಚಕ್ರದಂತೆ ಏರ್ಪಡುವ ಗಂಡು ಹೆಣ್ಣಿನ ನಡುವಿನ ಸಂಬಂಧಗಳನ್ನು ತಿಳಿಸುತ್ತಾ ಫೀನಿಕ್ಸ್ ಕಥೆ ಒಂದು ರೀತಿಯಾಗಿ ನನಗೆ ಗುರುವಾಗಿ ನಿಂತಿತು ಎಂದು ನನ್ನ ಭಾವನೆ. ನವ್ಯದ ಗಾಢ ಗುಂಗಿನಲ್ಲಿದ್ದ ನನ್ನನ್ನು ಫೀನಿಕ್ಸ್ ಕಥೆ ತೀವ್ರವಾಗಿ ಸೆಳೆದಿತ್ತು.

'ಗೀಜಗನ ಗೂಡು' ಕೂಡ ಆಗಲೇ ಓದಿದ್ದು. "ಇದುವರೆವಿಗೆ ಕನ್ನಡ ಸಾಹಿತ್ಯಕ್ಕೆ ವರ್ಜ್ಯವೆನಿಸಿದ್ದ ಕಾಮ ನಮ್ಮ ಸಾಹಿತ್ಯ ಪ್ರವೇಶಿಸಬೇಕು. ಕಾಮ ಜೀವನದ ಒಂದು ಅತ್ಯಂತ ತೀವ್ರವಾದ ವಾಸ್ತವವಾಗಿದೆ ."ಇತ್ಯಾದಿ ನವ್ಯದ ಘೋರಣಾತ್ಮಕ ಘೋಷಣೆಯ ನೆಲೆಯಲ್ಲಿ ಗೀಜಗನ ಗೂಡು ಕೂಡ ನನ್ನನ್ನು ತೀವ್ರವಾಗಿಯೇ ಸೆಳೆಯಿತು. ಅಲ್ಲದೇ ಕಾಮದ ನೆಲೆಯಲ್ಲಿ ಎರಡು ವಿಭಿನ್ನ ಸಂಸ್ಕೃತಿಗಳ ತುಲನೆಗೆ ನಮ್ಮನ್ನು ಸಜ್ಜುಗೊಳಿಸಲು ಪ್ರಯತ್ನಿಸುವ ಈ ಕಥೆ ಭಾರತೀಯ ಸಂಸ್ಕೃತಿಯ ಬಿಚ್ಚಿಕೊಳ್ಳಲಾರದ, ಅರಳಲಾರದ ರೀತಿಯನ್ನು ತಿಳಿಸುವಂಥದಾಗಿದೆ. ಆದರೆ ಅನಂತಮೂರ್ತಿಯವರ 'ಕ್ಲಿಪ್ ಜಾಯಿಂಟ್' ಕಥೆಯಂತೆ ಇನ್ನೊಂದು ಸಂಸ್ಕೃತಿಯನ್ನೂ ವಿಶ್ಲೇಷಣೆಗೆ ಒಳಪಡಿಸುವುದಿಲ್ಲ. ಕ್ಲಿಪ್ ಜಾಯಿಂಟ್‌ನ ಕೇಶವನಿಗೆ ಇಂಗ್ಲಿಷ್ ಸಂಸ್ಕೃತಿಯ ಬಗ್ಗೆ ಅತೃಪ್ತಿಯಿರುವ ಸ್ಟೂವರ್ಟ್ ಸಿಕ್ಕಿದ್ದರೆ ಇಲ್ಲಿ ಕಥೆಗಾರನಿಗೆ ದೊರೆತ

ರಶಿಯನ್ ಹೆಂಗಸು ತನ್ನ ಸಂಸ್ಕೃತಿಯ ಬಗ್ಗೆ ಅಭಿಮಾನ ಹೊಂದಿದವಳಾಗಿದ್ದಾಳೆ. ಅಲ್ಲದೆ 'ಕ್ಲಿಪ್ ಜಾಯಿಂಟ್'ನಲ್ಲಿನ ಸಂಸ್ಕೃತಿಗಳ ವಿಶ್ಲೇಷಣೆ, ಘಟನೆಗಳ ವಾಸ್ತವದ ನೆಲೆಯಲ್ಲಿ ನಡೆಯುವಂಥಾದಾಗಿದ್ದರೆ 'ಗೀಜಗನ ಗೂಡು'ನಲ್ಲಿ ಇಂಥ ಸಂದರ್ಭ ವ್ಯಾಪ್ತವಾಗಿ ಏರ್ಪಡುವುದಿಲ್ಲ. ಇಂಡಿಯಾದ ಮೂಲೆಯೊಂದರಲ್ಲಿ ಅಪರಿಚಿತರ ನಡುವೆ ಇರುವ ಈ ಹೆಣ್ಣಿನ ಮುಕ್ತ ನಡವಳಿಕೆ ಪೂರ್ಣ ಸಾಜಾ ಎಂದು ಸಾಬೀತಾಗ ಲಾರದು. ಈ ಹೆಣ್ಣು ಕೂಡ ಕಾಡಿನ ಆದಿವಾಸಿಗಳ ಅರೆನಗ್ನ ವಸ್ತ್ರವನ್ನು ಅಪೇಕ್ಷಿ ತ್ತಾಳೆಯೇ ಹೊರತು–ತಾನು ಈಗಾಗಲೇ ಮದುವೆಯಾಗಿಬಿಟ್ಟಿರುವುದರಿಂದ ಆ ರೀತಿ ಬಟ್ಟೆ ತೊಡಲಾರೆನೆನ್ನುತ್ತಾಳೆ.

ಕೃಷ್ಣ ಬರೆದ ಕಾಮುಕ ಕಥೆಗಳಾದ 'ಫೀನಿಕ್ಸ್', 'ಗೀಜಗನಗೂಡು', 'ಅಂಟಿದ ನಂಟಿನ ಕೊನೆಬಲ್ಲವರಾರು....', ಮತ್ತು 'ಇನ್ನೊಂದು ಪ್ರಣಯ ಪ್ರಸಂಗ' ಕಥೆಗಳು ನನ್ನನ್ನು ವಿಚಿತ್ರವಾಗಿ ಕಾಡಿವೆ. ಇವು ನಾನು ಬರೆಯಲಾರದಂಥ ಕಥೆಗಳು. ಇದಕ್ಕೆ ಕಾರಣ ನಾನು ಬಂದಿರುವ ಕೌಟುಂಬಿಕ, ಸಾಮಾಜಿಕ ಹಿನ್ನೆಲೆ ಕಾರಣವಿರಬಹುದು ಇಲ್ಲವೇ ನವ್ಯ ಸಾಹಿತ್ಯ ತನ್ನ ಆರಂಭಿಕ ವಿನಾಕಾರಣ ರಭಸ, ಪ್ರತಿಕ್ರಿಯೆಗಳನ್ನು ಸಾಧುಗೊಳಿಸಿಕೊಂಡ ನಂತರದ ಕಾಲದಲ್ಲಿ ನಾನು ಸಾಹಿತ್ಯವಲಯಕ್ಕೆ ಹೆಜ್ಜೆ ಇಟ್ಟು ದಾಗಿರಬಹುದು. ಇವೇನೇ ಇರಲಿ, ಇಂಥ ಕಥೆ ಬರೆದ ಕೃಷ್ಣನ ಬಗ್ಗೆ ನನ್ನಲ್ಲಿ ಮೂಡುವ ಮತ್ಸರದ ಭಾವನೆ ನೋಡಿದರೆ ನನ್ನದು ಹಿಪಾಕ್ರಸಿಯ ನಿಲುವೇನೋ ಅನಿಸುತ್ತದೆ.

ಹೌದು, ಈ ಎಲ್ಲ ಕಥೆಗಳಲ್ಲಿ ನನಗೆ ಕೃಷ್ಣನ ಮುಖ್ಯವಾದ ಗ್ರಹಿಕೆ ಎಂದು ತೋರುವುದು, ಲೈಂಗಿಕ ಗಾಯ. ಭಾರತದ ಇಡೀ ಸಾಂಸ್ಕೃತಿಕ ಇತಿಹಾಸದಲ್ಲಿ ಅವರು ಅತ್ಯಂತ ಮುಖ್ಯವಾಗಿ ಅನುಭವಿಸುವ ಗ್ರಹಿಕೆ ಈ ಲೈಂಗಿಕ ಗಾಯವಾಗಿದೆ. "ಒಬ್ಬ ಬ್ರಾಹ್ಮಣ ಎಷ್ಟು ಜನ ಶೂದ್ರ ಕನ್ಯೆಯರನ್ನಾದರೂ ಉಪಪತ್ನಿಯರಾಗಿ ಇಟ್ಕೋ ಬಹುದು. ಆದ್ರೆ, ಮದುವೆ ಮಾಡ್ಕೋಬಾರ್ದು"–ಎಂಬಂತಹ ಮನುಸ್ಮೃತಿಯ ಸಾಮಾಜಿಕ ಕಟ್ಟಳೆ ಊರಿದ ಗಾಯ ಇದು. ಇದಕ್ಕೆ 'ಅಂಟಿದ ನಂಟಿನ ಕೊನೆಬಲ್ಲವ ರಾರು .' ಕಥೆಯ ನಾಯಕ ಅರ್ಥೈಸಿಕೊಳ್ಳುವ ರೀತಿ–'ನೋಡು ಶಾಲಿನಿ.... ಇಲ್ಲೇ ನನಗೆ ವೈದಿಕ ದ್ವೇಷ ಉಕ್ಕೋದು. ....ವೈದಿಕನ ಭೋಗಕ್ಕೆ ಶೂದ್ರ ಕನ್ಯೆ ಬೇಕು. ಮದುವೆ ಆದ್ರೆ ಶೂದ್ರಳ ಮಗನಿಗೆ ಇನ್ನೆಲ್ಲಿ ತನ್ನ ಶೋಷಣೆಯ ಬಂಡವಾಳವಾದ ವೇದ, ಧರ್ಮ ಮತ್ತು ಇರೋ ಆಸ್ತಿಯಲ್ಲೂ ಪಾಲು.... ಇದೆಲ್ಲ ಕೊಡಬೇಕಾಗುತ್ತೆ ಅಂತ ಮಾಡಿಕೊಂಡ ವಿಷಚಕ್ರವ್ಯೂಹ ಇದು.' ಈ ಲೈಂಗಿಕ ಗಾಯ ಅವನನ್ನು ಅದಕ್ಕೆ ಉತ್ತರವಾಗಿ ಸಾಧ್ಯವಾದಷ್ಟು ವೈದಿಕ ಕನ್ಯೆಯರನ್ನ ಹಾಳು ಮಾಡೋದು ಅಂತ ಪ್ರತಿಜ್ಞೆ ಮಾಡಿದೆ. ಅದನ್ನ ಸಾಕಷ್ಟು ಮಾಡಿಯೂ ಮಾಡಿದೆ....' ಎಂಬಂತಹ

ನಿಲುವು ನಡವಳಿಕೆಗೆ ದೂಡಿದೆ. ಆದರೆ ವಾಸ್ತವದಲ್ಲಿ ಸ್ಥಿತಿ ಇರುವಲ್ಲಿಯೇ ಉಳಿದು ಬಿಡುತ್ತದೆ. ಶಾಲಿ ಇವನಿಗೆ ಕೊಟ್ಟು ಪಡೆದು ಆದಮೇಲೆ ವೈದಿಕ ನಂಬಿಕೆಯ ಹುಡುಗನೊಬ್ಬನನ್ನು ಮದುವೆಯಾಗಿ ಅಮೆರಿಕೆಗೆ ಹಾರಿ ಹೋಗಿಬಿಡುತ್ತಾಳೆ. ಇವನು ಊರಿದ ಬೀಜ ನಿಷ್ಫಲವಾಗುತ್ತದೆ. 'ಮತ್ತೊಂದು ಪ್ರೇಮ ಪ್ರಸಂಗ'ದ ಪಲ್ಲವಿ ಕೂಡ ನಾಯಕನಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಮದುವೆಗೆ ಮಾತ್ರ ಸಮ್ಮತಿಸುವುದಿಲ್ಲ. ಬೇರೊಬ್ಬನನ್ನು ಮದುವೆಯಾದ ಅವಳು ವಿಮಾನದಲ್ಲಿ ವಿದೇಶಕ್ಕೆ ಹಾರಿಹೋಗಿ ಬಿಡುತ್ತಾಳೆ.

ಇವೆರಡೂ ಕಥೆಗಳಲ್ಲಿ ನಾಯಕನನ್ನು ಸೆಳೆದುಕೊಳ್ಳುವ ಹೆಣ್ಣುಗಳು ಬೇರೆಯವರೊಂದಿಗೆ ಮದುವೆಯಾದಮೇಲೆ ಕೂಡ ನಾಯಕನೊಂದಿಗೆ ತೋರುವ ಒಲವು ಒಟ್ಟು ವಿದ್ಯಾವಂತ ಸ್ತ್ರೀಲೋಕದ ಲಿಬರಲ್ ಮನೋಭಾವವನ್ನು ಸೂಚಿಸುವಂಥದಾಗಿದೆ. 'ಫೀನಿಕ್ಸ್'ನ ನಾಯಕನ ಇಷ್ಟದ 'ಅವಳು' ಮತ್ತು 'ಗೀಜಗನ ಗೂಡು' ಕಥೆಯ ರಶಿಯನ್ ಹೆಂಗಸು ಕೂಡ ಇಂಥ ಮನೋಭಾವದವರೇ ಆಗಿದ್ದಾರೆ. ಇದಕ್ಕೆ ಪ್ರತಿಯಾಗಿ ಗಂಡುಲೋಕ ಸಂಕುಚಿತ, ಮತ್ಸರದ ಮನೋಭಾವದ್ದಾಗಿದೆ. ಮುದುಕ ಪಾವೆಲ್ ರಶಿಯನ್ ಹೆಂಗಸನ್ನು ತನ್ನ ಹೆಂಡತಿ ಎಂದು ಅಧಿಕಾರ ಚಲಾಯಿಸಲು ಹೋಗಿ ಸಾಧ್ಯವಾಗದಾದಾಗ ಅವಳನ್ನು ಬಿಟ್ಟು ಹೊರಡುತ್ತಾನೆ. ಪೊವೆಲ್ ತಿರುಗಿ ಬಂದಾಗ ನಾಯಕ ಅಲ್ಲಿಂದ ಜಾಗ ಖಾಲಿಮಾಡಿ ಹೊರಡುತ್ತಾನೆ. ಆದರೆ ಮುದುಕ ಪೊವೆಲ್ ಮತ್ತು ತರುಣ ನಾಯಕ ಇವರಲ್ಲಿ ನಾಯಕನಿಗೇ ಹೆಚ್ಚು ಲಿಬರಲ್ ಆಗಿರಲು ಸಾಧ್ಯವಾಗುತ್ತದೆ.

ಸೆನ್ಸುಅಸ್ ಅನ್ನುವಂತಹ ದೇಹರಚನೆ ಹೊಂದಿರುವ ಈ ಕಥೆಗಳು ತಮ್ಮ ಮೂಲ ಕಲ್ಪನೆಯ ಲೈಂಗಿಕ ಗಾಯುವನ್ನು ಮೀರಿಬೆಳೆಯುವ, ಈ ಲೈಂಗಿಕ ಗಾಯಕ್ಕೆ 'ಆಂಟಿ ಡೋಸ್'ನ ನಿಲುವು ತಾಳುವುದನ್ನೂ ಕಾಣುತ್ತೇವೆ. ಶಾಲಿನಿಯೊಂದಿಗಿನ ಸ್ನೇಹ ಕಾಮದ ಸಂಬಂಧದಲ್ಲಿ ನಾಯಕನ ಮನೋಭೂಮಿಕೆಯಲ್ಲಿ ಹೊಸಬೆಳವಣಿಗೆಗಳು ಸಾಧ್ಯವಾಗುತ್ತವೆ. ಮದುವೆ ಎನ್ನುವದೊಂದು ಸಂತೆ, ಅಲ್ಲಿ ಪ್ರೇಮ ಕಾಮಕ್ಕಿಂತ ಕಾಮರ್ಸ್‌ನ ನಿಯಮಗಳು ಹೆಚ್ಚು ಅನ್ವಯವಾಗುತ್ತವೆನ್ನುವ ಸಮಾಜ ವ್ಯವಸ್ಥೆಯ ಬಗೆಗಿನ ತಿಳುವಳಿಕೆ ಉಂಟಾಗುತ್ತದೆ. ಅಲ್ಲದೇ ಯಾವ ಸಂಕುಚಿತ ಉದ್ದೇಶದೊಂದಿಗೆ ಶಾಲಿನಿಯೊಂದಿಗೆ ತನ್ನ ಸಂಬಂಧವನ್ನು ನಾಯಕನು ಏರ್ಪಡಿಸಿಕೊಂಡಿದ್ದನೋ ಅದು ಸಂಪೂರ್ಣವಾಗಿ ಪಲ್ಲಟಗೊಂಡುಬಿಡುತ್ತದೆ. ಹೆಣ್ಣು ಗಂಡಿನ ನಡುವಿನ ಪ್ರೇಮ ಕಾಮಗಳು ಅತ್ಯಂತ ವೈಯುಕ್ತಿಕವಾದ ಮೌಲ್ಯಗಳು ಮತ್ತು ಇವುಗಳನ್ನು ನಿಯಂತ್ರಿಸಲು ಹೊರಡುವ ವ್ಯವಸ್ಥೆ ಒಂದು ಕ್ರೈಸಿಸನ್ನು ನಿರ್ಮಿಸುತ್ತದೆ. ಇಂಥ ಕ್ರೈಸಿಸ್‌ಗೆ ಸಮಾಜದ ಪ್ರತಿಯೊಂದು ವರ್ಗವೂ ತನ್ನ ದೇಣಿಗೆ ಸಲ್ಲಿಸುತ್ತದೆ. ಗೌಡನೊಬ್ಬ

ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗುವುದನ್ನು ಬ್ರಾಹ್ಮಣ ಸಮಾಜ ಹೇಗೆ ಸಹಿಸುವುದಿಲ್ಲವೋ ಹಾಗೆಯೇ ಒಕ್ಕಲಿಗ ಸಮಾಜ ಕೂಡ ಸಹಿಸುವುದಿಲ್ಲ. ಶಾಲಿನಿಯೊಂದಿಗಿನ ಸ್ನೇಹವನ್ನು ಕಂಡು ನಾಯಕನ ಸಂಬಂಧಿ ಹುಡುಗಿಯೊಬ್ಬಳು ಮತ್ಸರದಿಂದ ಪ್ರತಿಕ್ರಿಯಿಸುತ್ತಾಳೆ. ಅವನ ಶೂದ್ರ ಸ್ನೇಹಿತರು ವೈಚಾರಿಕ ನೆಲೆಯಲ್ಲಿ ಅವನನ್ನು ವಿರೋಧಿಸುತ್ತಾರೆ. ಶಾಲಿನಿಯ ತಂದೆ ತಾಯಂದಿರು ಅವಳ ಚಲನವಲನಗಳನ್ನು ನಿರ್ಬಂಧಿಸಿ ಅವಳಿಗೆ ಬೇಗನೇ ತಮ್ಮ ಜಾತಿಯ ವರನೊಂದಿಗೆ ಮದುವೆ ಏರ್ಪಡಿಸುತ್ತಾರೆ.

ಕೃಷ್ಣನ ಇನ್ನೊಂದು ರೀತಿಯ ಕಥೆಗಳಲ್ಲಿ ಹಳೆ ಹೊಸದರ ಸಂಘರ್ಷ ಮತ್ತೆ ಮತ್ತೆ ಬರುತ್ತದೆ. ಸಾಯಲು ಹೊರಟ ಅಜ್ಜಿಯೋ, ತಾಯಿಯೋ– ಹಳ್ಳಿಯ ಹುಡುಗಿ, ಅಕ್ಕನ ಮಗಳನ್ನು ಮದುವೆಯಗಲು ನಾಯಕನನ್ನು ಒತ್ತಾಯಿಸುತ್ತಿರುತ್ತಾರೆ. ಆದರೆ ಇವನಿಗೆ ತನ್ನೊಂದಿಗೆ ಕಲಿಯುತ್ತಿರುವ ನಾಗರಿಕ ಹುಡುಗಿಯಲ್ಲಿ ಮನಸಿದೆ. ಈ ಪ್ರೇಮ ಎಷ್ಟು ತೀವ್ರವಾಗಿನೆಯೋ ಅಷ್ಟೇ ತೀವ್ರವಾಗಿದೆ ಹಳೆಯ ವ್ಯವಸ್ಥೆಯ ಪೋಷಕಗುಣ. ಅಪ್ಪ ಸತ್ತು ಹೋದಮೇಲೆ ಅಲ್ಲಿಲ್ಲಿ ದುಡಿದು ಹೊಟ್ಟೆಕಟ್ಟಿ ಬೆಳೆಸಿದ ಪ್ರೀತಿ ತನ್ನ ಇನ್ನೊಂದು ಪ್ರೀತಿಯ ಕುಡಿಯಾದ ಮಗಳ ಮಗಳನ್ನು ಇವನೊಂದಿಗೆ ಸೇರಿಸಬಯಸುತ್ತದೆ. ಈ ಹಳೆಯ ವ್ಯವಸ್ಥೆ ನೀಡಿದ ಮೌಲ್ಯಗಳೇ ನಾಯಕನ ಮನೋಭೂಮಿಕೆಯ ಹಾಸು ಹೊಕ್ಕುಗಳಾಗಿರುವುದರಿಂದ ಅವನಿಗೆ ಈ ಹಳತನ್ನು ಮೀರುವುದು ಅತ್ಯಂತ ಕಷ್ಟಕರವಾಗಿ ತೋರುತ್ತದೆ. ಈ ಮೌಲ್ಯಗಳ ಮೂಲಕವಾಗಿ ಅವನಲ್ಲಿ ಬೆಳೆದ ನೈತಿಕ ಪ್ರಜ್ಞೆ ಅವನನ್ನು ಕಾಡತೊಡಗುತ್ತದೆ. ಇವನ ನಿಲುವನ್ನು ವಿರೋಧಿಸಿ ಆತ್ಮಹತ್ಯೆ ಮಾಡಿಕೊಂಡ ಅಕ್ಕನ ಸಾವಿನ ನೈತಿಕ ಜವಾಬ್ದಾರಿಯ ಭಾರಕ್ಕೆ ಕುಸಿಯುವಂತಾಗುತ್ತದೆ. ಕತ್ತಲಿನಲ್ಲಿ ಹಿತ್ತಲಿನ ಹುಣಿಸೆಮರದಿಂದ ಕಪ್ಪು ಆಕೃತಿಯ ಅಕ್ಕನ ದೆವ್ವ ಬಂದು ಕಾಡತೊಡಗುತ್ತದೆ. ಹೀಗೆ ಎರಡು ತೀವ್ರ ಎಳೆತಗಳ ನಡುವೆ ಸಿಕ್ಕ ತಪ್ತನೀತ. ಸದ್ಯದ ಸಂಧಿಕಾಲದಲ್ಲಿನ ಪ್ರತಿಯೊಬ್ಬ ಸಂವೇದನಾಶೀಲನೂ ಇಂಥ ತಪ್ತನೇ ಆಗಿದ್ದಾನೆ. 'ನೆಲಗುಮ್ಮ', 'ತಪ್ತ' ಈ ಕಥೆಗಳು, ಮದುವೆ ಮೂಲಕವಾಗಿ ಏರ್ಪಡುವ ಇಂಥ ಸಂಘರ್ಷವನ್ನು ಚಿತ್ರಿಸುತ್ತವೆ.

ಒಂದು ಕುತೂಹಲದ ಅಂಶವೆಂದರೆ ಕೃಷ್ಣನ ಎಲ್ಲ ಕಥೆಗಳೂ ಪ್ರೇಮ, ಕಾಮ, ಮದುವೆ ಇವುಗಳ ಸುತ್ತಲೇ ಕಟ್ಟಿಕೊಳ್ಳುತ್ತವೆ. ('ಆಗಂತುಕ' ಮಾತ್ರ ಭಿನ್ನವಾದದ್ದು. ಆದರೆ ಇಲ್ಲಿ ಕೂಡ ಕಿಟ್ಟಿಯ ಮಾವ ಮಲ್ಲಪ್ಪನ ಹೆಂಡತಿ ಕಿರಾತಕಿಯಾಗಿದ್ದಾಳೆ. ಅವನನ್ನು ಬಿಟ್ಟು ಹೋದ 'ಮಗಳು' ಅವನ ಅಂತಿಮ ಸ್ಥಿತಿಯಲ್ಲೂ ಕೂಡ ಅವನನ್ನು ನೋಡಬರುವುದಿಲ್ಲ !) ಈ ಎಲ್ಲ ಕಥೆಗಳಲ್ಲಿ ಮದುವೆ ಒಂದು

ಕ್ರೈಸಿಸ್ ಆಗಿದೆ. ನಾಯಕನನ್ನು ತಪ್ತ ಸ್ಥಿತಿಗೆ ದೂಡಿದೆ. 'ತೊರೆ' ಕಥೆಯ ಲಕ್ಷ್ಮಿ–ಪ್ರಭು ಪರಸ್ಪರ ಇಷ್ಟಪಟ್ಟು ಮದುವೆಯಾಗದೇ ಹೋಗುತ್ತಾರೆ. ಗಂಡ ತೀರಿಹೋದ ಲಕ್ಷ್ಮಿ ಉರಿಯುತ್ತ ಉಳಿದರೆ, ತಾರಾಳೊಂದಿಗೆ ಪ್ರಭು ಇನ್ನೊಂದು ರೀತಿ ಉರಿಯುತ್ತ ಉಳಿಯುತ್ತಾನೆ. 'ಸೀಮಂತ'ದ ಪದ್ಮಳಿಗೆ ಮದುವೆಯಲ್ಲಿ ಫಲವಿಲ್ಲ. ಮದುವೆಯಾಚೆಗಿನ ಸಂಬಂಧದಲ್ಲಿ ಶ್ರೀಧರನಿಂದ ಫಲವತಿಯಾಗುವ ಅವಳ ಮನಸ್ಸಿನಲ್ಲಿ ಅನೈತಿಕತೆಯ ಮುಳ್ಳು ಸತತ ಚುಚ್ಚುತ್ತಲೇ ಇರುತ್ತದೆ. 'ಸಂಬಂಧ' ಕಥೆಯ ಲಲಿತಳ ದುರಂತಮಯ ಬದುಕು ಅವಳನ್ನು ಮದುವೆಯ ಮೂಲಕವಾಗಿಯೇ ಆವರಿಸಿಕೊಂಡದ್ದು. 'ಹುತ್ತ' ಕತೆಯ ಸುಮಿತ್ರಾಳ ತಾಯಿಯ ವಿಕ್ಷಿಪ್ತ ನಡವಳಿಕೆಗಳ ಹಿಂದೆ ನಿಷ್ಫಲಗೊಂಡ ಮದುವೆಯೇ ಇದ್ದಿರಬೇಕು. 'ಫೀನಿಕ್ಸ್', 'ಅಂಟಿದ ನಂಟಿನ ಕೊನೆ ..' ಕಥೆಗಳ ಬಗ್ಗೆ ಆಗಲೇ ಯೋಚಿಸಿದ್ದಾಗಿದೆ. 'ಶ್ರಾವಣ' ಕಥೆ ಕೂಡ ಈ ವಸ್ತುವನ್ನೇ ಹೊಂದಿದ್ದರೂ ಸ್ವಲ್ಪ ಬೇರೆಯಾಗಿದೆ. ಈ ದೇಹಕ್ಕೆ ಮನಸ್ಸಿಗೆ ಫಲಿಸುವ ಪ್ರೇಮ, ಸ್ವಲ್ಪ ತಡವಾಗಿಯಾದರೂ ಸರಿಯೇ–'ಶ್ರಾವಣ'ದಂತೆ ಬರಬೇಕೆನ್ನುವುದು–ಮದುವೆ ಅಂಥ ಶ್ರಾವಣವಾಗಬೇಕೆನ್ನುವುದು ಈ ಕಥೆಯ ಆಶಯವಾಗಿದೆ. ಈ ಶ್ರಾವಣ ಮಧ್ಯಮ ವರ್ಗೀಯ ನೀತಿಯ ಕಟ್ಟನ್ನು ಗಮನಿಸುವುದಿಲ್ಲ. ಇದು ಜಾತಿಯ ಕಟ್ಟನ್ನು ಗಮನಿಸುವುದಿಲ್ಲ. ಇದು ಪರಸ್ಪರ ಅರಳಿಸುವ ಸಂಬಂಧ ಸ್ಥಾಪಿಸುತ್ತದೆ. ಮಧ್ಯ ವಯಸ್ಸನ್ನು ತಲುಪುತ್ತಿರುವ ಶಕುಂತಲೆ ಇಂಥ ಶ್ರಾವಣವನ್ನು ಸ್ವೀಕರಿಸಲು ಸನ್ನದ್ಧಳಾಗುತ್ತಾಳೆ.

ವಿಶೇಷಾಂಕವೊಂದರಲ್ಲಿ ಪ್ರಕಟವಾಗಿ, ಅವರ ಯಾವ ಸಂಕಲನದಲ್ಲಿಯೂ ಸೇರದ 'ಸುಟ್ಟ ತಿಕವ ದೇವರು' ಕೂಡ ಒಂದು ವಿಷಮ ಮದುವೆಯನ್ನೇ ಕೇಂದ್ರವಾಗಿಸಿಕೊಂಡಿದೆ. ಈ ಕಥೆಯ ವೈಶಿಷ್ಟ್ಯವೆಂದರೆ ನೈತಿಕ ಪ್ರಶ್ನೆಯೊಂದನ್ನು ಅತ್ಯಂತ ನಿರ್ಲಿಪ್ತವಾಗಿ ಮಂಡಿಸಿರುವುದು. ಈ ಕಥೆ ಎತ್ತುವ ನೈತಿಕ ಪ್ರಶ್ನೆಗೆ ನಾವು ನಿರ್ದಿಷ್ಟವಾದ ಉತ್ತರವೊಂದನ್ನು ಕಂಡುಕೊಳ್ಳಲು ಸಾಧ್ಯವಾದರೆ ನಮ್ಮ ಮಾನವೀಯತೆಯ ವ್ಯಕ್ತಿತ್ವ ಖಂಡಿತವಾಗಿ ಊನಗೊಂಡಿದೆ ಎಂದಾಗುತ್ತದೆ. ಚಿನ್ನಮ್ಮ, ದೊಡ್ಡವರು (ಮರಪ್ಪ) ಮತ್ತು ಮಾದಪ್ಪ (ಸುಟ್ಟ ತಿಕದ ದೇವರು) ಇವರೆಲ್ಲರ ಬಗ್ಗೆ ನಮಗೆ ಮರುಕ ಹುಟ್ಟುತ್ತ ಇವರಾರ ಬಗೆಗೂ ನೈತಿಕ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಇಂಥ ಕಥೆಗಳು ನಮಗೆ ಜೀವನದ ಬಗ್ಗೆ ಅಪಾರ ತಿಳುವಳಿಕೆಯನ್ನು ಹೊಸ ಅರಿವನ್ನು ಹುಟ್ಟಿಸುವಂಥವು. ಇಂಥವು ಶ್ರೇಷ್ಠ ಕಥೆಗಳಾಗಿರುತ್ತವೆ.

ಆಲನಹಳ್ಳಿಯ ಇನ್ನೊಂದು ಉತ್ತಮ ಕಥೆ ಎಂದರೆ 'ಆಗಂತುಕ'. ಸಮೃದ್ಧ, ಬದುಕಿನ ನಡುವೆ ನಿರಾತಂಕವಾಗಿ ನುಸುಳುವ ಸಾವಿನ ಕಥೆಯಿದು. ಇದು ಚಿತ್ತಾಲರ 'ಪಯಣದ' ನೆನಪನ್ನು ತರುವುದಾದರೂ ಅದಕ್ಕಿಂತ ತುಂಬ ಭಿನ್ನವಾದ,

ಭಾರತೀಯವಾದ ಪರಿಸರದಲ್ಲಿ ಇದು ನೆಲೆಗೊಳ್ಳುತ್ತದೆ. ಚಿತ್ತಾಲರ ಕಥೆಯಲ್ಲಿ ಪಯಣಕ್ಕೆ ಹೊರಟ ವ್ಯಕ್ತಿ ಕಾಫ್ಕನ ಕಥೆಗಳ ನಾಯಕನ ರೀತಿಯ ನಗರ ಪ್ರಜ್ಞೆ ಯುವನು. ಅವನ 'ಪಯಣ'ದ ಅನುಭವ ಏರ್ಪಡುವುದು ಒಂದು ನಗರದ ಲಾಜಿಂಗಿನಲ್ಲಿ. ಆ ಸೇಲ್ಸ್‌ಮನ್ 'ಒರಗಿ'ದ್ದು ಕ್ರಿಸ್ತ ಸಿಲುಬೆಗೇರಿದ ಪೋಸಿನಲ್ಲಿ. ಆದರೆ ಆಗಂತುಕದಲ್ಲಿ ಈ ಸಾವಿನ ಪ್ರಜ್ಞೆ, ಅನುಭವ ಏರ್ಪಡುವದು ಮಲೆನಾಡಿನ ಸಮೃದ್ಧ ಪರಿಸರದ ಹಿನ್ನೆಲೆಯ ಹಳ್ಳಿಯ ಹುಡುಗ ಕಿಟ್ಟಿಯ ಪ್ರಜ್ಞಾಪರಿಧಿಯ ಮೂಲಕ. ಚಿತ್ತಾಲರ ಕಥೆ ಫ್ಯಾಂಟಸಿಯ ರೀತಿಯದಾದರೆ 'ಆಗಂತುಕ' ವಾಸ್ತವಾವಾದೀ ಕಥೆಯಾಗಿದೆ. 'ಪಯಣ' ಅತ್ಯಂತ ಚೊಕ್ಕವಾಗಿ ಜೀವನದ ಕ್ಷಣಭಂಗುರತೆಯನ್ನು ಸಾವಿನ ಎರಗುವಿಕೆಯನ್ನು ಚಿತ್ರಿಸುತ್ತದೆ. 'ಆಗಂತುಕ' ಇಂಥ ಅನುಭವದೊಂದಿಗೆ ಜೀವನದ ಬೇರೆ ನೆಲೆಯ ಅನುಭವಗಳನ್ನು ಕಂಡರಿಸುತ್ತ ಹೆಚ್ಚು ವ್ಯಾಪ್ತವಾಗುತ್ತದೆ. ಹೀಗಾಗಿ ಇವೆರಡೂ ನೀಡುವ ಅನುಭವಗಳ ಗುಣದಲ್ಲಿ ವ್ಯತ್ಯಾಸ ಉಂಟಾಗುತ್ತದೆ. 'ಪಯಣ'ದ ಆಳ ಹೆಚ್ಚು ಅಗಲ ಕಡಿಮೆ. 'ಆಗಂತುಕ'ದ್ದು ಆಳಕ್ಕಿಂತ ಅಗಲ ಹೆಚ್ಚು.

O

ಅಲನಹಳ್ಳಿ ಮತ್ತು ನಾನು ಒಂದೇ ರೀತಿಯ ಪರಿಸರದಿಂದ ಬಂದವರು. ಅದಕ್ಕೇ ನಾನು ಒಂದು ರೀತಿಯ ತಪ್ಪಿಸಿಕೊಳ್ಳುವ ನೆಲೆಯಲ್ಲಿಯೇ ಕೃಷ್ಣನ ಕಥಾ ಸಾಹಿತ್ಯವನ್ನು ಎದುರಿಸುತ್ತ ಬಂದಿದ್ದೇನೆ. ಅದಕ್ಕೇ 'ತಪ್ತ', 'ನೆಲಗುಮ್ಮ', ಕಥೆಗಳಿಗಿಂತ ಅವರ 'ಫೀನಿಕ್ಸ್', 'ಗೀಜಗನ ಗೂಡು'ದಂತಹ ಕಥೆಗಳನ್ನು ನಿರ್ಭಯವಾಗಿ ಹೆಚ್ಚು ಕುತೂಹಲದಿಂದ ಓದುವಂತಾಗುತ್ತದೆ. ಕೃಷ್ಣನ ಕಥೆಯ ನಾಯಕರು ತಮ್ಮ ತಾಯಂದಿರು, ಅಜ್ಜಿಯರು, ಮದುವೆಗಾಗಿ ಆರಿಸುವ ಹಳ್ಳಿಯ ಹುಡುಗಿ–ಅಕ್ಕನ ಮಗಳನ್ನು ತಿರಸ್ಕರಿಸಿ, ಪಟ್ಟಣದ ನಾಗರಿಕ ಜೊತೆಗಾರ್ತಿಯರನ್ನು ಆರಿಸಿಕೊಳ್ಳುವಂತಹವರಾದರೆ, ನನ್ನ ಕಥೆಯ ನಾಯಕರು ಕರುಳುಬಳ್ಳಿಯ ಅಕ್ಕನ ಮಗಳಲ್ಲಿ ಅನುರಕ್ತರಾಗುವವರು. ಕಥೆ ಹೇಳುವ ಅಜ್ಜನನ್ನು ನಿತ್ಯನನ್ನಾಗಿಸುವ, ಸಾವಿನ ಆಚೆಗಿಡಲು ಸಂಜೀವಿನಿ ಕಡ್ಡಿ ಹುಡುಕುವವರು. ಬದಲಾವಣೆಯಾಗುತ್ತಿರುವ ವ್ಯವಸ್ಥೆಗೆ ಬೆಂಕಿಯಿಟ್ಟು ಅದನ್ನು ಆರಿಸಲು ಒಡಕು ಬಿಂದಿಗೆಯಲ್ಲಿ ನೀರು ತಂದು ಸುರಿಯುವವರು. ನಾನು ಕೃಷ್ಣನ ಕಥೆಗಳನ್ನು ಪ್ರೀತಿಸುತ್ತೇನೆ–ಗೌರವಿಸುತ್ತೇನೆ ... ನಾನು ಕೃಷ್ಣನ ಕಥೆಗಳಿಂದ ದೂರವಿರಲು ಪ್ರಯತ್ನಿಸುತ್ತೇನೆ. ●

ನೆಲದ ದಟ್ಟವಾಸನೆಯಿರುವ ತನ್ನ ಬಾಲ್ಯದ ಸಂವೇದನೆಯನ್ನು, ತನ್ನ ಬಾಳನ್ನು ವಿವಿಧ ದಿಕ್ಕುಗಳಲ್ಲಿ ಹೊರಳಿಸುತ್ತಿರುವ ಪ್ರಬುದ್ಧ ಜೀವನದ ವೈಚಾರಿಕತೆಯನ್ನು ಒಟ್ಟಿಗೇ ಏಕಕಾಲದಲ್ಲಿ ಮಿಡಿಸಿಕೊಂಡು ತನ್ನ ನೈಜವಾದ ವ್ಯಕ್ತಿತ್ವಕ್ಕೆ ಅರ್ಥಪೂರ್ಣವಾದ ರೂಪವನ್ನು ಕೊಡುವುದು ಶ್ರೀಕೃಷ್ಣರ ಕಥನ ಕಲೆಯ ಮುಖ್ಯ ಹೋರಾಟವಾಗಿದೆ ಎನ್ನುವುದು ಈ ಕಥೆಗಳಿಂದ ಸ್ಪಷ್ಟವಾಗುತ್ತದೆ.

**—ಡಾ॥ ಯು. ಆರ್. ಅನಂತಮೂರ್ತಿ**

('ತಪ್ತ' ಕಥಾ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ)

# ಮಣ್ಣಿನ ಹಾಡು: ಒಂದು ಪತ್ರ

ಪ್ರಿಯ ನಾಗಭೂಷಣ,

'ಮಣ್ಣಿನ ಹಾಡು' ಪುಸ್ತಕ ಸಿಗುವುದೆ ಸ್ವಲ್ಪ ಕಷ್ಟ ಆಯಿತು. ಕೊನೆಗೂ ಸಿಕ್ಕಿತು ಅನ್ನಿ. ಒಂದೇ ಬಾರಿ ಪಟ್ಟಾಗಿ ಕೂತು ಅದರ ಎಲ್ಲ ಕವನಗಳನ್ನೂ ಓದಿದೆ. ಯಾಕೋ ಅವೆಲ್ಲ ತುಂಬ ಒಳ್ಳೆಯ ಪದ್ಯಗಳು ಅನ್ನಿಸಲಿಲ್ಲ. ಅವುಗಳ ಬಗ್ಗೆ ದೀರ್ಘವಾಗಿ ಬರೆಯಬೇಕು ಅನ್ನುವ ಉತ್ಸಾಹವೂ ಬರಲಿಲ್ಲ. ಹಾಗೇ 'ಕಾಡು ಗಿಡದ ಹಾಡು ಪಾಡು' ಕೂಡ ಓದಿದೆ. ಅದರಲ್ಲಿ ನನಗೆ ಮೊದಲಿನಿಂದ ತುಂಬ ಇಷ್ಟವಾದ ಚಿಟ್ಟೆ ಮತ್ತು ಮೋಷ್ಟರ ಪದ್ಯ ಇದೆ. ಪು.ತಿ.ನ. ಕುರಿತ ಸುಂದರ ಭಾವ–ಶಬ್ದ–ಚಿತ್ರ ಇದೆ. ಕರಿಯಜ್ಜ ಇದ್ದಾನೆ. ತಾಯಿ–ಮಗನ ಸಂಬಂಧದ ಪದ್ಯ ಇದೆ. 'ಮಣ್ಣಿನ ಹಾಡು' ಗಿಂತ 1973ರ ಎರಡನೆ ಸಂಕಲನದಲ್ಲೇ ಹೆಚ್ಚು ಒಳ್ಳೆಯ ಕವನಗಳಿವೆ.

ಕೃಷ್ಣ ನನಗೆ ಪರಿಚಯವಿರಲಿಲ್ಲ. ಎಲ್ಲೋ ಎರಡು ಬಾರಿ ಮಾತ್ರ ಅವರನ್ನು ಮಾತಾಡಿಸಿದ್ದೆ. ಆದರೆ ಕೃಷ್ಣನನ್ನು ಬಲ್ಲವರು ಆತನ ಬಗ್ಗೆ ಹೇಳುವುದನ್ನು ಕೇಳಿದರೆ ಕೃಷ್ಣ ಒಂದು ದಂತಕಥೆಯಾದ ಹಾಗೆ ಕಾಣಿಸುತ್ತದೆ. ಬರಹಗಾರರು, ಸಾಹಿತ್ಯಾಸಕ್ತರು, ಕೃಷ್ಣ ಅವರ ಗೆಳೆಯರು ಎಲ್ಲ ಆಡುವ ಮಾತುಗಳಿಂದ ಆತ ಅವರೆಲ್ಲರ ಮನಸ್ಸಿನಲ್ಲಿ ಮೆಚ್ಚುಗೆ ಆರಾಧನೆಯ ಭಾವಗಳನ್ನು ಹುಟ್ಟಿಸಿದ್ದು ಕಾಣುತ್ತಿದೆ. ಮತ್ತು ಕೃಷ್ಣನಂಥ ವ್ಯಕ್ತಿತ್ವ ತಮ್ಮದಾಗಲಿಲ್ಲವಲ್ಲ ಎಂಬ ಸಣ್ಣ ಹೊಟ್ಟೆಕಿಚ್ಚೂ ಇರಬಹುದೋ ಏನೋ. ಹುಮ್ಮಸ್ಸು, ಯಾವುದನ್ನೂ ಲೆಕ್ಕಿಸದ ಧೈರ್ಯ, ತನಗೆ ಅನಿಸಿದ್ದನ್ನು

ಹಾಗೇ ಆಡುವ ಮಾಡುವ ಧೈರ್ಯ, ಬಹುಶಃ ತುಂಬ ವರ್ಣರಂಜಿತ ವ್ಯಕ್ತಿಯಾಗಿದ್ದಿರ ಬಹುದು ಕೃಷ್ಣ. ಕೃಷ್ಣ ಅವರ ವ್ಯಕ್ತಿತ್ವ ತುಂಬ ಪ್ರಬಲವಾಗಿ, ಪ್ರಖರವಾಗಿ ಇನ್ನೂ ಅವರನ್ನು ಬಲ್ಲವರಲ್ಲಿ ಊರಿಕೊಂಡಿರುವುದು ಕಾಣುತ್ತಿದೆ. ಲೇಖಕನೊಬ್ಬನ ವ್ಯಕ್ತಿತ್ವ ಹೀಗೆ ಆವರಿಸಿಕೊಂಡಿರುವಾಗ ಆತನ ಕೃತಿಗಳ ಬಗ್ಗೆ ನಿಷ್ಠುರವಾಗಿ ಮಾತ ನಾಡುವುದು ಕಷ್ಟವಾಗುತ್ತದೆ. ಗಂಗಾಧರ ಚಿತ್ತಾಲರ ಬದುಕಿನ ದುರಂತದ ವಿವರ ಗಳು ಅವರ ಕವನಗಳ ಓದನ್ನೂ ಪ್ರಭಾವಿಸಿದ ಹಾಗೆ. ಚಿಕ್ಕ ವಯಸ್ಸಿನಲ್ಲೇ ತೀರಿ ಹೋದ ತೋರುದತ್‌ಳ ಬದುಕಿನ ವಿವರಗಳು ಅವಳ ಕಾವ್ಯದ ವಿಮರ್ಶೆಯನ್ನು ಪ್ರಭಾವಿಸಿದ ಹಾಗೆ–'ಅಕಾಲ ಮೃತ್ಯು' ಲೇಖಕನ ಕೃತಿಗಳ ಬಗ್ಗೆ ನಮ್ಮನ್ನು ಉದಾರವಾಗಿರುವಂತೆ ಒತ್ತಾಯಿಸುತ್ತದೆಯೋ ಹೇಗೆ ?

'ಮಣ್ಣಿನ ಹಾಡು' ಆಲನಹಳ್ಳಿ ಕೃಷ್ಣರ ಮೊದಲ ಕವನ ಸಂಕಲನವಲ್ಲವೆ ? 1966ರಲ್ಲಿ ಬರೆದದ್ದು. ಬಹುಶಃ ಆಗ ನಾನಿನ್ನೂ ಹತ್ತನೆ ತರಗತಿಯಲ್ಲಿದ್ದ ಚಿತ್ರ ದುರ್ಗದಲ್ಲಿ. ಆಗ ಇನ್ನೂ ನನಗೆ ನವ್ಯ, ನವೋದಯ ಇಂಥ ಏನೂ ಗೊತ್ತಿರಲೇ ಇಲ್ಲ. ಈಗ ಚರಿತ್ರೆಯ ಹಿನ್ನೋಟದಲ್ಲಿ ಅದು ನವ್ಯ ಕಾವ್ಯದ ಏರುಬ್ಬರದ ಕಾಲ ಅಂತ ಗೊತ್ತಾಗಿದೆ ಮತ್ತು ಕೃಷ್ಣ ಮೈಸೂರಿನವರಲ್ಲವೆ ? ಮೈಸೂರು ಕನ್ನಡ ನವ್ಯ ಕಾವ್ಯಕ್ಕೆ ಪ್ರಬಲ ವಿರೋಧದ ವಾತಾವರಣ ಹೊಂದಿದ್ದ ಊರಲ್ಲವೆ ? ಭವ್ಯ, ದಿವ್ಯ, ರಸಪ್ರಜ್ಞೆ, ಆನಂದಮಯ, ವಿಜ್ಞಾನಮಯ ಅಂಥ ಪದಪುಂಜಗಳಿಲ್ಲದೆ ಸಾಹಿತ್ಯ ವಾಗಲೀ, ಸಾಹಿತ್ಯ ಸೃಷ್ಟಿಯಾಗಲೀ ಸಾಧ್ಯವೇ ಇಲ್ಲ ಎಂದು ನಂಬುವ–ಈಗಲೂ ಅಂಥ ಮಂದಿ ಇದ್ದಾರೆ ತಾನೆ–ವಾಗಾಡಂಬರವೇ ಆಳವಾದ ಅನುಭವ ಅಂತ ನಂಬಿಸಿ ಕೊಳ್ಳುವ ಜನ ತುಂಬಿದ್ದ ಊರಲ್ಲವೆ ? ಮೊನ್ನೆ ಸಾಹಿತ್ಯ ಸಮ್ಮೇಳನದಲ್ಲಿ ನೀವೂ ಕಂಡಿರಲ್ಲ. ಅತ್ಯಂತ ಅ-ಸಾಹಿತ್ಯಕ, ಅ-ಸಂಸ್ಕೃತ ಸಾಹಿತಿ ದಳಪತಿಗಳು ಈಗಲೇ ಹೀಗೆ ಮೈಸೂರಲ್ಲಿ ತುಂಬಿದ್ದರೆ 66ನೆ ಇಸವಿಯಲ್ಲಿ ಇನ್ನು ಹೇಗೆ ಇದ್ದಿರಬಹುದು ? ಕನ್ನಡದ ಕೆಲವು ಅತ್ಯುತ್ತಮ ಮನಸ್ಸುಗಳು ಮೈಸೂರಿನಲ್ಲಿರುವುದು ನನಗೆ ಗೊತ್ತು. ಆದರೆ ಆ ಮನಸುಗಳೆಲ್ಲ ಸಾಹಿತ್ಯ ಅಧಿಕಾರ ಕೇಂದ್ರಗಳಿಂದ ತುಂಬ ದೂರದಲ್ಲಿ ಮೌನವಾಗಿ, ಸೂಕ್ಷ್ಮವಾಗಿ, ತಮ್ಮ ಪಾಡಿಗೆ ತಾವು ಇವೆ. 'ಮಣ್ಣಿನ ಹಾಡು' ಒಂದು shock ಆಗಿ, ಆಘಾತ ಆಗಿ, ಹೊಚ್ಚ ಹೊಸತನವುಳ್ಳ ಕವನ ಸಂಕಲನವಾಗಿ 66ರಲ್ಲಿ ಕಂಡಿರ ಬಹುದು. ಅದು ತೀರ ಸಹಜ.

ನವೋದಯ ಕಾವ್ಯ ಯಾವುದನ್ನು ಅವಾಚ್ಯವೆಂದು ಭಾವಿಸಿತ್ತೊ ಅದನ್ನು ಕೃಷ್ಣ ತುಂಬ ತೀಕ್ಷ್ಣವಾದ ಭಾಷೆಯಲ್ಲಿ ವಾಚ್ಯವಾಗಿಸುತ್ತ–ಸ್ವಲ್ಪ ತಾಳಿ ಇಲ್ಲಿ ನನ ಗೊಂದು ಪ್ರಶ್ನೆ ಹುಟ್ಟುತ್ತಿದೆ–ನವ್ಯವು ಕೃಷ್ಣರನ್ನು ಪ್ರಭಾವಗೊಳಿಸಿತೊ ಅಥವ ಅವಾಚ್ಯವನ್ನು ಕಾವ್ಯವಿಷಯವಾಗಿಸಿಕೊಳ್ಳುವ ಸ್ವಾತಂತ್ರ್ಯ ಸಿಗುತ್ತದೆ ಇಲ್ಲಿ ಅಂತ ಕೃಷ್ಣ ನವ್ಯ ಮಾರ್ಗಕ್ಕೆ ಒಲಿದರೋ ?

ಅಪಾಚ್ಯವೆಂಬ ಮಾತು ಬಳಸಿದೆ. ನನಗೇನು ಹಾಗೆ ಕಾವ್ಯ ಸದಾ ಮಡಿ ಮಡಿಯಾಗೇ ಇರಬೇಕೆಂಬ ಆಸೆಯೇನೂ ಇಲ್ಲ. ಆದರೆ ಇದುವರೆಗೂ ಅಪಾಚ್ಯವಾದದ್ದನ್ನು ಪ್ರಖರವಾಗಿ ಭಾಷೆಯಲ್ಲಿ ಹೇಳಿಬಿಟ್ಟರೆ ಏನು ಸಾಧಿಸಿದ ಹಾಗಾಯಿತು ? ಅಲ್ಲ ನಾಗಭೂಷಣ, ನಮ್ಮ ಹಳಗನ್ನಡ ಕಾವ್ಯಗಳಲ್ಲಿ ಸಂಭೋಗ ಶೃಂಗಾರದ ವಿಸ್ತಾರವಾದ ವಿವರ ವಿವರವಾದ ವರ್ಣನೆಗಳನ್ನು ಕಾಣುತ್ತೇವಲ್ಲ, ಅವಕ್ಕೆ ಏನು ಬೆಲೆ ? ಎಲ್ಲೊ ಸಂತನಂಥವನು ಸಂಭೋಗವನ್ನೂ, ಸಾವನ್ನೂ, ಮುಕ್ತಿಯನ್ನೂ, ಯಾವುದನ್ನೂ ಯಾವುದರಿಂದಲೂ ಬೇರ್ಪಡಿಸಲು ಆಗದಂತೆ ಬೆರೆಸಿ ನಿಜವಾದ ಧಾರ್ಮಿಕ ಕಾವ್ಯ ಬರೆಯಬಹುದು. ಅದಲ್ಲ. ಸುಮ್ಮನೆ ಶೃಂಗಾರಕ್ಕೆಂದೇ ಶೃಂಗಾರದ ವಿವರ ಬರುತ್ತಲ್ಲ, ಅದನ್ನು ತುಂಬ ಒಳ್ಳೆಕಾವ್ಯ ಅಂತ ಒಪ್ಪುತ್ತೇವೆಯೆ ?

ಮಣ್ಣಿನ ಹಾಡು ಕೂಡ ದೈಹಿಕ ಕಾಮದ ವಿವರಗಳನ್ನು ತುಂಬ ದಟ್ಟವಾಗಿ ತುಂಬಿಕೊಂಡಿದೆ. ಅಷ್ಟೆ. ಅದರಾಚೆಗೆ ಏನಾದರೂ ಇದೆ ಅಂತ ಕಾಣುವುದಿಲ್ಲ. ಅಪರೂಪಕ್ಕೆ ಒಂದೆರಡು ಬೇರೆ ವಿಷಯ ಕುರಿತಂಥ ಪದ್ಯ ಇದ್ದ ಹಾಗೆ ಕಾಣುತ್ತದೆ: 'ಬೇಡ', 'ಬಿಡು ನನ್ನ', 'ಸಂಜೆ' ಥರ. ಆದರೆ ವಿಷಯವನ್ನು ವ್ಯಕ್ತಮಾಡುವುದಕ್ಕೆ ಕಾಮವೇ ಮಾಧ್ಯಮ. ಕಾಮ ಈ ಸಂಕಲನದಲ್ಲಿ ವಿಷಯವೂ ಹೌದು, ಮಾಧ್ಯಮವೂ ಹೌದು, ಕವಿಯ ತತ್ತ್ವವೂ ಹೌದು– ಅಂದರೆ ಮಣ್ಣಿನ ಹಾಡಿನಲ್ಲಿ ಏನಾದರೂ ತತ್ತ್ವ ಕಾಣಲು ಸಾಧ್ಯ ಆಗುವುದಾದರೆ. ಹೀಗೇ ಒಂದೇ ವಿಷಯಕ್ಕೆ ಕಟ್ಟುಹಾಕಿಕೊಂಡು ಬೇರೆ ಎಲ್ಲವನ್ನೂ, ಅವೆಲ್ಲ ಇರುವುದು ತನಗೇ ಗೊತ್ತೇ ಇಲ್ಲ ಎಂಬಂತೆ ಬರೆವ, ಆಯ್ದ ವಿಷಯದಲ್ಲಿಯಷ್ಟೆ ಆಸಕ್ತವಾದ (ವಿಷಯಾಸಕ್ತ !) ಕಾವ್ಯ ತುಂಬ ಕುಬ್ಜ, ಸಂಕುಚಿತ ಆಗಿಬಿಡುತ್ತದೆ. ಅದಕ್ಕೆ ಆಗಲೇ ಹೇಳಿದ್ದು, 73ನೇ ಇಸವಿಯ 'ಕಾಡುಗಿಡದ ಹಾಡು ಪಾಡು' ಸ್ವಲ್ಪ ಹೆಚ್ಚು ಕುತೂಹಲದ ಸಂಕಲನ ಅಂತ.

ನವ್ಯದವರು ಕಾವ್ಯ ಅಂದರೆ ಏನೆಂದಾದರೂ ಹೇಳಲಿ. ನವ್ಯ ಕವಿ ಅಂತ ಪರಿಗಣಿತವಾಗಿರುವ ಕೃಷ್ಣರಿಗೆ ಕಾವ್ಯ ಸ್ವಂತ ವ್ಯಕ್ತಿತ್ವದ ಅಭಿವ್ಯಕ್ತಿಯೇ ಆಗಿರುವಂತೆ ಕಾಣುತ್ತದೆ. ಅವರ 18ರ ಹರೆಯದ ವಿಷಯಾಸಕ್ತಿ ಪದ್ಯರೂಪ ತಳೆದಿದೆ.

ಆದರೂ ಕೃಷ್ಣರ ಈ ಕವನಗಳು ಸ್ವಲ್ಪವಾದರೂ ರುಚಿ ಹುಟ್ಟಿಸುವುದಕ್ಕೆ ಕಾರಣ–ಕೃಷ್ಣರಲ್ಲಿರುವ ಸಹಜ ಸಾಮರ್ಥ್ಯ. ಇವತ್ತು, ಈಗ ಸುಮ್ಮನೆ ಅನುಭವದ ನೆನಪಿನಿಂದ ಹೇಳುವುದಾದರೆ ಚನ್ನಯ್ಯನವರ 'ಕಾಮ' ಕವನಗಳಿಗಿಂತ ಇವು ಚೆನ್ನಾಗಿವೆ ಅನ್ನಿಸುತ್ತದೆ. ಅತಿಯುದ್ವೇಗ, ಉನ್ಮತ್ತತೆ, ಚಪಲ ಇವನ್ನು ನಮಗೂ ಆಗಾಗ ತಲುಪುವಂತೆ ಬರೆಯಬಲ್ಲರಲ್ಲ, ಅದರಿಂದ ಕೃಷ್ಣರ ಕವನ ವಾಸಿ ಅನ್ನಿಸೀತು:

ಪರಿಧಿಯಾಚಿನ ಕ್ಷೀರಸಾಗರ ತಟಕೆ
ನಿಂತಲ್ಲೆ ಜಿರಾಫೆ ಕತ್ತೆತ್ತಿ ಚಾಚುತ್ತಿರುವ

ನಾನೊಂದು–

ಸಂಕುಚಿತ ವಿಷವೃತ್ತದೊಳು ಚಿರಬಂಧಿತ ಕೇಂದ್ರಬಿಂದು

'ಸೆರೆ' ಪದ್ಯದ ಈ ಸಾಲುಗಳು ಈ ಸಂಕಲನದ ಎಲ್ಲ ಕವನಗಳ ನಾಯಕ ಗಂಡಿನ ವ್ಯಕ್ತಿತ್ವವನ್ನು ಚಿತ್ರಿಸುತ್ತವೆ.

ಇಲ್ಲಿನ ಗಂಡಿಗೆ ಸಮಾಜ ಒಪ್ಪಿರುವ ನೀತಿಯ ಬಗ್ಗೆ ರೋಷ ಇದೆ. ತಿರಸ್ಕಾರ ಇದೆ. ಆ ನೀತಿ ಕಾವ್ಯಕ್ಕೆ ಹಾಕಿರುವ ಕಟ್ಟುಪಾಡಿನ ಬಗ್ಗೆ ಸಿಟ್ಟು ಇದೆ. 'ಪ್ರತಿಜ್ಞೆ' ಪದ್ಯ ನೋಡಿ ಬೇಕಾದರೆ. ದೇಹಸುಖ ಅನುಭವಿಸಬೇಕು. ಅದೇ ನಿಜ. ಅದಕ್ಕೆ ನೀತಿ ಇಲ್ಲ. ಆದರೆ ನೀತಿ ಸಮಾಜದಲ್ಲಿ ಇದೆಯಲ್ಲ. ಅದು ಬರೀ ಗಂಡು ಹೆಣ್ಣಿನ ದೇಹ ಸಂಬಂಧವನ್ನು ಕೊಳಕು ಆಗುವಂತೆ ಮಾಡುತ್ತದೆ. 'ಬಿಟ್ಟು ಬಿಡು ನನ್ನ' ಸ್ವಾತಂತ್ರ್ಯವನ್ನು ಕೋರಿದರೂ ಅದು ನೆಮ್ಮದಿಯ, ಅಪಾರ ಸುಖದ, ಕಾಮ ಸುಖದ, ಸ್ವಾತಂತ್ರ್ಯದ ಬಯಕೆ. ಹಾಗೆಯೇ ವ್ಯಕ್ತಿಯಾಗಿ ನೀತಿಯನ್ನು ಪೂರ್ತಿ ಮೀರಲಾಗದ್ದರಿಂದ ತನ್ನನ್ನು ತಾನು ನೀಚ, ಕೀಚಕ, ನಾಯಿ ಅಂತ ಕರೆದುಕೊಳ್ಳುವ ಹೀನತೆಯೂ ಬಂದುಬಿಡುತ್ತದೆ. ನೀತಿಯ ಹಂಗಿಲ್ಲದ ಸ್ವಾತಂತ್ರ್ಯ–ಕಾಮದಲ್ಲಿ ಸಿಕ್ಕೀತೆ ? ಅಥವ ನೀತಿಯ ಹಂಗಿಲ್ಲದೆ ಕಾಮ ಸುಖ ಪಡೆವ ಅಪೇಕ್ಷೆ ಈ ಕವಿಯ ಏಕೈಕ ಅಪೇಕ್ಷೆ.

ಈ ಅಪೇಕ್ಷೆ ಬೇರೆ ಬೇರೆ ಅಲಂಕಾರಗಳಲ್ಲಿ ರೂಪಗಳಲ್ಲಿ ವ್ಯಕ್ತವಾಗಿದೆ. ಗೂಳಿ, ನಾಯಿ, ಹಾವು–ಇಂಥವು ನೀತಿ ಕಾಡಿದಾಗ ಬರುವ ಹೋಲಿಕೆ ರೂಪಕಗಳಾದರೆ, ಜಿಂಕೆ, ಮೊಲ, ಮಳೆ ಇಂಥವು ನೀತಿ ಮರೆತ ಕ್ಷಣದ ಸುಖಕ್ಕೆ ಹೋಲಿಕೆಗಳು. ಕೀಚಕ ಮನ, ಸಿಳ್ಳೆ ಚಾಟಿ, ಕೊಬ್ಬಿದ ತೋಳ/ತೆಕ್ಕೆ, ಪೆಪ್ಪರುಮೆಂಟಿನಂಥ ಅಲಂಕಾರಗಳು !

ಸರಿ. ಇಡೀ ಸಂಕಲನದಲ್ಲಿ ಹೆಣ್ಣನ್ನು ಕಾಣುವ ದೃಷ್ಟಿ ಇದೆಯಲ್ಲ ಅದು ತುಂಬ ಸಂಕುಚಿತ, ಅನಾರೋಗ್ಯಕರ, ಗಂಡು ದೃಷ್ಟಿ. ಭ್ರಮಾಧೀನ ದೃಷ್ಟಿ. ಇಲ್ಲಿ ಬರುವ ಹೆಣ್ಣುಗಳಿಗೆ ಮನಸ್ಸೇ ಇಲ್ಲ, ವ್ಯಕ್ತಿತ್ವವೇ ಇಲ್ಲ. ಇರುವುದೆಲ್ಲ ಕಟಿ, ತುಟಿ, ಮೊಲೆ, ಯೋನಿಗಳಷ್ಟೆ. ಹಾಗೊಂದು ವೇಳೆ ಮನಸ್ಸಿದ್ದರೂ ಅದರ ತುಂಬ ಅತೃಪ್ತ ಕಾಮ ವಾಂಛೆಯಷ್ಟೆ ಇದೆ. 'ಕಾಮಿನಿಯ ಭಗ್ನ ಸ್ವಪ್ನ'ವೋ, 'ಅವಳ ಗಂಡ ಸತ್ತಾಗ'ನೋ ಬೇಕಾದರೆ ನೋಡಿ. ಹೆಣ್ಣನ್ನು ಕೇವಲ ಇಷ್ಟಕ್ಕೆ, ಗಂಡಿನ ಮೈಸುಖಕ್ಕೆ ಒದಗುವ ವಸ್ತುವಾಗಿ ಕಾಣುವ ನೋಟ ಅ-ಮಾನುಷ ಅನ್ನಿಸುತ್ತದೆ ನನಗೆ. ಇಂಥದ್ದನ್ನು ದಾಟಿದ್ದು, ಸ್ವಲ್ಪ ಮಟ್ಟಿಗಾದರೂ ಅವರ ಎರಡನೆಯ ಕವನ ಸಂಕಲನದಲ್ಲಿ.

ಆಲನಹಳ್ಳಿ ಕೃಷ್ಣರ ಕಥೆಗಳು, ಕಾದಂಬರಿಗಳು ಇನ್ನೂ ಹೆಚ್ಚು ಸಂಕೀರ್ಣ, ಹೆಚ್ಚು ಪ್ರಬುದ್ಧ. 'ಮಣ್ಣಿನ ಹಾಡು' ಹೆಣ್ಣನ್ನು ಕುರಿತ ಧೋರಣೆಯಿಂದಾಗಿ, ಕಾಮ ಸುಖದ ಏಕೈಕ ವಿಷಯಕ್ಕಷ್ಟೆ ಬದ್ಧವಾದದ್ದರಿಂದಾಗಿ, ಅದರಿಂದಾಗಿ ಸಂಕುಚಿತ

ವಾಗುವ ದೃಷ್ಟಿಯಿಂದಾಗಿ, ಕೇವಲ ಸುಂದರ ಅಲಂಕಾರದ ಮಾತುಗಳಾಗಿ ಕಾಣುತ್ತವೆ. ಮನಸ್ಸನ್ನು ತುಂಬುವ ಕಾವ್ಯ ಆಗುವುದಿಲ್ಲ. ನವ್ಯ ಮನೋಧರ್ಮ ಹೇಗೆ ಪ್ರಕಟ ವಾಗಿದೆ, ನವೋದಯದ ದೃಷ್ಟಿ ಹೇಗೆ ಇನ್ನೂ ಈ ಪದ್ಯಗಳಲ್ಲಿ ಉಳಿದುಕೊಂಡೇ ಇವೆ ಇತ್ಯಾದಿ ಒಣ ವಿಮರ್ಶೆಯ ಮಾತು ಬೇಕಿಲ್ಲವೆನಿಸುತ್ತದೆ.

ಕೃಷ್ಣ ಮುಂದೆ ಬರೆದ ಸಾಹಿತ್ಯಕೃತಿಗಳ ಆರಂಭ ಬಿಂದುವಾಗಿ 'ಮಣ್ಣಿನ ಹಾಡು'ಗೆ ಬೆಲೆ ಕೊಡೋಣವೇ ? ಇದ್ದೀತು. ಬೇರೆ ಬೇರೆ ಕಾರಣಕ್ಕೆ ಬೇರೆ ಬೇರೆ ಯವರಿಗೆ 'ಮಣ್ಣಿನ ಹಾಡು' ಇಷ್ಟವಾದರೆ ಆಗಲಿ ಅಥವಾ ಇಲ್ಲಿನ ಕವನಗಳಲ್ಲಿ ಹದಿ ಹರೆಯದ ಹುಮ್ಮಸ್ಸು, ಉನ್ಮತ್ತತೆ ತೀವ್ರವಾದ ಪ್ರಾಮಾಣಿಕತೆಯಲ್ಲಿ ವ್ಯಕ್ತವಾಗಿದೆ ಅನ್ನಲೇ ? ಆದರೆ ಕೇವಲ ಪ್ರಾಮಾಣಿಕತೆಯಷ್ಟೆ ಒಳ್ಳೆಯ ಕಾವ್ಯ ಆಗಲಾರದು. ಕವನಗಳಾಗಿ ಅಥವ ಬದುಕನ್ನ ಕುರಿತು ಒದಗಿಸುವ ನೋಟಗಳಾಗಿ 'ಮಣ್ಣಿನ ಹಾಡು' ತುಂಬ ಗೌಣ. ಅವರ ಮಿಕ್ಕ ಕೃತಿಗಳ ಬಗ್ಗೆ ಬೇರೆಯವರು ಹೇಗೂ ಬರೆಯುತ್ತಾರಲ್ಲವೆ.

ಈ ಪತ್ರವನ್ನು ಪ್ರಕಟಿಸುವಂತಿದ್ದರೆ ಪ್ರಕಟಿಸಿ. ನಾನು ಕೇಳಿ ಬಲ್ಲ ಕೃಷ್ಣರ ವ್ಯಕ್ತಿತ್ವ ನನಗೂ ತುಂಬ ರೋಚಕವಾಗಿ ಕಾಣುತ್ತದೆ. ಅವರ ಕಥೆ, ಕಾದಂಬರಿಗಳನ್ನು ತುಂಬ ಇಷ್ಟಪಟ್ಟಿದ್ದೇನೆ. ಆದರೆ 'ಮಣ್ಣಿನ ಹಾಡು'– ಊಹುಂ, ಇಲ್ಲ. ●


**—ಓ. ಎಲ್. ನಾಗಭೂಷಣಸ್ವಾಮಿ**

ಇವುಗಳಲ್ಲಿ ಉಕ್ಕಿ ಮೊರೆಯುತ್ತಿರುವುದು ಒಂದೇ ವಿಷಯದ ಬಗೆಗಿನ ಉತ್ಕಟ ಭಾಗ ವಾದುದರಿಂದ ಇವುಗಳ ಬಗ್ಗೆ ಪ್ರತ್ಯೇಕ ಬಿಡಿಸಿ ಹೇಳಬೇಕಾದುದು ಕಡಮೆ ಎಂದು ನನ್ನ ಭಾವನೆ. ಅದೇನೇ ಇದ್ದರೂ ಅನುಭವದ ಬಿಸಿಯನ್ನು ಆರಗೊಡದೆ, ಕಸುವುಳ್ಳ ಭಾಷೆಯಲ್ಲಿ ಹಿಡಿದಿಟ್ಟು ರಂಗು ಗೊಳಿಸಿಕೊಟ್ಟಿರುವಲ್ಲಿ ನಿಮ್ಮ ವಿಶೇಷತೆ ಇದೆ. ಇಡೀ ಕವನವನ್ನು ಒಂದು ಪ್ರತಿಮೆಯನ್ನಾಗಿ ಕಡೆ ದಿಡುವಲ್ಲಿಯ ನಿಮ್ಮ ಪ್ರಯತ್ನ ಮೆಚ್ಚುವಂತಹದು. ರತಿಗೆ ಸಂಬಂಧಪಟ್ಟ ಉತ್ಸಾಹ, ಉದ್ರೇಕ, ಉನ್ಮತ್ತತೆಗಳ ಅಭಿವ್ಯಕ್ತಿಯಲ್ಲಿ ಬಾಳಿನ ಒಂದು ಅಮೂಲ್ಯವಾದ ಶಕ್ತಿಯನ್ನು ಕಂಡುಕೊಳ್ಳುವ ಪ್ರಾಮಾಣಿಕತೆಯೂ ಇಲ್ಲಿ ಕಂಡು ಬರುತ್ತದೆ.

ಕಾಮವನ್ನು ಹೊರತುಪಡಿಸಿ ಬೇರೆ ವಸ್ತುವನ್ನು ಆರಿಸಿಕೊಂಡಾಗ ನಿಮ್ಮ ಕವಿತೆಯ ರೂಪ ಧಾರಣೆ ಹೇಗಿರುತ್ತದೆಂಬುದನ್ನು ನೋಡುವ ಅವಕಾಶವನ್ನು ನೀವು ಓದುಗರಿಗೆ ಒದಗಿಸಿ ಕೊಡುತ್ತೀರೆಂದು ಆಶಿಸಿದ್ದೇನೆ.

"ಕಗ್ಗಲ್ಲ ಬಸಿರನ್ನೆ ಕೊರೆ ಕೊರೆದು/ಪಾತಾಳಗಂಗೆ ಹೊರಗುಕ್ಕಿಸದೆ ಬಿಡಲಾರೆ" ಎಂಬ ನಿಮ್ಮ ಪ್ರತಿಜ್ಞೆ ತಾರುಣ್ಯಕ್ಕೆ ಸಹಜವಾದುದೇ. ಆದರೆ ಈ ನೀರೂ ಈ ಮೊದಲು ಮುಗಿಲಿನಿಂದ ಸುರಿದು ನೆಲದಲ್ಲಿ ಇಂಗಿದುದು ಎಂಬ ಪ್ರಜ್ಞೆ ನಮಗಿರಬೇಕಷ್ಟೆ. ಅಂತು 'ಮಣ್ಣಿನ ಹಾಡು' ಹೊಸ ಕಾವ್ಯದ ಒಗರನ್ನೂ, ಹೊಗರನ್ನೂ ಒಳಗೊಂಡ ಒಳ್ಳೆಯ ಕಾಣಿಕೆ.

**—ಚೆನ್ನವೀರ ಕಣವಿ** (ಕೃಷ್ಣನಿಗೆ ಬರೆದ ಪತ್ರವೊಂದರಲ್ಲಿ)



ಕೃಷ್ಣನ ಅಪೂರ್ಣ ಕೃತಿಯೊಂದರ ಹಸ್ತಪ್ರತಿ

ಸ್ನೇಹ

Here comes, strutting the scene, spilling self confidence all over the place, bursting with Poetic enterprise, ShriKrishna Alanahally, Kannada literatuere's irrestible baby elephant. This man is himself a piece of poetry. SriKrishna is lovable. A literature which can afford to let the Krishna be themselves is bound to be strong and sound.

—*Prof. Lotha Lutzer*

# ವಿದ್ಯಾರ್ಥಿ ಮಿತ್ರ

ಶ್ರೀಕೃಷ್ಣ ಆಲನಹಳ್ಳಿ ಬಗೆಗಿನ ನನ್ನ ಅನುಭವಗಳು ಒಂದು ರೀತಿಯಲ್ಲಿ ಪಳೆಯುಳಿಕೆಯಾಗಿರುವ ಹಳೆಯ ಅನುಭವಗಳು (Fossilised Experiences). ಸುಮಾರು ೧೫ ವರ್ಷಗಳ ಹಿಂದಿನ ಅವಧಿಗೆ ಸಂಬಂಧಪಟ್ಟ ಅನುಭವಗಳು ಇಂದಿಗೂ ಹಾಗೆಯೇ ಹಸಗೆಡದೆ ಹೊಸತೆಂಬ ಭ್ರಮೆಯನ್ನು ಉಂಟು ಮಾಡುತ್ತ ಉಳಿದು ಕೊಂಡಿವೆ. ಈ ೧೦–೧೮ ವರ್ಷಗಳ ಅವಧಿಯಲ್ಲಿ ನನ್ನ ಮತ್ತು ಶ್ರೀಕೃಷ್ಣ ಆಲನ ಹಳ್ಳಿಯ ಪರಸ್ಪರ ಭೇಟಿ ಅಷ್ಟಾಗಿ ಇರಲಿಲ್ಲ. ಆದ್ದರಿಂದ ನನ್ನ ಮನಸ್ಸಿನಲ್ಲಿ ಯಾವ ಅನುಭವಗಳೂ ಆಳವಾಗಿ ಇತ್ತೀಚಿನ ದಿನಗಳ ಬಗೆಗೆ ದಾಖಲುಗೊಂಡಿಲ್ಲ. ಕೆಲವೊಮ್ಮೆ ಆತನನ್ನು ನಾನು ನೋಡಬೇಕೆಂದು ಹಳೆಯ ಸಹಜ ಪ್ರೇರಣೆಯಂತೆ–ಅನಿಸುತ್ತಿತ್ತು. ಆ ತುಡಿತ ತೀವ್ರವಾಗಿರಲಿಲ್ಲವೋ ಏನೋ ; ಕೆಲವು ತಿಂಗಳ ಹಿಂದೆ ಆಲನಹಳ್ಳಿಯ "ಭುಜಂಗಯ್ಯನ ದಶಾವತಾರಗಳು" ಕಾದಂಬರಿಯನ್ನು ಓದಲು ಪ್ರಾರಂಭಿಸಿದ್ದೆ; ಆಗಲೂ ಆ ತುಡಿತ ಬಂತು. ಆದರೆ ಅದು ಕೈಗೂಡಿದ್ದು ಅಕಾಲಮರಣಕ್ಕೆ ತುತ್ತಾದ ಶ್ರೀಕೃಷ್ಣ ಆಲನಹಳ್ಳಿಯ ಅಂತಿಮ ದರ್ಶನವನ್ನು ಪಡೆಯಲು ಹೋದಾಗ ಮಾತ್ರವೆ. ಕಡೆಗೂ ಜೀವಂತ ಕೃಷ್ಣನನ್ನು ಆತನ ಮನೆಯಲ್ಲಿಯೇ ಗೃಹಸ್ಥನಾಗಿ ನೋಡಲಾಗಲಿಲ್ಲ. ಮುಂದೆಲ್ಲೊ ಸಂಧಿಸಬಹುದು, ಅಷ್ಟೆ.

೧೯೬೪ನೆಯ ಇಸವಿಯ ಶೈಕ್ಷಣಿಕ ವರ್ಷದ ಪ್ರಾರಂಭದ ದಿನ–ಪ್ರಾಯಶಃ ಜುಲೈ ತಿಂಗಳ ಒಂದು ದಿವಸ. ಮಹಾರಾಜ ಕಾಲೇಜಿನ ಕನ್ನಡ ಐಚ್ಛಿಕ ವಿಷಯದ ವಿದ್ಯಾರ್ಥಿಗಳನ್ನೆಲ್ಲ ಎದುರುಗೊಳ್ಳುವ ದಿನ ಅದು. ನಮ್ಮ ವಿಭಾಗದಲ್ಲಿ ಆಗ ಸುಮಾರು ೮ ಜನ ಅಧ್ಯಾಪಕರಿದ್ದರು. ಅವರಿಗೆಲ್ಲ ಈ ಹೊಸಬರನ್ನು ಎದುರು ಗೊಳ್ಳುವ ಉತ್ಸಾಹ. ೩ ವರ್ಷದ ವಿದ್ಯಾರ್ಥಿಗಳನ್ನೂ ಒಂದೆಡೆ ಕೂಡಿಸಿ ಅವರಿಗೆ ಅವರ ಅಧ್ಯಯನ ವಿಷಯದ ಬಗೆಗೆ ಒಂದು ಪಕ್ಷಿನೋಟವನ್ನು ಕೊಡುವ, ಧೈರ್ಯವನ್ನು ಮೂಡಿಸುವ, ಆದರ್ಶಗಳನ್ನು ಚಿಗುರಿಸುವ ಕಾರ್ಯಕ್ರಮ

ವನ್ನು ಆ ತಿಂಗಳು ಇಟ್ಟುಕೊಂಡೆವು. ಅದಕ್ಕೆ ಮೊದಲು ಮೊದಲವರ್ಷದ ವಿದ್ಯಾರ್ಥಿಗಳು ನನಗೆ ವೈಯುಕ್ತಿಕವಾಗಿ ಪರಿಚಯವಾಗಲೆಂದು ನಾನೊಂದು ಯೋಜನೆಯನ್ನು ಕಲ್ಪಿಸಿಕೊಂಡೆ. ಪಿ.ಯು.ಸಿ.ಯಿಂದ ಬರುವ ಈ ತರುಣರಲ್ಲಿ ಒಬ್ಬಿಬ್ಬರಾದರೂ ಸಾಹಿತ್ಯಾಸಕ್ತರು ಇದ್ದಾರು, ಕೆಲವು ಕನಸುಗಳನ್ನು ಕಂಡಿದ್ದಾರು; ಅವರ ಪರಿಚಯವನ್ನು ನಾನು ಮಾಡಿಕೊಳ್ಳುವುದು ಒಳ್ಳೆಯದು ಎಂದು ಮೊದಲ ವರ್ಷದ ವಿದ್ಯಾರ್ಥಿಗಳಲ್ಲಿ ಯಾರಾದರೂ ಬರಹದ ವ್ಯವಸಾಯವನ್ನು ನಡೆಸಿದ್ದರೆ–ಕವನ, ಕಥೆ, ಹರಟೆ, ಚಿತ್ರ, ನಾಟಕ ಇತ್ಯಾದಿ ಬರೆದಿದ್ದರೆ–ಅವುಗಳನ್ನು ನನಗೆ ತಂದು ತೋರಿಸಬೇಕು ಎಂದು ಕೋರಿ ಪ್ರಕಟಿಸಿದ್ದೆ. ಒಬ್ಬ ಅದಮ್ಯ ಉತ್ಸಾಹದ ತರುಣ ಬಂದು ಒಂದು ಕವನಗಳ ಕಟ್ಟನ್ನೇ ನನಗೆ ಒಪ್ಪಿಸಿದ. ಅವುಗಳು ಏಣುಮುರಿಯದ. ಥಾಳಿನಿಂದ ಹೊಳೆಯುವ ನಾಣ್ಯಗಳಂತಿದ್ದವು, ಹಳ್ಳಿಯಿಂದ ಬಂದ ತರುಣನ ಕಾಗುಣಿತಗಳ ಧಾರಾಳವಾದ ತಪ್ಪನ್ನು ಮೆಟ್ಟಿಕ್ಕುವ ಅನುಭವದ. ಕಲ್ಪನೆಯ ಹೊಸತನವನ್ನು ಆ ಕವನಗಳು ತೋರುತ್ತಿದ್ದವು. ನನಗಂತೂ ಅತಿಶಯ ಸಂತೋಷವಾಯಿತು. ಹೊಸತೊಂದು ಬುಗ್ಗೆಯನ್ನು ಕಂಡಂತಾಯಿತು. ಅದು ಬತ್ತದೆ, ಬಗ್ಗಡಗೊಳ್ಳದೆ ಇರಲೆಂದು ಮಾನಸ್ಸು ಹಾರೈಸಿತು. ಅಂದಿನ ಕಾರ್ಯಕ್ರಮದಲ್ಲಿ ಅಧ್ಯಕ್ಷನ ಮಾತನ್ನು ಆಡುತ್ತ, ಪ್ರತ್ಯೇಕವಾಗಿ ಆ ತರುಣನ ಪ್ರತಿಭೆಯನ್ನು ನಾನು ಸಭೆಗೆ ಮನದಟ್ಟುಮಾಡಿ, 'ಸ್ನಾನಗೃಹ' ಎಂಬ ಆತನ ಕವನವನ್ನು ಸಭೆಗೆ ವಾಚಿಸಿ ಆ ಕವನವನ್ನು ಗ್ರಹಿಸಿಕೊಂಡ ರೀತಿಯನ್ನು ಪಂಕ್ತಿ ಪಂಕ್ತಿಗಳ ಉಲ್ಲೇಖದೊಡನೆ ವಿವರಿಸಿದೆ.

ಹೀಗೆ ಆತನ ಪ್ರತಿಭೆಯನ್ನು ಕಂಡುಕೊಂಡ ಮೇಲೆ ಆ ತರುಣ ನನ್ನ ಒಳಮನದ ಹತ್ತಿರಕ್ಕೆ ಗೊತ್ತಿಲ್ಲದೆಯೆ ಬಂದ. ತರಗತಿಯಲ್ಲಿ ಆತ ಸಾಮಾನ್ಯವಾಗಿ ಅನಾಸಕ್ತನಾಗಿಯೇ ಇರುತ್ತಾನೆ ಎಂಬ ಸಮಾಚಾರ ಇದ್ದೂ, ನನ್ನ ತರಗತಿಯಲ್ಲಿ–ಬಿ.ಎ. ೩ ವರ್ಷ, ಎಂ.ಎ. ೨ ವರ್ಷ ಒಟ್ಟು ೫ ವರ್ಷದ ತರಗತಿಗಳಲ್ಲಿ–ಸದಾ ವಿಸ್ಮಯದೀಪ್ತನಾಗಿಯೇ ಇರುವಂತೆ ತೋರುತ್ತಿದ್ದ. ಅದರಲ್ಲಿ ತುಂಟತನ ಇಲ್ಲದೇ ಇರುತ್ತಿರಲಿಲ್ಲ. ಆತ ತರಗತಿಯ ಬಗೆಗೆ ಅನಾಸಕ್ತ ಎಂಬಂತೆ ತೋರಿಬಂದದ್ದು ಹಾಜರಾತಿ ಇಲ್ಲವೆಂಬ ಕಾರಣಕ್ಕಾಗಿ ಮೊದಲನೇ ವರ್ಷದ ಅಥವಾ ಎರಡನೇ ವರ್ಷದ ಆತನನ್ನು ಪರೀಕ್ಷೆಗೆ ಕೂರಿಸದೆ ಇದ್ದಾಗ ಮಾತ್ರವೆ. ಅದು ನನಗೆ ಒಂದು ಇಕ್ಕಟ್ಟಿನ ಸನ್ನಿವೇಶವನ್ನೂ ಉಂಟುಮಾಡಿತು. ಪರೀಕ್ಷೆಯ ಪ್ರಾರಂಭದ ದಿನ, ಈ ತರುಣ ಆತುರಾತುರವಾಗಿ ಬಂದ. "ಸರ್, ನೋಡಿ ನಾನು ತರಗತಿಗೆ ರೆಗ್ಯುಲರ್ ಅಲ್ಲವಾ ? ನನಗೆ ಅಟೆಂಡೆನ್ಸ್ ಇಲ್ಲಾಂತ ಪರೀಕ್ಷೆಗೆ ಕೂರಿಸೋಲ್ವಂತೆ, ಸರ್ !" ಎಂದು ಮುಗ್ಧನಗೆ ಬೀರಿದ. ತಾನು ತರಗತಿಗಳಿಗೆ ರೆಗ್ಯುಲರ್ ಎಂದೂ ನನ್ನಲ್ಲಿ ಭಾವನೆಯನ್ನು ಮೂಡಿಸಿದ. ಅದು ಎಷ್ಟು ಸತ್ಯ ಎನ್ನುವುದೂ ನನಗೆ ಗೊತ್ತಾಯಿತು. ಆದರೇನು ಮಾಡುವುದು ? ಪ್ರಾಂಶುಪಾಲರ ಬಳಿ ಆತನ ಅಹವಾಲನ್ನು ತೆಗೆದುಕೊಂಡು ಹೋದೆ.

ಆಗ ಪ್ರೊ. ಖೈಸರ್ ಅಲಿಖಾನ್ ಅವರು ಮಹಾರಾಜಾ ಕಾಲೇಜಿನ ಪ್ರಾಂಶುಪಾಲ ರಾಗಿದ್ದರು. ಅವರು ಉರ್ದು, ಅರಾಬಿಕ್ ಮತ್ತು ಪರ್ಶಿಯನ್ ಪ್ರಾಧ್ಯಾಪಕರು; ತುಂಬಾ ಮೃದು ವ್ಯಕ್ತಿ; ನಮ್ಮ ಕನ್ನಡ ವಿಭಾಗದ ಪಕ್ಕದಲ್ಲಿ ಅವರ ಕೊಠಡಿಯೂ ಇತ್ತು. ಕಾಲೇಜ್ ಮಂಡಳಿಯ ಸದಸ್ಯನೂ ನಾನಾಗಿದ್ದುದರಿಂದ ಈ ಎಲ್ಲ ಸಲಿಗೆ ಯನ್ನು ನಾನು ಬಳಸಿಕೊಂಡು ಅವರಲ್ಲಿ ಅಹವಾಲನ್ನು ಮಂಡಿಸಿದೆ. ಅವರಿಗೆ ಮನದಟ್ಟಾಗುವಂತೆ "He is one of my best student's in the college, Sir, perhaps the very best of this year. And he is an energetic young poet" ಎಂದೆಲ್ಲಾ ಹೇಳಿ, ಆತ ತರಗತಿಗೆ ತಪ್ಪದೆಯೇ ಬರುವುದನ್ನು ಸ್ವತಃ ಅನುಭವದಿಂದ ಕಂಡಿದ್ದೇನೆ ಎಂದೂ ವಾದ ಮಂಡಿಸಿದೆ. ಅವರು ತಮ್ಮ ಚುಟ್ಟದ ಹೊಗೆ ಬಿಡುತ್ತ ಮೊದಮೊದಲು ಆಗುವುದಿಲ್ಲ ಎಂದು ಹೇಳಿದರೂ, ನಾನು ಹೇಳಿದು ದನ್ನೆಲ್ಲ ಬರೆದು ಕೊಡಬೇಕೆಂದು ಸೂಚಿಸಿದರು. ಹಾಗೆಯೇ ಬರೆದುಕೊಟ್ಟು ದಾಯಿತು. ಇಷ್ಟಾದರೂ ನನಗೆ ಆತಂಕ ಇದ್ದೇ ಇದ್ದಿತು. ಕಾರಣ ನಾನು ವಿದ್ಯಾರ್ಥಿ ಯಾಗಿದ್ದಾಗ ನನ್ನ ಕಿರಿಯ ಸಮಕಾಲೀನರಾಗಿದ್ದ ಪ್ರೊ, ಯು. ಆರ್. ಅನಂತಮೂರ್ತಿ ಹಾಜರಾತಿ ಇಲ್ಲದೆಯೆ ಒಂದು ವರ್ಷವನ್ನು ಕಳೆದುಕೊಂಡಿದ್ದರು. ಆ ಘಟನೆ ನಡೆದಾಗ ಇಂಗ್ಲಿಷ್ ಮತ್ತು ಕನ್ನಡದ ಅದ್ವಿತೀಯ ವಿದ್ವಾಂಸರಾಗಿದ್ದ ಪ್ರೊ. ಎಸ್. ವಿ. ರಂಗಣ್ಣನವರು ಪ್ರಾಂಶುಪಾಲರಾಗಿದ್ದರು. ಅವರು ನಿಯಮವನ್ನು ಹೇಗೂ ಮುರಿಯಲು ಇಷ್ಟಪಡಲಿಲ್ಲ. ಹಾಗೆಯೇ ಇದೂ ಆದೀತು ಎನ್ನುವ ಭೀತಿ. ಪ್ರೊ. ಖಾನ್ ಅವರಿಗೆ ಏನನ್ನಿಸಿತೋ ತಿಳಿಯದು. ಸಾರಾಸಗಟಾಗಿ ಆ ಬಾರಿ ಹಲವರಿಗೆ ಈ ಕಾರಣದಿಂದಾಗಿ ರಿಯಾಯಿತಿಯನ್ನು ತೋರಿದರು. ಇಂತಹ ಇಕ್ಕಟ್ಟು ಗಳನ್ನು ಸಹಜ ಎಂಬಂತೆ ಉಂಟು ಮಾಡುವ ತುಂಟತನ ಆಲನಹಳ್ಳಿಯದಾಗಿತ್ತು.

ಆತ ತರಗತಿಯ ಪಾಠಗಳಲ್ಲಷ್ಟೆ ಅಲ್ಲದೆ ಕನ್ನಡ ಸಂಘದ ಚಟುವಟಿಕೆಗಳಲ್ಲೂ ಎಲ್ಲ ರೀತಿಯ ನೆರವನ್ನು ನೀಡುವ ಉತ್ಸಾಹಿಯಾಗಿದ್ದ. ೧೯೬೪–೬೫ರಲ್ಲಿ ಶ್ರೀ ಕುವೆಂಪು ಅವರ ೬೦ನೆಯ ಹುಟ್ಟು ಹಬ್ಬದ ಸನ್ನಿವೇಶದಲ್ಲಿ ಕನ್ನಡ ಸಂಘದ ವತಿಯಿಂದ "ಕವಿ ಶೈಲ" ಎನ್ನುವ ಸನ್ಮಾನ ಗ್ರಂಥವನ್ನು ತರಲಾಯಿತು. ಇನ್ನೂ ಮೊದಲ ಬಿ.ಎ., ತರಗತಿಯ ವಿದ್ಯಾರ್ಥಿಯಾಗಿದ್ದ ಆತ ಶ್ರೀ ಕುವೆಂಪು ಅವರನ್ನು ಕುರಿತ ಒಂದು ಒಳ್ಳೆಯ ಲೇಖನವನ್ನು ನೀಡಿದುದು ಮಾತ್ರವಲ್ಲದೆ ಇಡೀ ಸುಮಾರು ೨೦೦ ಪುಟದ ಡೆಮ್ಮಿ ಅಷ್ಟದಳಾಕೃತಿಯ ಗ್ರಂಥ ಕೇವಲ ೧೪ ದಿವಸಗಳಲ್ಲಿ ಅಚ್ಚಿನ ಮನೆಯಿಂದ ಸುಂದರವಾಗಿ ಹೊರಬರಲು ತುಂಬ ಅತಿಶಯವಾದ ನೆರವನ್ನು ನೀಡಿದುದುಂಟು. ಆ ೩ ವರ್ಷದ ಅವಧಿಯಲ್ಲಿ ಕನ್ನಡ ಸಂಘ ಹಮ್ಮಿಕೊಂಡ ಏನೆಲ್ಲ ಚಟುವಟಿಕೆಗಳ ಹಿಂದೆ ಈ ತರುಣನ ಶಕ್ತಿ ನೆರವಾಗುತ್ತಿತ್ತು.

ಆ ವೇಳೆಯಲ್ಲಿ "ಮಣ್ಣಿನ ಹಾಡು" ಕವನ ಸಂಕಲನ ರೂಪು ತಳೆಯುತ್ತಿತ್ತು. ಆ ವೇಳೆಗೆ ಆತ ಬಿ.ಎ. ತರಗತಿಯಲ್ಲಿ ತೇರ್ಗಡೆಗೊಂಡು ಕನ್ನಡ ಎಂ.ಎ. ವಿದ್ಯಾರ್ಥಿಯಾಗಿ ಗಂಗೋತ್ರಿಯ ಕಡೆ ನಡೆದುಹೋದ. ಆಶ್ಚರ್ಯವೆಂದರೆ ನನಗೂ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗವಾಯಿತು. ಆ ತುಂಟನ ಪ್ರತಿಕ್ರಿಯೆ ಎಂದರೆ, "ನೋಡಿ ಸರ್, ನಾವೆಲ್ಲ ನಿಮ್ಮನ್ನೂ ಜೊತೆಗೇ ಕರೆದುಕೊಂಡು ಹೋಗ್ತಾ ಇದ್ದೀವಿ ; ನೋಡಿದಿರಾ ನಮ್ಮ ಶಕ್ತೀನಾ" ಎಂದು ಅವನದೇ ಭಂಗಿಯಿಂದ–ಸೊಟ್ಟಗೊಂಡ ಮುಖದ ಭಂಗಿಯಿಂದ ನುಡಿದ. ಮೊದಲ ವರ್ಷದ ಪಾಠಗಳೇನೋ ನನಗೆ ಕೈತುಂಬ ಕೆಲಸವನ್ನು ಕೊಟ್ಟದ್ದುಂಟು. ವಾರಕ್ಕೆ ೪ ಗಂಟೆ ಕುಮಾರವ್ಯಾಸ, ೨ ಗಂಟೆ ಜಾನಪದ ಪಾಠಗಳಿಗೆ ತಪ್ಪಿಸಿಕೊಳ್ಳದಂತೆ ಬರುತ್ತಿದ್ದ. ಅವನ ಆಸಕ್ತಿ, ಚೆಚ್ಚರ ಮೆಚ್ಚಿಕೊಳ್ಳುವಂತಿತ್ತು. ಆದರೂ ಅವನ ಗಮನವನ್ನು ತರಗತಿಯಲ್ಲಿ ಹಿಡಿದಿಡಲಾಗುತ್ತಿರಲಿಲ್ಲ. ಅದರ ಪರಿಣಾಮವಾಗಿ ಕೆಲವೊಂದು ಬೇರೆ ತರಗತಿಗಳಿಗೆ ಅನಾಸಕ್ತನೂ ಆಗಿದ್ದಿರಬಹುದು. ಅಂತಹ ಒಂದು ತಲೆ ನೋವು ತರುವ ಪ್ರಸಂಗವೂ ಬಂತು. ಒಂದು ಸಂಜೆಯ ವಾಕ್ ಮುಗಿದ ಮೇಲೆ ಪ್ರೊ. ಜವರೇಗೌಡರು ಏನೋ ಮರೆತದ್ದನ್ನು ನೆನೆದುಕೊಂಡಂತೆ ಹೇಳಿದರು, "ನೋಡಿ ಸುಜನಾ, ನಿಮ್ಮ ಕೃಷ್ಣ ಇದಾನಲ್ಲ, ನೋಡಿ ಆತ ಶ್ರೀ....ಅವರ ತರಗತಿಗಳಿಗೆ ಹೋಗ್ತಾಯಿಲ್ವಂತೆ. ಅವರು ಬೇಸರಪಟ್ಟುಕೊಳ್ಳಬಹುದು. ಅವನಿಗೆ ಹೇಳಿ ಸರಿಪಡಿಸಿ" ಎಂದರು. ಇದು ಕಷ್ಟದ ಸಮಸ್ಯೆ ಅಲ್ಲದಿದ್ದರೂ ಇಕ್ಕಟ್ಟಿಗೆ ದೂಡುವಂತಹ ವಿಷಯ. ಮಿತ್ರ ಕೃಷ್ಣನನ್ನೇನೊ ಮಾರನೆಯ ದಿನವೇ ಕರೆದು ಭೇಟಿಸಿ ಹೇಳಿದೆ. ಅಂತಹ ಸನ್ನಿವೇಶಗಳು ನನ್ನನ್ನು ಸಂದಿಗ್ಧ ಅಪಾರ್ಥಕ್ಕೆ ನೂಕುವುದು ಸಾಧ್ಯ. ಕೃಷ್ಣ ಗೈರು ಹಾಜರಾಗುತ್ತಿದ್ದ ಪಾಠಗಳನ್ನು ತೆಗೆದುಕೊಳ್ಳುತ್ತಿದ್ದವರು ನನಗಿಂತಲೂ ಹೆಚ್ಚು ಪ್ರಸಿದ್ಧರೂ, ಯಶೋವಂತರೂ, ಸಮರ್ಥರೂ, ನಿಷ್ಠುರ ವಿಮರ್ಶಕರೂ ಆಗಿದ್ದರು. ಆದರೆ ಸೃಜನಶೀಲನಾದ ಒಬ್ಬ ವಿದ್ಯಾರ್ಥಿಗೆ ತಾನೇ ಬರೆಯಬಹುದಾದಂತಹ ಅತಿಶಯವಾದ ಆತ್ಮ ವಿಶ್ವಾಸ ಇರುವಾಗ ಅಂತಹ ಪಠ್ಯಗಳನ್ನು ಓದುವ ಆಸೆ ಇರುವುದಿಲ್ಲ. ಆ ಪಾಠಗಳನ್ನು ಬೋಧಿಸುವ ಪ್ರಾಧ್ಯಾಪಕರು ಎಷ್ಟೇ ದೊಡ್ಡವರಾದರೂ ಪಠ್ಯದ ಕಾರಣದಿಂದಾಗಿ ಅನಾಸಕ್ತಿ ಬರಬಹುದು. ಈ ಪರಿಸ್ಥಿತಿ ಸಹಜವಾದರೂ ತಪ್ಪರ್ಥಕ್ಕೆ ಸಂಬಂಧಪಟ್ಟವರನ್ನೇ ಒಳಪಡಿಸಬಲ್ಲುದು. ಮುಂದೇನಾಯಿತೊ ನನಗೆ ತಿಳಿಯಲಿಲ್ಲ. ಈಗಲೂ ತಿಳಿದಿಲ್ಲ. ಶ್ರೀಕೃಷ್ಣ ಗೊತ್ತಿಲ್ಲದೆಯೋ ಗೊತ್ತಿದ್ದೊ ಇಂತಹ ಹುಡುಗಾಟಗಳ ಪರಿಣಾಮಗಳನ್ನು ನಾನು ಅನುಭವಿಸುವಂತೆ ಮಾಡುತ್ತಿದ್ದ. ಏನೇ ಆದರೂ ಈ ಅಸಾಧಾರಣ ಸತ್ವದ ತರುಣನನ್ನು ಅಡ್ಡ ಹೋಗ ಬಿಡಬಾರದೆಂದು, ಒಮ್ಮೊಮ್ಮೆ ಅತಿ ಎನ್ನಬಹುದಾದ ಅವನ ಆಟಗಳನ್ನು ತಾಳಿಕೊಳ್ಳುತ್ತಾ, ಅವನ ಸತ್ವಗಳು ಪೋಲಾಗಲು ಎಡೆಗೊಡದೆ ಇರುತ್ತಿದ್ದೆ. ಅವನ ವಿದ್ಯಾರ್ಥಿತನದ ೫ ವರ್ಷಗಳಲ್ಲಿ ನಾನು ತುಂಬ ಸಂತೋಷಪಟ್ಟುದುಂಟು. ಇತರ ಸಹೋದ್ಯೋಗಿಗಳು ನನ್ನಷ್ಟೇ ಸಂತೋಷಪಡ

ಲಿಕ್ಕಾಗದೆ ಇರುವುದು ಸಾಧ್ಯ. ನನ್ನ ಮನಸ್ಸಿನಲ್ಲಿ ಸದಾ ಹಳ್ಳಿಯಿಂದ ಬಂದ ತರುಣನೊಬ್ಬನ ಅದಮ್ಯ ಶಕ್ತಿಯ ಚಿತ್ರವಿತ್ತು.

ಶ್ರೀಕೃಷ್ಣ ಎಂ.ಎ., ವಿದ್ಯಾರ್ಥಿಯಾಗಿದ್ದಾಗ "ಗಂಗೋತ್ರಿ" ಸಂಭಾವನಾ ಗ್ರಂಥ ವನ್ನು ಶ್ರೀ ಕುವೆಂಪು ಅವರಿಗೆ ನಿವೇದಿಸಲು ಸಿದ್ಧಪಡಿಸಲಾಗುತ್ತಿತ್ತು. ಆಗಷ್ಟೆ 'ಮಲೆಗಳಲ್ಲಿ ಮದುಮಗಳು' ಪ್ರಕಟವಾಗಿತ್ತು. ಅದರ ಬಗೆಗೆ ನಮ್ಮ ಅಧ್ಯಯನ ಸಂಸ್ಥೆಯಲ್ಲಿ ವಿಚಾರಗೋಷ್ಠಿಯೂ ನಡೆದಿತ್ತು. ಅದಕ್ಕೆ ಮುನ್ನ ಒಂದು ಘಟನೆ ನಡೆದದ್ದುಂಟು. ಒಂದು ದಿನ ಪ್ರೊ|| ಹಾ. ಮಾ. ನಾಯಕರು "ಮಲೆಗಳಲ್ಲಿ ಮದು ಮಗಳನ್ನು ಓದಿದ್ದೀರಾ ? ಆ ಬಗ್ಗೆ ನಿಮ್ಮ ಅಭಿಪ್ರಾಯವೇನು ?" ಎಂದು ಕೇಳಿದರು. ನಾನು ತುಂಬಾ ಆತುರಗಾರ. ಹಿಂದುಮುಂದು ನೋಡದೆ "ಇನ್ನೂ ಒಂದು ೨೦೦ ಪುಟ ಓದಿರುವೆ. ತುಂಬಾ ಅದ್ಭುತವಾಗಿದೆ" ಎಂದೆ. ಅದಕ್ಕವರು "ನಿಜಕ್ಕೂ?" "ನಿಜಕ್ಕೂ !–ಹೆಗ್ಗಡತಿಗಿಂತ ಇದು ಬಹಳ ಮುಂದಿದೆ" ಎಂದೆ. "You are too hasty" ಎಂದರವರು. ಕಾದಂಬರಿಯನ್ನು ಪೂರ್ಣವಾಗಿ ಓದಿದ ಮೇಲೆ ನನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳುವ ಅಗತ್ಯ ನನಗೆ ಕಾಣಲಿಲ್ಲ. ಹೀಗಿರುವಾಗ ಮಲೆಗಳಲ್ಲಿ ಮದುಮಗಳನ್ನು ಕುರಿತ ಒಂದು ಚರ್ಚಾ ಸಂಜೆಯೂ ಆಯಿತು. ಶ್ರೀಕೃಷ್ಣನದೂ ಪರಿಣಾಮಕಾರಿಯಾದ ಪಾತ್ರ ಅದರಲ್ಲಿತ್ತು. ಬೇರೆಯವರು ನೋಡಿದ ನಿಟ್ಟಿನಿಂದ ನೋಡದೆ ಒಂದು ಸುಂದರವಾದ ಲೇಖನವನ್ನು ಅತ "ಗಂಗೋತ್ರಿ" ಸಂಭಾವನಾ ಗ್ರಂಥಕ್ಕೆ ನೀಡಿದ. ಕಾದಂಬರಿಕಾರ ಕೃಷ್ಣ ವಿಮರ್ಶಕ ನಾದರೆ ಹೇಗೆ ಬರೆಯಬಹುದು ಎಂಬುದಕ್ಕೆ ಅದೇ ಸಾಕ್ಷಿ. ವಿಶಿಷ್ಟವಾದ ಒಂದು ನೋಟದ ಲೇಖನವದು.

ಯಾರ ಜೀವನದಲ್ಲೇ ಆಗಲಿ ಇತರರೊಡನೆ ಕೂಡಿ ನಡೆಯುವ ಅವಧಿ ತುಂಬ ದೀರ್ಘವಾಗಿ ಇರಲಾರದು. ವಿದ್ಯಾರ್ಥಿಯಾಗಿ ಅಷ್ಟು ಆತ್ಮೀಯವಾಗಿ ನನ್ನ ಮನಸ್ಸಿನ ಒಂದು ವಿಶೇಷ ಭಾಗದಂತೆ ಕಾಣುತ್ತಿದ್ದ ಶ್ರೀಕೃಷ್ಣ ಅಧ್ಯಾಪಕನಾದ ನಂತರ ದಲ್ಲಿ ಏಕೊ ದೂರ ಸರಿಯುತ್ತಿರುವಂತೆ ತೋರಿತು. ಪ್ರಾಯಶಃ 'ಮಣ್ಣಿನ ಹಾಡು' ಕವನ ಸಂಕಲನ ಹಾಗೂ 'ಕಾಡು' ಕಾದಂಬರಿಯ ಬಗೆಗೆ ಶ್ರೀಕೃಷ್ಣ ಇತರರಿಂದ ಪಡೆದ ಅಸಾಧಾರಣ ಮೆಚ್ಚಿಕೆಯನ್ನು ನಾನು ನೀಡಲಾಗದಿದ್ದುದೂ ಇರಬಹುದು. ನಾನು ಒಂದು ಎಚ್ಚರಿಕೆಯ ಮಾತನ್ನೂ ಮೆಚ್ಚಿಕೆಯ ಮಾತಿನ ಜೊತೆಯಲ್ಲಿಯೆ ಕೊಂಚ ಒತ್ತು ಕೊಟ್ಟು ಹೇಳಿದೆ. ಮಣ್ಣಿನ ಹಾಡಿನ 'ಸ್ನಾನಗೃಹ' ಮುಂತಾದ ನಾನು ಮೆಚ್ಚಿಕೊಂಡ ಕವನ ಪ್ರತಿಭಾವಂತನ ಪ್ರತಿಮಾ ಸೃಷ್ಟಿಯನ್ನು ತೋರಿಸುವಂತೆ, ಬೆಳಗನ್ನು ಕುರಿತ ಅವನ ಕವನಗಳು ತೋರುವುದಿಲ್ಲ ಎನ್ನುವ ನನ್ನ ಅನಿಸಿಕೆ ಇತರರ ಮೆಚ್ಚುಗೆಗಿಂತ ಬೇರೆಯಾಗಿತ್ತು. ಬೆಚ್ಚಿಬೀಳಿಸುವ ಚಿತ್ರಗಳು ಪ್ರತಿಭಾಸೃಷ್ಟಿಯಾಗದಿರಬಹುದು; ಹೊಸ

ತನವನ್ನು ತೋರಬೇಕೆನ್ನುವ ಕುತೂಹಲದಿಂದಲೂ ಬಂದಂತಹವು ಆಗಿರಬಹುದು. ಅದು ನನ್ನ ನಿಲುವಾಗಿತ್ತು. ಹಾಗೆಯೇ 'ಕಾಡು' ಕಾದಂಬರಿ ತುಂಬಾ ಮನೋಜ್ಞ ವಾಗಿರುವುದರ ಜೊತೆಗೆ, ಹೀಗಿರುವುದಕ್ಕೆ ಕಾರಣ ಕೃತಿಕಾರನ ಬಾಲ್ಯಾನುಭವಗಳಲ್ಲಿ ಹೊಚ್ಚ ಹೊಸತನವಿರುವುದೇ ಆಗಿದೆ; ಆ ಬಾಲ್ಯಾನುಭವಗಳನ್ನೇ ಬಂಡವಾಳವಾಗಿ ಹಲವಾರು ಕೃತಿಗಳನ್ನು ಕೊಡಬರುವುದಿಲ್ಲ. ಕೋಟ್ಯಾಂತರ ವರ್ಷಗಳ ಮಾಗುವಿಕೆಯ ಫಲವಾಗಿ ಬಂದ ಪೆಟ್ರೋಲಿಯಂ ಇಂಧನದಂತೆ ಆ ಬಾಲ್ಯಾನುಭವಗಳು ಪ್ರಥಮಾಭಿ ವ್ಯಕ್ತಿಯಲ್ಲಿ ಶ್ರೀಮಂತಿಕೆಯನ್ನು ಮೆರೆಯುತ್ತವೆ. ಅವು ಅತಿಬಳಕೆಯಿಂದಾಗಿ ರಿಕ್ತ ವಾಗುವ ಅಪಾಯ ಉಂಟು. ಈ ಎಚ್ಚರಿಕೆಯನ್ನು ಆಗಲೇ ನಾನು ಹೇಳಿದುದು ಅನಗತ್ಯವಾಯಿತು ಎಂದು ತೋರುತ್ತದೆ. ಪರಿಣಾಮವೆಂದರೆ, ಶ್ರೀಕೃಷ್ಣನಿಗೆ ನಾನು Lukewarm ಎಂಬಂತೆ cold ಎಂಬಂತೆ ಕಂಡು ಬಂದೆನೋ ಏನೋ ? ನಮ್ಮದ ಬೀಸಪ್ಪುಗೆ ಅವನನ್ನು ತನ್ನ ಕಡೆಗೆ ಸೆಳೆದುಕೊಂಡಿತ್ತು. ಆತನೇನೋ ಅದರಿಂದ ಬಿಡಿಸಿ ಕೊಂಡು ಸ್ವತಂತ್ರವಾದದ್ದೂ ಉಂಟು. ಆದರೆ ನಮ್ಮಿಬ್ಬರ ನಡುವಣ ಅಂಟುನಂಟು ಬಹಳ ತೆಳುವಾಯಿತು; ಉಗುಳಂಟು ಎಂಬಂತಾಯಿತು.

ಐದಾರು ವರ್ಷ ನಮ್ಮ ಮನೆಗೆ ಆತ ಬರದೇ ಇದ್ದ ರಜಾದಿನಗಳೇ ಇರಲಿಲ್ಲ. ನಾನಿನ್ನೂ ಮಲಗಿರುವಾಗಲೆ ಬಂದು ಕೂಗುತ್ತಿದ್ದ. ಅವನ ಜೊತೆಯಲ್ಲಿ ತಿಂಡಿ, ಮಧ್ಯಾಹ್ನದ ಊಟ, ಸಂಜೆಯ ತನಕ ಮಾತು–ಹೀಗೆ ಎಷ್ಟೋ ದಿನಗಳು ನಾವಿಬ್ಬರೂ ಕಳೆದದ್ದುಂಟು. ಯಾವ ವಿದ್ಯಾರ್ಥಿಯೂ ಅಧ್ಯಾಪಕನ ಮಟ್ಟಕ್ಕಷ್ಟೇ ಬೆಳೆಯಬೇಕಾಗಿಲ್ಲ. ಮೀರಿಯೇ ಬೆಳೆಯ ಬೇಕು. ಆ ಬೆಳೆಯುವ ಆತುರದಲ್ಲಿ ಶಕ್ತಿಸ್ರಾವವಾದಾಗ ತುಂಬಾ ನೋವುಂಟಾಗುತ್ತದೆ. ಶ್ರೀಕೃಷ್ಣ ತುಂಬ ಅಗಲದ ರೆಕ್ಕೆಗಳನ್ನು ಬೆಳೆಸಿಕೊಂಡ ಹಕ್ಕಿ ಯಂತೆ ಬಾನ್ ಅಗಲಕ್ಕೆ ಎತ್ತರಕ್ಕೆ ಹಾರುವ ಸತ್ವಶಾಲಿ. ಆದರೆ ಎಲ್ಲೋ ಆ ಸತ್ವ ವನ್ನು ಸಂಯಮನಗೊಳಿಸುವ ಶಕ್ತಿ ಕುಗ್ಗಿತೇನೋ ಎನಿಸುತ್ತದೆ. ೧೯೨೦ರ ದಶಕದಲ್ಲಿ ಮಲೆನಾಡಿನ ಕಾಡುಗಳಿಂದ ದೂರದ ಮೈಸೂರು ನಗರಕ್ಕೆ ಬಂದ ಶ್ರೀ ಕುವೆಂಪು ಅವರ ತರುಣ ಚೇತನ ತನ್ನ ಅಸಾಮಾನ್ಯ ವಿಕಾಸವನ್ನು ಕಂಡುಕೊಳ್ಳುವ ಆತುರದಲ್ಲೇ ಶ್ರೀ ರಾಮಕೃಷ್ಣ ಆಶ್ರಮದಂತಹ ಭದ್ರಕವಚಕ್ಕೆ ಒಪ್ಪಿಸಿಕೊಳ್ಳದಿದ್ದರೆ ಅಥವಾ ನಿರಂಕುಶತೆ ಯನ್ನು ಆತ್ಮಶ್ರೀಗಾಗಿ ಎಂದು ಭಾವಿಸದಿದ್ದರೆ, ಈಗ ಅವರು ಈಗಿನ ಎತ್ತರದಲ್ಲಿ ಇರುತ್ತಿದ್ದರೆ ಎನ್ನುವ ಸಂದೇಹವಾಗುತ್ತದೆ. ಎತ್ತರೆತ್ತರವಾದ ಮೌಲ್ಯಗಳನ್ನು ಆಭರಣಕ್ಕಿಂತಲೂ ಬೆಲೆಯುಳ್ಳ ಮಾಂಗಲ್ಯದಂತೆ ಅವರು ಗೌರವಿಸದಿದ್ದರೆ ಈಗಿನ ವಿಶಿಷ್ಟ ಚೇತನವಾಗುವುದು ಕಷ್ಟವಾಗುತ್ತಿತ್ತು. ಶ್ರೀಕೃಷ್ಣನಂತಹ ಕಾಡಿನ ಹುಡುಗನಿಗೆ ಅಂತಹ ಸಂಯಮಕಗಳು ದೊರೆಯಲಿಲ್ಲವೆ ? ಅಗತ್ಯವಾಗಲಿಲ್ಲವೆ ? ಅಸಹ್ಯವಾದುವೆ ? ಈ ಅಂಶ ನನ್ನನ್ನು ಇಂದೂ ಕೂಡ ಕಾಡುತ್ತಿವೆ. ಗೇರುಸೊಪ್ಪೆಯ ಜಲಪಾತದ ನೀರು ಆ ಕಣಿವೆಯಲ್ಲಿ ಕೋಟ್ಯಾಂತರ ವರ್ಷಗಳಿಂದ ಬೀಳುತ್ತಲೇ ಇದೆ. ಆ ನೀರಿನ

ಮಹಾ ಭಾರದ ಘಾತಕ್ಕೆ ಎದೆಕೊಟ್ಟ ಬುಡದ ಬಂಡೆ ತನ್ನ ಟೊಳ್ಳನ್ನೆಲ್ಲಾ ಕಳೆದು ಕೊಂಡು ಇನ್ನು ಸವೆಯಲಾರದ ಗಟ್ಟಿತನವನ್ನು ಕಂಡುಕೊಂಡಿದೆ. ಆದರೆ, ಅದೇ ಕೊಳಾಯಿಯಲ್ಲಿ ವಿದ್ಯುತ್ ಉತ್ಪಾದನಕ್ಕಾಗಿ ಹಾದುಕೊಂಡು ಹೋಗುವ ನೀರು, ಮೇಲಿನಿಂದ ಕೆಳಗೆ ಇಳಿಯುವಾಗ ಹೆಚ್ಚು ಒತ್ತಡವನ್ನು ತರುತ್ತಾ ಆ ತಳದ ಕೊಳವೆಯ ದುರ್ಬಲ ಭಾಗವನ್ನು ಸಿಡಿಸಿಬಿಡಬಹುದು. ಕಾರಣ ಈ ಕೊಳವೆ ಸಹಸ್ರಾರು ವರ್ಷಗಳಿಂದ ಪರೀಕ್ಷೆಗೆ ಒಳಪಟ್ಟದ್ದಲ್ಲ. ಆದದ್ದರಿಂದ ಇದರ ಬಗ್ಗೆ ಹೆಚ್ಚು ಎಚ್ಚರವಿರಬೇಕು. ಶ್ರೀಕೃಷ್ಣನಂತಹ ವಿಶೇಷ ಶಕ್ತಿಗಳು ತುಂಬು ಮೈದಾಳುವ ಮೊದಲೇ ಮೈಗರೆದಾಗ ಈ ಮೇಲಣ ಎಚ್ಚರಿಕೆ ಸರಿ ಎಂದು ತೋರುತ್ತದೆ.

ವಿಷಾದವೆಂದರೆ, ಒಂದೇ ಊರಿನಲ್ಲಿದ್ದರೂ ಏಕೋ ಈ ೧೫ ವರ್ಷಗಳ ಅವಧಿಯಲ್ಲಿ ನಾವು ಪರಸ್ಪರ ೩–೪ ಬಾರಿಗಿಂತ ಹೆಚ್ಚು ಭೇಟಿಯಾದದ್ದೇ ಇಲ್ಲ. ನಾನು ತಪ್ಪು ಮಾಡಿದೆ ಎನ್ನುವ ಭಾವ ಕಾಡುತ್ತಿದೆ. ಆತನನ್ನು ಹುಡುಕಿಕೊಂಡು ಹೋಗಿ ನೋಡಬೇಕೆನ್ನುವ ಆಸೆಯನ್ನು ಹತ್ತಿಕ್ಕಿದೆ ಎನ್ನುವ ನೋವಿದೆ. ಜನವರಿ ೪ರ ಸಂಜೆ ೭ ಘಂಟೆಯತನಕ ಕಾಲೇಜಿನಲ್ಲಿಯೇ ಇದ್ದು ಏನನ್ನೂ ಬರೆಯಲು, ಓದಲೂ ಆಗದೆ ಶತಪಥ ತಿರುಗುತ್ತಿದ್ದ ನಾನು ಮನೆಗೆ ಹೋದೆ. ೫–೧೦ ನಿಮಿಷಗಳಲ್ಲಿ ಆತನ ಸಾವಿನ ಸುದ್ದಿ ಬಂತು. ಫೋನಿನ ಮೂಲಕ ಸುದ್ದಿ ಬಂದಾಗ ನಾನು ಬಿಕ್ಕಳಿಸಿದೆ. ನನ್ನ ಮನೆಯಾಕೆ ಗಾಬರಿಗೊಂಡಳು. ವಿಷಯ ತಿಳಿದಾಗ ನನ್ನೊಡನೆ ಆಕೆಯೂ ನಿಟ್ಟುಸಿರು ಬಿಟ್ಟು ತಾನೂ ಅಂತಿಮ ದರ್ಶನವನ್ನು ಪಡೆಯುವುದಕ್ಕಾಗಿ ಬರುವುದಾಗಿ ಹೇಳಿದಳು. ಮದುವೆಗೆ ಪೂರ್ವದಲ್ಲಿ ಶ್ರೀಕೃಷ್ಣ ತನ್ನ ಭಾವೀ ಪತ್ನಿಯ ಜೊತೆಯಲ್ಲಿ ಮನೆಗೆ ಬಂದಿದ್ದು, ನಮ್ಮಿಬ್ಬರ ಜೊತೆಯಲ್ಲಿ ಕಾಲಕಳೆದು, ಕಡೆಗೆ ಹೋಗುವಾಗ ಮದುವೆಗೆ ಒಪ್ಪಿಕೊಳ್ಳುವಂತೆ ತಮ್ಮ ತಾಯಿಗೆ ಅನುನಯ ಮಾಡಬೇಕೆಂದು ನಮಗೆ ಹೇಳಿದ್ದನ್ನು ನನ್ನ ಮನೆಯಾಕೆ ನೆನಪುಮಾಡಿಕೊಟ್ಟಳು. ಆ ನೆನಪು ಮತ್ತಷ್ಟು ದುಃಖ ತಂದಿತು. ಕಡೆಗೂ ನಾನು ಗೃಹಸ್ಥ ಶ್ರೀಕೃಷ್ಣನನ್ನು ಅವನ ಮನೆಯಲ್ಲಿ ಕಂಡದ್ದು ಹೀಗಲ್ಲ ...ಎಂಬ ನೋವು ನನ್ನನ್ನು ಅಪರಾಧ ಭಾವಕ್ಕೆ ದೂಡಿತು. ಪ್ರಕೃತಿ ಎಷ್ಟೊ ಧಾರಾಳವಾಗಿ ಒಮ್ಮೊಮ್ಮೆ ಶಕ್ತಿಯನ್ನು ವಿತರಿಸಿದರೂ ಅಷ್ಟೇ ಕ್ರೂರವಾಗಿ ಅದನ್ನೆಲ್ಲ ಹಿಂದಕ್ಕೆ ಸೆಳೆದುಕೊಂಡು ಬಿಡಬಹುದು. ದತ್ತವಾದ ಶಕ್ತಿಯನ್ನು ಬೆಳೆಸಿಕೊಳ್ಳುವ, ಬಳಸಿ ಕೊಳ್ಳುವ ಹೊಣೆಗಾರಿಕೆಯನ್ನು ಪ್ರಕೃತಿ ಮನುಷ್ಯನಿಗೇ ಬಿಟ್ಟುಬಿಡುವಂತೆ ತೋರುತ್ತದೆ. ಶ್ರೀಕೃಷ್ಣನ ಸಾವು–ಅಕಾಲೀನ ಮರಣ–ಈ ಭಾವನೆಯನ್ನು ದಟ್ಟವಾಗಿ ಕವಿಸಿದೆ.

—ಸುಜನಾ

# ಮನಮೋಹಕ ಕೃಷ್ಣ

ಕೃಷ್ಣನಿಂದ ಆ ಕ್ಷಣದಲ್ಲಿ ಅಥವಾ ಯಾವತ್ತೂ ಏನೂ ಆಗದಿದ್ದರೂ, ಅವನು ಜೊತೆಗಿದ್ದಾನೆಂದರೆ, ಅದು ನಮ್ಮ ಮನಸ್ಸಿಗೆ ಮುದಕೊಡುವ ಸಂಭ್ರಮದ ವಾತಾವರಣವನ್ನು ಸೃಷ್ಟಿಮಾಡುವ ಸನ್ನಿವೇಶವಾಗಿರುತ್ತಿತ್ತು. ಕೃಷ್ಣ ಕಡುಬಡವರೊಂದಿಗೆ ಅತ್ಯಂತ ಸ್ವಾಭಾವಿಕವಾಗಿ ಬೆರೆಯುತ್ತಿದ್ದರೂ, ಆತನಿಗೆ 'cult of collasel' ಪ್ರವೃತ್ತಿ ಇತ್ತು. ಯಾರೋ ಮುಖ್ಯ ಮಂತ್ರಿಗಳು, ಮಹಾನ್ ಬರಹಗಾರರು, ಕಲಾವಿದರು, ಶ್ರೀಮಂತರು–ಇಂತವರ ನಡುವೆ ತಾನು ಸರಿಸಮನಾಗಿ ಇದ್ದುದನ್ನು ಹೇಳಿಕೊಳ್ಳುವುದರಲ್ಲಿ ಆತ ಖುಷಿಪಡುತ್ತಿದ್ದ. ತಾನು ಅವರಿಗೆ ವಿಮರ್ಶಾತ್ಮಕವಾಗಿ ಅಥವಾ ಬಯಸಿದುದನ್ನು ಬಯ್ದು ಹೇಳಿದೆ ಎಂದು ಉತ್ಪ್ರೇಕ್ಷಿಸುತ್ತಿದ್ದ. ಅವನು ಅದನ್ನು ಹೇಳಿರಲಿಲ್ಲ ಎಂದು ನನಗೆ ಗೊತ್ತಿದ್ದರೂ, ಅವನು ತಾನು ಹೇಳಿದೆ ಎನ್ನುವ ಸುಳ್ಳನ್ನು ಹೇಳಿದನೆಂದು ನಮಗೆ ಬೇಸರವಾಗುತ್ತಿರಲಿಲ್ಲ. ಏಕೆಂದರೆ, ಅವನು ಹೇಳಬೇಕೆಂದು ಬಯಸಿದ ಮಾತುಗಳನ್ನು ಆ ಮಹಾನ್ ಜನರಿಗೆ ನಾವೂ ಹೇಳಲು ಬಯಸುತ್ತಿದ್ದೆವು. ನಾವೂ ಅನೇಕ ಸಾರಿ ಅದನ್ನು ಹೇಳಲಾರದೆ ಅಸಹಾಯಕರಾಗುತ್ತಿದ್ದೆವು. ಇವೇ ಕೆಲವು ಸಂದರ್ಭಗಳಲ್ಲಿ ಸಾಹಿತ್ಯ ರಚನೆಯ ಮೂಲವಾಗಬಹುದು. ಕೃಷ್ಣನ ಕಾಡು, ಭುಜಂಗಯ್ಯನ ದಶಾವತಾರಗಳು, ಪರಸಂಗದ ಗೆಂಡೆ ತಿಮ್ಮ, ಇವನ್ನೆಲ್ಲಾ ಓದಿದಾಗ ನಾನು ಕೃಷ್ಣನಿಗೆ ಕೆಲವು ಬಾರಿ ಹೇಳಿದ್ದೆ: ನಿನಗೆ ಇಂತಹ ರೋಚಕವಾದ ಕಥೆಗಳನ್ನು ಸೃಷ್ಟಿ ಮಾಡಲು ಏಕೆ ಸಾಧ್ಯವೆಂದರೆ, ನೀನೇ ಅಂತಹ ಭುಜಂಗಯ್ಯ, ನೀನೇ ತಿಮ್ಮ, ನೀನೇ ಕಾಡು ಕಾದಂಬರಿಯ ಪರ–ವಿರುದ್ಧ ಶಕ್ತಿಯ ಮೂಲ. ನಿನಗೆ ಜೀವನದಲ್ಲಿ ಹೀಗೇ ಇರಬೇಕೆನ್ನುವ ಚೌಕಟ್ಟಿಲ್ಲ; ಚೌಕಟ್ಟನ್ನು ಮೀರಿದವನು ಸಾಹಿತ್ಯದಲ್ಲಿ ಸೃಷ್ಟ್ಯಾತ್ಮಕ ಆಗಿಬಿಡುತ್ತೀಯ. ಆದ್ದರಿಂದಲೇ ಲಂಕೇಶರ ಮುಸ್ಸಂಜೆಯ ಕಥಾಪ್ರಸಂಗ, ಅವರ ಅನೇಕ ಸಣ್ಣಕಥೆಗಳು ಹಾಗೂ ನಿನ್ನ ಕಾದಂಬರಿಗಳು ಮತ್ತು ಕಥೆಗಳು ಅತ್ಯಂತ ಸುಲಭವಾಗಿ ಬರೆಯಲ್ಪಡುತ್ತವೆ. ಏಕೆಂದರೆ, ಸಾಹಿತ್ಯದ ಬಗ್ಗೆ ಪ್ರೀತಿ, ಐಡಿಯಾಲಜಿ, ಐಡಿಯಾಲಜಿಗೂ ವ್ಯವಹಾರಕ್ಕೂ ಇರಬೇಕೆನ್ನುವ ಸಮಗ್ರತೆಯ ವಿಷಯ–ಇವು ನನ್ನಂತಹವರಿಂದ ಸಾಹಿತ್ಯವನ್ನು ಸೃಷ್ಟಿಮಾಡುವುದಿಲ್ಲ. ಆದರೆ, ಅನಂತಮೂರ್ತಿ, ಕೃಷ್ಣ, ಲಂಕೇಶ್ ಅಂತಹವರಿಗೆ ಸಾಧ್ಯ. ಹೀಗೆ, ಕೃಷ್ಣ ತನ್ನ ಪ್ರತಿಭೆಯಿಂದ, ಉತ್ಪ್ರೇಕ್ಷೆಯಿಂದ, ತನ್ನ ಅಪೇಕ್ಷೆಗಳ ಭ್ರಮೆಯಿಂದ, ಭ್ರಮ ನಿರಸನದಿಂದ, ಉಪದ್ರವಿ ಆಗಿರಲಿಲ್ಲ.

ಸಾಹಿತ್ಯವನ್ನು ಪ್ರೀತಿಸಿ ಸಾಕಷ್ಟು ಪುಸ್ತಕಗಳನ್ನು ಓದಿದರೂ ಕೂಡ ಒಬ್ಬ ಲೇಖಕನ ಕಾದಂಬರಿ, ಕವನ, ವಿಮರ್ಶೆಯ ಯಾವುದೋ ಒಂದು ವಾಕ್ಯವನ್ನು ಉದ್ಧರಿಸಿ ಬರೆಯುವಷ್ಟು ಪ್ರಬುದ್ಧಮನುಷ್ಯ ನಾನಲ್ಲ. ಆದರೂ "ಮಣ್ಣಿನ ಹಾಡು"

ಮತ್ಯಾವುದೋ ಕವನ ಸಂಕಲನದಲ್ಲಿ ಸುಮಾರು 20 ವರ್ಷಗಳ ಹಿಂದೆ ಸೂರ್ಯೋದಯ ವೊಂದರ ಬಗ್ಗೆ ಪದ್ಯ ಒಂದನ್ನು ಬರೆಯುತ್ತ, ಅದನ್ನು ಅಂದೇ ಹುಟ್ಟಿದ ಮಗುವಿನ ಹೇಲಿನ ಬಣ್ಣಕ್ಕೆ ಹೋಲಿಸಿದ್ದನ್ನು ನಾನು ಇಷ್ಟಪಟ್ಟಿರಲಿಲ್ಲ. ಆದರೆ ಅದು ಆಗಿನ ಸಾಹಿತಿಗಳಿಗೆ ಬರೆಯುವ ಚಮತ್ಕಾರ, ಓದುಗರಿಗೆ ಒಂದು ಆಶ್ಚರ್ಯವನ್ನುಂಟು ಮಾಡುವ ಕ್ರಿಯೆಯಾಗಿತ್ತು. ಆ ಕಾರಣಕ್ಕಾಗಿಯೇ ಬರೆದಿರುವುದು ನನಗೆ ಹಿಡಿಸಿರಲಿಲ್ಲ. ಲಕ್ಷಾಂತರ ಜನ ಓದುವ ಕಾದಂಬರಿ, ಕಥೆ, ಕವನ ಅವೆಲ್ಲವೂ ರೋಚಕವಾಗಿ, ರಂಜನೀಯವಾಗಿ ಇರಬೇಕು. ಅದರಿಂದ ಸ್ವಲ್ಪ ಮೇಲೇರಿದವನು ನಾನು. ಎಂದೋ ಒಂದು ದಿನ ಅವನೊಡನೆ ಮಾತನಾಡುತ್ತಿದ್ದಾಗ, ಅವನ ಅನೇಕ ಗುಣಗಳ, ಅವಗುಣಗಳ ಮೋಹಕ್ಕೆ ಒಳಗಾಗಿದ್ದ ನಾನು ಅವನನ್ನು ಬಯ್ಯುತ್ತ ನೀನು ಒಂದು ರೀತಿಯ "ಅಭಿಸಾರಿಕೆ" ಕಣಯ್ಯ ಎಂದು ನಾನು ಹೇಳಿದಾಗ, ತಕ್ಷಣ ಆತ 'ಅಭಿಸಾರಿಕೆ' ಎನ್ನುವ ಪದದ ಅರ್ಥವೇನೋ ಎಂದು ಕೇಳಿದ. ಸಾಹಿತಿಗಳಿಗೆ ಶಬ್ದಾರ್ಥ ಮೀಮಾಂಸೆ ಗೊತ್ತಿರುವುದಿಲ್ಲ ಎನ್ನುವ ಮೂಢನಂಬಿಕೆಗೆ ಒಳಗಾಗಿದ್ದ ನನಗೆ ಅದರ ಅರ್ಥದ ವಿವರಣೆ ಮತ್ತು ವಿಶ್ಲೇಷಣೆಯನ್ನು ಶ್ರೀರಂಗಪಟ್ಟಣದ ಕಾವೇರಿ ತೀರದ ಮೇಲಿರುವ ಪ್ರವಾಸೋದ್ಯಮ ಕೇಂದ್ರದ ಹೋಟೆಲಿನಲ್ಲಿ ನೀಡಿದಾಗ ಕೃಷ್ಣನ ಪಾಂಡಿತ್ಯದ ಬಗ್ಗೆ ತಿಳಿದು ಸಾಹಿತಿಗಳಿಗೂ ಪಾಂಡಿತ್ಯವಿರುತ್ತದೆ ಎಂದು ಆಶ್ಚರ್ಯವಾಯಿತು.

ಕೃಷ್ಣನನ್ನು ಮೊದಲು ನೋಡಿದ್ದು 1967ರಲ್ಲಿ. ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ಅಧಿವೇಶನ ಮೈಸೂರಿನಲ್ಲಿ ನಡೆದಾಗ. ಅಷ್ಟುಹೊತ್ತಿಗಾಗಲೇ ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಆತ ಕೀರ್ತಿ ಪಡೆದ ಒಬ್ಬ ಸಾಹಿತಿ ಆಗಿದ್ದ. ಬದ್ಧ ಸಮಾಜವಾದಿ ಕಾರ್ಯಕರ್ತರಾದ ನಮಗೆ ಪ್ರಸಿದ್ಧ ಸಾಹಿತಿ ಕೃಷ್ಣನಂತವರು ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿಗೆ ಬಂದದ್ದು ಅತ್ಯಂತ ಖುಷಿಕೊಟ್ಟ ವಿಷಯ. ಅಲ್ಲಿಂದಲೂ ಆತ ನನ್ನ ಸ್ನೇಹಿತ. ಕೃಷ್ಣನ ಮನಸ್ಸು ಮತ್ತು ವಿವೇಕ ವಿಮರ್ಶಾತ್ಮಕ ವಾಗಿತ್ತು. ಪತ್ರಿಕೆಯ ವಾಚಕರವಾಣಿಗಳಲ್ಲಿ ಕೂಡಾ ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿಯ ಮುಖಂಡರು ಮತ್ತು ಸಿದ್ಧಾಂತದ ಬಗ್ಗೆ ಟೀಕಾತ್ಮಕವಾದ ಪತ್ರಗಳನ್ನು ಬರೆಯುತ್ತಿದ್ದ. ನನ್ನ ರಾಜಕೀಯ, ಆರ್ಥಿಕ ದುರ್ದಿನಗಳಲ್ಲಿ ರಾಜಕೀಯವಾಗಿ ಆತ ಜೊತೆಗಿದ್ದ; ಇರಲಿಲ್ಲ. ಬಂದ; ಹೋದ.

1988ರಲ್ಲಿ ಕರ್ನಾಟಕದಿಂದ ಇಸ್ರೇಲ್, ಈಜಿಪ್ಟ್ ಮತ್ತು ಪ್ಯಾರಿಸ್‌ಗೆ ನಿಯೋಗವೊಂದನ್ನು ಡಾ॥ ರಾಮಮನೋಹರ ಲೋಹಿಯಾ ಮತ್ತು ಡೇವಿಡ್ ಬೆನ್ ಗುರಾಯಿನ್ ಮೈತ್ರಿ ಸಂಘದಿಂದ ಕಳುಹಿಸುವ ಸಂದರ್ಭದಲ್ಲಿ ಕೃಷ್ಣನನ್ನು ನಾನು ಆಯ್ಕೆ ಮಾಡಿದಾಗ ಆಯ್ಕೆ ಸಮಿತಿಯವರು ಕೃಷ್ಣ ನಮ್ಮ ಸಮಾಜವಾದಿ ಸಿದ್ಧಾಂತ ದಲ್ಲಿದ್ದಾನೆಯೇ ಎಂದು ಕಟುವಾಗಿ ನನ್ನನ್ನು ಪ್ರಶ್ನಿಸಿದಾಗ ಕೃಷ್ಣ ಪಕ್ಕಾಸಮಾಜವಾದಿ

ಯಲ್ಲ; ಆದರೆ ಆತ ಸಮಾಜವಾದಿ. ಅಷ್ಟೇ ಅಲ್ಲ ಆತ ಮಹಾನ್ ಬರಹಗಾರ; ಅವನು ನಿಯೋಗದಲ್ಲಿರಲೇಬೇಕು ಎಂದು ವಾದಿಸಿದೆ, ಅವನು ಹೋಗಿಬಂದ. ಬಂದವನೇ ಬೆಂಗಳೂರಿನಲ್ಲಿ ನನಗೆ ಫೋನ್ ಮಾಡಿ ಇಸ್ರೇಲಿನ ಉದ್ದಗಲಕ್ಕೆ ತಿರುಗಿದ. ತೆಗೆದ ಸರಿಸುಮಾರು 500 ಛಾಯಾಚಿತ್ರಗಳನ್ನು ನನಗೆ ತೋರಿಸಿದ. ಪ್ರತಿಯೊಂದು ಛಾಯಾಚಿತ್ರವೂ ಏನೆಂದು ವಿವರಿಸಿದ. ನನಗೆ ಅವನ ಜ್ಞಾಪಕಶಕ್ತಿ ನೋಡಿ ವಿಸ್ಮಯ ವಾಯಿತು.

ಅವನ ಕಡೆಯ ದಿನಗಳಲ್ಲಿ ಅಂದರೆ ಅವನ ಸಾವಿಗಿಂತ ಕೇವಲ 5–6 ದಿನಗಳ ಮುಂಚೆ ಬೆಂಗಳೂರಿನಲ್ಲಿ ಅವನ ಜೊತೆಗೆ ಊಟಮಾಡಿ ಕಳೆದಾಗ ನಾನು "ಕೃಷ್ಣ ಏನೋ ನೀನು ನನಗಿಂತ 4–5 ವರ್ಷ ಚಿಕ್ಕವನು. ಕಣ್ಣೆಲ್ಲಾ ಬತ್ತಿಹೋಗಿವೆ. ದುರ್ಬಲವಾಗಿದ್ದೀಯ. ಈ ದಿವಸ ಮನೆಯಲ್ಲೇ ಇರು. ಬೆಳಿಗ್ಗೆ ನಿನ್ನನ್ನು ಒಳ್ಳೆ ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗ್ತೇನೆ" ಅಂತ ಬಹಳ ಹೇಳಿದೆ. ಆದರೆ, ಕೇಳಲಿಲ್ಲ. ಮರುದಿವಸ ಬರುತ್ತೇನೆಂದು ಅಂದೇ ಮೈಸೂರಿಗೆ ಹೋದ. ಮರುದಿವಸ ಬಂದ. ಕೆಲನಿಮಿಷಗಳು ಮಾತ್ರ ನನಗೆ ಸಿಕ್ಕಿದ. ಅದು ಬಹುಶಃ 1989ರ ಡಿಸೆಂಬರ್ 28ರಂದು. ಜನವರಿ 4ರಂದು ಆತನಿಗೆ ಹೃದಯಾಘಾತವಾಯಿತೆಂದು ತಿಳಿದಾಗ ನನ್ನ ಹೃದಯಕ್ಕೂ ಅಷ್ಟೇ ಘಾತವಾಯಿತು. ಜೊತೆಗೆ ನನ್ನಂತಹ ಸಂವೇದನಾಶೀಲರ ಹೃದಯಕ್ಕೂ ಇದೇ ರೀತಿ ಒಂದು ದಿನ ಆಗಬಹುದೆಂಬ ಭಯವುಂಟಾಯಿತು.

ಆತನು ಪ್ರಾಣವನ್ನು ಬಿಟ್ಟ ಮರುದಿನ ನಾವು ಮೈಸೂರಿಗೆ ಹೋದಾಗ ಆತನ ಪತ್ನಿ ವಿನುತ, 'ರಮೇಶ್ ಇವನು ಸಾಯುತ್ತಿದ್ದ ಎಂದು ನಿಮಗೆ ಗೊತ್ತಾಗಿ ಈತನನ್ನ ಇಸ್ರೇಲ್, ಪ್ಯಾರಿಸ್ ನೋಡಿಬರಲು ಕಳಿಸಿದ್ರು' ಎಂದು ಅಳುತ್ತಾ ಕೇಳಿದಾಗ ನನ್ನ ದುಃಖ ಇಮ್ಮಡಿಯಾಯಿತು. ಅವನ ತೋಟವನ್ನು ಅನೇಕ ಸಾರಿ ನೋಡಿದ್ದೆ. ಅವನ ಮನೆಗೆ ಹೋಗಿದ್ದೆ. ಅವನು ನನ್ನ ಮನೆಗೂ ಬಂದಿದ್ದ. ಅವನ ಮಗ ಪ್ರದ್ಯುಮ್ನ "ಅಂಕಲ್ ಬೆಂಗಳೂರಿಗೆ ಬಂದಾಗ, ನಿಮ್ಮ ಮನೆಗೆ ನಾವು ಊಟಕ್ಕೆ ಬಂದಾಗ ನಮ್ಮ ಜತೆಗೆ ನಮ್ಮಪ್ಪ ಇರುತ್ತಿದ್ದ" ಎಂದೇಳಿ ದುಃಖಿಸಿದಾಗ ನಾನು ನಿರುತ್ತರನಾದೆ. ಕೃಷ್ಣನ ಇತ್ತೀಚಿನ ವರ್ಷಗಳಲ್ಲಿ ಅವನನ್ನು ತೀವ್ರವಾಗಿ ಪ್ರೀತಿಸುತ್ತಿದ್ದ ಇನ್ನೊಬ್ಬ ಮಿತ್ರ ಅತಿ ಶ್ರೀಮಂತ, ಗಣಿತ ಬುದ್ಧಿಯ ಚೈತನ್ಯಕುಮಾರ್, ಅಂದು "ಕೃಷ್ಣ ತುಂಬು ಬದುಕನ್ನೇ ಬದುಕಿದ್ದಾನೆ. ನಾವ್ಯಾರೂ ದುಃಖಿಸಬಾರದು ಎಂದು ಹೇಳುತ್ತಿದ್ದ. ಯಾರೋ ಹೇಳಿದರು "ಶಂಕರಾಚಾರ್ಯರು, ಅಲೆಕ್ಸಾಂಡರ್–ಇವರೆಲ್ಲಾ ತಮ್ಮ ಮೂವತ್ತು ಮೂವತ್ತೈದನೆಯ ವಯಸ್ಸಿನಲ್ಲಿ ಪ್ರಖ್ಯಾತಿ ಪಡೆದು ತೀರಿದರು. ಹಾಗೇ ಅತ್ಯಂತ ಖ್ಯಾತಿಯನ್ನು ಪಡೆದ ಕೃಷ್ಣ ಕನ್ನಡ ಸಾಹಿತ್ಯಲೋಕವನ್ನು ಅನಾಥರನ್ನಾಗಿ

ಮಾಡಿ ನಮ್ಮನ್ನು ಶೂನ್ಯಮನಸ್ಕರನ್ನಾಗಿ ಮಾಡಿದ. ಈ ದುಃಖದಿಂದ ಪಾರಾಗಲು ನಮಗೆ ಇನ್ನೊಬ್ಬ ಮಾನಮೋಹಕ ಕೃಷ್ಣನ ಸೃಷ್ಟಿಯಾಗಬೇಕಷ್ಟೆ".

– ರಮೇಶ್ ಬಂದಗದ್ದೆ

## ಬೈಕು ಮತ್ತು ಅಂಗನೆಯರು

1973ಕ್ಕೆ ನನ್ನ ಹಳ್ಳಿಯ ಮನಸ್ಸನ್ನು ಹೊತ್ತುಕೊಂಡೇ ಎಂ.ಎ. ತತ್ವಶಾಸ್ತ್ರ ಓದಲು ಮೈಸೂರು ಪೇಟೆಗೆ ಹೋದೆ. ಬಿ.ಎ. ಕ್ಲಾಸುಗಳಲ್ಲಿ ಕನ್ನಡವನ್ನು ಮೇಜರ್ ವಿಷಯವಾಗಿ ಓದುವಾಗ ಬೇಂದ್ರೆ, ಕುವೆಂಪು, ಪು.ತಿ.ನ. ಬಗ್ಗೆ ಚೌಚೌವಾಗಿ ಓದಿಕೊಂಡಿದ್ದ ನನಗೆ ನವ್ಯ ಸಾಹಿತ್ಯದ ಉಚ್ಛ್ರಾಯ ಸ್ಥಿತಿಯ ಆ ಕಾಲದಲ್ಲಿ ನವ್ಯ ಸಾಹಿತಿ ಸಾಹಿತಿಗಳಾದ ಲಂಕೇಶ್. ತೇಜಸ್ವಿ, ಅನಂತಮೂರ್ತಿ–ಇವರ್ಯಾರನ್ನೂ ಗಂಭೀರವಾಗಿ ಓದಿಕೊಳ್ಳದಿದ್ದರೂ–ಇವರೆಲ್ಲ ಕಾಮನಬಿಲ್ಲಿನ ಥರಾ ಕಾಣಿಸುತ್ತಿದ್ದರು. ಇಂಥದರಲ್ಲಿ ನನ್ನನ್ನು ವಿಚಿತ್ರವಾಗಿ ಆಕರ್ಷಿಸಿದವರೆಂದರೆ ದೇವನೂರ ಮಹಾದೇವ ಮತ್ತು ಆಲನಹಳ್ಳಿ. ಮೈಸೂರಿಗೆ ಹೋದ ತಕ್ಷಣ ಅದೆಂಥದೋ ಸಂಬಂಧದಿಂದ ಮಹಾದೇವ ಮೊದಲು ಪರಿಚಯವಾದ. ಅವನೊಳಗಿದ್ದ ಮಗು ನನ್ನನ್ನು ಬೇರೆಯವರತ್ತ ಹೋಗಲು ಬಿಡಲೇ ಇಲ್ಲ. ಹಿಂಗಾಗಿ ಕೃಷ್ಣ ನನ್ನೆದುರೇ ಹೋದರೂ ನಾನು ನೇರ ಪರಿಚಯ ಮಾಡಿಕೊಳ್ಳುವ ಗೋಜಿಗೇ ಹೋಗಲಿಲ್ಲ. ಆಗ ನಾನು ಹೆಂಗಿದ್ದೆ ಅಂದರೆ ಮಹಾದೇವ ಇದ್ದರೆ ಎಲ್ಲವೂ ಇದ್ದಂಗೆ ಅನ್ನೋ ಥರ ಇದ್ದೆ.

ಕೃಷ್ಣನನ್ನು ನೋಡಿದಾಗೆಲ್ಲ ಒಳಗೊಳಗೇ ಏನೋ ಅನಿಸುತ್ತಿತ್ತು. ಅದೇನು ಅಂತ ಆಮೇಲೆ ನನಗೆ ಗೊತ್ತಾದದ್ದು. ಕೃಷ್ಣ ಓಡಿಸುತ್ತಿದ್ದ ಜಾವಾ ಬೈಕು, ಅವನ ಹಿಂದೆ ಕುಂತ ಹೆಣ್ಣು, ಬೈಕನ್ನು ಓಡಿಸುತ್ತಿದ್ದ ಸ್ಟೈಲು ಇವೆಲ್ಲ ನನಗೆ ಮುಖ್ಯವಾಗಿ ಅವನ ಅಗಾಧ ಓದು, ತಟ್ಟುವ ಬರಹ ಹಿಂದೆ ಬೀಳುತ್ತಿದ್ದವು. ಮೈಸೂರು ಪೇಟೆಯನ್ನು ಪಿಳಿಪಿಳಿ ನೋಡುತ್ತಿದ್ದ ನನ್ನ ಹಳ್ಳಿಯ ಮನಸ್ಸು ಸಹಜವಾಗಿ ಇಂಥ ಎಲೈಟ್ ಸ್ಟೈಲಿಗೆ ಮರುಳಾಗಿ ಬಿಟ್ಟಿತ್ತು. ಸಾಹಿತಿಯಾಗುವುದರ ಮೂಲಕ ಈ ಎಲ್ಲ ಸುಖಗಳೂ ಕೃಷ್ಣನಿಗೆ ಸಿಕ್ಕಂತೆ ನನಗೂ ಸಿಗಬಹುದೆಂಬ ಹಂಬಲ ಪದ್ಯ ಬರೆಯಲು ಹಚ್ಚಿತು. ಇದು ನನ್ನ ಒಳಾಸೆ. ಆದರೆ ಬರೆದ ಪದ್ಯಗಳೆಲ್ಲ ಕ.ಬು. ಸೇರುತ್ತಿದ್ದ ಹಾಗೇ ಉತ್ಸಾಹ ಇಳಿದು ಇದೇನೋ ಅಸಾಧ್ಯವಾದ್ದು ಅನಿಸುತ್ತಿತ್ತು. ಪದ್ಯ ಬರೆದು ಸಾಹಿತಿಯಂತೆ ಸೋಗು ಮಾಡಿದರೂ ಯಾವ ಹೆಣ್ಣೂ ನನ್ನ ಬಳಿ ಸುಳಿಯಲೇ ಇಲ್ಲ. ಹಂಗಾದರೆ ಆ ಕೃಷ್ಣನ ಸುತ್ತ ಸುಳಿಯುತ್ತಿದ್ದ ಆ ಹುಡುಗಿಯರು ಕೃಷ್ಣನೊಳಗೇನು ಕಂಡಿದ್ದರೋ

ಅಂಥದೊಂದು ನನಗೆ ಕಾಣದಾಗಿದ್ದ ಮಿಥ್ ಥರ ಇತ್ತು. ಇಷ್ಟಾದ ಮೇಲೂ ನನಗೆ ಚಿರ ಪರಿಚಿತವಾಗಿದ್ದದ್ದು ಕೃಷ್ಣನ ಬೈಕು, ಬೈಕೋಡಿಸುವ ಸ್ಟೈಲು, ಮನ ಸಳೆವ ಅಂಗನೆಯರು. ಸಾಹಿತ್ಯವನ್ನು ಹಸಿಹಸಿಯಾಗಿ ಗ್ರಹಿಸುತ್ತಿದ್ದ ನನ್ನ ಮುಗ್ಧ ಮನಸ್ಸು ಚಂಚಲೆಯರ ಲೋಕಕ್ಕೆ ಬೆರಗಾಗಿ ತಪಿಸುತ್ತಿತ್ತು. ಅಲ್ಲೆಲ್ಲೂ ನೀಲಾಂಜನೆಯ ಕರಗುವ ಯೌವನ ಸುಳಿಯಲೇ ಇಲ್ಲ.

ಇದಾಗಿ ನಾನು ಹಂಗೇ ಎಂ.ಎ. ಮುಗಿಸಿ ಮೇಸ್ಟ್ರಾದ ಮೇಲೆ ಪದ್ಯಗಳನ್ನು ಹೆಚ್ಚು ಹೆಚ್ಚು ಬರೆಯುತ್ತಾ ಬರೆದದ್ದನ್ನು ಹರಿದು ಹಾಕುತ್ತಾ, ತಿದ್ದುತ್ತಾ ಉಳಿದದ್ದನ್ನು ಆ ಈ ಪತ್ರಿಕೆಗಳಲ್ಲಿ ಪ್ರಕಟಿಸುತ್ತಾ ಒಂದು ಹಂತ ತಲುಪಿರಬಹುದೆಂಬ ಗುಮಾನಿ ಯಿಂದ ಕೊಂಚ ತೃಪ್ತಿ ಪಡೆಯುತ್ತಿದ್ದೆ. ಆವಾಗ ನಾನು ಆಗಾಗ ಮೈಸೂರಿಗೆ ಹೋಗಿ ಬರುತ್ತಿದ್ದೆ. ನನ್ನ ಪದ್ಯಗಳನ್ನು ಸಂಕಲನ ರೂಪದಲ್ಲಿ ತರಲು ನಾನು ಬರೆದ ಪದ್ಯಗಳಲ್ಲಿ ಒಳ್ಳೆಯವನ್ನು ಆಯ್ಕೆ ಮಾಡಲು ನಮ್ಮ ಮಹಾದೇವನಿಗೆ ಕೇಳಿದೆ. ಆದಿ ದೇವನ ಥರೋ ಈ ನಮ್ಮ ಮಹಾದೇವ ತನ್ನ ಹಿಮಾಲಯ ಸೋಮಾರಿತನ ತೋರಿಸಿಯೂ ತೋರಿಸಿಕೊಳ್ಳದೆ ನಾನೆಂದರೆ ತನ್ನ ಅಕ್ಕರೆಯನ್ನು ಬಿಟ್ಟುಕೊಡದೆ 'ಪದ್ಯಾ ಎಲ್ಲಾ ಕೊಡು ಕೃಷ್ಣನ ಕೈಲಿ ಕೊಡ್ತೀನಿ. ಅವನೇ ಸರಿ' ಅಂದ. ನೀನೇ ಆಯ್ದುಕೊಡು ಅನ್ನೋ ನನ್ನ ಹಠದ ನಡುವೆ ನನ್ನ ಪದ್ಯಗಳು ಮಹಾದೇವನ ಮೂಲಕ ಕೃಷ್ಣನ ಕೈಸೇರಿ ಹತ್ತೋ ಹದಿನೈದು ದಿನಗಳಲ್ಲಿ ನನ್ನನ್ನು ಮುಟ್ಟಿದವು. ಆಗ ಆ ಪದ್ಯಗಳನ್ನು A-B-C-D ಅನ್ನೋಥರ ಮಾಡಿ D ಪದ್ಯಗಳನ್ನು ಸಂಕಲನದಲ್ಲಿ ಸೇರಿಸಬಾರದೆಂದು ಹೇಳಿದ್ದ. ಈ ಹಂತದಲ್ಲಿ ಕೂಡ ಕೃಷ್ಣನನ್ನು ನೇರ ಪರಿಚಯ ಮಾಡಿಕೊಂಡಿರಲಿಲ್ಲ. ಒಂಥರಾ ಸಂಕೋಚ ಕಾಡುತ್ತಿತ್ತು. ನನ್ನ ಪದ್ಯ ಗಳನ್ನು ಕೃಷ್ಣ ಆಯ್ಕೆ ಮಾಡಿದ್ದು ಅನ್ನೋ ಹೆಮ್ಮೆ ಮಾತ್ರ ನನ್ನೊಳಗಿದ್ದು A ಗುಂಪಿಗೆ ಸೇರಿಸಿದ್ದ ನಾಲ್ಕೈದು ಪದ್ಯಗಳು ನಾನು ಕಟ್ಟಿದ ಮೇಜರ್ ಪೊಯೆಟ್ರಿಯೆಂಬ ಹಮ್ಮು ಹುಟ್ಟಿಬಿಟ್ಟಿತ್ತು. ಈಗ ಅದು ಬೇರೇನೇ. ಯಾಕೆ ಹಂಗೆನಿಸಿತ್ತು ಅಂದರೆ ಆಗಲಾದರೂ ಅಂಗನೆಯರು ಒಲಿಯಬಹುದೇ ಎಂಬ ಕಾತರ ಕೃಷ್ಣನನ್ನು ಮುಂದಿಟ್ಟುಕೊಂಡೇ ಮೂಡಿ ಮುಳುಗುತ್ತಿತ್ತು.

ಕೃಷ್ಣ ನೇರ ಪರಿಚಯವಾದದ್ದು ಆತ ಹೋಗುವುದಕ್ಕೆ ನಾಕು ತಿಂಗಳ ಮುಂಚೆ ಯಷ್ಟೆ. ದಸರಾ ಕವಿ ಸಮ್ಮೇಳನಕ್ಕೆ ನಾನು ಆಹ್ವಾನಿತನಾಗಿ ಹೋದಾಗ. ಕಾಳೇಗೌಡರು ನನಗೆ ಮುಂಚೆಯೇ ಪತ್ರ ಬರೆದು ತಿಳಿಸಿದ್ದರು. ಕಮಿಟಿಯಲ್ಲಿ ಇದ್ದು ಗುದ್ದಾಡಿ, ಒದ್ದಾಡಿ ದರ್ಬಾರ್ ಹಾಲಿನಲ್ಲೇ ಸಮ್ಮೇಳನ ನಡೆಯುವಂತೆ ಮಾಡಿ ಕವಿಗಳೆಲ್ಲರನ್ನು ರಾಜಾಸ್ಥಾನಕ್ಕೆ ಕೊಂಡೊಯ್ದಿದ್ದ. ಕವಿತೆ ಓದುವುದೆಲ್ಲ ಮುಗಿದ ಮೇಲೆ ಊಟಕ್ಕೆ ಹೋಗುವಾಗ ಕೃಷ್ಣ ನಾನು ಒಂದೇ ಕಾರಿನಲ್ಲಿ ಹೋದೆವು. ಆಗ

ಕೃಷ್ಣ ತೃಪ್ತಿಯಿಂದ "ರೀ ತಾಳ್ಯ ನೀವೆಲ್ಲ ಮುಂದಿನ ಸಮ್ಮೇಳನಕ್ಕೆ ಫ್ಲೈಟಲ್ಲಿ ಬರ್ಬೇಕು ಕಣ್ರಿ. ಒಂದೊಂದ್ಸಾಪ್ರನಾದ್ರೂ ಒಬ್ಬೊಬ್ಬ ಕವಿಗೆ ಸಿಗಬೇಕು ಜೊತೆಗೆ ಶಾಲು, ಇತ್ಯಾದಿ" ಅಂದ. ನನಗೋ ಅಲ್ಲಿ ಕುಂತ ಕಾರಿನಲ್ಲೇ ಮಾನವ ಸಹಜ ಆಸೆಯೊಂದು ಕೃಷ್ಣನ ಮೂಲಕ ಮೂಡಿ ಆಕಾಶದ ದೂರಕ್ಕೆ ಚಿಕ್ಕೆಯಂಥ ವಿಮಾನ ಕಂಡ ನನಗೆ ಆ ಕ್ಷಣದಲ್ಲಿ ದೇವಾನು ದೇವತೆಗಳ ಥರ ವಿಮಾನದೊಳಗೆ ಕುಂತು ಅಲ್ಲಿಂದ ಹಾರಿ ದರ್ಬಾರ್ ಹಾಲಿನಲ್ಲಿ ಶಾಲು ಹೊದ್ದುಕೊಳ್ಳುತ್ತಾ ಕೃಷ್ಣನ ಕೈ ಹಿಡಿದು ಓಡಾಡಿದಂತೆ ಭಾಸವಾಯಿತು.

ಮಾರನೇ ದಿನ ವಿಶ್ವಕನ್ನಡ ಸಮ್ಮೇಳನದ ರಂಗಮಂದಿರದೆದುರು ತನ್ನ ಮಗನ ಜೊತೆ ನಮ್ಮೆಲ್ಲರೊಂದಿಗೆ ಕೂತು ಅವನ ಕೈಲಿದ್ದ ಎಲೆಕ್ಟ್ರಾನಿಕ್ ಗಡಿಯಾರದಲ್ಲಿ ನೂರಾರು ವಿಳಾಸ, ನೂರಾರು ಫೋನ್ ನಂಬರ್, ಕಾಲ ದಿನಾಂಕಗಳನ್ನು ಅಡಗಿಸಿಟ್ಟು ಅವನ ಮಗನ ಮೂಲಕ ಅವರ ನಂಬರ್, ಇವರ ವಿಳಾಸ ಅಂತ ಚಕಚಕ ತೋರಿಸಿ ಜಾದೂಗಾರನಂತೆ ಕಂಡ ಕೃಷ್ಣ, ಯಾವುದೋ ಜೀಪನ್ನು ಪ್ರಯಾಸಪಟ್ಟು ಹತ್ತಿ ಅಲ್ಲಿಂದ ಆ ಜೀಪಿನಲ್ಲಿ ತುಸುದೂರ ಹೋಗಿ ಒಂದು ತಿರುವಿನಲ್ಲಿ ಮಾಯವಾದ. ಇದಾದ ನಾಲ್ಕೈದು ತಿಂಗಳಿಗೆ ಮೈಯೆಲ್ಲ ನಡುಗುವಂತೆ ಕೃಷ್ಣನ ಸಾವಿನ ಸುದ್ದಿ ಬಂತು. ನಾನು ಇಡೀ ದಿನ ಡಿಮ್ಮಾಗಿ ಕುಂತಿದ್ದೆ. ವಿಮಾನ ಹತ್ತುವ ನನ್ನ ಆಸೆ ಕೂಡ ಅಷ್ಟೇ ಡಿಮ್ಮಾಗಿತ್ತು.

— ಚಂದ್ರಶೇಖರ ತಾಳ್ಯ

## ನಗುವ ಬಾಲಕ

ಏರಿಳಿಯುತ್ತ ಪುಟಿಯುವ ಕಾರಂಜಿಯ ನೆತ್ತಿಯಲ್ಲಿರಿಸಿದ
ಪಿಂಗ್‌ಪಾಂಗ್ ಚೆಂಡು ಕುಣಿಯುವಂತೆ ಒಂದು
ವಿಸ್ಮಯಕಾರಕ ಸೂಕ್ಷ್ಮ ಸಮತೋಲದಲ್ಲಿ ಆಡುವ
ಮನಸ್ಸನ್ನ ಅಂತೆಯೇ ಇರಗೊಳಿಸಿದ್ದರೆಂಬಂತೆ ಕೃಷ್ಣ
ನನಗೆ ಕಂಡಿದ್ದರು.

ಬೆಳಕನ್ನು ಬಣ್ಣ ಬಣ್ಣಗಳಾಗಿ ಒಡೆಯುವ ಅಹಂಕಾರದ
ಹರಳನ್ನು ಬಿಚ್ಚಿದ ಅಂಗೈಯಲ್ಲಿರಿಸಿ ಆಡಿಸಿ ನೋಡುತ್ತ
ಬೆರಗಾಗಿ ನಗುವ ಬಾಲಕನ ಹಾಗೆ ಕೃಷ್ಣ ಎಂದು
ಅವರನ್ನು ನೋಡಿದಾಗ ಅನಿಸುತ್ತಿತ್ತು.

—ಎಸ್. ಮಂಜುನಾಥ್

## ನೆನಪುಗಳ ಕಾಡಿನಲ್ಲಿ....

ಶ್ರೀಕೃಷ್ಣ ಆಲನಹಳ್ಳಿಯನ್ನು ಕುರಿತು ನಾನು ಆಲೋಚಿಸತೊಡಗಿದಾಗ, ಈ ಕೆಲವು ಮಾನವ ಜೀವಿಗಳ ವಿಕಾರ ಭಾವನೆಗಳನ್ನು ಕಂಡು, ಕೇಳಿ ನಾನು ಗಡಗಡನೆ ನಡುಗುತ್ತೇನೆ. ಪೇಳಿ–ಕೇಳಿ ನಮ್ಮದು ಕಳ್ಳ ಸಮಾಜ. ಯಾರ ಬಗ್ಗೆಯೂ, ಯಾವಾಗಲೂ ಸತ್ಯವನ್ನು ಹೇಳಲು ಹಿಂಜರಿಯುವ ಭಾರಿ ಕುಳಗಳೇ ನಮ್ಮಲ್ಲಿ ಹೆಚ್ಚು. ತಮ್ಮ ನೆರಳಿನ ಆಶ್ರಯವನ್ನು ಒಲ್ಲದ ದೂರದಲ್ಲಿ ಮೊಳೆತು, ಬೇರು ಬಿಟ್ಟು ಬೆಳೆದು ನಳನಳಿಸುತ್ತ ಹಣ್ಣಿನ ಗೊಂಚಲುಗಳನ್ನು ತೂಗಿಹಾಕಿಕೊಂಡು ಹೆಮ್ಮೆಯಿಂದ ಬೀಗುತ್ತ ಸೂರ್ಯನ ಕೆಳಗೆ, ಗಾಳಿ–ಧೂಳುಗಳ ಗೆಳೆತನದಲ್ಲಿ ಬೆಳೆವ ಕಾಡು ಗಿಡಗಳನ್ನು ಕಂಡರೆ ಮುದಿಮರಗಳಿಗೆ ತಾತ್ಸಾರ. ಆದರೆ ಈ ಕಾಡುಗಿಡಗಳು ಕುಂಡಗಳೊಳಗೆ ಬೆಳೆದು ತಮ್ಮ ಸೀಮಿತ ಬದುಕಿನಲ್ಲಿ ಅಪಾರವಾದುದನ್ನು, ಲೋಕ ಬೆರಗುಗೊಳ್ಳುವಂತೆ, ಸಾಧಿಸಿರುವಂತೆ ಬೀಗುವ ಅಲ್ಪಾಯುಗಳ ನೋವಿನ ಮುಲುಕಾಟದ ಕಾಟವನ್ನು ಲೆಕ್ಕಿಸದೆ ತನ್ನ ಬೇರುಗಳನ್ನು ಮಣ್ಣಿನ ಗರ್ಭದೊಳಗೆ ಹರಡಿಕೊಳ್ಳುತ್ತ, ಚಿಗುರನ್ನು ಮೂಡಿಸುತ್ತ; ಹೊಸಬರಿಗೆ ಧೈರ್ಯ ನೀಡುತ್ತ ಬೆಳೆದು ಸಾರ್ಥಕತೆಯನ್ನು ಕಾಣುತ್ತವೆ. ಉದಾಹರಣೆಗಳನ್ನು ನೀಡುವಾಗ ಕೃಷ್ಣನ ಬದುಕು, ಅವನ ನಗು, ಸಿಟ್ಟು ಉಡಾಫೆಯ ಮಾತುಗಳೆಲ್ಲ ನನ್ನ ಕಿವಿಗಳಲ್ಲಿ ಮೊರೆಯುತ್ತವೆ.

1963ನೇ ಇಸವಿಯ ಒಂದು ಸಂಜೆ; ರಾಮಸ್ವಾಮಿ ಸರ್ಕಲ್ ಬಳಿ, ಪೈಜಾಮ, ಜುಬ್ಬಧಾರಿಯಾದ ಕೃಷ್ಣ ತನ್ನ ಕಣ್ಣುಗಳಲ್ಲಿ ತುಂಟತನವನ್ನು ತುಳುಕಿಸುತ್ತ, ನನ್ನನ್ನು ಪರಿಚಯಿಸಿದವರಿಗೆ: "ಓ ! ನಾನು ಆಲನಹಳ್ಳಿ; ಇವ್ರು, ಬೆಸಗರಹಳ್ಳಿ !" ಎಂದು ಕೈ ಕುಲುಕಿದ. 'ಲಹರಿ' ಸಾಹಿತ್ಯಕ ಪತ್ರಿಕೆ ಆಗ ಅಂಬೆಗಾಲಿಡುವ ಮಗು ! ಬಿ. ಎನ್. ಶ್ರೀರಾಮ, ತೇಜಸ್ವಿಯವರೇ ಅಪ್ಪ–ಅಮ್ಮಂದಿರು. ಜೆ.ಹೆಚ್. ನಾಯಕ, ಎಚ್.ಎಂ. ಚನ್ನಯ್ಯ, ಅನಂತಮೂರ್ತಿ-ಮೊದಲಾದವರೆಲ್ಲ ಆಗ ಮೈಸೂರಿನ ಸಾಹಿತ್ಯ ಲೋಕದಲ್ಲಿ ಪ್ರಮುಖರಾದವರು; ಜೊತೆಗೆ, 'ಸಾಕ್ಷಿ' ಪತ್ರಿಕೆ ಗೋಪಾಲಕೃಷ್ಣ ಅಡಿಗರ ನೇತೃತ್ವದಲ್ಲಿ ನಡೆಯುತ್ತಿತ್ತು. ಕೆ. ಸದಾಶಿವ, ಬಿಳಗಿರಿ, ಟಿ. ಜಿ. ರಾಘವ ಇತ್ಯಾದಿ ಬರೆಯುತ್ತಿದ್ದರು. ಇದರಲ್ಲಿ ಬಂದಿದ್ದ ಸದಾಶಿವರ ಕತೆ: "ಮತ್ತೆ ಮಳೆ ಹೊಯ್ಯುತ್ತಿದೆ, ಎಲ್ಲ ನೆನಪಾಗುತ್ತಿದೆ" ಕತೆಯ ಸಾಲುಗಳೆಲ್ಲ ನನ್ನ ನಾಲಿಗೆಯ ಮೇಲೆ ಕುಣಿಯುತ್ತಿದ್ದು, ಈ ಕತೆಗೆ ಕೃಷ್ಣನೂ ಮಾರುಹೋಗಿದ್ದ. 'ಲಹರಿ', 'ಸಾಕ್ಷಿ'ಗಳಲ್ಲಿ ಅಚ್ಚಾಗುತ್ತಿದ್ದ ಲೇಖನಗಳು, ಪದ್ಯಗಳನ್ನು ಒಬ್ಬರಿಗೊಬ್ಬರು ನಾವು ಓದಿ ಹೇಳುತ್ತಿದ್ದೆವು. ನೂರಡಿ ರಸ್ತೆಯ ಗಲ್ಲಿ ಒಂದರ ಮಹಡಿ ಮೇಲೆ ರೂಮುಮಾಡಿಕೊಂಡು ಇಂಗ್ಲಿಷ್ ಎಂ.ಎ. ಓದುತ್ತಿದ್ದ ಶ್ರೀರಾಮ್, ಕಣ್ಣುಗಳನ್ನು ಮೆಡರಿಸಿದರೆ ನಾವು ಒಸಿ ಬೆಚ್ಚಿ, ಮಾತ

ನಾಡುತ್ತಿದ್ದವರು 'ಗುರುಸಮಾನರು' ಮಾತನಾಡಲೆಂದು ನಿಲ್ಲಿಸಿ; ಆಶೀರ್ವಚನಗಳಿಗೆ ದೈನ್ಯದಿಂದ ಕಾಯುತ್ತಿದ್ದೆವು. ಶಿವತೀರ್ಥನ್ 'ಲಹರಿ'ಯಲ್ಲಿ ಬಂದಿದ್ದ ತನ್ನ ಕವಿತೆ 'ತೆನೆ'ಯ ಬಗ್ಗೆ ಹಿಗ್ಗಿನಿಂದ ನಾವು ಕೇಳಬೇಕೆಂದಾಗ, ಸ್ವಲ್ಪ ಬಿಗುಮಾನದಿಂದಲೇ ತಮ್ಮ ಕವಿತೆಯಲ್ಲಿರುವ ಬೀಸಿನ ಬಗ್ಗೆ 'ಅಪ್ಪಣೆ' ಕೊಡಿಸುತ್ತಿದ್ದರು. ಕೃಷ್ಣನಿಗೆ ಮೊಟ್ಟ ಮೊದಲು ಕಾವ್ಯದೀಕ್ಷೆ ನೀಡಿದ ಇವರ ನುಡಿಗಳು ನಮಗೆ ಕೆಲವೊಮ್ಮೆ ವೇದಸಮಾನ! ದೊಗಳೆ ಪೈಜಾಮು, ಮಂಡಿ ಮೀರಿ ಇನ್ನೇನು ನೆಲ ತಾಕುತ್ತಿದೆ ಎನ್ನುವ ಜುಬ್ಬಗಳನ್ನು ಕಂಡು ನನಗೆ ಒಳಗೊಳಗೇ ನಗು! ಕಾವ್ಯದಲ್ಲಿ ಬೀಸಿನ ಪಾತ್ರ ಮುಗಿದ ಮೇಲೆ, ಆಡು ಮಾತಿನ ಪ್ರಯೋಗ; ಇದರ ಶಕ್ತಿಯ ಬಗೆಗೆ ಮೆಲ್ಲಗೆ ಕೃಷ್ಣ ತನ್ನ ಬಾಯಿ ತೆರೆಯುತ್ತಿದ್ದ.

ಹೀಗೆ ದಿನಗಳು ಕಳೆದಂತೆ ಕಾಳೇಗೌಡ ನಾಗವಾರ, ಕ್ಯಾತನಹಳ್ಳಿ ರಾಮಣ್ಣ, ರಮಾಕಾಂತ, ಬಿ. ವಿ. ಕೃಷ್ಣಪ್ಪ, ವೀರಭದ್ರ. ಐತಾಳರು, ಸದಾಶಿವ ಎಣ್ಣೆಹೊಳೆ ಇತ್ಯಾದಿ ಒಂದು ಪಡೆಯೇ ಬೆಳೆಯಿತು. ಕೃಷ್ಣನ ಗೀತಾ ರೋಡಿನಲ್ಲಿದ್ದ ರೂಮಿನಲ್ಲಿ, ಸುಬ್ಬರಾಯನಕೆರೆಯ ದಂಡೆಯ ಮೇಲಿದ್ದ ವೀರಭದ್ರುರ ರೂಮಿನಲ್ಲಿ, ಶ್ರೀರಾಮರ ರೂಮಿನಲ್ಲಿ, ನಾಗವಾರರ ರೂಮಿನಲ್ಲಿ ಎಲ್ಲೆಂದರಲ್ಲಿ ಎಲ್ಲ ಸೇರಿ; ಸಾಹಿತ್ಯಕ್ಕೆ ಸಂಬಂಧ ಪಟ್ಟಂತೆ ಮಾತು, ಮಾತು, ಮಾತು! ಮಸಾಲೆ, ಕಾಫಿಗಳ ಸೇವನೆ; ಒಮ್ಮೊಮ್ಮೆ ರಾತ್ರಿಯೆಲ್ಲ ಪ್ರಭುದೇವ ಟಾಕೀಸ್‌ವರೆಗೆ, ಚಾಮುಂಡೇಶ್ವರಿ ಟಾಕೀಸಿನವರೆಗೆ ವಡೆ, ಟೀ ಹುಡುಕುತ್ತ, ಮಾತಾಡುತ್ತ, ಜಗಳವಾಡುತ್ತ, ನಮ್ಮವನ್ನು ಬಯ್ಯುತ್ತ, ಟೀಕಿಸುತ್ತ, ಒಮ್ಮೊಮ್ಮೆ ಹೊಗಳುತ್ತ–ಅಲೆದಾಟ! ವಚನಕಾರರು, ಕುಮಾರವ್ಯಾಸ, ಕುವೆಂಪು, ಅಡಿಗರ ವಿಚಾರ, ಅನಂತಮೂರ್ತಿಯವರ 'ಪ್ರಶ್ನೆ'ಯ ಕತೆಗಳು, ಸದಾಶಿವರ 'ನಲ್ಲಿ ಯಲ್ಲಿ ನೀರು ಬಂತು', ಶ್ರೀಕಾಂತರ 'ಭೂಮಿ ಕಂಪಿಸಲಿಲ್ಲ', ಟಿ. ಜಿ. ರಾಘವರ ಕತೆಗಳೂ ಚರ್ಚೆಗೆ ಒಳಗಾಗಿ ವಡೆ, ಟೀ ದೊರಕಿದಾಗ ಮೂಲೆ ಸೇರುತ್ತಿದ್ದುವು! ಈ ಚರ್ಚೆಯಲ್ಲಿ ಕೃಷ್ಣನ ಧ್ವನಿಯೇ ಜೋರು! ಇವನ ನಾಲಗೆ, ಕೈಗಳ ಬೀಸಿಗೆ ನಾವು ಸ್ವಲ್ಪ ಹೆದರುತ್ತಿದ್ದೆವು.

'ಮಣ್ಣಿನ ಹಾಡು' ಕವನ ಸಂಕಲನ ಹೊರಬಂದ ಮೇಲೆ ಕೃಷ್ಣನ ಜೋರು ಸ್ವಲ್ಪ ಜಾಸ್ತಿಯಾಯ್ತು. 'ಸಮೀಕ್ಷಕ' ಪತ್ರಿಕೆಯ ಸಂಪಾದಕನಾದ ಮೇಲೆ ಕೇಳಬೇಕೆ! "ಲೋ! ರಾಮಣ್ಣ, ಇಡೀ ಇಂಡ್ಯಾದಲ್ಲೇ ನಾನು ಅತ್ಯಂತ ಚಿಕ್ಕ ವಯಸ್ಸಿನ ಸಂಪಾದಕ" ಎಂದು ಮೀಸೆ ತಿರುವುತ್ತಿದ್ದ. ಹೀಗೆ ಮೀಸೆ ತಿರುಗುತ್ತಿದ್ದಾಗಲೇ ಒಂದು ದಿನ ದೇವನೂರ ಮಹಾದೇವನ ನೆರಳು ನಮ್ಮ ನಡುವೆ ಮೂಡಿದ ನೆನಪು ನನಗೆ! ಇವನು ತುಟಿಪಿಟಿಕೆನ್ನದೆ ಕೃಷ್ಣನ ಮಾತುಗಳನ್ನು ಕೇಳುತ್ತಿದ್ದ. ಒಮ್ಮೆ ಕೃಷ್ಣನ ರೂಮಿಗೆ ರಾವಬಹದ್ದೂರರು ಬಂದಿದ್ದರು. ಅಲ್ಲೇ ಇಳಿದುಕೊಂಡಿದ್ದರು!

ನಾವೆಲ್ಲ ಹೋಗಿ ದರ್ಶನ ಪಡೆದೆವು. 'ಗ್ರಾಮಾಯಣ'ದ ಕರ್ತೃವನ್ನು ಕಂಡು ಬೆರಗಾದೆವು. ಜೋಪಿ, ಕಚ್ಚೆಗಳನ್ನು ಕಂಡು ಒಳಗೊಳಗೇ ನಕ್ಕೆವು. ರಾವಬಹದ್ದೂರರ ವಿದ್ಯೆಯ ಬಯಲಿನ ವಿಸ್ತಾರ ಕಂಡು ತಬ್ಬಿಬ್ಬಾದೆವು! ರಾವಬಹದ್ದೂರರ ಬಾಯಲ್ಲಿ 'ನಡೆದು ಬಂದ ದಾರಿ'ಯ ಚರಿತ್ರೆ, ಜೋಷಿಯವರ ಕಾರ್ಯನಿಷ್ಠೆ, ಕುರ್ತುಕೋಟಿಯವರ ಕತೆ ಎಲ್ಲ ಕೇಳಿ ಖುಷಿಪಟ್ಟೆವು.

'ಪ್ರಜಾವಾಣಿ'ಯ ದೀಪಾವಳಿ ಕಥಾಸ್ಪರ್ಧೆ ನಮಗೆಲ್ಲ ಅಚ್ಚುಮೆಚ್ಚು. ಪ್ರಥಮ ಬಹುಮಾನ ಪಡೆದವನು ಧನ್ಯ! 'ಹೊರಲಾರದ ಹೊರೆ' (ಸುಧಾಕರ); 'ಲಿಂಗ ಬಂದ' (ತೇಜಸ್ವಿ) ಕತೆಗಳು ಬಹುಮಾನ ಪಡೆದಾಗ ಮೈಸೂರಿನ ನಮ್ಮ ಬಳಗಕ್ಕೆ ಖುಷಿ. ನಾನು 'ಸುಗ್ಗಿ' ಕತೆಗೆ ಬಹುಮಾನ ಪಡೆದಾಗ ನನಗಿಂತಲೂ ಖುಷಿಪಟ್ಟ ಕೃಷ್ಣನ ಜೋರು ಮೂರು ಊರುಗಳಿಗೂ ಆಗಿ ಮಿಗುತ್ತಿತ್ತು. ನನ್ನನ್ನು ಮೆರೆಸಿದ್ದೇ ಮೆರೆಸಿದ್ದು, ಇವನ ಈ ನನ್ನ ಮೇಲಿನ ಪ್ರೇಮ ಇನ್ನೂ ಉಕ್ಕಿ ಹರಿದು, ನನ್ನನ್ನು ಮೈಸೂರಿನಲ್ಲಿ ಇವನಿಗೆ ಪರಿಚಯವಿದ್ದ ಒಂದು ಮನೆತನಕ್ಕೆ ಅಳಿಯನನ್ನಾಗಿ ಮಾಡಬೇಕೆಂದು ಪ್ರೇರಿತನಾಗಿ ನನ್ನನ್ನು ಆ ಮನೆಯಲ್ಲಿ ಕೂರಿಸಿ, ವರಪರೀಕ್ಷೆಗೂ ಒಳಪಡಿಸಿದ್ದ! ಈ ಭೂಪನ ಕತೆಗಳು ನೂರಾರು! ನಿಂತಲ್ಲಿ ನಿಲ್ಲ. ಕುಂತಲ್ಲಿ ಕೂರ, ಬಾಯಿ ತೆರೆದರೆ ಯಾರೂ ಲೆಕ್ಕಕ್ಕಿಲ್ಲ; ಪೆನ್ನೆತ್ತಿದರೆ ಅನೇಕ ಶಕ್ತಿಶಾಲಿ ಪದ್ಯಗಳ ನಿರ್ಮಾಣ ಮಾಡುತ್ತಿದ್ದ!

ಇವನದು ಬರಿ ಕೃಷ್ಣಾವತಾರವಲ್ಲ, ರುದ್ರಾವತಾರವೂ ಸಹ! 'ಕುವೆಂಪು'ವನ್ನು ನುಡಿಸಿ ಬರುತ್ತಿದ್ದ; ದೇಜಗೌ, ಹಾಮಾನಾ, ಸುಜನಾ, ಅಡಿಗರು, ಆರ್. ಕೆ. ನಾರಾಯಣರು–ಇವರೆಲ್ಲರ ಬಳಿಯೂ ಓಡಾಡುತ್ತಿದ್ದ. ಚದುರಂಗರನ್ನು ಕಂಡರೆ ಕಡುಪ್ರೇಮ. ಒಮ್ಮೊಮ್ಮೆ ರವೀಂದ್ರನಾಥ ಟಾಗೋರರ ಕಾವ್ಯವನ್ನು ಸಿಕ್ಕಾಪಟ್ಟೆ ಟೀಕಿಸುತ್ತಿದ್ದ. ಇದನ್ನು ಕೊನೆಯವರೆಗೂ ಬದಲಾಯಿಸಲಿಲ್ಲ! ರಚ್ಚೆ ಹಿಡಿದ ಮಗುವಿನಂತೆ–ರಚ್ಚೆ ಹಿಡಿದು ತಾನು ಕೇಳಿದಷ್ಟು ಬೆಲ್ಲ ಕೊಡದಾಗ 'ಗುಡಾಣ' ಇಳುಕಿ, ಒಮ್ಮೊಮ್ಮೆ ಅಟ್ಟಹತ್ತಿ ...ಊಟ ಮಾಡುವಂತೆ ... ಕಾಣುತ್ತಿದ್ದ. ಇವನಿಗೆ ಪಂಚ ಗುಂಡಿಗೆಗಳಿವೆಯೋ ಎನ್ನುವಷ್ಟರ ಮಟ್ಟಿಗೆ ನಡೆಯುತ್ತಿದ್ದ. ಒಮ್ಮೆ ಬೆಂಗಳೂರಿನಲ್ಲಿ ನಮ್ಮ ಸ್ನೇಹ ಬಳಗಕ್ಕೆ ಬೇಂದ್ರೆಯವರನ್ನು ಪರಿಚಯಿಸಿ, ಅವರ ಕೈಯಿಂದ ಮಸಾಲೆ ದೋಸೆ ಕೊಡಿಸಿ, ನಮ್ಮೆಲ್ಲರನ್ನು ಅವರ ಪಾದದ ಮೇಲೆ ಕೆಡವಿದ! ಬೇಂದ್ರೆಯವರ ಹೃದಯದಲ್ಲಿನ ಹಸುಗೂಸಿನ ಪ್ರೇಮ ಪರಿಚಯಿಸಿದ್ದ! ಬೇಂದ್ರೆಯವರು "ಕೃಷ್ಣಾ" ಎಂದು ಇವನನ್ನು ಬಾಯ್ತುಂಬ ಕರೆಯುತ್ತಿದ್ದರು.

ಕತೆಗಳನ್ನು ಬರೆದಾದ ಮೇಲೆ, ಕಾದಂಬರಿಗೂ ಕಣ್ಣಾಕಿದ; "ಕಾಡು" ಬರೆದು ಗುಟುರು ಹಾಕಿದ! ಈ ಗುಟುರಿಗೆ ಕರ್ನಾಟಕ ಬೆಚ್ಚಿ, ಕಣ್ತೆರೆದು ನೋಡಿತು. ಸಿನಿಮಾ ಆಯಿತು. ಮೀಸೆ ತಿರುಗಿ, ನಮ್ಮೆಲ್ಲರನ್ನೂ ಹಂಗಿಸಿದ. ನಾನು, ನಕ್ಕು ಸುಮ್ಮನಾದೆ. ಆನಂದಪಟ್ಟೆ. ಇಂಗ್ಲಿಷ್ ಪುಸ್ತಕಗಳು, ಪತ್ರಿಕೆಗಳ ಮೂಲಕ ವಿನುತರ

ಮುನಗೆದ್ದು, ಮದುವೆ ಯೌವನ ಈ ರಸಿಕನ ಬಾಯಲ್ಲಿ ನೂರಾರು ಘಟನೆಗಳನ್ನು ಕೇಳಿದ ಪುಣ್ಯ ನನ್ನದು. ಹೃದಯಕ್ಕೆ ಹತ್ತಿರವಾದವರಲ್ಲಿ ಏನನ್ನೂ ಬಚ್ಚಿಡುತ್ತಿರಲಿಲ್ಲ. ಕೇಳುವವರಿದ್ದರೆ ಮಾತು ನಿಲ್ಲದ ರೈಲು ! ಒಮ್ಮೊಮ್ಮೆ ಕಿಡಿ ಬಿದ್ದು, ನಾವು ಕಣ್ಣುಜ್ಜಿ ಕೊಳ್ಳಬೇಕಾಗುತ್ತಿತ್ತು.

ಇವನು ಕನ್ನಡದ ಮೇಷ್ಟರಾಗಿದ್ದಾಗ ನಡೆದ ಘಟನೆಗಳು, 'ಗೆಂಡೆ ತಿಮ್ಮ' ಸಿನಿಮಾ ಆದಾಗ ಇವನು ಸಿನಿಮಾ ಲೋಕದ ಜನರ ಬಗ್ಗೆ ಆಡುತ್ತಿದ್ದ ನುಡಿಗಳು– ನನ್ನನ್ನು ಬೆರಗುಗೊಳಿಸುತ್ತಿದ್ದುವು. "ನೋಡ್ತಾ ಇರು ! ಇಡೀ ಇಂಡ್ಯಾನೇ ಬೆಪ್ಪಾಗುವಂತೆ ನಾನೇ ಒಂದು Film ಮಾಡ್ತೀನಿ....ಇವರೆಲ್ಲ ಏನು ಮಹಾ !" ಎನ್ನು ತ್ತಿದ್ದ. ಎಂಥ ಕೋಟೆಯಾದರೂ ಲಗ್ಗೆ ಹಾಕುತ್ತಿದ್ದ. ಬಂಜರು ಭೂಮಿಯನ್ನು ತೋಟಮಾಡಿ, ತೆಂಗುಗಳು ಗೊನೆ ಹೊತ್ತು ಬೀಗುವಂತೆ ಮಾಡಿದ ಛಲಗಾರ. "ಲೋ ! ಬಾ ಒಂದಿಪ್ಪತ್ತು ಮೂವತ್ತು ಸಾವಿರ ತಕ್ಕೊಂಡು, ಒಂದು ಪ್ಲಾಟೇ ತಗ್ದು ಕೊಡ್ತೀನಿ. ದೊಡ್ಡ ತೋಟ ಮಾಡು" ಎನ್ನುತ್ತಿದ್ದ. ನಾನು "ಹೋಗೋ ದುಡ್ಡೆಲ್ಲಿದೆ !" ಎಂದರೆ, "ಥೂ ! ಎಲ್ಲಿ.... ಗುಗ್ಗುವೋ !" ಎಂದು ತಿರಸ್ಕಾರ ಮಿಶ್ರಿತ ಧ್ವನಿಯಲ್ಲಿ ಹೇಳಿ, ಮೋಟಾರ್ ಸೈಕಲ್‌ನಲ್ಲಿ ಹತ್ತಿಸಿಕೊಂಡು ಹೋಗಿ, ತನ್ನ ತೋಟ ತೋರಿಸಿ, ಎಳನೀರು ಕುಡಿಸಿ, ನನಗೂ ತೋಟಮಾಡಬೇಕೆಂಬ ಪ್ರಲೋಭನೆ ಹುಟ್ಟಿಸುತ್ತಿದ್ದ.

ಕೃಷ್ಣನಿಗೆ ತುಂಬ ಆಶೆಯಿತ್ತು. ರಾಜಕೀಯದಲ್ಲಿ ದೊಡ್ಡ ಅಧಿಕಾರ ಪಡೆಯ ಬೇಕೆಂಬ ಹಂಬಲವಿತ್ತು. ತನ್ನ ಕೃತಿಗಳು ಬಹಳ ಒಳ್ಳೆಯವೆಂದೂ, ತಾನು ಬಹಳ ಭಾಷೆಗಳ ಜನಕ್ಕೆ ಗೊತ್ತೆಂದೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ. ಸಾಯುವ ಮನಸ್ಸು ಮಾಡಿದ್ದವರನ್ನೂ ಸಹ, ತನ್ನ ಮಾತಿನ ಮೋಡಿಯ ಮೂಲಕ ಬದುಕುವ ಆಸೆಯನ್ನು ಮತ್ತೆ ಹುಟ್ಟಿಸುತ್ತಿದ್ದ. ಇಂಥವನಿಗೆ ದೊಡ್ಡ ಅಧಿಕಾರ ಬಂದಿದ್ದರೆ ದೇಶಕ್ಕೆ ಒಳ್ಳೆಯ ದಾಗುತ್ತಿತ್ತೋ ಏನೋ ! ಯಾರು ಬಲ್ಲರು ? ಆದರೆ ತನ್ನ ಆರೋಗ್ಯದ ಬಗ್ಗೆ ಸಾಕಷ್ಟು ಗಮನ ಕೊಟ್ಟಿದ್ದರೆ, ಇನ್ನೂ ಬದುಕಿದ್ದರೆ.... ಏನೇನು ಸಾಧಿಸುತ್ತಿದ್ದನೋ ಯಾರು ಬಲ್ಲರು ?

ಇವನೂ, ನಾನೂ, ಪೋಲಂಕಿ, ನಾಗವಾರ ದೆಹಲಿಯಿಂದ ಒಮ್ಮೆ ಹಿಂದಿರುಗಿ ಬರುವಾಗ ಇವನು ವಚನಕಾರರು, ಕುಮಾರವ್ಯಾಸರ ಬಗ್ಗೆ ಗಂಟೆಗಟ್ಟಲೆ ಆಡಿದ ಮಾತುಗಳು; ನಾನು ಖಾಯಿಲೆ ಬಿದ್ದಿದ್ದಾಗ ಬಂದು, ನನ್ನಿಂದ ಬೈಸಿಕೊಂಡು ನಂತರ ನನ್ನ ಹೃದಯ ಗೆದ್ದು ನನ್ನೆದೆಯಲ್ಲಿ ಆಸೆ ತುಂಬಿದ್ದು....ಎಲ್ಲ ನನಗೆ ನೆನಪಾಗುತ್ತವೆ. ಸ್ನೇಹದ ದಟ್ಟ ಕಾಡಿನಲ್ಲಿ ಕೃಷ್ಣನ ಕೊಳಲಿನ ನಾದ, ಕೋಗಿಲೆಯ ಕೂಗು ಇಂಪಾಗಿ ಕೇಳಿಸುತ್ತವೆ........ ಈ ಮಾತುಗಳನ್ನು ಬರೆಯುವಾಗ, ಈಗ ರಾತ್ರಿ 3–35 ಘಂಟೆ ಆಗಿದೆ. ನನ್ನ ಕಣ್ಣುಗಳು ಮಂಜಾಗುತ್ತಿವೆ...

—ಡಾ॥ ಬೆಸಗರಹಳ್ಳಿ ರಾಮಣ್ಣ

ಸ್ನೇಹ/೧೨೩




ಯುವ ಬರಹಗಾರ



ಆಕಾಶವಾಣಿಯಲ್ಲಿ ಕವನ ವಾಚನ



ಕುವೆಂಪು ಹಾಗೂ ದೇಜಗೌರೊಂದಿಗೆ



ಮಾದವಯ್ಯಲ್ಲಿ ಪಟ್ಟಾಭಿರಾಮರೆಡ್ಡಿ ಹಾಗೂ ಸ್ನೇಹಲತಾರೆಡ್ಡಿ ಅವರೊಂದಿಗೆ



'ಕಾಡು' ಚಿತ್ರೀಕರಣದ ಸಂದರ್ಭದಲ್ಲಿ ಗಿರೀಶ್ ಕಾರ್ನಾಡರೊಂದಿಗೆ



ತೋಟದಲ್ಲಿ ಮಗನಿಂದ ವನಮಹೋತ್ಸವ

# ಶ್ರೀಕೃಷ್ಣ ಸ್ಮರಣೆ

1

ಬೇಳೆ ಹುಳಿ ವಾಸನೆಯ ಹುಡುಗಿಯರ
ಮನ ಕೆಡಿಸಿ ಮತ್ಸ್ಯಗಂಧಿಯರ ಮಾಡ
ಬಯಸಿದ ಬೆವರ ವಾಸನೆಯ ಹುಡುಗ
ಕೊನೆಗೆ ಮಣ್ಣಲ್ಲಿ ಒಂದಾಗಿ
ನಿನ್ನ ಗೋರಿಯ ಮೇಲೆ ಸಸಿ ಹುಟ್ಟಿ
ಅವರ ತುರುಬಿಗೆ ಹೂವಾದವು

ಹೂವ ಸುಗಂಧವೇ ಬೇರೆ.

2

ವರ್ಣಗಳಲ್ಲಿ ಭೇದ ಕಂಡು ಕನಲಿದ ಹುಡುಗ
ಎಲ್ಲ ಬಣ್ಣಗಳ ಕಲಸಿ ಒಂದು ಮಾಡುವೆನೆಂದ
ಕಪ್ಪು ಕತ್ತಲೆ ಸೀಳಿ ಬೆಳಕು ಮೂಡುವ ಮೊದಲು
ಕಾಡು ಹಾದಿ ತಿಳಿಯದೆ ಬಳಲಿದ
ಕಂದು ಬಣ್ಣದ ಕುದುರೆ ಏರಿ ಮಾಯವಾದ

ಖುರ ಪುಟದ ಪ್ರತಿಧ್ವನಿ ಮಾತ್ರ ಸ್ಪಷ್ಟ.

3

ಹೊತ್ತು ಮುಳುಗಿದ ಮೇಲೆ
ಕಾಡಿನ ಗೀಜಗನ ಗೂಡಲ್ಲಿ
ಕೊಳಲುಲಿತ
ಕಣ್ಮರೆಯಾದ ಕೃಷ್ಣನ ಶೇಷ.

4

ಭಾಗವತರಿಗೆ ಪ್ರೀತಿ ಬಾಲಕೃಷ್ಣನ ಲೀಲೆ
ಗೋಕುಲದ ಹುಡುಗಿಯರ ಕಣ್ಣು ಸುಂದರಾಂಗನ ಮೇಲೆ
ಆಸಕ್ತರಿಗೆ ಗೀತೋಪದೇಶದ ಮಾಲೆ
ಸಾವು ಕರೆದಾಗ ಬಿಟ್ಟು ಹೊರಟವನ ಕಂಡು
ಎಲ್ಲರೆದೆಯಲ್ಲಿ ಮರುಕದ ಜಲಧಾರೆ.

— ಪ್ರತಿಭಾ ನಂದಕುಮಾರ್

ಸ್ನೇಹ/೧೨೭

# ಕೃಷ್ಣಾ-ಮೃಗ ತೃಷ್ಣಾ

ಮಲೆಘಟ್ಟ ಬಯಲಲ್ಲ ಅಲೆ ಕಡಲಲ್ಲ
ಕಾಡುವ ಕಾಡು ಕಾಡಿನ ಕೂಗು ಕೂಗುವ
ಕೋಕಿಲ ಕುಹು ಕುಹೂ ಕೃಷ್ಣಾ

ಮಣ್ಣಲ್ಲಿ ದುಡಿಮೆ ಇಟ್ಟ ವಿಶ್ವಾಸಕ್ಕೆ
ಕೆರೆಕಟ್ಟೆ ಬಾವಿ ಗದ್ದೆ ತೋಟ ಒದ್ದೆ
ಗೊನೆ ತೆನೆ ಹಣ್ಣು ಹೂ ತೂಗಿ
ಮಣ್ಣು ಮರಡಿ ಕೊಳಲನಾದ ಮನಕೆ.

ಸದಾ ಹೊಡಿ ಹಿಗ್ಗು ತರುವ ಹೊತ್ತಿಗೆ
ಬತ್ತಿ ಹೋಯ್ತು ಜೀವ ಸೆಲೆ
ಬೆಳಕ ಬಯಲ ಮುಚ್ಚಿತಲ್ಲ ಕತ್ತಲೆ.

ಗ್ರಾಮ ಕುಶಲಿ ಬುತ್ತಿ ಚಿಗುರ ಬಿಚ್ಚಿ
ಪರಸಂಗವ ಉಣಿಸಿದೆ ಮಿಂಚು ಮಿಂಚು
ಸಿಡಿಲೆರಗಿತು ನೆಲತಬ್ಬಿತು ಮಾಮರ
ಅಲೆ ಬಿದ್ದು ಕಲೆ ಎದ್ದು ಅಡಗಿತು ಅಬ್ಬರ.

— ಕೆ. ನ. ಶಿವತೀರ್ಥನ್

# ಕೃಷ್ಣನ ಪ್ರತಿಮೆ

ನಮ್ಮ ವಿಧಾನ ಸೌಧದ ಮುಂದೆ ಅಥವಾ ಹತ್ತಿರ ಚೌಕದಲ್ಲಿ
ಒಬ್ಬ ನಿಜವಾದ ಸಾಹಿತಿಯನ್ನು ಅನಾವರಣಿಸುವಲ್ಲಿ–
ಅಂಥ ಮಾಡೆಲ್ ಕೂಡ ಅಣಕಿಸಬಲ್ಲುದೆಂಬ ಭರವಸೆಯಲ್ಲಿ
ಹೇಳುತ್ತೇನೆ: ಕೃಷ್ಣನ ಪ್ರತಿಮೆ ಮಾಡಿಸಿ ನಿಲ್ಲಿಸಿ ನೀವೆ ನಿಂತು ನೋಡಿರೆಂದು.

ಈತನಿಗೆ ನಮ್ಮೆಲ್ಲರ ಪ್ರಜಾಪ್ರಭುತ್ವ ಉಸಾಬರಿ ರೋಗ ಕಾಡಿದ್ದು
ಪರಕೀಯ ಉಪಚಾರಗಳ ಗೀಳು ಕ್ರಮವಿದು ಅಂಟಿಕೊಂಡಿದ್ದು
ವಿಧಾನಸೌಧದ ಆರಾಧನೆಯಲ್ಲಿ ತಳ್ಳಾಟಕ್ಕೆ ಒಬ್ಬಂಟಿ ಸಿಕ್ಕಿಬಿದ್ದದ್ದು
ತನ್ನೊಳ ದನಿಯು ಮೋಹ ಜಾಲಕ್ಕೆ ಸೋಲುತ್ತ ಬೆಳೆದದ್ದು–

ಹೀಗೆ ಹಲವಾರು ಬಗೆ ಹುಸಿ ಬಯಕೆಗಳ ಬೆನ್ನಲ್ಲಿ ಜಾರುತ್ತಿದ್ದು
ಕನಸುಗಳ ಹೆಣೆದು ಹೆಣೆದು ಪ್ರಾಮಾಣಿಕತೆಯು ಬರಹಗಾರನಾದದ್ದು
ಉಳಿದದ್ದೆಲ್ಲಾ ಕಾಲಕ್ಕೂ ಕಾಮನ ಬಿಲ್ಲಿನ ಉಡಿಗೆ ತೊಡಿಗೆಯಾಗಿದ್ದು–
ಹೆಜ್ಜೆ ಹೆಜ್ಜೆಗೂ ಸ್ಪರ್ಧೆ ಮೂಡಿದ ಹಾಗೆ ಕನಸುಗಳು ರೂಪತಾಳಿದ್ದು–

ತನ್ನ ಕನ್ನಡಿಯಲ್ಲಿ ಸಾವಿನ ಹಕ್ಕಿಯು ಕರೆಯು ಸ್ವಾಗತಿಸಿದಸ್ತಂಗತನು
ಸಂತಪ್ತ ಜೀವಿ ಆಲನಹಳ್ಳಿ ಕೃಷ್ಣನ ಕೊಳಲು ನಮ್ಮ ನಡುವೆನ್ನೆ

—ಕ. ವೆಂ. ರಾಜಗೋಪಾಲ

## ಲೇಖಕರ ವಿಳಾಸ:

**ಡಾ|| ಕೆ. ವಿ. ತಿರುಮಲೇಶ್,**
C.I.E.F.L., Hyderabad - 500 007

**ಟಿ. ಪಿ. ಅಶೋಕ,**
ಇಂಗ್ಲೀಷ್ ವಿಭಾಗದ ಮುಖ್ಯಸ್ಥರು,
ಲಾಲ್ ಬಹಾದುರ್ ಕಾಲೇಜು,
ಸಾಗರ – 577 401 (ಶಿವಮೊಗ್ಗ ಜಿಲ್ಲೆ)

**ಲಕ್ಷ್ಮೀಶ ತೋಳ್ಪಾಡಿ,**
ಶಾಂತಿಗೋಡು ಅಂಚೆ – 574 202
ಪುತ್ತೂರು ತಾಲ್ಲೂಕು (ದ.ಕ.)

**ಕೆ. ಸತ್ಯನಾರಾಯಣ**
216/20, 5ನೇ ಮೇಯಿನ್, 5ನೇ ಕ್ರಾಸ್,
ಚಾಮರಾಜಪೇಟೆ, ಬೆಂಗಳೂರು – 560 018

**ಎಚ್. ಎಸ್. ರಾಘವೇಂದ್ರರಾವ್,**
ನಂ. 7, 'ಶ್ರೀ ಮಾತಾ',
15ನೇ ಕ್ರಾಸ್, 5ನೇ ಹಂತ, ಜೆ.ಪಿ. ನಗರ,
ಬೆಂಗಳೂರು – 560 078

**ನೇಮಿಚಂದ್ರ,**
401, 4ನೇ ಮಹಡಿ, ವಿಜಯ್ ಟವರ್ಸ್,
ಆರ್.ಪಿ.ಸಿ. ಲೇ-ಔಟ್. ವಿಜಯಗರ 2ನೇ ಹಂತ,
ಬೆಂಗಳೂರು – 560 040

**ಜಿ. ಪಿ. ಬಸವರಾಜು,**
ವರದಿಗಾರರು: 'ಪ್ರಜಾವಾಣಿ',
ಮಿಲಾಗ್ರಿಸ್ ಕಟ್ಟಡ. ಹಂಪನಕಟ್ಟೆ,
ಮಂಗಳೂರು – 575 001

**ರಾಘವೇಂದ್ರ ಪಾಟೀಲ,**
ಜೀವಶಾಸ್ತ್ರ ಅಧ್ಯಾಪಕರು,
ಪದವಿ ಪೂರ್ವ ಕಾಲೇಜು,
ಮಲ್ಲಾಡಿಹಳ್ಳಿ – 577 531 (ಚಿತ್ರದುರ್ಗ ಜಿ||)

**ಓ. ಎಲ್. ನಾಗಭೂಷಣಸ್ವಾಮಿ,**
'ಸೂರ್ಯನಾರಾಯಣ ಕೃಪ', 1ನೇ ಕ್ರಾಸ್,
ವಿದ್ಯಾನಗರ. ಶಿವಮೊಗ್ಗ – 577 201

**ಪ್ರತಿಭಾ ನಂದಕುಮಾರ್,**
68 ಎ, 8ನೇ 'ಸಿ" ಮೇಯಿನ್,
4ನೇ ಬ್ಲಾಕ್ ಪಶ್ಚಿಮ, ಜಯನಗರ.
ಬೆಂಗಳೂರು – 500 001

**ಕೆ. ನ. ಶಿವತೀರ್ಥನ್,**
'ಪವಿತ್ರ'. 19, 4ನೇ ಮುಖ್ಯ ರಸ್ತೆ.
ವಿನಾಯಕನಗರ, ಮೈಸೂರು – 570 012

**ಕ. ವೆಂ. ರಾಜಗೋಪಾಲ,**
ಎಂ.ಐ.ಜಿ. 41, 80ನೇ ಅಡ್ಡರಸ್ತೆ,
ಕೆಂಗೇರಿ ಉಪನಗರ. 2ನೇ ಹಂತ,
ಬೆಂಗಳೂರು – 560 060

**ರಮೇಶ್ ಬಂದಗದ್ದೆ,**
21, ಬಿ.ಇ.ಎಂ.ಎಲ್. ಲೇ ಔಟ್.
ಕಮಲಾನಗರ, ಬಸವೇಶ್ವರನಗರ,
ಬೆಂಗಳೂರು – 560 079

**ಚಂದ್ರಶೇಖರ ತಾಳ್ಯ,**
ತರ್ಕಶಾಸ್ತ್ರ ಅಧ್ಯಾಪಕರು,
ಕೆ.ಎನ್. ಪದವಿ ಪೂರ್ವ ಕಾಲೇಜು.
ಹೊಳಲ್ಕೆರೆ (ಚಿತ್ರದುರ್ಗ ಜಿಲ್ಲೆ)

**ಎಸ್. ಮಂಜುನಾಥ,**
15ನೇ ಕ್ರಾಸ್, ಬಸವೇಶ್ವರ ಬ್ಲಾಕ್,
ಕೆ. ಆರ್. ನಗರ – 571 602 (ಮೈಸೂರು ಜಿ||)

**ಡಾ|| ಬೆಸಗರಹಳ್ಳಿ ರಾಮಣ್ಣ,**
ವೈದ್ಯಾಧಿಕಾರಿ ಮತ್ತು ಲೇಖಕರು,
1ನೇ ಕ್ರಾಸ್, ಗಾಂಧಿನಗರ, ಮಂಡ್ಯ

## ಶ್ರೀಕೃಷ್ಣ ಆಲನಹಳ್ಳಿ

ಬ ರೆ ಹ :

**ಕಾವ್ಯ:**

ಮಣ್ಣಿನ ಹಾಡು (1966)
ಕಾಡುಗಿಡದ ಹಾಡುಪಾಡು (1974)
ಡೋಗ್ರಿ ಪಹಾಡಿ ಪ್ರೇಮಗೀತೆಗಳು (1974)
(ಅನುವಾದ)
ಪ್ರಕಟಿಸಲಾಗದ ಪದ್ಯಗಳು (1982)

**ಸಣ್ಣಕಥೆ:**

ತಪ್ತ (1970)
ಫೀನಿಕ್ಸ್ (1975)
ಸುಟ್ಟತಿಕದ ದೇವರು (1988 – ಅಸಂಕಲಿತ)
ಮಾಮರವೂ ಮಾಪಿಳ್ಳೆಯೂ
(1989 – ಅಪೂರ್ಣ)

**ಕಾದಂಬರಿ:**


ಕಾಡು (1972)
ಪರಸಂಗದ ಗೆಂಡೆತಿಮ್ಮ (1978)
ಭುಜಂಗಯ್ಯನ ದಶಾವತಾರಗಳು (1982)
ಗೋಡೆ (ಅಪೂರ್ಣ)

**ಸಂಗ್ರಹ:**

ಅವಲೋಕನ (1974)
ಅಂತಃಕರಣ (1974)
ಗ್ರಾಮಾಯಣ ಸಮೀಕ್ಷೆ (1975)

**ಸಂಪಾದನೆ:**

ಸಮೀಕ್ಷಕ



ಗಾಢ ಮೌನ ತುಂಬಿ ಶಬ್ದಗಳಲ್ಲಿ ತುಳುಕಾಡುತ್ತಿದ್ದ ಕೃಷ್ಣ ನಿಶ್ಶಬ್ದವಾಗಿ ಹೊರಟು ಹೋದ. ದೂರದಲ್ಲಿ ನಿಂತು ನೋಡಿದವರಿಗೆ ಮಹಾ ವ್ಯಾಮೋಹಿಯಾಗಿಯೂ, ದುರಾಸೆಯವನೂ ಆಗಿ ಕಾಣುತ್ತಿದ್ದ ಕೃಷ್ಣ ಹತ್ತಿರ ಹೋದಂತೆ ಆ ವ್ಯಾಮೋಹ ದುರಾಸೆಗಳೆಲ್ಲವೂ ಕರಗಿ ಒಂದಾದ ಮನುಷ್ಯ ಮಗುವಿನಂತೆ ಕಾಣುತ್ತಿದ್ದುದು ನಮ್ಮ ಕರಣಗಳಲ್ಲಿರುವ ಮಾಯೆಯಿಂದಲೋ ಏನು ?

ಮಾಗುವ ಮೊದಲೇ ಮಾಯವಾದ ಕೃಷ್ಣ ಈ ಪ್ರಶ್ನೆಗೆ ಮೌನದಲ್ಲಷ್ಟೆ ಉತ್ತರಿಸುತ್ತಿರುವನು.

**ಡಿ. ಎಸ್. ನಾಗಭೂಷಣ**

**ಬೆಲೆ: ರೂ. 35/-** (ಸಾದಾ)
**ರೂ. 50/-** (ಉತ್ತಮ)